ಸಂವಾದ

ನವೆಂಬರ್ ೨೦೦೮ ರೂ. ೨೦

ಜಾಗತೀಕರಣವೆಂಬ ದುಃಸ್ವಪ್ನ!

ಸಂವಾದ

ಮಾಸ ಪತ್ರಿಕೆ

ಸಂಪುಟ ೭ ಸಂಚಿಕೆ ೧

ನವೆಂಬರ್ ೨೦೦೮

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಡಾ॥ ಬಿ.ಯು. ಸುಮಾ
ಡಾ॥ ಜಿ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
© ೨೩೪೮೦೨೭೮/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© 080-23480278, 94480 48306
e-mail : samvaada@hotmail.com
honnapura@yahoo.co.in

EDITOR :
INDUDHARA HONNAPURA

- ಪತ್ರಗಳು ೦೩
- ಹೊಸ ಪುಸ್ತಕ ೦೪
- ಅಂತರಂಗ ೦೫
- ಜಾತಿ, ಧರ್ಮ, ತಾರತಮ್ಯ, ಚರ್ಚೆ: ಮೂರು ಪ್ರಶ್ನೆಗಳು ಮತ್ತು ಒಂದು ಉದಾಹರಣೆ
  - ಡಿ. ಎಸ್. ನಾಗಭೂಷಣ ೦೬
- ಭಾರತೀಯ ಸಾಮಾಜಿಕ ವಿಜ್ಞಾನಗಳು ಮತ್ತು ಸಾಮಾನ್ಯರ ಬದುಕು....
  - ಡಾ. ಡೊಮಿನಿಕ್ ಡಿ ೦೮
- ಸಂಪಾದಕರೊಡನೆ ಸಂವಾದ
  - ಎಂ. ಸಿ. ನಿಂಗಪ್ಪ. ೧೨
- ಮತಾಂತರ ಮತ್ತು ಸಂವಿಧಾನ
  - ಸಾ ದಿವಾಕರ್ ೧೪

- ಒಡೆತನಕ್ಕೆ ಕೇಡಿಲ್ಲವಾಗಿ... ೩ ನೆತ್ತರ ಸವಿಯ ನೊಣಗಳ ಚಕ್ರಾಧಿಪತ್ಯ ಹಾಗೂ ಚಮತ್ಕಾರಿಕ ಬೀಜಗಳು.
  - ಶ್ರೀಶ ಉಡುಪ ೨೦
- ಜಾಗತೀಕರಣವೆಂಬ ದುಃಸ್ವಪ್ನ
  - ಡಾ. ಎನ್. ಜಗದೀಶ್ ಕೊಪ್ಪ ೨೬
- ಕರಗುತ್ತಿರುವ ನಾಗಬನಗಳು ಮತ್ತು ಚಿಗುರುತ್ತಿರುವ ವೈದಿಕ ಉದ್ಯಮ
  - ಹೆಚ್. ಜಯಪ್ರಕಾಶ್ ಶೆಟ್ಟಿ ೩೨
- ಬೌದ್ಧ ಸೌಂದರ್ಯ ಮೀಮಾಂಸೆ - ೩
  - ಡಾ. ಎಸ್. ನಟರಾಜ್ ಬೂದಾಳು ೩೬
- ಧರೆ ಹತ್ತಿ ಉರಿದರೆ... ೪
  - ಡಾ. ಟಿ. ಆರ್ ಚಂದ್ರಶೇಖರ್ ೪೦
- ದಲಿತ್ ಡೈರಿ ೪೬
  - ಚಂದ್ರಭಾನ್ ಪ್ರಸಾದ್/ಸತ್ಯಪ್ರಕಾಶ್
- ಬುದ್ಧಾಯಣ ೫೦
  - ಸಿ.ಎಚ್ ರಾಜಶೇಖರ್

ಕವನಗಳು : ಪ್ರಾರ್ಥನೆ ೧೯ ಸಮುದಾಯ ಶೈಲಿಯ ಗಜಲ್ ೨೫ ಚಿತೆ ೩೧

ಮುಖಪುಟ ವಿನ್ಯಾಸ: ಮುರಳೀಧರ ರಾಠೋಡ್

(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಬಿಜೆಪಿ ಸರ್ಕಾರವೇ ಹೊಣೆ

ಮಾನ್ಯ ಸಂಪಾದಕರೇ,

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ ೬೦ ವರ್ಷಗಳ ನಂತರ ಕ್ರೈಸ್ತ ಚರ್ಚ್‌ಗಳ ಮೇಲೆ ಕರ್ನಾಟಕದಲ್ಲಿ ಹಿಂದೂಪರ ಸಂಘಟನೆಗಳಾದ ಭಜರಂಗದಳ, ವಿಶ್ವ ಹಿಂದೂಪರಿಷತ್, ಆರ್‌ಎಸ್‌ಎಸ್ ಮುಂತಾದವು ದಾಳಿ ನಡೆಸಿದ್ದು, ಅಲ್ಪ ಸಂಖ್ಯಾತರಿಗೆ ರಾಜ್ಯದಲ್ಲಿ ರಕ್ಷಣೆ ಇಲ್ಲದೆ ಶಾಂತಿಗೆ ಧಕ್ಕೆ ಉಂಟಾಗಿರುವುದಕ್ಕೆ ಸಂಘ ಪರಿವಾರಗಳ ಇಚ್ಛಾಶಕ್ತಿಯಂತೆ ಆಡಳಿತ ನಡೆಸುವ ಬಿಜೆಪಿ ಸರ್ಕಾರವೇ ಹೊಣೆ. ಸಂವಿಧಾನದಲ್ಲಿ ಮತಾಂತರಕ್ಕೆ ಅವಕಾಶವೇ ಇಲ್ಲವೆಂದು ಹೇಳುವ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಅಸ್ಪೃಶ್ಯತೆ ಆಚರಣೆಗೂ ಸಂವಿಧಾನದಲ್ಲಿ ಅವಕಾಶವಿಲ್ಲ ಮತ್ತು ಅಸ್ಪೃಶ್ಯತೆ ಕಾಯಿದೆ ಜಾರಿಗೆ ಬಂದು ಆರು ದಶಕಗಳಾದರೂ ಅಸ್ಪೃಶ್ಯತೆ ಆಚರಣೆ ಇಲ್ಲದ ಒಂದು ಗ್ರಾಮ ಪಂಚಾಯ್ತಿಗೆ ಸೇರಿದ ಒಂದು ಹಳ್ಳಿ ಸಹ ಇಲ್ಲವೆಂದು ಗೊತ್ತಿಲ್ಲವೆ?

ಬಿಜೆಪಿ ಸರ್ಕಾರ ಹಾಗೂ ಹಿಂದೂಪರ ಸಂಘಟನೆಗಳಿಗೆ ಹಿಂದೂ ಧರ್ಮದಲ್ಲಿರುವ ಅಸ್ಪೃಶ್ಯತೆ ಬಗ್ಗೆ ಕಾಳಜಿ ಇಲ್ಲ. ಆದರೆ ಮತಾಂತರದ ಬಗ್ಗೆ ಆತಂಕ ಏಕೆ ಬೇಕು? ಅಸ್ಪೃಶ್ಯತೆಯ ಹಿಂಸೆ, ಅವಮಾನ, ಸಂಕಟಗಳನ್ನು ತಾಳಲಾರದೇ, ಸ್ವಾಭಿಮಾನ ಹಾಗೂ ಸಮಾನತೆಗಾಗಿ ಶೋಷಿತರು ಮತ್ತು ದಲಿತರು ಮತಾಂತರ ಆಗುತ್ತಿದ್ದಾರೆ. ಇದೆಲ್ಲಾ ಗೊತ್ತಿದ್ದು ಹಿಂದೂಪರ ಸಂಘಟನೆಗಳಿಗೆ ಬೆಂಬಲಿಸುತ್ತಿರುವ ಬಿಜೆಪಿ ಸರ್ಕಾರ ಚರ್ಚ್‌ಗಳ ಮೇಲಿನ ದಾಳಿಗೆ ನೇರ ಹೊಣೆ. ಸರ್ಕಾರದ ಸಹಾಯವಿರುವುದರಿಂದಲೇ ಹಿಂದೂಪರ ಸಂಘಟನೆಗಳು ರಾಜಾರೋಷವಾಗಿ ಚರ್ಚ್‌ಗಳಿಗೆ ನುಗ್ಗಿ ದಾಳಿ ನಡೆಸುತ್ತಿದ್ದಾರೆ.

ಮಾನವೀಯತೆ ಇಲ್ಲದೆ ಹಿಂದೂ ಧರ್ಮಿಯರು ಆಚರಿಸುವ ಅಸ್ಪೃಶ್ಯತೆ ಶ್ರೇಷ್ಠವೆಂದು ತಿಳಿದುಕೊಂಡು ಕ್ರೈಸ್ತ ಚರ್ಚ್‌ಗಳ ಮೇಲಿನ ದಾಳಿ ಹಾಗೂ ಕೇಡು ಎಸಗುವ ಹೇಯ ಕೃತ್ಯ ಖಂಡನೀಯ. ವಿಶ್ವದಲ್ಲಿ ಬಹುಸಂಖ್ಯಾಬಲದ ಕ್ರೈಸ್ತರು ಮೊದಲ ಸ್ಥಾನದಲ್ಲಿದ್ದು ಹಿಂದೂ ಧರ್ಮಿಯರನ್ನು ಮತಾಂತರಕ್ಕೆ ಒತ್ತಾಯಿಸುವ ಅವಶ್ಯಕತೆ ಇಲ್ಲ. ಹಿಂದೂ ಧರ್ಮದಲ್ಲಿರುವ ಅನಿಷ್ಠ ಪದ್ಧತಿ ಅಸ್ಪೃಶ್ಯತೆ ಮತ್ತು ಅಸಮಾನತೆ ಜೀವನ ಮತಾಂತರಕ್ಕೆ ಕಾರಣವೆಂಬ ಅರಿವು ಇಲ್ಲದವರಿಗೆ ಏನು ಹೇಳಬೇಕೆಂಬುವುದೇ ಅರ್ಥವಾಗುತ್ತಿಲ್ಲ. ಹಿಂದೂ ಧರ್ಮ ಬೆಳೆದು ಉಳಿಯಬೇಕಾದರೆ ಹಾಗೂ ಮತಾಂತರ ತಪ್ಪಿಸಬೇಕಾದರೆ ಗ್ರಾಮಪಂಚಾಯ್ತಿ ಮೂಲಕ ಅಸ್ಪೃಶ್ಯತೆ ನಿವಾರಣೆಗೆ ತಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳುವುದು ಮತಾಂತರದ ಸಮಸ್ಯೆಗೆ ಪರಿಹಾರ ಆಗಬಲ್ಲ ಏಕೈಕ ಮಾರ್ಗ.

ಹಿರಿಯ ಬುದ್ಧಿಜೀವಿ ಚಿದಾನಂದ ಮೂರ್ತಿ ಅವರು ಕ್ರೈಸ್ತ ಚರ್ಚುಗಳನ್ನು ಲೆಕ್ಕ ಹಾಕುವ ಮೂಲಕ ಹಿಂದೂ ಸಂಘಟನೆಗಳಿಗೆ ಪ್ರೋತ್ಸಾಹ ನೀಡಿದ್ದು ಶಾಂತಿ ಕದಡುವ ಮಾರ್ಗವಲ್ಲವೇ? ಹಿಂದೂಗಳಿಗೆ ವಯಸ್ಸು ಜಾಸ್ತಿಯಾದಂತೆಲ್ಲಾ ಜಾತಿ ಮತ್ತು ಧರ್ಮದ ಕೆಟ್ಟ ಹಂಬಲ ಜಾಸ್ತಿಯಾಗುತ್ತಿರುವುದು ಖಂಡನೀಯ. ಚಿದಾನಂದಮೂರ್ತಿ ಅವರಂತಹ ಬುದ್ಧಿ ಜೀವಿಗಳು ಮತಾಂತರದಂತಹ ಕ್ಲಿಷ್ಠ ವಿಷಯದಲ್ಲಿ ಭಾಗಿಯಾಗುವುದು ಬುದ್ಧಿ ಜೀವಿಗಳಿಗೆ ಶ್ರೇಯಸ್ಸು ತರುವಂಥಹದಲ್ಲ.

ಹಿರಿಯ ಚೇತನ ಹಾಗೂ ಬುದ್ಧಿಜೀವಿ ಚಿದಾನಂದ ಮೂರ್ತಿಯವರೇ ಬೆಂಗಳೂರಿನಲ್ಲಿ ಮೊದಲ ಗಣರಾಜ್ಯೋತ್ಸವ ಆಚರಿಸಿದಾಗ ಎಷ್ಟು ದೇವಾಲಯಗಳು ಅಸ್ತಿತ್ವದಲ್ಲಿದ್ದವು? ಇಂದು ಎಷ್ಟು ಸಾವಿರ ದೇವಾಲಯಗಳು ಅಸ್ತಿತ್ವದಲ್ಲಿ ಇವೆ? ಅಲ್ಲದೆ ಪ್ರತಿಯೊಂದು ಮನೆಯಲ್ಲಿಯೂ ದೇವರಕೋಣೆ (ದೇವರಮನೆ) ಹಿಂದೂ ಧರ್ಮಿಯರಿಗೆ ಇರುವಾಗ ಕ್ರೈಸ್ತ ಧರ್ಮಿಯರಿಗೆ ಚರ್ಚ್‌ಗಳು ಬೇಕೇ ಬೇಡವೇ ಎಂಬ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ, ವಿಮರ್ಶೆ ಮಾಡಿ, ಚರ್ಚಿಸಿ, ಸಮಾಲೋಚನೆ ಮಾಡಿ ಹೇಳಿಕೆ ಕೊಡಬೇಕಾದ ಬುದ್ಧಿಜೀವಿಗಳು ಮತಾಂತರದ ಬಗ್ಗೆ ಮಾತನಾಡುವುದು ಉಚಿತವಲ್ಲ.

ರಾಜ್ಯದಲ್ಲಿ ಇರುವ ಎಲ್ಲಾ ಹಿಂದೂ ದೇವಾಲಯಗಳು ಮುಜರಾಯಿ ಇಲಾಖೆಗೆ ಸೇರಿದ ಅಧಿಕೃತ ದೇವಾಲಯಗಳೇ ಅಥವಾ ಅನಧಿಕೃತ ದೇವಾಲಯಗಳೇ ಎಂಬ ಅಲ್ಪ ಮಾಹಿತಿ ಇಲ್ಲದೆ ಅಧಿಕೃತ ಹಾಗೂ ಅನಧಿಕೃತ ಚರ್ಚ್‌ಗಳ ಬಗ್ಗೆ ಮಾತನಾಡುವುದು ಎಷ್ಟರ ಮಟ್ಟಿಗೆ ಸೂಕ್ತ? ಹಿರಿಯ ಚೇತನ ಹಾಗೂ ಬುದ್ಧಿಜೀವಿಗಳಿಗೆ ಅಮೇರಿಕಾ ಮುಂತಾದ ರಾಷ್ಟ್ರಗಳಲ್ಲಿ ಹಿಂದೂ ದೇವಾಲಯಗಳು ಎಷ್ಟಿವೆ ಎಂದು ಏನಾದರೂ ಗೊತ್ತಿದ್ದಲ್ಲಿ ಕ್ರೈಸ್ತ ಚರ್ಚ್‌ಗಳ ಬಗ್ಗೆ ಚಕಾರ ಎತ್ತದೆ ಹಿಂದೂ ಸಂಘಟನೆಗಳು ಮಾಡಿದ ಚರ್ಚ್‌ಗಳ ಮೇಲಿನ ದಾಳಿ ಖಂಡನೀಯವೆಂದು ಹೇಳುತ್ತಿದ್ದರು.

ಚಾಮರಾಜನಗರ ವಿಧಾನಸಭಾ (ಸಾಮಾನ್ಯ) ಕ್ಷೇತ್ರ ಮತ್ತು ಸದರಿ ಜಿಲ್ಲೆಗೆ ಸೇರಿದ ಗುಂಡ್ಲುಪೇಟೆ ವಿಧಾನಸಭಾ (ಸಾಮಾನ್ಯ) ಕ್ಷೇತ್ರದಲ್ಲಿ ೧೯೫೨ರ ಮೊದಲ ವಿಧಾನಸಭಾ ಚುನಾವಣೆ ಲಾಗಾಯ್ತು ಒಂದೇ ಸಮುದಾಯಕ್ಕೆ ಸೇರಿದವರು ಶಾಸಕರುಗಳಾಗಿದ್ದು ಹಾಲಿ ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಹಿಂದುಳಿದ ಸಮುದಾಯಕ್ಕೆ ಸೇರಿದ ಶಾಸಕರಾಗಿ ತಾಲ್ಲೂಕಿನ ನಾಗವಳ್ಳಿ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಭೇಟಿಕೊಟ್ಟು ಅಕ್ಷರ ದಾಸೋಹ ಯೋಜನೆ ಬಿಸಿಯೂಟ ಕಳೆದ ಮೂರು ವರ್ಷದಿಂದ ಸ್ಥಗಿತಗೊಂಡಿರುವುದಕ್ಕೆ ಅಸ್ಪೃಶ್ಯತೆ ಆಚರಣೆ ಕಾರಣವಾಗಿದ್ದು ಮೂರು ವರ್ಷಗಳಿಂದಲೂ ಬಿಸಿಯೂಟ ತಯಾರಿಕೆ ನಿಂತಿದ್ದರೂ ಅಧಿಕಾರಿಗಳು ವರದಿ ನೀಡದಿರುವ ಬಗ್ಗೆ ಶಾಸಕರು ಕಿಡಿಕಾರಿ ಎಲ್ಲಾ ಮಕ್ಕಳೊಂದಿಗೆ ತಾವು ಕುಳಿತು ಊಟ ಮಾಡುವ ಮೂಲಕ ಗ್ರಾಮದಲ್ಲಿ ತಲೆದೋರಿರುವ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಾಗಿ ತಿಳಿಸಿರುವಂತಹ ಅನಿಷ್ಠ ಪದ್ಧತಿ ರಾಜ್ಯದ ಪ್ರತಿಯೊಂದು ಗ್ರಾಮದಲ್ಲಿಯೂ ಆಚರಣೆಯಲ್ಲಿ ಇರುವುದೇ ಹಿಂದೂ ಧರ್ಮಿಯರ ಮತಾಂತರಕ್ಕೆ ಮೂಲಕಾರಣ ಎಂಬುವುದು ಏಕೆ ಇಂದಿಗೂ ಸವರ್ಣಿಯರಿಗೆ ಆಗುತ್ತಿಲ್ಲ? ಇಂತಹ ಅನಿಷ್ಠ ಪದ್ಧತಿ ಬಸವಣ್ಣ ಹುಟ್ಟಿದ ಈ ನಾಡಿಗೆ ಕಳಂಕಕಾರಿ ಎಂಬ ಅರಿವು ಇಲ್ಲದೆ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಹಿರಿಯ ಚೇತನ ಚಿದಾನಂದ ಮೂರ್ತಿ ಅವರು ಹಿಂದೂ ಧರ್ಮ ಮತ್ತು ಹಿಂದೂ ಸಂಘಟನೆಗಳನ್ನು ಪ್ರೋತ್ಸಾಹಿಸಿರುವುದು ಸರಿಯಲ್ಲ. ಅಂದ ಹಾಗೆ ಕ್ರೈಸ್ತ ಚರ್ಚ್‌ಗಳ ಮೇಲಿನ ದಾಳಿಗೆ ಬಿಜೆಪಿ ಸರ್ಕಾರ ಮತ್ತು ಕೆಲವು ಬುದ್ಧಿ ಜೀವಿಗಳು ಹೊಣೆ.

ಎ. ಮಾದಯ್ಯ ಮೈಸೂರು

ಪತ್ರಾಗಾರ



ಮುಕ್ತತೆಯ ಪ್ರತೀಕ 'ಸಂವಾದ'

ಮಾನ್ಯ ಸಂಪಾದಕರೇ

ನಾನು ಕಂಡಂತೆ 'ಸಂವಾದ' ವಿಭಿನ್ನವಾಗಿ ನಿಲ್ಲುವ, ನಿಲುವು ತಳೆವ ಪತ್ರಿಕೆಯಾಗಿದೆ. ಜಾಗತೀಕರಣದ ಸ್ಥಿತಿಯಲ್ಲಿ ಪತ್ರಿಕೋದ್ಯಮವೆಂದರೆ, ಮಾಲೀಕರ ಹಿತಾಸಕ್ತಿ, ಹಣಮಾಡುವ ದಂಧೆಯಾಗಿ ಪರಿವರ್ತನೆಯಾಗಿರುವುದು ದುರಂತವೇ ಸರಿ. ಆದರೆ ತಮ್ಮ ಪತ್ರಿಕೆ ನಾಡಿನ ಸಾಂಸ್ಕೃತಿಕ, ವೈಚಾರಿಕ ಕ್ಷೇತ್ರದಲ್ಲಿ ಮುಕ್ತವಾಗಿ ತನ್ನನ್ನು ತೆರೆದುಕೊಂಡು ಹೊಸಬಗೆಯ, ಜೀವಪರ ಆಲೋಚನೆಗೆ ಹಚ್ಚುವ ದಿಕ್ಕಿನಲ್ಲಿ ತನ್ನನ್ನು ಗುರುತಿಸಿಕೊಂಡಿದೆ.

ತಮ್ಮ ಸಂಪಾದಕೀಯ ಗಂಭೀರ ಆಲೋಚನೆಗೆ ಹಚ್ಚುವ ಒಂದು ಮಹತ್ವದ ಬರವಣಿಗೆ. ಚಂದ್ರಭಾನ್ ಪ್ರಸಾದರ ಕೆಲ ಬರವಣಿಗೆಯು ಪೂರ್ವಾಗ್ರಹ ಪೀಡಿತದಿಂದ ಕೂಡಿರುತ್ತವೆ. ಕಮ್ಯುನಿಸ್ಟರನ್ನು, ಸಂಘ ಪರಿವಾರವನ್ನು ಒಂದೇ ತಕ್ಕಡಿಯಲ್ಲಿ ಇಟ್ಟು ನೋಡುವುದು ಯಾವ ನ್ಯಾಯ? ಅಮೇರಿಕಾ ಪರ ನಿಲುವಿಗೆ ಅವರ ಬರವಣಿಗೆಯೇ ಸಾಕ್ಷಿ.

ಪರಶುರಾಮ ಬೋನೇರ
ಗಜೇಂದ್ರಗಡ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

	೧ ವರ್ಷಕ್ಕೆ	೩ ವರ್ಷಕ್ಕೆ	೫ ವರ್ಷಕ್ಕೆ
ವ್ಯಕ್ತಿಗಳು, ನೌಕರರು ಮತ್ತು ವೃತ್ತಿಪರರಿಗೆ	ರೂ.೨೦೦/-	ರೂ.೫೦೦/-	ರೂ.೮೦೦/-
ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ	ರೂ.೨೫೦/-	ರೂ.೬೦೦/-	ರೂ.೧೦೦೦
ವಿಶೇಷ ಹಿತೈಷಿ ಚಂದದಾರರಿಗೆ	ರೂ.೫೦೦/-	ರೂ.೧೫೦೦/-	ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಹೊಸ ಪುಸ್ತಕ

ಹರಿಶ್ಚಂದ್ರ ಚಾರಿತ್ರ ಸತ್ಯದ ತೊಡಕು

ಲೇ: ಡಾ. ಬಿ.ಎಂ. ಪುಟ್ಟಯ್ಯ

ಬೆಲೆ: ರೂ.೨೦/-

ಈ ಕೃತಿಯಲ್ಲಿ ಸತ್ಯಕ್ಕೆ ಹೆಸರಾದ ಹರಿಶ್ಚಂದ್ರನ ಕುರಿತು ಇನ್ನೊಂದು ಮಗ್ಗಲಿನಿಂದ ವಿಶ್ಲೇಷಿಸಲಾಗಿದೆ. ಇದುವರೆಗೂ ಹರಿಶ್ಚಂದ್ರನನ್ನು ಪ್ರಭುತ್ವ ದೃಷ್ಟಿಕೋನದಿಂದಲೇ ಓದಿಕೊಂಡು ಅರ್ಥೈಸಿಕೊಳ್ಳಲಾಗಿದೆ. ಈ ಕೃತಿಯಲ್ಲಿ ಹರಿಶ್ಚಂದ್ರ ಸತ್ಯದ ಪರಿಪಾಲಕನಾಗಿದ್ದರೆ, ಆತ ಯಾರ ಸತ್ಯದ ಪರಿಪಾಲಕ ಎನ್ನುವ ಸೈದ್ಧಾಂತಿಕ ಪ್ರಶ್ನೆಯನ್ನು ಲೇಖಕ ಎತ್ತಿದ್ದಾರೆ. ಇದುವರೆಗೂ ಹರಿಶ್ಚಂದ್ರನ ಕುರಿತು ನಂಬಿಕೊಂಡು ಬಂದ ಸತ್ಯವೇ ಭ್ರಾಮಕವೆಂದು ಭಾವಿಸುವಂತೆ ಈ ಕೃತಿ ತನ್ನ ಪ್ರಭಾವ ಬೀರುತ್ತದೆ.

ಪ್ರಕಾಶಕರು: ಅನುಭವ ಪ್ರಕಾಶನ
ಹೊಸಪೇಟೆ



ಗುಲಗಂಜಿ (ಕವನಸಂಕಲನ)

ಲೇ: ಬಸವರಾಜ ನಿಂ.ಸಂಶಿ

ಬೆಲೆ: ರೂ.೪೦/-

ಗದಗ ಜಿಲ್ಲೆ ಒಂದುಕಾಲಕ್ಕೆ ಪಾಳೇಗಾರರ ಹಿಡಿತಕ್ಕೆ ಸಿಕ್ಕಿ ನಲುಗಿದ ಪರಿಸರವದು. ಅಂತಹ ಪಾಳೇಗಾರಿಕೆಯನ್ನು ಒದ್ದೋಡಿಸಿದ್ದು ಅಲ್ಲಿನ ಪ್ರಗತಿಪರರ ಗುಂಪು. ಕೆಲವರು ಕಾವ್ಯದ ಮೂಲಕ ಪ್ರತಿಭಟಿಸಿದವರು. ಈ ಕೃತಿಯ ಕವಿ ಕೂಡಾ ಕವಿತೆಯ ಮೂಲಕವೇ ಪ್ರತಿಭಟಿಸಿದ್ದಾರೆ. ಇಲ್ಲಿನ ಎಲ್ಲ ಕವಿತೆಗಳು ಬಂಡಾಯದ ಆಶಯಗಳನ್ನು ಒಳ ಗೊಂಡಿವೆ. ತಾನುಂಡ ನೋವು, ಸಂಕಟಗಳನ್ನು ಕಾವ್ಯದ ಮೂಲಕ ನೀಗಿಸಿಕೊಂಡಿದ್ದಾರೆ.

ಪ್ರಕಾಶಕರು: ಪ್ರಗತಿ ಪ್ರಕಾಶನ
ಗೊಜನೂರು-೫೮೨೧೧೬
ಜಿ.ಗದಗ



ಭಾರತದಲ್ಲಿ ಮುಸ್ಲಿಮರು

ಮೂಲ: ಶಮೀಮ್ ಫೈಝಿ

ಕನ್ನಡಕ್ಕೆ: ಬಿ.ವಿ.ಕಕ್ಕಿಲಾಯ

ಬೆಲೆ: ರೂ.೩೦

ಯು.ಪಿ.ಎ. ಸರ್ಕಾರವು ೨೦೦೫ರಲ್ಲಿ ಮುಸ್ಲಿಂ ಅಲ್ಪಸಂಖ್ಯಾತರ ಸಮಸ್ಯೆಗಳಿಗೆ ರಾಜೇಂದ್ರಸಿಂಗ್ ಸಾಚಾರ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತು. ಅದರಲ್ಲಿನ ಕೆಲ ಮುಖ್ಯ ಅಂಶಗಳನ್ನು ಕಮ್ಯುನಿಸ್ಟ್ ಪಕ್ಷದ ಮುಖವಾಣಿ ನ್ಯೂಏಜ್ ಪತ್ರಿಕೆಯ ಸಂಪಾದಕ ಕಾಂ. ಶಮೀಮ್ ಫೈಝಿ ಇಂಗ್ಲೀಷಿನಲ್ಲಿ ಬರೆದಿದ್ದಾರೆ ಅದರ ಕನ್ನಡ ಅನುವಾದವನ್ನು ಹಿರಿಯ ಕಮ್ಯುನಿಸ್ಟ್ ನಾಯಕ ಬಿ.ವಿ. ಕಕ್ಕಿಲಾಯ ಮಾಡಿದ್ದಾರೆ. ಮುಸ್ಲಿಮರ ಕುರಿತು ಇರುವ ಕೆಲ ಮಿಥ್ಯೆಗಳನ್ನು ಹೊಡೆದೋಡಿಸಲು ಪ್ರಮುಖ ಅಂಶಗಳು ಸಹಕಾರಿಯಾಗಿ ನಿಲ್ಲುತ್ತವೆ.

ಪ್ರಕಾಶಕರು: ಸಿಪಿಐ ರಾಜ್ಯಮಂಡಳಿ
ಬೆಂಗಳೂರು



ಅಂಬೇಡ್ಕರ್ ಸಂವೇದನೆ

ಲೇ: ಡಾ. ಎಚ್.ಟಿ.ಪೋತೆ

ಬೆಲೆ: ರೂ.೧೦೦/-

ಡಾ.ಎಚ್.ಟಿ ಪೋತೆ ಬಂಡಾಯಪರ ಚಿಂತನೆಯುಳ್ಳ ಅಪರೂಪದ ಲೇಖಕರು. ಪ್ರಸ್ತುತ ಕೃತಿಯಲ್ಲಿ ಅಂಬೇಡ್ಕರ್ ಕುರಿತ ಹನ್ನೊಂದು ಲೇಖನಗಳಿವೆ.ತನ್ನ ಬದುಕನ್ನು ಬುದ್ಧನ ಬೆಳಕಿನಲ್ಲಿ ಕಂಡುಕೊಂಡ ಸತ್ಯ, ಲೋಹಿಯಾ, ಗಾಂಧಿಯ ವರೊಂದಿಗೆ ಮುಖಾಮುಖಿಯಾದ ಅಂಬೇಡ್ಕರ್ ಚಿಂತನೆ, ಎಲ್ಲವೂ ಈ ಕೃತಿಯಲ್ಲಿ ಅಡಕವಾಗಿವೆ. ಅಂಬೇಡ್ಕರೋತ್ತರ ದಲಿತ ಲೋಕ ಈಗ ಯಾವ ಪರಿಸ್ಥಿತಿ ತಲುಪಿದೆ ಎನ್ನುವದನ್ನು ಈ ಕೃತಿಯಲ್ಲಿ ತುಂಬಾ ಸೂಕ್ಷ್ಮವಾಗಿ ಚರ್ಚಿಸಲಾಗಿದೆ.

ಪ್ರಕಾಶಕರು: ಕುಟುಂಬ ಪ್ರಕಾಶನ
ಗುಲಬರ್ಗಾ



ಯುಗಾಂತರ (ನಾಟಕ)

ಲೇ: ಮನಜ.

ಬೆಲೆ: ರೂ. ೧೦೦/-

ಪ್ರಸ್ತುತ ನಾಟಕವನ್ನು ಪ್ರೊ ಮ.ನ. ಜವರಯ್ಯ ಬರೆದಿದ್ದಾರೆ. ಅನೇಕ ವಿಷಯಗಳಲ್ಲಿ ಮಹಾತ್ಮಾ ಗಾಂಧೀಜಿ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ನಡುವೆ ಭಿನ್ನಾಭಿಪ್ರಾಯಗಳಿದ್ದವು. ಅದನ್ನು ಒಂದು ವರ್ಗ ಬೇಕಂತಲೇ ನಿರ್ಮಿಸಿತ್ತು. ದಲಿತರಿಗೆ ವಿಶೇಷ ಪ್ರತ್ಯೇಕ ಮತದಾನದ ಹಕ್ಕನ್ನು ಕೊಡುವ ತೀರ್ಪಿಗೆ ವಿರುದ್ಧವಾಗಿ ಆಮರಣಾಂತ ಉಪವಾಸ ಕುಳಿತ ಗಾಂಧಿಯವರ ನಿಲುವನ್ನು ಅಂಬೇಡ್ಕರ್ ವಿರೋಧಿಸುತ್ತಾರೆ. ಈ ಘಟನೆಯ ಸುತ್ತಲೂ ಈ ನಾಟಕವನ್ನು ಹೆಣೆಯಲಾಗಿದೆ.

ಪ್ರಕಾಶಕರು: ಬಹುಜನ ಮಾಧ್ಯಮ
ಕೇಂದ್ರ, ಮೈಸೂರು



ಮೃತ್ಯು ಮುಟ್ಟುವ ಮುನ್ನ

ಲೇ:ಎನ್. ಎಂ. ಕೊಟ್ರೇಶ್

ಬೆಲೆ: ರೂ.೫೦/-

ಪ್ರಸ್ತುತ ಕವನ ಸಂಕಲನದಲ್ಲಿ ೩೯ ವಿವಿಧ ಕವಿತೆಗಳಿವೆ. ಭಯೋತ್ಪಾದನೆ, ಭ್ರಷ್ಟಾಚಾರ, ಧರ್ಮ ಕರ್ಮಠತನ, ರಾಜಕೀಯ ಡೋಂಗಿತನ ಕವಿತೆಯ ವಸ್ತುಗಳಾಗಿವೆ. ಮಗುವಿನಂಥ ಮನಸ್ಸನ್ನು ಅಂತರ್ಯದಲ್ಲಿ ನಿರ್ಮಾಣ ಮಾಡಿಕೊಂಡಾಗ ಕವಿ ನಿರ್ವ್ಯಸನಿಯಾಗಿ ಬರೆಯಲು ಸಾಧ್ಯ. ಅದನ್ನು ಈ ಕವಿತಾ ಸಂಕಲನದ ಮೂಲಕ ರುಜುವಾತುಪಡಿಸಿದ್ದಾರೆ. ಇಲ್ಲಿನ ಕವಿತೆಗಳು ಓದಿಸಿಕೊಂಡು ಹೋಗುವ ಕಾವ್ಯ ಶಕ್ತಿಯನ್ನು ಪಡೆದುಕೊಂಡಿವೆ.

ಪ್ರಕಾಶಕರು: ಶ್ರೀಹರ್ಷ ಪ್ರಕಾಶನ
ಚಾಮರಾಜಪೇಟೆ,
ಬೆಂಗಳೂರು-೧೮

ಸಂಪಾದಕೀಯ



ಕಿರು ಪತ್ರಿಕೆಗಳ ಮಹತ್ವ ದೊಡ್ಡದು!

‘ಸಂವಾದ’ಕ್ಕೀಗ ಏಳರ ಹರೆಯ! ‘ಸಂವಾದ’ದಂಥ ಕಿರುಪತ್ರಿಕೆಯೊಂದು-ಅದೂ ಕನ್ನಡದಲ್ಲಿ- ಆರು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದ್ದು ವಿಶೇಷವೇ. ಕಳೆದ ಮೂರು-ನಾಲ್ಕು ದಶಕಗಳಿಂದ ಪತ್ರಿಕೋದ್ಯಮದ ಏಳು ಬೀಳುಗಳನ್ನು ಶ್ರದ್ಧೆಯಿಂದ ಗಮನಿಸುತ್ತಿರುವ ನನಗೆ ‘ಸಂವಾದ’ದ ಯಶಸ್ಸು ಸಾಕಷ್ಟು ಸಂತೋಷ ನೀಡಿದೆ.

ಪತ್ರಿಕೋದ್ಯಮದ ಪರಂಪರೆಯಲ್ಲಿ ಕಿರು ಪತ್ರಿಕೆಗಳ (Little Magazines) ಮಹತ್ವ ಬಹಳ ದೊಡ್ಡದು. ಕನ್ನಡದ ಮಟ್ಟಿಗಂತೂ ಇಂಥ ಪತ್ರಿಕೆಗಳು ಚಿಂತಕರ ದೊಡ್ಡ ತಲೆಮಾರನ್ನೇ ಹುಟ್ಟುಹಾಕಿದೆ. ಯುವ ಜನರಲ್ಲಿ ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿ ಸಮುದಾಯಗಳಿಗೆ ಮಾರ್ಗದರ್ಶನ ಮಾಡಿ ಅವರನ್ನು ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡುವಲ್ಲಿ ಇಂಥ ಸಣ್ಣ ಪತ್ರಿಕೆಗಳು ಯಶಸ್ವಿಯಾಗಿವೆ. ೭೦ರ ದಶಕದಲ್ಲಿದ್ದ ‘ಸಾಕ್ಷಿ’-‘ಸಂಕ್ರಮಣ’ (ಸಂಕ್ರಮಣ ಈಗಲೂ ಬರುತ್ತಿದೆ) ಪತ್ರಿಕೆಗಳು ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕಕ್ಕೆ ಹೊಸ ದಿಕ್ಕನ್ನೇ ತೆರೆದಿಟ್ಟಿದ್ದವು. ಜತೆಯಲ್ಲಿ ಹೊಸ ಸಾಮಾಜಿಕ ಅರಿವು ಮತ್ತು ಜವಾಬ್ದಾರಿಯುಳ್ಳ ಯುವಕರ ಪಡೆಯನ್ನು ಕಟ್ಟಿ ಬೆಳೆಸಿದ್ದವು. ಅದೇ ತಲೆಮಾರಿನ ‘ಆಂದೋಲನ’ (ಈಗ ಮೈಸೂರಿನಲ್ಲಿ ದಿನಪತ್ರಿಕೆ) ಮತ್ತು ‘ಪಂಚಮ’ ಪತ್ರಿಕೆಗಳು ನಾಡಿನ ಸಾಮಾಜಿಕ ಬದುಕನ್ನೇ ಪರಿವರ್ತಿಸಿದ ರೈತ ಮತ್ತು ದಲಿತ ಚಳವಳಿಗೆ ಪ್ರೇರಕ ಶಕ್ತಿಯಾದವು. ಜಡ್ಡುಗಟ್ಟಿದ ಸಮಾಜ ವ್ಯವಸ್ಥೆಯನ್ನೇ ಅಲುಗಾಡಿಸುವಂಥ ಚೈತನ್ಯವನ್ನು ಯುವ ಜನರಲ್ಲಿ ತುಂಬಿದವು.

‘ಪಂಚಮ’ ಪತ್ರಿಕೆಯಂತೂ ಹುದುಗಿ ಹೋಗಿದ್ದ ದಲಿತ ಲೋಕದ ಪ್ರತಿಭೆಗಳನ್ನೆಲ್ಲ ಹೆಕ್ಕಿ ಹೆಕ್ಕಿ ಹೊರಗೆಳೆಯಿತು. ಈ ಹೊತ್ತಿನ ಬಹುತೇಕ ಪ್ರತಿಭಾವಂತ ದಲಿತ ಲೇಖಕರೆಲ್ಲ ‘ಪಂಚಮ’ದ ಮೂಲಕವೇ ಬರವಣಿಗೆ ಆರಂಭಿಸಿದ್ದವರೆಂಬುದನ್ನು ಗಮನಿಸಿದರೆ ಅಂಥ ಸಣ್ಣ ಪತ್ರಿಕೆಯೊಂದರ ಸಾಧ್ಯತೆ ಎಷ್ಟೆಂಬುದು ಅರ್ಥವಾಗುತ್ತದೆ. ಕನ್ನಡದಂತೆ ಅಖಿಲ ಭಾರತ ಮಟ್ಟದಲ್ಲಿ ಕಿರು ಪತ್ರಿಕೆಗಳೇ ಯುವಜನರ ಮೇಲೆ ಹೆಚ್ಚಿನ ಪ್ರಭಾವ ಬೀರಿದ್ದವು. ವಿವಿಧ ಕಮ್ಯುನಿಸ್ಟ್ ಹಾಗೂ ಸಮಾಜವಾದಿ ಗುಂಪುಗಳಿಂದ ಬರುತ್ತಿದ್ದ ಇಂಥ ಪತ್ರಿಕೆಗಳು ದೇಶದ ವಿವಿಧ ಭಾಗಗಳಲ್ಲಿ ಯುವ ಶಕ್ತಿಯನ್ನು ಬಡಿದೆಬ್ಬಿಸುತ್ತಿದ್ದವು.

ವಿಚಿತ್ರವೆಂದರೆ ಆ ಕಾಲದ ದೊಡ್ಡ ಪತ್ರಿಕೆಗಳಾವುವೂ ಇಂಥ ಪ್ರಯತ್ನಕ್ಕೆ ಬೆಂಬಲವಾಗಿ ನಿಲ್ಲಲಿಲ್ಲ. ಹೊಸ ಸಾಮಾಜಿಕ ತುಡಿತಕ್ಕಾಗಿ ಹಾತೊರೆಯುತ್ತಿದ್ದ ಯುವ ಸಮುದಾಯವನ್ನು ಗುರುತಿಸಲೂ ಪ್ರಯತ್ನಿಸಲಿಲ್ಲ. ಅಂದಿನ ಯಾವುದೇ ಚಳವಳಿ ಹೋರಾಟಗಳ ಬಗ್ಗೆ ಮೂರು ಸಾಲಿನ ಸುದ್ದಿ ಪ್ರಕಟಿಸಲೂ ಅವು ಸಿದ್ಧವಿರಲಿಲ್ಲ. ಕಾಲಮಾನದ ಒತ್ತಡದಲ್ಲಿ ಬೆಂದು ಕುದಿಯುವ ಲಾವಾರಸವಾಗಿದ್ದ ಯುವಶಕ್ತಿಗೆ, ಸಾಮಾಜಿಕ ಹಾಗೂ ರಾಜಕೀಯ ಪ್ರವಾಹದ ದಿಕ್ಕನ್ನು ತೋರಿಸಿದ್ದೇ ಸಣ್ಣ ಪತ್ರಿಕೆಗಳು. ಅವರನ್ನು ಸೈದ್ಧಾಂತಿಕವಾಗಿ ಸಿದ್ಧಗೊಳಿಸಿದ್ದು ಈ ಪತ್ರಿಕೆಗಳೇ. ಕಾಂಗ್ರೆಸ್‌ನ ನಿರಂಕುಶ ಪ್ರಭುತ್ವದಿಂದಾಗಿ ಜನಪರ ಶಕ್ತಿಗಳನ್ನೆಲ್ಲ ಒಗ್ಗೂಡಿಸಿ ನವ ನಿರ್ಮಾಣ ಚಳವಳಿಗೆ ಪ್ರೇರಕ ಶಕ್ತಿಗಳಾದದ್ದು ಇಂಥ ಸಣ್ಣ ಪತ್ರಿಕೆಗಳೇ.

ಇವತ್ತು ಪತ್ರಿಕೋದ್ಯಮದ ದಿಕ್ಕು-ದಿಶೆಯೇ ಬದಲಾಗಿಹೋಗಿದೆ. ದೊಡ್ಡ ಪತ್ರಿಕೆಗಳಿಗಂತೂ ಹಣ ಸಂಪಾದಿಸುವ ಗುರಿ ಹೊರತಾಗಿ ಬೇರಾವುದೇ ಉದ್ದೇಶಗಳೂ ಇದ್ದಂತೆ ಕಾಣಿಸುತ್ತಿಲ್ಲ. ಜಿಲ್ಲಾ ಮಟ್ಟದ ದಿನ ಪತ್ರಿಕೆಗಳೂ ಹೆಚ್ಚು ಕಡಿಮೆ ಇದೆ ಹಾದಿಯಲ್ಲೇ ಸಾಗುತ್ತಿವೆ. ತಾಂತ್ರಿಕ ಅನುಕೂಲತೆಗಳು ಪತ್ರಿಕಾ ಮಾಲೀಕರನ್ನು ಮತ್ತಷ್ಟು ವ್ಯಾಪಾರೀಕರಣದತ್ತ ದೂಡುತ್ತಿವೆ. ಸಮಾಜ ಮುಖಿಯಾಗಿದ್ದ ಪತ್ರಕರ್ತ ಯಾಂತ್ರಿಕವಾಗಿ ಮಾಲೀಕನ ಮರ್ಜಿಗಾಗಿ ಮಾತ್ರ ದುಡಿಯುತ್ತಿದ್ದಾನೆ. ಗ್ರಾಹಕರನ್ನು ತೃಪ್ತಿ ಪಡಿಸುವ ವ್ಯಾಪಾರಿಯ ಮಟ್ಟಕ್ಕೆ ಇಂದು ಪತ್ರಕರ್ತ ಇಳಿದು ನಿಂತಿದ್ದಾನೆ. ವೃತ್ತಿ ನಿಷ್ಠೆ ಮಾಲೀಕ ನಿಷ್ಠೆಯಾಗಿ ಬದಲಾಗಿದೆ.

ಈ ಸ್ಥಿತ್ಯಂತರ ಕೇವಲ ಪತ್ರಿಕೋದ್ಯಮದ್ದು ಮಾತ್ರವಾಗಿಲ್ಲ. ಇಡೀ ಸಾಮಾಜಿಕ ಬದುಕೇ ಇಂದು ದಿಕ್ಕೆಟ್ಟು ಹೋಗಿದೆ. ಎಲ್ಲ ಕಾರ್ಯ ಕ್ಷೇತ್ರಗಳೂ ಹಣದಾಸೆಗೆ ಕಟ್ಟು ಬಿದ್ದಿವೆ. ಎಲ್ಲವನ್ನು ಗ್ರಾಹಕ ಸಂಸ್ಕೃತಿ ನುಂಗಿಹಾಕುತ್ತಿದೆ. ಸಾಹಿತ್ಯ, ಸಂಶೋಧನೆ, ಚಳವಳಿ, ರಾಜಕೀಯ ಎಲ್ಲವೂ ಹತಾಶೆಯ ಹಂಚಿಗೆ ಬಂದು ಮುಟ್ಟಿದೆ. ಯಾವುದು ಸರಿ ಯಾವುದು ಸರಿ ಅಲ್ಲ ಎಂದು ನಿರ್ಧರಿಸಲಾಗದ ಸ್ಥಿತಿಯಲ್ಲಿ ಇಂದಿನ ಯುವ ಜನತೆ ಕಂಗಾಲಾಗಿದೆ. ಅವರಿಗೀಗ ಗಾಂಧಿಯೂ ಆದರ್ಶವಲ್ಲ, ಅಂಬೇಡ್ಕರರೂ ಅಲ್ಲ. ಬುದ್ಧ, ಬಸವರಂತೂ ಅವರ ಹತ್ತಿರವೂ ಸುಳಿದಿಲ್ಲ! ಕುವೆಂಪು, ಗೋಪಾಲಗೌಡ ಮುಂತಾದವರನ್ನು ಕೇಳುವಂತೆಯೇ ಇಲ್ಲ! ಇನ್ನು ಮಾರ್ಕ್ಸ್, ಲೆನಿನ್, ಮಾವೋ ಮುಂತಾದವರನ್ನೆಲ್ಲ ಎಲ್ಲಿ ಹುಡುಕಬೇಕು?

ಇಂಥ ಹತಾಶ ಸ್ಥಿತಿಯಿಂದ ಜನರನ್ನು ಹೊರತರಲೆಂದೇ ‘ಸಂವಾದ’ವನ್ನು ಆರಂಭಿಸಲಾಯಿತು. ಕಳೆದ ಆರು ವರ್ಷಗಳ ಕಾಲ ನಿರಂತರವಾಗಿ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು, ‘ಸಂವಾದ’ ಪ್ರಾಮಾಣಿಕವಾಗಿ ಪ್ರಯತ್ನಿಸಿದೆ. ಪ್ರೀತಿ, ವಿಶ್ವಾಸ ಮತ್ತು ಸ್ವಾಭಿಮಾನದ ಬದುಕಿಗಾಗಿ ತುಡಿಯುವ ಮನಸ್ಸುಗಳನ್ನು ಬಡಿದೆಬ್ಬಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಿದೆ. ಯಾವುದೇ ಕರ್ಮಠ ಸಿದ್ಧಾಂತಗಳಿಗೂ ಕಟ್ಟು ಬೀಳದೆ ಮುಕ್ತ ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ. ತಾನು ಮಾಡಿದ್ದೇ ಸರಿ ಎಂಬ ಅಹಂಕಾರ ‘ಸಂವಾದ’ಕ್ಕಿಲ್ಲ. ಪ್ರವಾದಿಯಂತೆ ಪ್ರವಚನ ನೀಡುವುದರಲ್ಲಿ ‘ಸಂವಾದ’ಕ್ಕೆ ಆಸಕ್ತಿಯೂ ಇಲ್ಲ. ಇದೊಂದು ಮುಕ್ತ ವೇದಿಕೆ ಮಾನವ ಒಳಿತಿನ ಎಲ್ಲ ವಿಚಾರಗಳಿಗೆ ಇಲ್ಲಿ ಸ್ವಾಗತವಿದೆ. ಕಾರ್ಯಕಾರಣ ಸಂಬಂಧವಿಲ್ಲದೆ ಯಾರನ್ನು ಯಾವುದನ್ನೂ ‘ಸಂವಾದ’ ವಿರೋಧಿಸಿಲ್ಲ. ಸಂಬಂಧವಿದ್ದರೆ ಅಂಥದನ್ನು ಯಾವ ಕಾರಣಕ್ಕೂ ಸಹಿಸಿಯೂ ಇಲ್ಲ.

‘ಸಂವಾದ’ ಆರಂಭವಾದ ಮೇಲೆ ಅಂಥದೇ ಉದ್ದೇಶ ಇಟ್ಟುಕೊಂಡು ಆರಂಭವಾದ ನಾಲ್ಕಾರು ಪತ್ರಿಕೆಗಳು ನಿಂತು ಹೋದವು. ವೈಚಾರಿಕ ಶೂನ್ಯತೆ ಆವರಿಸುತ್ತಿರುವ ಇಂದಿನ ದಿನಗಳಲ್ಲಿ ‘ಸಂವಾದ’ದಂಥ ಪತ್ರಿಕೆಗಳು ಎಷ್ಟಿದ್ದರೂ ಸಾಲದು. ಕರ್ನಾಟಕದ ಮಟ್ಟಿಗಂತೂ ಮತ್ತೊಂದು ೭೦ರ ದಶಕ ಬರಲಿ ಎಂಬ ಹಾರೈಕೆ ನನ್ನದು. ೭೦ರ ದಶಕದಲ್ಲಿದ್ದ ಅರಿವು, ಚೈತನ್ಯ, ಹೋರಾಟದ ಕಿಚ್ಚು ಯುವ ಜನಾಂಗದಲ್ಲಿ ಮೂಡಿ, ಚೈತನ್ಯ ಶಾಲಿ ನವ ಕರ್ನಾಟಕದ ನಿರ್ಮಾಣಕ್ಕೆ ಅವರನ್ನು ಪ್ರೇರೆಪಿಸಲಿ. ‘ಸಂವಾದ’ ಅಂಥ ಮಹತ್ಕಾರ್ಯಕ್ಕೆ ಎಂದೂ ಮುಂದಾಗಿ ನಿಲ್ಲಲಿದೆ.

ನಾವೆಲ್ಲ ಸೇರಿ ‘ಸಂವಾದ’ವನ್ನು ಸಮರ್ಥವಾಗಿ ಮುನ್ನಡೆಸೋಣ. ಹೊಸ ಕರ್ನಾಟಕವನ್ನು ಕಟ್ಟೋಣ.

○ ಇಂದೂಧರ ಹೊನ್ನಾಪುರ

ಮೂರು ಪ್ರಶ್ನೆಗಳು ಮತ್ತು ಒಂದು ಉದಾಹರಣೆ

ಡಿ. ಎಸ್. ನಾಗಭೂಷಣ

ಬಾಲಗಂಗಾಧರರು ಭಾರತದ ಜಾತಿ ವ್ಯವಸ್ಥೆ ಕುರಿತಂತೆ ಮಂಡಿಸಿರುವ ಹೊಸ ಆಲೋಚನೆಗಳ ಸಂಬಂಧವಾಗಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ನಡೆದಿರುವ ಸಂಶೋಧನೆಗಳ ಬಗ್ಗೆ 'ಸಂವಾದ'ದಲ್ಲಿ ಪ್ರಕಟವಾಗುತ್ತಿರುವ ಲೇಖನ/ಚರ್ಚೆಗಳನ್ನು ಗಮನಿಸಿರುವೆ. ಈ ಸಂಶೋಧನಾ ಯೋಜನೆಯಲ್ಲಿ ಮುಖ್ಯ ಪಾತ್ರ ವಹಿಸಿರುವ ಡಾ॥ ಜೆ.ಎಸ್.ಸದಾನಂದ ಮತ್ತು ಡಾ॥ ರಾಜಾರಾಮ ಹೆಗಡೆಯವರು ನನ್ನ ಆಪ್ತ ಗೆಳೆಯರಷ್ಟೇ ಅಲ್ಲ, ನಾನು ಬಹುವಾಗಿ ಗೌರವಿಸುವ ಸಂಶೋಧಕರು ಕೂಡಾ. ಇವರಿಬ್ಬರೂ ತಂತಮ್ಮ ಕ್ಷೇತ್ರಗಳಲ್ಲಿ ಮಾಡಿರುವ ಸಂಶೋಧನಾ ಕಾರ್ಯವನ್ನು ಗಮನಿಸಿರುವ ಯಾರೂ ಇವರ ಅಕೆಡೆಮಿಕ್ ಪ್ರಾಮಾಣಿಕತೆಯನ್ನು ಪ್ರಶ್ನಿಸಲಾರರು.

ಆದರೂ, ಇವರ ನೇತೃತ್ವ ಅಥವಾ ಮಾರ್ಗದರ್ಶನದ ಈ ಸಂಶೋಧನಾ ಯೋಜನೆ ಮತ್ತು ಸಂಬಂಧಿತ ಸಂಶೋಧನಾ ಕೇಂದ್ರವೊಂದರ ಸ್ಥಾಪನೆ ಕುರಿತಾಗಿ ಸೃಷ್ಟಿಯಾಗಿರುವ ಹಲವು ನೆಲೆಗಳ ವಿವಾದಗಳಿಗೆ, ಹಲವು ರೀತಿಯ ಕಾರಣಗಳಿದ್ದಂತೆ ತೋರುತ್ತದೆ. ನಾಲ್ಕೈದು ವರ್ಷಗಳ ಹಿಂದೆ ರಾಜಾರಾಂ ಹೆಗಡೆ ಮತ್ತು ನನಗೆ ಪರಮಾಪ್ತ ಮಿತ್ರರಾದ ಒಬ್ಬರು ನನ್ನ ಬಳಿ ಆತಂಕದಿಂದ 'ಏನ್ರೀ, ಈ ಹೆಗಡೆ ಮತ್ತವರ ಗೆಳೆಯರು ಜಾತಿ ವ್ಯವಸ್ಥೆಯೆಂಬುದೇ ಸುಳ್ಳು ಅಂತ ವಾದಿಸತೊಡಗಿದ್ದಾರಂತಲ್ರೀ!' ಎಂದು ಹೇಳಿದಾಗಿನಿಂದ ನಾನು ಆ ಬಗ್ಗೆ ಕುತೂಹಲಿತನಾಗಿ ಹೆಗಡೆ ಮತ್ತು ಸದಾನಂದರೊಂದಿಗೆ ನಿರಂತರ ಸಂವಾದದಲ್ಲಿದ್ದೇನೆ. ಈ ಮಧ್ಯೆ ಹೆಗಡೆಯವರು ನನ್ನ ಆಸಕ್ತಿ ಗಮನಿಸಿ ಬಾಲಗಂಗಾಧರರ ಹೊಸ ಜಾತಿ ಮೀಮಾಂಸೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಪ್ರಕಟವಾಗಿರುವ ಸಾಹಿತ್ಯವನ್ನು ನನಗೆ ಒದಗಿಸಿ ಉಪಕಾರ ಮಾಡಿದ್ದಾರೆ. ನಾನು ಅದೆಲ್ಲವನ್ನೂ ಸಂಪೂರ್ಣವಾಗಿ ಓದಿಕೊಂಡಿಲ್ಲವಾದರೂ, ಬಾಲಗಂಗಾಧರರ ವಾದವನ್ನಂತೂ ಸಹಾನುಭೂತಿಯಿಂದ ಗ್ರಹಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆಂದು ಹೇಳಬಲ್ಲೆ. ನಂತರ 'ಸಂವಾದ'ದ ಕಳೆದೆರಡು-ಮೂರು ಸಂಚಿಕೆಗಳಲ್ಲಿ ಈ ಸಂಶೋಧನಾ ಯೋಜನೆ ಬಗ್ಗೆ ಪ್ರಕಟವಾದ ಭಿನ್ನಮತದ ಲೇಖನಗಳು ಮತ್ತು ಅವುಗಳಿಗೆ ಕಿರಣ್ ಗಾಜನೂರು ಹಾಗೂ ಡಾ॥ ಎ.ಷಣ್ಮುಖ ಅವರು ನೀಡಿದ ವಿವರಣೆಗಳು ಮತ್ತು ಸ್ಪಷ್ಟೀಕರಣಗಳು ನನ್ನ ಗ್ರಹಿಕೆಯನ್ನು ಇನ್ನಷ್ಟು ವಿಸ್ತರಿಸಿವೆ. ಆದರೆ ಬಾಲಗಂಗಾಧರರ ಸಮಾಜಶಾಸ್ತ್ರೀಯ ಅಧ್ಯಯನದ ಹಿಂದಿನ ಮೂಲ ನಂಬಿಕೆಗಳು ಮತ್ತು ಅದರ ಸ್ವರೂಪದ ಬಗ್ಗೆ ನನ್ನ ಹಲವು ಅನುಮಾನಗಳು ಮತ್ತು ಪ್ರಶ್ನೆಗಳು ಉಳಿದೇ ಇವೆ.

ಮೊದಲಾಗಿ ನಾನು ಇತ್ತೀಚಿನ ವರ್ಷಗಳಲ್ಲಿ ನಮ್ಮ ಸಾಮಾಜಿಕ ನ್ಯಾಯ ಚಳವಳಿಯು ಜಾತಿ ವಿನಾಶಕ್ಕೆ ಬದಲಾಗಿ ಜಾತಿ ಸಮಾನತೆಯನ್ನು ತನ್ನ ಗುರಿಯನ್ನಾಗಿ ಮಾಡಿಕೊಂಡು ತಳೆಯುತ್ತಿರುವ ರೂಪಗಳನ್ನು ಗಮನಿಸುತ್ತಿದ್ದಂತೆ, ಜಾತಿ ವ್ಯವಸ್ಥೆ ಕುರಿತಂತೆ ನಾವು ಕಟ್ಟಿಕೊಂಡು ಬಂದ ಸಂಕಥನದಲ್ಲಿಯೇ ಏನೋ ಮೂಲ ದೋಷವಿದೆ ಎಂಬ ಅನುಮಾನ ನನ್ನಲ್ಲಿ ಎದ್ದಿತ್ತು. ನಾನು ಅದರ ಬಗ್ಗೆ ಹಲವೆಡೆ ಬರೆದಿದ್ದೇನೆ ಕೂಡಾ. ಈ ಹಿನ್ನೆಲೆಯಲ್ಲಿ ನಾನು ಬಾಲಗಂಗಾಧರರ ಮೀಮಾಂಸೆಯಲ್ಲಿ ನನ್ನ ಅನುಮಾನಕ್ಕೇನಾದರೂ ಪರಿಹಾರ ಸಿಕ್ಕೀತೇ ಎಂದು ವಿವರವಾಗಿ ನೋಡಿದ್ದೇನೆ. ಆದರೆ ಭಾರತದಲ್ಲಿ ಜಾತಿಗಳಿವೆ;ಆದರೆ ಜಾತಿ ವ್ಯವಸ್ಥೆಯೆಂಬುದಿಲ್ಲ ಎಂಬ ಅವರ 'ಹೈಪಾಥಿಸಿಸ್'ನಿಂದ ನಿರಾಶನಾಗಿದ್ದೇನೆ.

ಡಾ॥ ಷಣ್ಮುಖ ಅವರು ಈ ಸಂಶೋಧನಾ ಯೋಜನೆಯ ಬಗೆಗಿನ ವಾದ-ವಿವಾದಗಳನ್ನು ಕುರಿತಂತೆ ಅದರ ವಕ್ತಾರರಾಗಿ 'ಸಂವಾದ'ದಲ್ಲಿ ಸ್ಪಷ್ಟೀಕರಣಗಳನ್ನು ನೀಡುತ್ತಿದ್ದಾರೆ. ಆದರೆ ಈ ಯೋಜನೆಯ ಬಗ್ಗೆ ಹಲವು ವಲಯಗಳಲ್ಲಿ ಏಳುತ್ತಿದ್ದ ಬಿರುಗಾಳಿಯ ತೀವ್ರತೆಯನ್ನು ಆರಂಭದಲ್ಲೇ ಗಮನಿಸಿದ್ದ ನಾನು ಸುಮಾರು ಒಂದು ವರ್ಷದ ಹಿಂದೆಯೇ ಡಾ॥ ಸದಾನಂದ ಅವರಿಗೆ, ಅನೇಕ ತಪ್ಪು ಅಭಿಪ್ರಾಯಗಳು ಮತ್ತು ಅನುಮಾನಗಳು ಹುಟ್ಟಿ ಇಡೀ ಯೋಜನೆಯ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಗಳು ಅನಗತ್ಯವಾಗಿ ಪ್ರಶ್ನಾರ್ಹವಾಗುವ ಮೊದಲೇ ಅವನ್ನು ನಿವಾರಿಸಿಕೊಳ್ಳಲು ಒಂದು ಮಾರ್ಗ ಸೂಚಿಸಿದ್ದೆ. ಈ ಸಂಶೋಧನಾ ಯೋಜನೆಯ ವಸ್ತುವಿನ ಬಗ್ಗೆಯೇ ಬೇರೆ ಬೇರೆ ನೆಲೆಗಳಲ್ಲಿ ಚಿಂತಿಸುತ್ತಿರುವ, ಅಧ್ಯಯನ ಮಾಡುತ್ತಿರುವ ಮತ್ತು ಕೆಲಸ ಮಾಡುತ್ತಿರುವ ಕೆಲವು ಮುಖ್ಯರೊಂದಿಗೆ ಒಂದು ಸಂವಾದ ಕಾರ್ಯಕ್ರಮ ಏರ್ಪಡಿಸಿಕೊಂಡು, ಅವರು ವ್ಯಕ್ತಪಡಿಸುವ ಭಿನ್ನಾಭಿಪ್ರಾಯ, ನೀಡುವ ಮಾಹಿತಿ ಹಾಗೂ ಒಳನೋಟಗಳಿಂದ ನಿಮ್ಮ ಸಂಶೋಧನೆಗೆ ಸಹಾಯವನ್ನೇ ಪಡೆದುಕೊಳ್ಳಬಹುದು ಎಂಬುದು ನನ್ನ ಸಲಹೆಯಾಗಿತ್ತು. ಆ ಮೂಲಕ ಯೋಜನೆ ಕುರಿತ ತಾತ್ವಿಕ ಹಾಗೂ ವ್ಯವಹಾರಿಕ ಅನುಮಾನಗಳಲ್ಲಿ ಕೆಲವಾದರೂ ಪರಿಹಾರವಾದಾವು ಎಂಬ ನಿರೀಕ್ಷೆಯೂ ಈ ಸಲಹೆಯಲ್ಲಿ ಸೇರಿತ್ತು. ಆದರೆ ಏಕೋ ಏನೋ ಸದಾನಂದ ಅವರು ಈ ಬಗ್ಗೆ ಗಂಭೀರವಾಗಿ ಆಲೋಚಿಸಲಿಲ್ಲ. ಈಗ ಈ ಬಗ್ಗೆ ಸಿದ್ಧತೆಗಳು ನಡೆದಿವೆ ಎಂದು ಕೇಳಿದ್ದೇನೆ.

ಅದೇನೇ ಇರಲಿ, ಜಾತಿ ಇದೆ, ಜಾತಿ ತಾರತಮ್ಯವೂ ಇದೆ;ಆದರೆ ಜಾತಿ ವ್ಯವಸ್ಥೆ ಎಂಬುದಿಲ್ಲ ಎಂಬುದು ನಮ್ಮ ವಾದವಾಗಿದೆ ಎಂದು ಷಣ್ಮುಖ ಹೇಳುತ್ತಾರೆ. ಹೀಗೆ ಹೇಳಲು ಅವರಿಗಿರುವ ಕಾರಣವೆಂದರೆ, ಜಾತಿ ವ್ಯವಸ್ಥೆಯನ್ನು ಗುರುತಿಸುವ ಎಲ್ಲ ವಾದಗಳೂ ಕ್ರಿಶ್ಚಿಯನ್ ದೈವಶಾಸ್ತ್ರದ 'ರಿಲಿಜಿಯನ್' ಪರಿಕಲ್ಪನೆಯನ್ನು ಆಧರಿಸಿದ ವಸಾಹತೀಕೃತ ವಿಚಾರಧಾರೆಯಿಂದ ಮೂಡಿದುವಾಗಿವೆ ಮತ್ತು ಅವು ಮೂಲ ಸಮಾಜಶಾಸ್ತ್ರೀಯ ತತ್ವಗಳನ್ನು ಉಲ್ಲಂಘಿಸುತ್ತವೆ ಎಂಬುದಾಗಿದೆ. ಇದಕ್ಕೆ ಸಂಬಂಧಿಸಿ ದಂತೆ ನನ್ನ ಮೂರು ಮುಖ್ಯ ಪ್ರಶ್ನೆಗಳು ಇವು:

೧. ಜಾತಿ ಇದ್ದು, ಜಾತಿ ತಾರತಮ್ಯಗಳೂ ಇವೆ ಎಂದು ನೀವು ಒಪ್ಪಿಕೊಳ್ಳುವುದಾದರೆ, ನಿಮ್ಮ ಪ್ರಕಾರ ಈ ತಾರತಮ್ಯಗಳು ಸೃಷ್ಟಿಯಾದ mechanismಆದರೂ ಯಾವುದು ಎಂದು ನೀವು ಯೋಚಿಸಬೇಕಲ್ಲವೆ? ಅದನ್ನು ನೀವು ಏನೆಂದು ಕರೆಯುವಿರಿ? ಕಾಲಕ್ರಮದಲ್ಲಿ ಈ 'ಮೆಕ್ಯಾನಿಸಂ'ನ ತಂತ್ರ ಮತ್ತು ಅದಕ್ಕೆ ತಕ್ಕಹಾಗೇ ಅದರ ರೂಪ ಬದಲಾಗುತ್ತಾ ಹೋದ ಮಾತ್ರಕ್ಕೆ ಅದರ ಹಿಂದಿನ ರಾಜಕೀಯ ವಿನ್ಯಾಸವನ್ನು ಅಲ್ಲಗಳೆಯಲಾಗುವುದೇ?

೨. 'ರಿಲಿಜಿಯನ್'ನ ಕಲ್ಪನೆಯೇ ಭಾರತೀಯ ಸಂದರ್ಭಕ್ಕೆ ಅನ್ವಯವಾಗದೆ ಇಲ್ಲಿನ ಸಂಸ್ಕೃತಿ ಅಧ್ಯಯನಕ್ಕೆ ಅಸಂಗತವಾಗುವುದಾದರೆ, ಅದೇ ಕಾರಣದಿಂದ, ಇಲ್ಲಿ ನೀವು ಯಾವುದರ ಘನತೆಯನ್ನು ಎತ್ತಿಹಿಡಿಯುವ ಪ್ರಯತ್ನ ಮಾಡುತ್ತಿದ್ದೀರೋ ಆ ಸಮಾಜಶಾಸ್ತ್ರ ಕಲ್ಪನೆಯೂ ಅಸಂಗತವಾಗುವುದಲ್ಲವೆ? ನಮ್ಮ ಸಮಾಜಶಾಸ್ತ್ರೀಯ ಅಧ್ಯಯನಗಳ ಮಾಧ್ಯಮ ಬಹುಪಾಲು ಇಂಗ್ಲಿಷೇ ಆಗಬೇಕಾಗಿ ಬಂದಿರುವುದು;ಒಂದೊಮ್ಮೆ ಅದು ಅನಿವಾರ್ಯವಾಗಿ

ಡಾ॥ ಷಣ್ಮುಖರು ಈ ಸಂಶೋಧನಾ ಯೋಜನೆಯ ಬಗೆಗಿನ ವಾದ-ವಿವಾದ ಕುರಿತಂತೆ ಅದರ ವಕ್ತಾರರಾಗಿ 'ಸಂವಾದ'ದಲ್ಲಿ ಸ್ಪಷ್ಟೀಕರಣಗಳನ್ನು ನೀಡುತ್ತಿದ್ದಾರೆ. ಈ ಯೋಜನೆಯ ಬಗ್ಗೆ ಹಲವು ವಲಯಗಳಲ್ಲಿ ಏಳುತ್ತಿದ್ದ ಬಿರುಗಾಳಿಯ ತೀವ್ರತೆಯನ್ನು ಆರಂಭದಲ್ಲೇ ಗಮನಿಸಿದ್ದ ನಾನು ಸುಮಾರು ಒಂದು ವರ್ಷದ ಹಿಂದೆಯೇ ಸದಾನಂದ ಅವರಿಗೆ, ಅನೇಕ ತಪ್ಪು ಅಭಿಪ್ರಾಯಗಳು ಮತ್ತು ಅನುಮಾನಗಳು ಹುಟ್ಟಿ ಇಡೀ ಯೋಜನೆಯ ಪ್ರಾಮಾಣಿಕತೆ ಮತ್ತು ವಿಶ್ವಾಸಾರ್ಹತೆಗಳು ಅನಗತ್ಯವಾಗಿ ಪ್ರಶ್ನಾರ್ಹವಾಗುವ ಮೊದಲೇ ಅವನ್ನು ನಿವಾರಿಸಿಕೊಳ್ಳಲು ಸೂಚಿಸಿದ್ದೆ. ಈ ಸಂಶೋಧನಾ ಯೋಜನೆಯ ವಸ್ತುವಿನ ಅಧ್ಯಯನ ಮತ್ತು ಕೆಲಸ ಮಾಡುತ್ತಿರುವವರೊಂದಿಗೆ ಸಂವಾದ ಕಾರ್ಯಕ್ರಮ ನಡೆಸಿ ಅವರು ವ್ಯಕ್ತಪಡಿಸುವ ಭಿನ್ನಾಭಿಪ್ರಾಯ, ನೀಡುವ ಮಾಹಿತಿಯಿಂದ ನಿಮ್ಮ ಸಂಶೋಧನೆಗೆ ಸಹಾಯವನ್ನೇ ಪಡೆದುಕೊಳ್ಳಬಹುದು ಎಂಬುದು ನನ್ನ ಸಲಹೆಯಾಗಿತ್ತು.

ಜಾತಿ ಧರ್ಮ ತಾರತಮ್ಯ

ಕನ್ನಡವಾಗಬೇಕಾಗಿ ಬಂದಾಗಲೂ, ಅದು ತನ್ನ ಭಾಷಾ ಜಾಯಮಾನದಲ್ಲಿ ಇಂಗ್ಲಿಷಿನಂತೆಯೇ ಇರುವುದು (ಹಾಗಾಗಿಯೇ ಈ ಸಂಶೋಧಕರು ಕನ್ನಡದಲ್ಲಿ ಬರೆದ ಕೆಲವು ವಾಕ್ಯಗಳ ಅರ್ಥ ಸಾಂಗತ್ಯದ ಬಗ್ಗೆ ತಮಗೇ ವಿಶ್ವಾಸವಿಲ್ಲದೆ, ಅದರ ಇಂಗ್ಲಿಷ್ ಮೂಲವನ್ನು ಪಕ್ಕದಲ್ಲಿಯೇ ಕೊಟ್ಟು ವಿವರಿಸಬೇಕಾದ ಇಕ್ಕಟ್ಟಿಗೆ ಸಿಕ್ಕಿರುವುದು!) ಇದೇ ಕಾರಣಕ್ಕಲ್ಲವೆ?

೩. ಜಾತಿ(ವ್ಯವಸ್ಥೆ)ಯನ್ನು ವಸಾಹತೀಕೃತ ಚಿಂತನೆಗಳ ಮೂಲಕ ಅರ್ಥಮಾಡಿಕೊಳ್ಳುವ ಅಸಂಗತತೆಗೆ ಪರ್ಯಾಯವಾಗಿ; ಇಲ್ಲಿಂದ ಬೆಲ್ಜಿಯಂಗೆ ವಲಸೆ ಹೋಗಿ ಅಲ್ಲಿ ಭಾರತದ ಜಾತಿ ವ್ಯವಸ್ಥೆ ಬಗ್ಗೆ ಅಧ್ಯಯನ ಕೈಗೊಂಡು, ಅದನ್ನು ಭಾರತದಲ್ಲಿ ವಿಸ್ತರಿಸಲು ಅಲ್ಲಿಂದ ಹಣವನ್ನೂ ವ್ಯವಸ್ಥೆ ಮಾಡುವ ಬಾಲಗಂಗಾಧರರ ಚಿಂತನೆ ಮತ್ತು ಕ್ರಿಯಾಶೀಲತೆಗಳಿಂದ ನೀವು ಆಕರ್ಷಿತರಾಗುತ್ತೀರಿ.ಆದರೆ, ಹಿಂದೂ ಧರ್ಮವನ್ನು 'ರಿಲಿಜಿಯನ್' ಪರಿಕಲ್ಪನೆಯಿಂದ ಹೊರಗಿಟ್ಟೇ ಅರ್ಥೈಸಿಯೂ ಜಾತಿಪದ್ಧತಿ ವಿರುದ್ಧ ಕಾರ್ಯಕ್ರಮ ರೂಪಿಸಬೇಕಾಗಿ ಬಂದ ಗಾಂಧಿ ನೋಟ ಕ್ರಮದ ಕಡೆ ನೀವು ಏಕೆ ಗಮನ ಹರಿಸಲಾಗಿಲ್ಲ? ವಸಾಹತೀಕೃತ ಚಿಂತನೆಯ ಬಗ್ಗೆ ಆಕ್ಷೇಪಣೆ ಮಾಡುವ ನಿಮ್ಮ ಚಿಂತನೆಯನ್ನು ನಿಮ್ಮ ಯೋಜನೆಯ ಬಗ್ಗೆ ವ್ಯಕ್ತವಾಗುತ್ತಿರುವ ಅನುಮಾನಗಳ ಆಧಾರದ ಮೇಲೆ ನವ ವಸಾಹತೀಕೃತ ಚಿಂತನೆ ಎಂದು ಕರೆದರೆ ನಿಮ್ಮ ಪ್ರತಿಕ್ರಿಯೆ ಏನು?

-೨-

ಮೊದಲು ನನ್ನಲ್ಲಿ ಅನುಮಾನಗಳಾಗಿ ಹುಟ್ಟಿದ ಈ ಮೇಲಿನ ವಿಚಾರಗಳು ಪ್ರಶ್ನೆಗಳಾಗಿ ರೂಪಾಂತರಗೊಂಡದ್ದು, ಬಾಲಗಂಗಾಧರ ಪ್ರಣೀತ ಸಂಶೋಧನಾ ಯೋಜನೆಯ ಅಂಗವಾಗಿ ಗೆಳೆಯ ರಾಜಾರಾಮ ಹೆಗಡೆಯವರು ಕುವೆಂಪು ಅವರ 'ನೆನಪಿನ ದೋಣಿಯಲ್ಲಿ' ಕೃತಿ ಕುರಿತು ಇಂಗ್ಲಿಷ್‌ನಲ್ಲಿ ಬರೆದಿರುವ ಪ್ರಬಂಧವನ್ನು ಅಕಸ್ಮಾತ್ ಓದಿದಾಗ. ಅದನ್ನು ನನ್ನ ಇನ್ನೋರ್ವ ಗೆಳೆಯರು ಅಂತರ್ಜಾಲದಿಂದ ಹೆಕ್ಕಿ ನನಗೆ ಪ್ರತಿಕ್ರಿಯೆಗಾಗಿ ಕಳಿಸಿದ್ದರು. ಈ ಗೆಳೆಯರಿಂದ ನನಗೆ ಗೊತ್ತಾದುದೇನೆಂದರೆ; ಬಾಲಗಂಗಾಧರರ ವಿಚಾರಧಾರೆ ಹಲವು ಬಿಡಿ ಬಿಡಿ ಗುಂಪುಗಳ ಆಸಕ್ತಿ ಕೆರಳಿಸಿದೆ ಮತ್ತು ಅದನ್ನು ಕುರಿತ ಚರ್ಚೆ, ಪ್ರಚಾರ ಕಾರ್ಯಕ್ರಮದೋಪಾದಿಯಲ್ಲಿ ಅಂತರ್ಜಾಲದಲ್ಲಿ ನಡೆದಿದೆ. ಜಾತಿ ವ್ಯವಸ್ಥೆಯೆಂಬುದೆಂಬುದೇ ಇಲ್ಲ; ಇಲ್ಲದ ಇದನ್ನು ಸೃಷ್ಟಿಸಿ ಒಂದು ವರ್ಗವನ್ನು ವೃಥಾ ದೋಷಾರೋಪಣೆಗೆ ಗುರಿಮಾಡಲಾಗಿದೆ ಎಂದು ಸೂಚಿಸುವ ಬಾಲಗಂಗಾಧರರ ವಿಚಾರಧಾರೆ, ಈ ಗುಂಪುಗಳಲ್ಲಿ ರೋಮಾಂಚನವನ್ನುಂಟು ಮಾಡಿರುವುದು ಸಹಜವೇ ಆಗಿದೆ.. ಆದರೆ ರಾಜಾರಾಮ ಹೆಗಡೆಯವರ ಪ್ರಬಂಧ, ಅದರ ಹುರುಪು, ಅರಿವು ಮತ್ತು ವಾದಕ್ರಮದಲ್ಲಿ ಇಂತಹ ಗುಂಪೊಂದರ ಹವ್ಯಾಸಿ ಚಟುವಟಿಕೆಯ ಭಾಗವೆಂಬಂತೆ ಕಂಡಾಗ ನನಗಾದ ಆಶ್ಚರ್ಯ ವಿಷಾದಗಳು ಅಷ್ಟಿಷ್ಟಲ್ಲ.

ಈ ಪ್ರಬಂಧಕ್ಕೆ ನನ್ನ ಪ್ರತಿಕ್ರಿಯೆಯನ್ನು ಬರೆದು, ಅದನ್ನು ಮೂಲ ಪ್ರಬಂಧವನ್ನು ಒದಗಿಸಿದ ಗೆಳೆಯನಿಗೆ ಕಳಿಸುವ ಮುನ್ನ ಈ ನನ್ನ ಪ್ರತಿಕ್ರಿಯೆ ಬಗ್ಗೆ ರಾಜಾರಾಮ ಹೆಗಡೆಯವರು ಏನು ಹೇಳುವರೋ ನೋಡೋಣವೆಂದು ಅವರನ್ನು ಸಂಪರ್ಕಿಸಿ, ಅವರ ಈ ಮೇಲ್ ವಿಳಾಸವನ್ನು ಕೋರಿದರೂ ಅವರು ನೀಡಲಿಲ್ಲ! ಏಕೆಂದು ತಿಳಿಯದೆ,

ಕುವೆಂಪು ತಮ್ಮನ್ನು ಶೂದ್ರನನ್ನಾಗಿ ಗ್ರಹಿಸಿಕೊಂಡ ರೀತಿಯೇ ಒಂದು ಅಪಕಲ್ಪನೆಯಾಗಿದೆ ಎನ್ನುವ ಹೆಗಡೆಯವರಿಗೆ ಜಾತಿ ಪದ್ಧತಿ ಕುರಿತ ಕುವೆಂಪು ಅವರ ನಿಲುವೇ ಅರ್ಥವಾಗಿಲ್ಲ ಎಂದು ಹೇಳಬೇಕಾಗುತ್ತದೆ. ವಿಶೇಷವಾಗಿ ಬ್ರಾಹ್ಮಣರನ್ನು ಕುರಿತ ಕುವೆಂಪು ಅವರ ದ್ವಂದ್ವಾತ್ಮಕ ನಿಲುವುಗಳೆಂದು ಹೆಗಡೆಯವರು ಪ್ರಸ್ತುತಪಡಿಸುವ ಪ್ರಕರಣಗಳೇ, ಅವರ ನಿಲುವು ಹೆಗಡೆಯವರು ತೀರ್ಮಾನಿಸಿರುವಂತೆ ಬ್ರಾಹ್ಮಣ ವಿರೋಧ ಅಥವಾ ದ್ವೇಷದ ಮೇಲೆ ನಿಂತುದಲ್ಲ ಎಂದು ಸೂಚಿಸುವಂತಿವೆ! ಹಾಗಾಗಿ, ಹಿಂದೂ ಸಮಾಜದ ಸಾಮಾಜಿಕ ರಚನೆಯಾಗಿದ್ದ ಜಾತಿ ಪದ್ಧತಿ ಪುರೋಹಿತಶಾಹಿಯಿಂದಾಗಿ (ನಮ್ಮ ಪರಂಪರೆಯನ್ನು ಸೃಜನಶೀಲ ಮತ್ತು ಚಿಕಿತ್ಸಕ ವಿಮರ್ಶೆಗೆ ಒಡ್ಡಿ ಅದನ್ನು ಆಧುನೀಕರಿಸುವ ಕೆಲಸಕ್ಕೆ ಅಡ್ಡಿಯುಂಟು ಮಾಡುವುದೂ ಸೇರಿದಂತೆ) ಒಂದು ಶೋಷಣಾ ಸಾಧನವಾಗಿದೆ ಎಂದಷ್ಟೇ ಕುವೆಂಪು ಹೇಳುತ್ತಿದ್ದಾರೆ. ಈ ಪುರೋಹಿತಶಾಹಿ ಬ್ರಾಹ್ಮಣರಿಂದಲೇ ತುಂಬಿ ಹೋಗಿದ್ದರೆ ಕುವೆಂಪು ಏನು ಮಾಡಿಯಾರು?

ಈ ಮೂಲಕವಾದರೂ ಅದನ್ನು ಮತ್ತು ಅವರ ಸಂಶೋಧನಾ ಯೋಜನೆಯ ಮಿತಿಗಳು ಎಂದು ನಾನೂ ಭಾವಿಸಿದ ಅಂಶಗಳನ್ನೂ ರಾಜಾರಾಮ ಹೆಗಡೆಯವರ ಗಮನಕ್ಕೆ ತಂದಂತಾಗುತ್ತದೆ ಎಂದು ನನ್ನ ಆ ಗೆಳೆಯನಿಗೆ ಕಳಿಸಿದ ಪ್ರತಿಕ್ರಿಯೆಯನ್ನು ಇಲ್ಲಿ ಪ್ರಕಟಿಸುತ್ತಿರುವೆ. ಈ ನನ್ನ ಪ್ರತಿಕ್ರಿಯೆಯಲ್ಲಿಯೇ ಮೂಲ ಪ್ರಬಂಧದಲ್ಲಿ ಹೆಗಡೆಯವರು ಏನು ಬರೆದಿದ್ದರು ಎಂಬುದೂ ಸೂಚಿತವಾಗಿರುವುದನ್ನು ಓದುಗರು ಗಮನಿಸಬಹುದು. ಬಹುಶಃ ಹೆಗಡೆಯವರು ಈ ನನ್ನ ಪ್ರತಿಕ್ರಿಯೆಗೆ ಪ್ರತಿಕ್ರಿಯಿಸಿಯಾರು ಮತ್ತು ಅದರ ಭಾಗವಾಗಿ ತಮ್ಮ ಮೂಲ ಇಂಗ್ಲಿಷ್ ಪ್ರಬಂಧದ ಕನ್ನಡ ಅನುವಾದವನ್ನು ನೀಡಿಯಾರು ಎಂದು ನಿರೀಕ್ಷಿಸುವೆ:

ಪ್ರಿಯ ಶ್ರೀ ___ಅವರೇ

ನೀವು ವಿಶ್ವಾಸಪೂರ್ವಕವಾಗಿ ಈ ಮೇಲ್ ಮಾಡಿದ ರಾಜಾರಾಮ ಹೆಗಡೆಯವರ Caste system in Kuvempu's autobiography, 'Nenapin Doniy alli'ಲೇಖನ ಓದಿದೆ. ಈ ಲೇಖನವನ್ನು ಬರೆಯುವ ಮುನ್ನವೋ ಅಥವಾ ಆನಂತರವೋ ಅವರು ಇದರ ಹಲವು ವಿವರಗಳ ಬಗ್ಗೆ ನನ್ನೊಡನೆ ಮಾತನಾಡಿದ್ದರು. ಆದರೆ ಲೇಖನವನ್ನು ಪೂರ್ಣರೂಪದಲ್ಲಿ ನೋಡದೆ, ನಾನು ನನ್ನ ಅಭಿಪ್ರಾಯಗಳನ್ನು ಪೂರ್ಣ ರೂಪದಲ್ಲಿ ವ್ಯಕ್ತಪಡಿಸಲಾಗಿರಲಿಲ್ಲ. ಈಗ ನಿಮ್ಮ ಆಸಕ್ತಿಯಿಂದಾಗಿ ಅದು ಸಾಧ್ಯವಾಗಿದೆ. ವಂದನೆಗಳು.

ಲೇಖನ ಯಾವ ಎಗ್ಗೂ ಇಲ್ಲದೆ ಸರಳವಾಗಿ ಹೇಳುವುದಾದರೆ, ಹಾಸ್ಯಾಸ್ಪದವಾಗಿದೆ. ಇತಿಹಾಸದ ಘನ ವಿದ್ವಾಂಸರಾದ ಪ್ರಿಯ ಮಿತ್ರ ಹೆಗಡೆ ಈ ಲೇಖನವನ್ನು ಬರೆದಿದ್ದಾರೆಂದು ನಂಬುವುದೇ ನನಗೆ ಕಷ್ಟವಾಗಿದೆ. ಹೆಗಡೆ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆ. ಅವರು, ತಾವು ಭಾವನಾತ್ಮಕವಾಗಿಯೋ ಅಥವಾ ಸಂಶೋಧನೆಗಾಗಿ ಕ್ರೋಢೀಕರಿಸಲಾದ ಅಂಕಿ-ಅಂಶಗಳು ಸೃಷ್ಟಿಸುವ 'ಆಭಾಸ'ದ ಕಾರಣದಿಂದಲೋ ಒಪ್ಪಿಕೊಂಡಿರುವಂತೆ ತೋರುವ ಪ್ರಮೇಯವೊಂದನ್ನು ಇತರರಿಗಾಗಿ ಸಾಬೀತು ಪಡಿಸಲು, ಅನೇಕ ವಸ್ತುಗಳನ್ನು ಆರಿಸಿಕೊಂಡು ಪ್ರಯೋಗ ಮಾಡಹೊರಟಿದ್ದಾರೆ. ಇಲ್ಲಿ ಕುವೆಂಪು ಮತ್ತು ಅವರ 'ಆತ್ಮಚರಿತ್ರೆ' ಎಂದು ಜನಪ್ರಿಯವಾಗಿ ಕರೆಯಲ್ಪಡುವ ಕೃತಿ ಈ ಪ್ರಯೋಗಕ್ಕೆ ಸಿಕ್ಕಿದೆ!

ಮೊದಲಾಗಿ, ಈ ಲೇಖನವನ್ನು ಇಂಗ್ಲಿಷ್‌ನಲ್ಲಿ ಬರೆದು ಯಾರ ಗಮನ ಸೆಳೆಯಲು ಅಥವಾ ಯಾರನ್ನು, ಯಾಕಾಗಿ ಒಪ್ಪಿಸಲು ಹೆಗಡೆಯವರು ಪ್ರಯತ್ನಿಸಿದ್ದಾರೋ ತಿಳಿಯದು! ಏಕೆಂದರೆ ಈ ಪ್ರಬಂಧವನ್ನು ಈ ಕೃತಿಯನ್ನು ಓದದವರಿಂದಲೇ ತುಂಬಿದ ಅಂತಾರಾಷ್ಟ್ರೀಯ ವಿದ್ವಾಂಸರ ಸಭೆಯಲ್ಲಿ ಪ್ರಸ್ತುತಪಡಿಸಲಾಯಿತೆಂದು ಕೇಳಿದ್ದೇನೆ. ಅದೇನೇ ಇರಲಿ; ದುರದೃಷ್ಟಕರ ಸಂಗತಿ ಎಂದರೆ, ಈ ಲೇಖನದ ಅಧ್ಯಯನ ಮಾದರಿ, ಇದನ್ನು ಯಾವ ಯೋಜನೆಯ ಭಾಗವಾಗಿ ಬರೆಯಲಾಗಿದೆಯೋ ಆ ಯೋಜನೆಯ ಬಗ್ಗೆ ಎದ್ದಿರುವ ಅನುಮಾನಾಸ್ಪದತೆಗೆ ಇಂಬುಕೊಡುವಂತೆಯೇ ಇರುವುದು:

೧. ಮೊದಲಾಗಿ, 'ನೆನಪಿನ ದೋಣಿಯಲ್ಲಿ' ಕುವೆಂಪು ಅವರ ಆತ್ಮಚರಿತ್ರೆಯಲ್ಲ. ಅದು ಪುಸ್ತಕದ ತಾಂತ್ರಿಕ ವಿವರಗಳಲ್ಲಿಯೇ ಸೂಚಿಸಿರುವ ಹಾಗೆ, reminiscence-ಪ್ರಮುಖವಾಗಿ ಅವರ ಹಳೆಯ ದಿನಚರಿಗಳನ್ನು ಆಧರಿಸಿದ ನೆನಪುಗಳ ದಾಖಲೆ. ಬದುಕಿನ ಒಂದು ಘಟ್ಟದಲ್ಲಿ ನಿಂತು ಹಿನ್ನೋಡಿ ಬರೆದ ಕಥಾನಕ (narrative)ವಲ್ಲ ಅದು. ಹಾಗಾಗಿ, ಅದನ್ನು ಒಬ್ಬ ಲೇಖಕ ಬದುಕನ್ನು ಕುರಿತು ರೂಪಿಸಿಕೊಂಡ ಆತ್ಯಂತಿಕ ನಿಲುವುಗಳನ್ನು ನಿರ್ಣಾಯಕವಾಗಿ ಪರಿಶೀಲಿಸಲು ಆಕರವಾಗಿ ಬಳಸುವುದೇ ಅವೈಜ್ಞಾನಿಕ ಅಥವಾ ಅಶಾಸ್ತ್ರೀಯ.

೨. ಕುವೆಂಪು ತಮ್ಮ ಜೀವನ ದರ್ಶನವನ್ನು ರೂಪಿಸಿಕೊಂಡ ಮೂಲಗಳು ಮತ್ತು ಅವನ್ನಾಧರಿಸಿದ ಅವರ ನಿಲುವುಗಳು ಎಂದು ಹೆಗಡೆ ನೀಡುವ ವಿವರಗಳೇ ಪ್ರಶ್ನಾರ್ಹವಾಗಿವೆ. ಉದಾಹರಣೆಗೆ, ಕುವೆಂಪು ತಮ್ಮ ಜೀವನ ದರ್ಶನವನ್ನು ರೂಪಿಸಿಕೊಳ್ಳಲು ಆಧಾರವಾದುವವೆಂದು ಹೆಗಡೆಯವರು ಹೇಳುವ ವೇದೋಪನಿಷತ್ತುಗಳನ್ನು, ನಿರ್ದಿಷ್ಟವಾಗಿ ವೇದಗಳನ್ನು ಕುವೆಂಪು

(೧೧ನೇ ಪುಟಕ್ಕೆ)

ಭಾರತೀಯ ಸಾಮಾಜಿಕ ವಿಜ್ಞಾನಗಳು ಮತ್ತು ಸಾಮಾನ್ಯರ ಬದುಕು...

ಡಾ. ಡೊಮಿನಿಕ್. ಡಿ

ಸಂವಾದದಲ್ಲಿ ಕಳೆದ ಕೆಲವು ಸಂಚಿಕೆಗಳಿಂದಲೂ ಜಾತಿ ಮತ್ತು ಜಾತಿ ತಾರತಮ್ಯ ಕುರಿತಂತೆ ಅನೇಕ ವಿವಾದಿತ ವಿಚಾರಗಳು ಮತ್ತು ಪ್ರತಿಕ್ರಿಯೆಗಳು ಪ್ರಕಟವಾಗಿವೆ

ಪ್ರಸ್ತುತ ಲೇಖನ 'ಭಾರತೀಯ ಸಾಮಾಜಿಕ ವಿಜ್ಞಾನಗಳನ್ನು ಮತ್ತು ಸಾಮಾನ್ಯರ ಬದುಕನ್ನು ಕುರಿತಾದುದು. ಇದರ ಪ್ರಮುಖ ಉದ್ದೇಶ ಹಿಂದಿನ ಲೇಖನಗಳಿಗೆ ಸೂಚಿಸುವ ಪ್ರತಿಕ್ರಿಯೆಯಂತೂ ಅಲ್ಲ. ಬದಲಾಗಿ ಈ ಹಿಂದಿನ ಪ್ರತಿಕ್ರಿಯಾತ್ಮಕ ಲೇಖನಗಳ ಹಿಂದಿರುವ ಗ್ರಹೀತಗಳ ರಾಜಕಾರಣವನ್ನು ಪ್ರಶ್ನಿಸುತ್ತಲೇ ತಳಸಮುದಾಯಗಳಿಗೆ ಸಂಬಂಧಿಸಿದಂತೆ ನಡೆದಿರುವ, ನಡೆಯುತ್ತಿರುವ ಸಂಶೋಧನಾ ಬರವಣಿಗೆಗಳು ಹಾಗೂ ಆ ಬರವಣಿಗೆಗಳನ್ನು ಗ್ರಹಿಸಬೇಕಾದ ನೆಲೆಗಳನ್ನು ಸಕಾರಾತ್ಮಕವಾಗಿ ಮಂಡಿಸುವುದೇ ಆಗಿದೆ.

ಇದಕ್ಕೆ ಸಾಕಷ್ಟು ಕಾರಣಗಳೂ ಇವೆ. ಪ್ರೊಫೆಸರ್ ಜೋಗನ್ ಶಂಕರ್‌ರವರು ಭಾರತೀಯ ಸಾಮಾಜಿಕ ವಿಜ್ಞಾನಗಳಿಗೆ ಸಂಬಂಧಿಸಿದಂತೆ ಮೈಸೂರಿನಲ್ಲಿದ್ದ ತಮ್ಮ ಸಹಪಾಠಿ ಪಾರ್ವತಮ್ಮನವರ ಬಗ್ಗೆ ಮಾತನಾಡುತ್ತಿದ್ದರು. ಸಮಾಜಶಾಸ್ತ್ರಜ್ಞೆಯಾಗಿದ್ದ ಸಿ. ಪಾರ್ವತಮ್ಮನವರು ಬಹು ಹಿಂದೆಯೇ 'ಭಾರತದಲ್ಲಿನ ಬ್ರಾಹ್ಮಣ ಸಮಾಜಶಾಸ್ತ್ರಕ್ಕೊಂದು ಪ್ರವೇಶ' ಯನ್ನೋ ಲೇಖನ ಬರೆದ್ದಿದ್ದರಂತೆ. ಆಂದರೆ ಅವರ ಪ್ರಕಾರ ಅಬ್ರಾಹ್ಮಣರೆಂದರೆ ಸಾರ್ವಜನಿಕ ವಲಯದಲ್ಲಿ (ಬೌದ್ಧಿಕ ವಲಯದಲ್ಲಿ) ವಾಗ್ವಿಲಾಸದಲ್ಲಿ ತರ್ಕಿಸಲು ಸಾಮರ್ಥ್ಯ ಇಲ್ಲದವರು. ಹಾಗೇನಾದರೂ ಅಂಥ ಬೌದ್ಧಿಕ ಚರ್ಚೆಯಲ್ಲಿ ಬ್ರಾಹ್ಮಣರಲ್ಲದವರು ತೊಡಗಿದ್ದಲ್ಲಿ ಅಂಥವರ ವಿಚಾರಗಳಿಗೆ ಪ್ರಾಮುಖ್ಯತೆ ನೀಡಬೇಕಾಗಿಲ್ಲ (ಪಾರ್ವತಮ್ಮನವರ ಬಗ್ಗೆ ಮತ್ತಷ್ಟು ಬರೆಯಬೇಕಾಗಿದೆ. ಕಾರಣ ಎಲ್ಲೂ ಸಹ ಅವರ ನಿಲುವುಗಳ ಬಗ್ಗೆ ವಿವರಗಳು ದೊರೆಯುವುದಿಲ್ಲ).

ಇಂದಿಗೂ ಸಹ ಈ ವಾಸ್ತವ ಬೇರೆಯಾಗಿದೆ ಎಂದು ನನಗಂತೂ ಗೋಚರಿಸುತ್ತಿಲ್ಲ. ಹೀಗೆನ್ನುವಾಗ ಬ್ರಾಹ್ಮಣರೆಲ್ಲರೂ ಸಹ ಅದೇ ರೀತಿ ಎಂದು ಭಾವಿಸಬೇಕಾಗಿಲ್ಲ. ಆದರೆ ವಸಾಹತುಶಾಹಿ ಆಧುನಿಕತೆ ತಮ್ಮಲ್ಲುಂಟು ಮಾಡಿದ ಪರಿಣಾಮಗಳನ್ನು ಬೇಗನೆ ಜೀರ್ಣಿಸಿಕೊಂಡು ಅದಕ್ಕೊಂದು ಸಂಸ್ಕೃತ ಪರಂಪರೆಯ ಬ್ರಾಹ್ಮಣೀಯ ಚೌಕಟ್ಟನ್ನು ನೀಡಿರುವ ಬುದ್ಧಿ ಜೀವಿಗಳಿಗಂತೂ ನಮ್ಮಲ್ಲಿ ಕೊರತೆ ಇಲ್ಲ. ಹೀಗೆ ಮಾಡುವ ಮೂಲಕ ಬಹುಸ್ತರೀಯ ಜ್ಞಾನ ಪರಂಪರೆಗಳನ್ನು ಮರೆಗುಳಿತನಕ್ಕೆ ಒಳಪಡಿಸಿದ್ದು ಈಗ ಚರಿತ್ರೆ ಅಷ್ಟೆ. ಆದರೆ ಈಗ ಮತ್ತದೇ ವರಸೆ ನಾನಾ ವಿಧಗಳಲ್ಲಿ ಮರುಕಳಿಸಿ ತನ್ನ ವಾರಸುದಾರಿಕೆಯನ್ನು ಸ್ಥಾಪಿಸುತ್ತಿರುವುದು ದಟ್ಟವಾಗಿ ಕಾಣಿಸುತ್ತಿದೆ.

ಈ ಸನ್ನಿವೇಶದಲ್ಲಿ ತಲಾಲ್ ಅಸದ್ ಹೇಳಿರುವ ಒಂದು ಮಾತು ನೆನಪಾಗುತ್ತದೆ 'ಬದುಕೆಂದರೆ ಬದುಕೇ ವಿನಃ ಅದನ್ನು ಸೈದ್ಧಾಂತಿಕವಾಗಿ ವಿವರಿಸಿಕೊಳ್ಳಲು ಆಗುವುದಿಲ್ಲ'. ಆದರೂ ಬದುಕಿನಲ್ಲಿ ಥಿಯರಿಯ ಪಾತ್ರ ಇಲ್ಲಾ ಎಂದು ತಿರಸ್ಕರಿಸಲು ಸಹ ಆಗುವುದಿಲ್ಲ. ಸೆಪ್ಟೆಂಬರ್ 20, 2008ರಂದು ಇ.ಪಿ.ಡಬ್ಲ್ಯುನಲ್ಲಿ 'ಸಾಮಾನ್ಯ ಬದುಕು' ಎನ್ನುವ ಎಂ.ಎಸ್.ಎಸ್. ಪಾಂಡಿಯನ್‌ರವರು ಲೇಖನವೊಂದನ್ನು ಪ್ರಕಟಿಸಿದ್ದರು. ಆ ಲೇಖನವನ್ನು ನಾನು ಓದಿದಾಗ ಅನೇಕ ದಿನಗಳಿಂದ ನಾನು ಯೋಚಿಸುತ್ತಿದ್ದ ಸಂಗತಿಗಳಿಗೆ ಅಲ್ಲೊಂದು ಒಳನೋಟ ದೊರೆತ್ತದ್ದೇ ಪ್ರಸ್ತುತ ಲೇಖನ ಬರೆಯುವಂತೆ ಮಾಡಿದ್ದು. ಆ ಲೇಖನದ ಸಂಗ್ರಹ ರೂಪವೇ ಈ ಲೇಖನ ಎಂದರೂ ಅಡ್ಡಿಯಿಲ್ಲ.

ಯಾವುದೇ ಭಾವಾವೇಶವಿಲ್ಲದೆ ದಲಿತ ಸಿದ್ಧಾಂತಿಯಾದ ಗೋಪಾಲ್ ಗುರು, 'ಭಾರತದಲ್ಲಿ ಸಾಮಾಜಿಕ ವಿಜ್ಞಾನಗಳು ಎಷ್ಟರ ಮಟ್ಟಿಗೆ ಸಮಾನತೆಯನ್ನು ಎತ್ತಿಹಿಡಿಯುತ್ತವೆ?' (ಗೋಪಾಲ್ ಗುರು, 2002) ಎಂಬ ಲೇಖನವನ್ನು ಬರೆಯುತ್ತಾರೆ. 'ಕಚ್ಚಾ ಅನುಭವಜನ್ಯ ಮೀಮಾಂಸೆ (ಜ್ಞಾನವನ್ನು ಹೊರಡಿಸುವ ಒಂದು ವಿಧಾನ. ಇದನ್ನೇ ಡಾ. ಲಕ್ಷ್ಮಿಪತಿಯವರು 'ವಲ್ಗರ್ ಎಂಪಿರಿಸಿಸಂ' ಎಂದು ಕರೆದಿದ್ದಾರೆನ್ನುವುದನ್ನು ನೆನಪಿಸಿಕೊಳ್ಳಬಹುದು) ಲ್ಲಿದ್ದುಕೊಂಡು ದಲಿತರು ಬರೆಯುವುದೆಂದರೆ ಅದು ಯಾತನೆಯಲ್ಲದಿದ್ದರೂ ಸಹ ಬೇಸರದ ಸಂಗತಿಯೇ ಸರಿ' ಎಂದು ಹೇಳುವ ಗೋಪಾಲ್ ಗುರು, ಮತ್ತೆ ಮುಂದುವರೆದು 'ಥಿಯರೆಟಿಕಲ್ ಬ್ರಾಹ್ಮಣರು ಮತ್ತು ಎಂಪಿರಿಕಲ್ ಶೂದ್ರರ ನಡುವೆ ಭಾರತೀಯ ಸಾಮಾಜಿಕ ವಿಜ್ಞಾನಗಳಲ್ಲಿ ಒಂದು ಕೆಟ್ಟ ರೀತಿಯ ವಿಭಾಗೀಕರಣ ಇದೆ' ಎನ್ನುತ್ತಾರೆ.

ಇದನ್ನು ಅವರು ವಿವರಿಸಿಕೊಳ್ಳುತ್ತಾ ಹೇಳುವುದೇನೆಂದರೆ, 'ಭಾರತದಲ್ಲಿ ಸಾಮಾಜಿಕ ವಿಜ್ಞಾನದ ವಿಚಾರಧಾರೆ/ಸಂಕಥನ ಎನ್ನುವುದು ತಮಗೆ ತಾವೇ ಕಟ್ಟಿಕೊಂಡಿರುವ ಅಪೆಕ್ಸ್ ಕೋರ್ಟಿನಲ್ಲಿ ಕೂತು ಸಂಕಥಿಸಿರುವ ಶಿಸ್ತು ಅಷ್ಟೆ. ಈ ಕೋರ್ಟಿನಲ್ಲಿರುವ ನ್ಯಾಯಾಧೀಶರು ಸನಾತನಿಯಾದ ನಿರ್ದಿಷ್ಟ ಕಟ್ಟಳೆಗಳನ್ನು ಥಿಯರಿಗೆ ವಿಧಿಸಿಬಿಟ್ಟಿದ್ದಾರೆ. ಯಾವುದು ಥಿಯರಿ ಮತ್ತು ಯಾವುದು ತಾಜ್ಯ ಎನ್ನುವುದನ್ನು ಈ ನ್ಯಾಯಾಧೀಶರೇ ನಿರ್ಧರಿಸುತ್ತಾರೆ. ಈ ಕಟ್ಟಳೆಗಳನ್ನು ಮುಚ್ಚುಮರೆಯಿಲ್ಲದೆ 'ಪಶ್ಚಿಮ'ದಿಂದ ಆಮದು ಮಾಡಿಕೊಂಡಿರುವುದರಿಂದ ಅವುಗಳಿಗೆ ಪ್ರಾಮಾಣಿಕತೆ ಎನ್ನುವುದು ಇರುವುದಿಲ್ಲ. ಸಾಮಾಜಿಕ ವಿಜ್ಞಾನಗಳ ಈ ಅಪೆಕ್ಸ್ ಕೋರ್ಟ್ ತನ್ನ ಪೂರ್ಣ ಪ್ರಮಾಣದ ನ್ಯಾಯಾಧೀಶರನ್ನು ದೆಹಲಿಯಲ್ಲಿ ಹೊಂದಿದ್ದು, ಅಲಕ್ಷಿತ ನೆಲೆಗಳವರ ಪ್ರತಿರೋಧ (ಸಬಾಲ್ಟ್ರನ್ ಥಿಯರಿ) ಗಳನ್ನು ಅಸಂಗತ ಮತ್ತು ದಡ್ಡತನದ ಚೇಷ್ಟೆಗಳಾಗಿದ್ದು ಅವು ವಾಸ್ತವದ ಭಾವವೇಶದಿಂದ ಕೂಡಿದ ಪಾಲಿಮಿಕಲ್ ವಿವರಗಳಷ್ಟೆ ಎಂದುಬಿಡುತ್ತಾರೆ'.

ಈ ಸೂಕ್ಷ್ಮಗಳನ್ನು ಗಮನಿಸುವ ಗೋಪಾಲ್ ಗುರು ದಲಿತ ಬುದ್ಧಿ ಜೀವಿಗಳಿಗೆ ಕರೆ ನೀಡುತ್ತಾ, ಅವರ ಥಿಯರಿ ನೈತಿಕವಾಗಿ ಮತ್ತು ರಾಜಕೀಯವಾಗಿ ಶಕ್ತಿಯನ್ನು ತುಂಬುವಂತಾಗಬೇಕಲ್ಲದೆ ಅಕಾಡೆಮಿಗಳಲ್ಲಿ ತಕ್ಷಣದ ಪ್ರಯೋಜಕ್ಕಾಗಿ ಇರಬಾರದು ಎನ್ನುತ್ತಾರೆ. ಗೋಪಾಲ್‌ಗುರು ಹೇಳುವ ಈ ಕಿವಿಮಾತು ಜ್ಞಾನ ಎನ್ನುವುದರ ನಿರ್ಧಿಷ್ಟತೆಯನ್ನು ಮತ್ತು ಸಾಮಾಜಿಕ ವಿಜ್ಞಾನಗಳಲ್ಲಿ ದಲಿತರ ಪಾತ್ರವನ್ನು ಹೇಳುತ್ತಿದ್ದರೂ ಸಹ, ಅವರ ಮಾತುಗಳು ಇತರ ಅಲಕ್ಷಿತ ಸಮುದಾಯಗಳಿಗೂ ಅನ್ವಯಿಸುವಂತದ್ದಾಗಿದೆ. ಪಶ್ಚಿಮದಲ್ಲಿ ಮಹಿಳಾ ಚಿಂತನೆಯ ವಿಧಾನ ಮತ್ತು ಜಗತ್ತನ್ನು ಗ್ರಹಿಸುವ ಮಹಿಳಾ ಕ್ರಮಗಳ ಕುರಿತು ಬರೆಯುವ ಸಿದೋನಿ ಸ್ಮಿತ್ ಹೀಗೆನ್ನುತ್ತಾಳೆ, 'ವಿಶ್ವತ್ಥ ಕರ್ತೃವನ್ನು ಕುರಿತಂತೆ ಮಹಿಳಾ ಚಿಂತನಾವಿಧಾನ ಎನ್ನುವುದು ಅಮೂರ್ತ ನೆಲೆಯದ್ದಲ್ಲ. ಅದು ಸಮಗ್ರವಾದುದೂ ಅಲ್ಲ. ಅದು ಅಲೌಕಿಕವಾದುದಲ್ಲ ಮತ್ತು ಅದು ಪಕ್ಷಪಾತಿ ಧೋರಣೆಯದ್ದು. ಪಳಗಿಸುವ ಜಾಗದಲ್ಲಿರುವ ಆಕೆ ಜಗತ್ತಿನೊಂದಿಗೆ ಸ್ತ್ರೀತ್ವದ ಅಧಿಕಾರವನ್ನು ಪ್ರದರ್ಶಿಸುವವಳೂ ಅಲ್ಲ. ಮಹಿಳಾ ಚಿಂತನೆಯ ಮುಖ್ಯ ಲಕ್ಷಣವೆಂದರೆ ಅದು ಒಳಹುಗಳನ್ನು ಹೊಮ್ಮಿಸುವ, ತರ್ಕವಿಲ್ಲದ ನಿರ್ಧಿಷ್ಟತೆಯಿಂದ ಕೂಡಿರುವಂಥದ್ದು (ಸ್ಮಿತ್: 1993, ಪು.14).

ಸಂವಾದದಲ್ಲಿ ಕಳೆದ ಕೆಲವು ಸಂಚಿಕೆಗಳಿಂದಲೂ ಜಾತಿ ಮತ್ತು ಜಾತಿ ತಾರತಮ್ಯ ಕುರಿತಂತೆ ಅನೇಕ ವಿವಾದಿತ ವಿಚಾರಗಳು ಮತ್ತು ಪ್ರತಿಕ್ರಿಯೆಗಳು ಪ್ರಕಟವಾಗಿವೆ. ಪ್ರಸ್ತುತ ಲೇಖನ 'ಭಾರತೀಯ ಸಾಮಾಜಿಕ ವಿಜ್ಞಾನಗಳನ್ನು ಮತ್ತು ಸಾಮಾನ್ಯರ ಬದುಕನ್ನು ಕುರಿತಾದುದು. ಇದರ ಪ್ರಮುಖ ಉದ್ದೇಶ ಹಿಂದಿನ ಲೇಖನಗಳಿಗೆ ಸೂಚಿಸುವ ಪ್ರತಿಕ್ರಿಯೆಯಂತೂ ಅಲ್ಲ. ಬದಲಾಗಿ ಈ ಹಿಂದಿನ ಪ್ರತಿಕ್ರಿಯಾತ್ಮಕ ಲೇಖನಗಳ ಹಿಂದಿರುವ ಗ್ರಹೀತಗಳ ರಾಜಕಾರಣವನ್ನು ಪ್ರಶ್ನಿಸುತ್ತಲೇ ತಳಸಮುದಾಯಗಳಿಗೆ ಸಂಬಂಧಿಸಿದಂತೆ ನಡೆದಿರುವ, ನಡೆಯುತ್ತಿರುವ ಸಂಶೋಧನಾ ಬರವಣಿಗೆಗಳು ಹಾಗೂ ಆ ಬರವಣಿಗೆಗಳನ್ನು ಗ್ರಹಿಸಬೇಕಾದ ನೆಲೆಗಳನ್ನು ಸಕಾರಾತ್ಮಕವಾಗಿ ಮಂಡಿಸುವುದೇ ಆಗಿದೆ.

ಗೋಪಾಲ್ ಗುರು ಹಾಗೂ ಇತರೆ ಅಲಕ್ಷಿತ ನೆಲೆಯ ಬುದ್ಧಿ ಜೀವಿಗಳು ತಮ್ಮ ವ್ಯಕ್ತಿನಿಷ್ಠ ನೆಲೆಗಳಿಂದ ಎತ್ತುವ ಪ್ರಶ್ನೆಗಳು ಥಿಯರಿಯ ದುರಂಹಕಾರಿ ಅಧಿಕಾರವನ್ನು ಕಿತ್ತೊಗೆದು, ಸಾಮಾಜಿಕ ವಿಜ್ಞಾನಗಳಲ್ಲಿ ಪ್ರಾಮಾಣಿಕ ಅನುಭವ ಜನ್ಯ ವಿಧಾನವನ್ನು ಮಂಡಿಸುತ್ತವೆ. ಆದರೆ ಇಲ್ಲಿರುವ ಸಮಸ್ಯೆ ಎಂದರೆ ಸಾಮಾಜಿಕ ವಿಜ್ಞಾನಗಳಲ್ಲಿರುವ ಜ್ಞಾನದಲ್ಲಿನ ಶ್ರೇಣೀಕೃತ ಮೌಲ್ಯಗಳನ್ನು ಕುರಿತದ್ದು. ಇದರೊಡನೆ ನಿರಂತರವಾದ ಸೆಣಸಾಟ ಇದ್ದೇ ಇರುತ್ತದೆ. ಮೈಖಲ್ ಫೂಕೋನಿಂದ ಪ್ರೇರಣೆ ಪಡೆದ ಶಂಕರನ್ ಕೃಷ್ಣ ಹೀಗೆನ್ನುತ್ತಾರೆ, 'ವಿಶ್ಲೇಣೆಯಲ್ಲಿ ಅಮೂರ್ತತೆ ಎನ್ನುವುದು ಅನಿವಾರ್ಯ ಸಂಗತಿಯಾದ್ದರಿಂದ ಅದು ಜ್ಞಾನವನ್ನು ಸಾಧ್ಯವಾಗಿಸುತ್ತದೆ. ಈ ಅಮೂರ್ತವಾದ ತಂತ್ರಗಳಿಲ್ಲದ್ದಲ್ಲಿ ವಾಸ್ತವವು ನಮ್ಮನ್ನು ಆವರಿಸಿಕೊಂಡುಬಿಡುತ್ತದೆ. ಹೀಗಿರುವಾಗಲೂ ಸಹ ಈ ಅಮೂರ್ತತೆ ಎನ್ನುವುದು ಅಧಿಕಾರವಿಲ್ಲದ ಮುಗ್ಧ ಸಂಗತಿಯೇನಲ್ಲ. ಪ್ರತಿಯೊಂದು ಸಂದರ್ಭದಲ್ಲೂ ವಾಸ್ತವದ ಬಗ್ಗೆ ಮಾತನಾಡುವಾಗ ಈ ಅಮೂರ್ತದ ತಂತ್ರಗಳು ವಾಸ್ತವದಲ್ಲಿ ಯಾವ ಸಂಗತಿಯನ್ನು ಹೆಕ್ಕಿಕೊಳ್ಳಬೇಕು, ಯಾವ ಸಂಗತಿಯನ್ನು ಬಿಟ್ಟುಬಿಡಬೇಕು ಎಂದು ಗೊತ್ತದ್ದೋ/ಗೊತ್ತಿಲ್ಲದೆಯೋ ನಿರ್ಧಾರವಾಗುತ್ತಿರುತ್ತದೆ.'

ಹೀಗಿರುವಾಗ ಎಂಥ ಜ್ಞಾನ ದಲಿತ ಸಮುದಾಯಗಳನ್ನು ಮತ್ತು ಅಲಕ್ಷಿತ ಸಮುದಾಯಗಳನ್ನು ನೈತಿಕವಾಗಿ ಮತ್ತು ರಾಜಕೀಯವಾಗಿ ಸಶಕ್ತರನ್ನಾಗಿ ಮಾಡುತ್ತದೆ ಎನ್ನುವಾಗ ಅಂಥ ಜ್ಞಾನವನ್ನು ಉತ್ಪಾದಿಸುವ ಸಾಮಾಜಿಕ ವಿಜ್ಞಾನಗಳು ಅವುಗಳದ್ದೇ ಕ್ಷೇತ್ರಗಳಿಂದ ಮಿತಿಗಳಿಗೆ ಒಳಗಾಗಿರುತ್ತವೆ. ಅಂದರೆ ಥಿಯರಿ ಕಟ್ಟುವಾಗ ಈ ಸಾಮಾಜಿಕ ವಿಜ್ಞಾನಗಳು ವಿಧಿಸುವ ಕಟ್ಟಳೆಗಳನ್ನು ಮೀರಬಾರದಲ್ಲವೇ? ಆದರೆ ದಲಿತರು ಮತ್ತು ಅಲಕ್ಷಿತ ಸಮುದಾಯಗಳು ಥಿಯರಿ ಕಟ್ಟುವಾಗ ಸಾಮಾಜಿಕ ವಿಜ್ಞಾನಗಳ ಕಟ್ಟುಪಾಡುಗಳನ್ನು ಅನುಸರಿಸುವುದಿಲ್ಲ. ಆದ್ದರಿಂದ ದಲಿತರ ಮತ್ತು ಅಲಕ್ಷಿತ ಸಮುದಾಯಗಳ ಥಿಯರಿಗಳು 'ಬರೀ ಭಾವಾವೇಶದಿಂದ ಕೂಡಿರುತ್ತವೆ' ಎಂದು ಸಾಮಾಜಿಕ ವಿಜ್ಞಾನಿಗಳನ್ನು ಕಾಯುವ ದ್ವಾರಪಾಲಕರು ದೂಷಿಸಿಬಿಡುತ್ತಾರೆ. ಇದಕ್ಕೆ ಗೋಪಾಲ್‌ಗುರು ಸೂಚಿಸುವ ಪರಿಹಾರವೆಂದರೆ ದಲಿತರು ಅದ್ಭುತವಾದ ಕಾವ್ಯವನ್ನು ರಚಿಸಿ ಹಾಡುತ್ತಾರೆ. ಹೀಗೆ ಥಿಯರಿಗೆ ಪರ್ಯಾಯವನ್ನು ಕಂಡುಕೊಳ್ಳುತ್ತಾರೆಂದು ಗೋಪಾಲ್ ಗುರು ಹೇಳುತ್ತಾರೆ.

ಈ ಮಹತ್ವದ ಸಂಗತಿಯನ್ನು ಒಪ್ಪಿಕೊಳ್ಳಬಹುದಾದರೂ ಸಹ ಸಾಮಾಜಿಕ ವಿಜ್ಞಾನಗಳು ಅನುಸರಿಸುವ ಅನುಭವಜನ್ಯ ಮೀಮಾಂಸೆಯನ್ನು 'ಭಟ್ಟಿ ಇಳಿಸುವ ಕ್ರಮ' ಎಂದು ಬಿಟ್ಟುಬಿಡಲು ಸಾಧ್ಯವೇ? ಎಂಬ ಪ್ರಶ್ನೆಯನ್ನು ನಾವು ಹಾಕಿಕೊಂಡರೆ ಈ ಅನುಭವಜನ್ಯ ಮೀಮಾಂಸೆಯಲ್ಲೇ ಒಂದು ರ್ಯಾಡಿಕಲ್ ಆದ ಪಲ್ಲಟವನ್ನು ಮಾಡಿಕೊಳ್ಳಬಹುದಲ್ಲವೇ? ಖಂಡಿತವಾಗಿಯೂ ಮಾಡಿಕೊಳ್ಳಬಹುದು. ಅಂದರೆ ಥಿಯರಿ ಮತ್ತು ಫ್ಯಾಕ್ಟ್ (ಸಂಗತಿ) ನಡುವಿನ ಬಿರುಕನ್ನು ಮೀರಲು ಒಂದು ವಿಧದ ರ್ಯಾಡಿಕಲ್ ಆಗಿರುವ ಅನುಭವ ಜನ್ಯ ವಿಧಾನವನ್ನು ಬಳಸಬಹುದಾಗಿದೆ. ಈ ಮೂಲಕ ಒಂದು ಪರ್ಯಾಯವಾದ ರಾಜಕೀಯವನ್ನು ದಲಿತರು ಮತ್ತು ಅಲಕ್ಷಿತ ಸಮುದಾಯಗಳು ಕಟ್ಟಿಕೊಳ್ಳಬಹುದಾಗಿದೆ ಎನ್ನುವುದನ್ನು ಎಂ.ಎಸ್.ಎಸ್. ಪಾಂಡಿಯನ್ ವಿವರಿಸುತ್ತಾರೆ. ಅಂದರೆ ಅದ್ಬುತವಾದ ಕಾವ್ಯ (ಕಥೆ, ಕಾದಂಬರಿ, ಸಾಕ್ಷ್ಯ ಮುಂತಾದುವುಗಳನ್ನೊಳಗೊಂಡಂತೆ) ದಲಿತರಲ್ಲಿನ ಥಿಯರಿ ಕೊರತೆಗೆ ಬದಲಿಯೇನೂ ಅಲ್ಲ. ಬದಲಾಗಿ ಅದು ಸಾಮಾಜಿಕ ವಿಜ್ಞಾನಗಳಲ್ಲಿರುವ ಯಜಮಾನಿ ನೆಲೆಯ ಥಿಯರಿ ಕಟ್ಟುವುದಕ್ಕೆ ವಿರುದ್ಧವಾಗಿ ಹುಟ್ಟಿ ಕೊಂಡಂಥದ್ದು. ಈ ಕ್ರಮವು ಸಾಮಾಜಿಕ ವಿಜ್ಞಾನಗಳ ವಿಧಿ-ನಿಯಮಗಳಿಂದ ಮುಕ್ತವಾಗಿ ಸಾಮಾಜಿಕ ವಿಜ್ಞಾನಗಳಲ್ಲಿನ ಸಾಕ್ಷ್ಯಾಧಾರಗಳು, ವೈಭವೀಕರಣಗೊಂಡಿರುವ ಕಾರ್ಯ-ಕಾರಣ ತರ್ಕ ಮತ್ತು ಅಲೌಕಿಕತೆ, ಅದು ಕ್ಲೈಮ್ ಮಾಡುವ ವಸ್ತುನಿಷ್ಠತೆ ಮತ್ತು ಲೇಖಕ ನಿರ್ಲಿಪ್ತತೆಯನ್ನು ಭಂಗಿಸುವಂಥದ್ದಾಗಿದೆ. ಆದ್ದರಿಂದ ಈ ರೀತಿಯ ಕಥನ ಕ್ರಮವು ಜೀವ ಜಗತ್ತಿನ ವಿಬಿನ್ನವಾದ ವಿವರಗಳನ್ನು ನೀಡುವ ಮೂಲಕ 'ರಾಜಕೀಯ' ಎನ್ನುವುದನ್ನು ಮರು ನಿರ್ಮಿಸುತ್ತವೆ. ಇನ್ನು ಮುಂದೆ ಎರಡು ದಲಿತ ಪಠ್ಯಗಳ ಮೂಲಕ ಮೇಲಿನ ಸಂಗತಿಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದಾಗಿದೆ ಎಂದು ಪಾಂಡಿಯನ್ ಹೇಳುತ್ತಾರೆ. ಆ ಪಠ್ಯಗಳೆಂದರೆ ಒಂದು – ಬಾಮಾರವರ 'ಕರುಕ್ಕು', ಮತ್ತು ಎರಡು – ಕೆ. ಎ. ಗುಣಶೇಖರನ್‌ರವರ 'ವಾಡು'.

ಬಾಮಾರವರ 'ಕರುಕ್ಕು' ತಮಿಳು ಬಾಷೆಯಲ್ಲಿ ಪ್ರಕಟವಾಗಿದ್ದು 1992ರಲ್ಲಿ. ಈ ಕೃತಿಯಲ್ಲಿ ಬಾಮಾರವರು ಬೆಳದ ಹಳ್ಳಿ, ಬೇರೆ ಬೇರೆ ಶಾಲೆಗಳಲ್ಲಿ ನಡೆದ ಆಕೆಯ ವಿದ್ಯಾಭ್ಯಾಸ, ಈ ಎಲ್ಲವುಗಳಲ್ಲಿ ಆಕೆ ಅನುಭವಿಸಿದ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯದ ಶೋಷಣೆಯಿಂದ ಬೇಸತ್ತು ಹೊರಬಂದುದು ಮುಂತಾದ ವಿವರಗಳು ಓದುಗರಿಗೆ ದೊರೆಯುತ್ತವೆ. ಈ ಎಲ್ಲಾ ವಿವರಗಳಿಂದ ಆ ಪಠ್ಯ ಆತ್ಮಕಥನ ಎಂದು ಭಾವಿಸಿದರೂ ಸಹ ಅದು ಕೇವಲ ಆತ್ಮಕತೆಯಾಗಿ ಉಳಿಯುವುದಿಲ್ಲ. ಮೊದಲ ನೋಟಕ್ಕೆ ಅದು ಒಂದು ಹಳ್ಳಿಯ ಚರಿತ್ರೆಯಂತೆ ಕಂಡರೂ, ಇನ್ನೊಂದುಆಯಾಮದಲ್ಲಿ ಅದು ಅದ್ಭುತವಾದ ಕಾದಂಬರಿಯಂತೆ ಗೋಚರಿಸುತ್ತದೆ. ಅಂದರೆ ಕರುಕ್ಕು ಅದು ಚರಿತ್ರೆಯೂ ಅಲ್ಲ, ಆತ್ಮಕಥನವೂ ಅಲ್ಲ. ಆದರೂ ಅದು ಏಕಕಾಲದಲ್ಲಿ ಅವುಗಳೆಲ್ಲವೂ ಹೌದು.

ಬಾಮಾರವರ 'ಕರುಕ್ಕು' ತಮಿಳು ಬಾಷೆಯಲ್ಲಿ ಪ್ರಕಟವಾಗಿದ್ದು 1992ರಲ್ಲಿ. ಈ ಕೃತಿಯಲ್ಲಿ ಬಾಮಾರವರು ಬೆಳದ ಹಳ್ಳಿ, ಆಕೆಯ ಬಾಲ್ಯ, ಆಕೆಯ ಶ್ರಮಿಕ ಬದುಕು, ಬೇರೆ ಬೇರೆ ಶಾಲೆಗಳಲ್ಲಿ ನಡೆದ ಆಕೆಯ ವಿದ್ಯಾಭ್ಯಾಸ, ಈ ಎಲ್ಲವುಗಳಲ್ಲಿ ಆಕೆ ಅನುಭವಿಸಿದ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯ, ಆಕೆಯ ಕ್ರಿಶ್ಚಿಯನ್ ಹಿನ್ನೆಲೆ, ಆಕೆ ಸನ್ಯಾಸಿನಿ ಆಗಲು ಹೊರಟು, ಅಲ್ಲಿಂದ ವಾಪಸ್ಸಾದುದು ಹಾಗೂ ಚರ್ಚ್‌ನೊಳಗಿನ ಶೋಷಣೆಯ ರೂಪದಿಂದ ಬೇಸತ್ತು ಹೊರಬಂದುದು ಮುಂತಾದ ವಿವರಗಳು ಓದುಗರಿಗೆ ದೊರೆಯುತ್ತವೆ. ಈ ಎಲ್ಲಾ ವಿವರಗಳಿಂದ ಆ ಪಠ್ಯ ಆತ್ಮಕಥನ ಎಂದು ಭಾವಿಸಿದರೂ ಸಹ ಅದು ಕೇವಲ ಆತ್ಮಕತೆಯಾಗಿ ಉಳಿಯುವುದಿಲ್ಲ. ಇದರ ಬಗ್ಗೆ ಆ ಪಠ್ಯದ ಮುನ್ನುಡಿಯಲ್ಲೇ ವ್ಯಾಖ್ಯಾನ ದೊರೆಯುತ್ತದೆ, 'ಮೊದಲ ನೋಟಕ್ಕೆ ಅದು ಒಂದು ಹಳ್ಳಿಯ ಚರಿತ್ರೆಯಂತೆ ಕಂಡರೂ ಮತ್ತೊಂದು ಆಯಾಮದಲ್ಲಿ ಅದು ಒಂದು ಆತ್ಮಕಥನವಾಗಿ ಓದಿಸಿಕೊಳ್ಳುತ್ತದೆ; ಇನ್ನೂ ಒಂದು ಆಯಾಮದಲ್ಲಿ ಅದು ಅದ್ಭುತವಾದ ಕಾದಂಬರಿಯಂತೆ ಗೋಚರಿಸುತ್ತದೆ.' ಅಂದರೆ ಕರುಕ್ಕು ಯಾವುದೇ ಪಠ್ಯ ವಿಧಿಸುವ ಶೈಲಿಯಿಂದ ಮುಕ್ತವಾಗಿಬಿಡುತ್ತದೆ. ಅದು ಚರಿತ್ರೆಯೂ ಅಲ್ಲ, ಆತ್ಮಕಥನವೂ ಅಲ್ಲ. ಆದರೂ ಅದು ಏಕ ಕಾಲದಲ್ಲಿ ಅವುಗಳೆಲ್ಲವೂ ಹೌದು ಎನ್ನುತ್ತಾರೆ ಪಾಂಡಿಯನ್.

ಕೆ. ಎ. ಗುಣಶೇಖರನ್‌ರವರ ವಾಡು ಕೃತಿಯು ಪ್ರಕಟವಾದುದು 1995ರಲ್ಲಿ. ಇದು ಮೇಲಿನದಕ್ಕೇನು ಭಿನ್ನವಾದುದೇನಲ್ಲ. ಆತನ ಬದುಕಿನ ಹಲವಾರು ಘಟನೆಗಳಾದ ವಿದ್ಯಾಭ್ಯಾಸದ ಸಂದರ್ಭದಲ್ಲಿ ಎದುರಿಸಿದ ಕಷ್ಟಗಳು, ಶ್ರೀಮಂತ ಮುಸ್ಲಿಂರು ಆತನ ವಿದ್ಯಾಭ್ಯಾಸದ ಫೀಸ್‌ನ್ನು ಭರಿಸಿದ್ದು, ತರಗತಿಯಲ್ಲಿ ಅನುಭವಿಸಿದ ಜಾತಿ ಅವಮಾನ, ದಲಿತ ಹಾಸ್ಟೆಲ್‌ನಲ್ಲಿ ಜೀವನ, ನಂತರದಲ್ಲಿ ಹಾಡುಗಾರನಾಗಿ ಆತ ತನ್ನನ್ನೇ ಕಂಡುಕೊಂಡಿದ್ದು... ಮುಂತಾದವುಗಳನ್ನು (ಇವುಗಳನ್ನು ಪ್ರಜ್ಞಾಪೂರ್ವಕವಾಗಿ 'ಅನುಭವ'ಗಳೆಂದು ಕರೆದುಬಿಡಲಾಗುತ್ತದೆ) ಈ ಕೃತಿ ಹೆಣೆಯುತ್ತದೆಯಾದರೂ ಅದು ಎಲ್ಲೂ ಸಹ ಆತ್ಮಕಥನದ ಸಾಧನೆ, ಆತ್ಮಸಾಕ್ಷಾತ್ಕಾರ ಮುಂತಾದ ಲಕ್ಷಣಗಳನ್ನು ಪ್ರತಿಪಾದಿಸುವುದಿಲ್ಲ. ಆದ್ದರಿಂದ ದಲಿತ ಬುದ್ಧಿಜೀವಿಯಾದ ರವಿಕುಮಾರ್ ಆ ಕೃತಿಗೆ ಮುನ್ನುಡಿ ಬರೆಯುತ್ತಾ ಹೀಗನ್ನುತ್ತಾರೆ, 'ಆತ್ಮಕಥನ ಎನ್ನುವುದು ಒಬ್ಬ ವ್ಯಕ್ತಿಯ ಸುತ್ತಲೂ ಕೆತ್ತುವ ಹಿರೋಯಿಕ್ ಭಾಷೆಯಿಂದ ಕೂಡಿರುತ್ತದೆ. ಇದಕ್ಕೆ ಭಿನ್ನವಾಗಿ ಕಲಾಕೃತಿ ಎನ್ನುವುದು ಅದ್ಭುತವಾದ ಭಾಷೆಯ ಬಂಧದಲ್ಲಿರುತ್ತದೆ." ಆದ್ದರಿಂದ ಆತ ಆತ್ಮಕಥನವೆಂದು ಈ ಕೃತಿಯನ್ನು ಓದದೆ, ಓದುಗರು ತಮ್ಮ ತೀರ್ಮಾನಕ್ಕೆ ಬರಬಹುದು ಎಂಬ ಆಹ್ವಾನವನ್ನು ನಮಗೆ ಆತ ನೀಡುತ್ತಾನೆ.

ಹೀಗೆ ಸಾಗುವ ಪಾಂಡಿಯನ್ ಕರುಕ್ಕು ಮತ್ತು ವಾಡು ಕೃತಿಗಳ ಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸುತ್ತಾರೆ. ಈ ಕೃತಿಗಳು ಬಹು ಸಾಮಾನ್ಯವಾದುದನ್ನು ಹೇಳುತ್ತಲೇ ಅದ್ಭುತ ತಿರುವುಗಳನ್ನು ಪಡೆದುಕೊಳ್ಳುತ್ತವೆ. ಈ ಪಠ್ಯಗಳು ಸಾಂಪ್ರದಾಯಿಕವಾದ ಪ್ರಕಾಶನ ರೂಢಿಯ ಶ್ರೇಷ್ಠ ತಮಿಳು ಭಾಷೆಯ ವ್ಯಾಕರಣವನ್ನು ಬಳಸುವುದಿಲ್ಲ. ಬದಲಾಗಿ ಆಡುನುಡಿಯ, ಪ್ರಾದೇಶಿಕ ಹಾಗೂ ಜಾತಿಬದ್ಧ ಉಚ್ಚಾರಣೆಯನ್ನೇ ಬಳಸುತ್ತವೆ. ಮೇಲ್ಜಾತಿಯವರು ಸ್ವಲ್ಪ ಪ್ರಯಾಸಪಟ್ಟಲ್ಲಿ ಮಾತ್ರ ಇಂಥ ಭಾಷೆಯನ್ನು ಅರಗಿಸಿಕೊಳ್ಳಬಹುದು. ಸಿದ್ಧ ಮಾದರಿಯ ಶಿಷ್ಟತನವನ್ನು ಈ ಕೃತಿಗಳು ಎಲ್ಲೂ ಪ್ರಕಟಿಸದೆ, ಆ ಮಾದರಿಗೆ ಭಿನ್ನವಾಗಿ ಸಾಮಾನ್ಯವೆನ್ನಬಹುದಾದ ವಿಧಾನವನ್ನು ತೆರೆದಿಡುತ್ತವೆ. ಭಾಷೆಯ ಈ ಆಯ್ಕೆ ದೈನಂದಿನ ಸಾಮಾನ್ಯವಾದ ಘಟನೆಗಳಿಗೆ ಆತುಕೊಳ್ಳುವಂಥದ್ದು. ಅಂದರೆ ಅಲ್ಲಿ ಅನಿರೀಕ್ಷಿತ ಎನ್ನುವುದೇನೂ ನಡೆಯುವುದಿಲ್ಲ.

ಪಾಂಡಿಯನ್‌ರವರ ಪ್ರಕಾರ ಈ ಎರಡು ಪಠ್ಯಗ

(೧೧ನೇ ಪುಟಕ್ಕೆ)

(೭ನೇ ಪುಟದಿಂದ)

ಅಪೌರುಷೇಯ ಎಂದು; ಹಾಗಾಗಿ ಅವನ್ನು ಪವಿತ್ರ ಎಂದು ಪರಿಗಣಿಸಿಯೇ ಇರಲಿಲ್ಲ. ಅವುಗಳಲ್ಲಿ ಮೂರ್ಖ ಹೇಳಿಕೆಗಳೂ, ಅವಿವೇಕತನವೂ ಇದೆ ಎಂದು ಹೇಳುವಷ್ಟು 'ನಿರಂಕುಶಮತಿ'ಯಾಗಿದ್ದವರು ಕುವೆಂಪು. ಇದರ ವಿಷದೀಕರಣಕ್ಕಾಗಿ ಅಂದರೆ ವೇದೋಪನಿಷತ್ತುಗ ಳನ್ನು ಕುರಿತ ಅವರ ನಿಲುವನ್ನು ಅರ್ಥ ಮಾಡಿಕೊಳ್ಳಲು ಅವರು ಸಂಪಾದಿಸಿರುವ 'ಋಷಿವಾಣಿ'ಯನ್ನು ನೋಡಬಹುದು.

ಇನ್ನು ಇಂತಹುದೇ ಆಧಾರಗಳೆಂದು ಹೆಗಡೆಯವರು ಹೇಳುವ ರಾಮಾಯಣ-ಮಹಾಭಾರತಗಳ ಬಗ್ಗೆ ಕುವೆಂಪು ಅವರ ನಿಲುವು, ಅವನ್ನು ಆಧುನೀಕರಿಸಿಯೇ-ಅವನ್ನು ಇಂದಿನ ಹೊಸ ತಿಳುವಳಿಕೆಗೆ ಹೊಂದಿಸಿಯೇ-ಸ್ವೀಕರಿಸಬೇಕೆಂಬುದಾಗಿತ್ತು. 'ರಾಮಾಯಣ ದರ್ಶನ'ದ ರಚನೆಯೇ ಇದಕ್ಕೆ ದೊಡ್ಡ ಉದಾಹರಣೆ. ಪರಂಪರೆ ಕುರಿತ ಕುವೆಂಪು ಅವರ ತಾತ್ವಿಕ ನಿಲುವು 'ಶೂದ್ರ ತಪಸ್ವಿ' ಕುರಿತ ಇವರ ಮತ್ತು ಮಾಸ್ತಿ ನಡುವಣ ಸಂವಾದದಲ್ಲೇ ಸ್ಪಷ್ಟಗೊಂಡಿದೆ.

೩. ನೇರ ಅನುಭವದ ಆಧಾರದ ಮೇಲೇ ಬದುಕಿನ ಎಲ್ಲ ನಿಲುವುಗಳನ್ನು ರೂಪಿಸಿಕೊಳ್ಳಬೇಕೆಂಬ ಹೆಗಡೆಯವರ ನಿಲುವು, ಬದುಕು ಕೇವಲ ವೈಯುಕ್ತಿಕ ಸ್ತರಗಳಲ್ಲಿ ನಡೆಯುವಂತಹುದಲ್ಲ;ಅದು ವೈಯುಕ್ತಿಕ ಮತ್ತು ಸಾಮಾಜಿಕ-ಈ ದ್ವಂದ್ವಾತ್ಮಕತೆಯಲ್ಲಿ ತನ್ನನ್ನು ಕಟ್ಟಿಕೊಳ್ಳುತ್ತಾ ಹೋಗುತ್ತದೆ ಮತ್ತು ಅದು ತನ್ನ ಸತ್ಯಗಳನ್ನು ಪರಸ್ಪರ ಪೂರಕವಾಗಿ ತಾಳೆ ನೋಡಿಕೊಳ್ಳುತ್ತಲೇ, ರೂಪಿಸಿಕೊಳ್ಳುತ್ತಾ ಹೋಗುತ್ತದೆ ಎಂಬ ಸಂಕೀರ್ಣ ಅರಿವಿಗೆ ಎರವಾಗಿದೆ.

೪. ಕುವೆಂಪು ತಮ್ಮನ್ನು ಶೂದ್ರನನ್ನಾಗಿ ಗ್ರಹಿಸಿಕೊಂಡ ರೀತಿಯೇ ಒಂದು ಅಪಕಲ್ಪನೆಯಾಗಿದೆ ಎನ್ನುವ ಹೆಗಡೆಯವರಿಗೆ ಜಾತಿ ಪದ್ಧತಿ ಕುರಿತ ಕುವೆಂಪು ಅವರ ನಿಲುವೇ ಅರ್ಥವಾಗಿಲ್ಲ ಎಂದು ಹೇಳಬೇಕಾಗುತ್ತದೆ. ವಿಶೇಷವಾಗಿ ಬ್ರಾಹ್ಮಣರನ್ನು ಕುರಿತ ಕುವೆಂಪು ಅವರ ದ್ವಂದ್ವಾತ್ಮಕ ನಿಲುವುಗಳೆಂದು ಹೆಗಡೆಯವರು ಪ್ರಸ್ತುತಪಡಿಸುವ ಪ್ರಕರಣಗಳೇ, ಅವರ ನಿಲುವು ಹೆಗಡೆಯವರು ತೀರ್ಮಾನಿಸಿರುವಂತೆ ಬ್ರಾಹ್ಮಣ ವಿರೋಧ ಅಥವಾ ದ್ವೇಷದ ಮೇಲೆ ನಿಂತುದಲ್ಲ ಎಂದು ಸೂಚಿಸುವಂತಿವೆ! ಹಾಗಾಗಿ, ಹಿಂದೂ ಸಮಾಜದ ಸಾಮಾಜಿಕ ರಚನೆಯಾಗಿದ್ದ ಜಾತಿ ಪದ್ಧತಿ ಪುರೋಹಿತಶಾಹಿಯಿಂದಾಗಿ (ನಮ್ಮ ಪರಂಪರೆಯನ್ನು ಒಂದು ಸೃಜನಶೀಲ ಮತ್ತು ಚಿಕಿತ್ಸಕ ವಿಮರ್ಶೆಗೆ ಒಡ್ಡಿ ಅದನ್ನು ಆಧುನೀಕರಿಸುವ ಕೆಲಸಕ್ಕೆ ಅಡ್ಡಿಯುಂಟು ಮಾಡುವುದೂ ಸೇರಿದಂತೆ) ಒಂದು ಶೋಷಣಾ ಸಾಧನವಾಗಿದೆ ಎಂದಷ್ಟೇ ಕುವೆಂಪು ಹೇಳುತ್ತಿದ್ದಾರೆ. ಈ ಪುರೋಹಿತಶಾಹಿ ಬ್ರಾಹ್ಮಣರಿಂದಲೇ ತುಂಬಿ ಹೋಗಿದ್ದರೆ(ಹಾಗಾದುದರಿಂದಲೇ ಏನೋ ಅದು ಪುರೋಹಿತಶಾಹಿಯಾದದ್ದು!) ಕುವೆಂಪು ಏನು ಮಾಡಿಯಾರು?

ಈ ಸಂಬಂಧವಾದ ಉದಾಹರಣೆಗಳ ವಿಶ್ಲೇಷಣೆಯಲ್ಲಿ ಹೆಗಡೆಯವರು, ಒಕ್ಕಲಿಗರು ಸ್ವಯಂಪ್ರೇರಿತರಾಗಿಯೇ ಬ್ರಾಹ್ಮಣರ ಪುರೋಹಿತಶಾಹಿ ಪ್ರಭಾವಕ್ಕೆ ಒಳಗಾಗಿದ್ದರು ಎಂದು ಸೂಚಿಸುವುದು ಮತ್ತು ಶೂದ್ರರೂ ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದರು ಎಂಬುದು ಕುವೆಂಪು ಅವರಿಗೆ ಗೊತ್ತಿರಲಿಲ್ಲವೇ ಎಂದು ಕೇಳುವುದು ಕುವೆಂಪು ಅವರ ವ್ಯಕ್ತಿತ್ವದ ಸಾಮಾನ್ಯ ಪ್ರಬುದ್ಧತೆಯನ್ನೇ ಪ್ರಶ್ನಿಸುವಂತಿದೆ! ಜಾತಿ ಪದ್ಧತಿ ಕುರಿತ 'ಅಭಿಜಾತ ನಿರೂಪಣೆ'(Classical account of caste system) ಎಂದು ತಾವು ಕರೆಯುವ ಪ್ರಕಲ್ಪನೆಗೆ ಪರ್ಯಾಯವಾಗಿ ಹೆಗಡೆ ಮತ್ತು ಅವರ ಗೆಳೆಯರು ತಮ್ಮ ಸಂಶೋಧನೆಗಳ ಮೂಲಕ ಕಟ್ಟ ಹೊರಟಿರುವ ನಿರೂಪಣೆ ಎಷ್ಟು ಅಪ್ರಬುದ್ಧವಾಗಿರಬಹುದು ಎಂಬುದನ್ನು ಸೂಚಿಸುತ್ತದಷ್ಟೆ. ಹೆಗಡೆ ಮತ್ತು ಅವರ ಗೆಳೆಯರ 'ಸ್ಥಳೀಯ ಸಂಸ್ಕೃತಿಗಳ ಅಧ್ಯಯನ ಕೇಂದ್ರ' ತನ್ನ ಗುರಿ ಮುಟ್ಟಲು ಇಷ್ಟು ಅವಸರದ ಹೆಜ್ಜೆಗಳನ್ನಿಡಬಾರದು. ಮುಗ್ಗರಿಸಿ ಬೀಳುವ ಅಪಾಯವನ್ನು ಸ್ವತಃ ತಾವೇ ಹೀಗೆ ಆಹ್ವಾನಿಸಿಕೊಳ್ಳಬಾರದು!

ಪ್ರಿಯ ಗೆಳೆಯರಾದ ಹೆಗಡೆಯವರು ಜಾತಿ ಪದ್ಧತಿ ಕುರಿತಂತೆ ಇತ್ತೀಚಿನ ಹಿಂದುಳಿದ ವರ್ಗಗಳ ಆಂದೋಲನ ಕಟ್ಟಿರುವ ಅತಿ ರೂಕ್ಷ ಸಂಕಥನದ ಹಲವು ಹುಸಿತನಗಳನ್ನು ಬಯಲು ಮಾಡುವ ಉತ್ಸಾಹದಲ್ಲಿ, ಜಾತಿಪದ್ಧತಿಯ ಚರಿತ್ರೆಯ ಅಡಿಗಲ್ಲುಗಳನ್ನೇ ಅಲ್ಲಾಡಿಸ ಹೊರಟಿದ್ದಾರೆ. ಇದು ಚರಿತ್ರೆಗೇ ಮಾಡಲಾಗುತ್ತಿರುವ ಅನ್ಯಾಯ. ಇದು ನಿಜವಾಗಿ, ಅತ್ಯಂತ ವಿಕ್ಷಿಪ್ತ ಸಾಮಾಜಿಕ ರಚನೆಯಾಗಿ ನಮ್ಮ ಮಧ್ಯೆ ಉಳಿದು ಹೋಗಿರುವ ಜಾತಿ ಪದ್ಧತಿಯ ವಿರುದ್ಧ ಎಲ್ಲರೂ ಸೇರಿ ತಾತ್ವಿಕವಾಗಿ ಮತ್ತು ವಾಸ್ತವ ಮಟ್ಟದಲ್ಲಿಯೂ ನಡೆಸಬೇಕಾದ ಹೋರಾಟವನ್ನು-ಹೆಗಡೆಯವರಿಗೆ ಗೊತ್ತಿದ್ದೋ ಗೊತ್ತಿಲ್ಲದಂತೆಯೋ-ದಾರಿ ತಪ್ಪಿಸುವಂತಹುದೇ ಆಗಿದೆ. □



ಯುದ್ಧವಿಲ್ಲದೆ ಬುದ್ಧ
ಜನರನ್ನು ಗೆದ್ದ
ಆಚಾರ, ವಿಚಾರ
ಸರಳತೆ ಅವನ ಸೈನ್ಯ!

ಅಲ್ಲಮಪ್ರಭು ಬೆಟ್ಟದೂರು

ಸಂವಾದ



ಲೇಖಕರಲ್ಲಿ ಮನವಿ

'ಸಂವಾದವನ್ನು ನಾಡಿನ ಎಲ್ಲ ದುರ್ಬಲರಿಗೆ, ಅಸಹಾಯಕರಿಗೆ ಆಸರೆಯಾಗಬೇಕೆಂಬ ಮಹದಾಸೆಯೊಂದಿಗೆ ಪ್ರಾರಂಭಿಸಲಾಗಿದೆ. ಸಮಾಜದ ಹಲವು ಗೊಂದಲ-ಗೋಜಲುಗಳಲ್ಲಿ ಸಿಕ್ಕಿ ವಿಚಾರ ಶೂನ್ಯರಾಗುತ್ತಿರುವ ಎಲ್ಲ ಜನವರ್ಗಗಳನ್ನು ಗಂಭೀರ ಚರ್ಚೆಗೆ ತೊಡಗಿಸಿ ಆ ಮೂಲಕ ವೈಚಾರಿಕ ನೆಲೆಗಟ್ಟನ್ನು ಒದಗಿಸುವ ಆಸೆ 'ಸಂವಾದ'ಕ್ಕಿದೆ. ಜಾತಿ, ಮತ, ಧರ್ಮಗಳ ಕಪಿಮುಷ್ಟಿಯಲ್ಲಿ ಸಿಲುಕಿರುವ ಪ್ರತಿಯೊಬ್ಬರ ವೇದಿಕೆಯಾಗಬೇಕೆಂಬ 'ಸಂವಾದ'ದ ಹಂಬಲಕ್ಕೆ ತಾವೆಲ್ಲ ಕೈಗೂಡಿಸಬೇಕೆಂಬ ನಿರೀಕ್ಷೆ ನಮ್ಮದು. 'ಸಂವಾದ' ಪ್ರಕಟಣೆಗಾಗಿ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ರಂಗದ ಸೃಜನಾತ್ಮಕ ಹಾಗೂ ವಿಶ್ಲೇಷಣಾತ್ಮಕ ಲೇಖನಗಳನ್ನು ಬಯಸುತ್ತದೆ.

ಲೇಖನಗಳು ೨೦೦೦ ಪದಗಳ ಮಿತಿಯಲ್ಲಿರಬೇಕು.

ಸಣ್ಣ ಕಥೆ, ಕವನಗಳಿಗೂ ಆಹ್ವಾನವಿದೆ.

-ಸಂಪಾದಕ

ವಿಳಾಸ : ಸಂಪಾದಕರು,
'ಸಂವಾದ' ಮಾಸ ಪತ್ರಿಕೆ
ಸ್ಫೂರ್ತಿಧಾಮ, ಅಂಜನಾನಗರ
ವಿಶ್ವನೀಡಂ ಅಂಚೆ,
ಬೆಂಗಳೂರು - ೫೬೦ ೦೯೧

(೯ನೇ ಪುಟದಿಂದ)

ಭಾರತೀಯ ಸಾಮಾಜಿಕ ವಿಜ್ಞಾನಗಳು ಮತ್ತು ಸಾಮಾನ್ಯರ ಬದುಕು...

ಇಲ್ಲಿ ಮೂರು ಪ್ರಧಾನ ತಂತ್ರಗಳು ಪ್ರಜ್ಞಾಪೂರ್ವಕವಾದ ಸಾಮಾನ್ಯ ಬದುಕಿನ ವಿವರಗಳನ್ನು ಪ್ರತಿಪಾದಿಸದಂತೆ ಮಾಡುತ್ತವೆ. ಒಂದು, ಈ ಪಠ್ಯಗಳು ಯಾವುದನ್ನು ಸಾಮಾನ್ಯ ಮತ್ತು ಗಮನಕ್ಕೆ ಅಯೋಗ್ಯ ಎಂದು ಸಾಮಾಜಿಕ ವಿಜ್ಞಾನಗಳು ಪರಿಗಣಿಸುತ್ತವೋ ಅಂಥವನ್ನು ಇವು ಗಮನಕ್ಕೆ ತೆಗೆದುಕೊಳ್ಳುತ್ತವೆ. ಇವು ತಮ್ಮ ಸಾಮಾನ್ಯತೆಯನ್ನಷ್ಟೆ ಸೂಚಿಸುತ್ತವಲ್ಲದೆ ಮತ್ತೇನನ್ನೂ ಅಲ್ಲ. ಇದಕ್ಕೆ ಅಗತ್ಯವಾದ ವಿವರಗಳು ನಮಗೆ ಈ ಎರಡು ಕೃತಿಗಳುದ್ದಕ್ಕೂ ಸಿಗುತ್ತವೆ. ಆದರೆ ಇಲ್ಲಿ ಒಂದು ಸಂಗತಿಯನ್ನು ನೆನಪಿಡಬೇಕಾಗುತ್ತದೆ. ಇಂಥ ಸಾಮಾನ್ಯ, ಏನೂ ಅಲ್ಲದ ಬದುಕಿನ ಘಟನೆಯೊಂದನ್ನು ಹೆಸರಿಸುವುದೆಂದರೆ ಅದು ಸಾಮಾಜಿಕ ವಿಜ್ಞಾನದಲ್ಲಿ ನಿಜವಾಗಿಯೂ ಬಲಶಾಲಿಯಾಗಿರುತ್ತದೆ. ಕಾರಣ ಇಲ್ಲಿ ಘಟನೆಗೆ ಸಾಕ್ಷಿ ಎನ್ನುವುದು ಇರದೆ ಫ್ಯಾಕ್ಟ್ ಎನ್ನುವುದು ಸ್ಪಷ್ಟವಾಗಿ ಬಿಡುತ್ತದೆ.

ಎರಡನೆಯ ತಂತ್ರವೆಂದರೆ ಈ ಸಾಮಾನ್ಯವಾದುವುಗಳ ನಿರ್ದಿಷ್ಟತೆಗಳನ್ನು ಈ ಪಠ್ಯಗಳು ಅಳಿಸಿಹಾಕಿ, ಅವುಗಳು ಎಂದು ಅನಾಮಿಕವಾಗಿಯೇ ನಿಂತುಬಿಡುವಂತೆ ಮಾಡುವುದು. ಉದಾಹರಣೆಗೆ ಕರುಕ್ಕು ಕೃತಿಯಲ್ಲಿ ಹಳ್ಳಿ ಎನ್ನುವುದು ಅನಾಮಿಕವಾಗಿಯೇ ಇದ್ದುಬಿಟ್ಟು, ಅಲ್ಲಿ ನಡೆಯುವ ದಲಿತರ ಮೇಲಿನ ಹಲ್ಲೆಗಳ ಸಂದರ್ಭದಲ್ಲಿ ಎಲ್ಲೂ ನಿರ್ದಿಷ್ಟತೆಗಳು ಕಾಣಿಸಿಕೊಳ್ಳುವುದಿಲ್ಲ. ಹಾಗೆಯೇ ವಾಡುವಿನಲ್ಲೂ ವಿವರಗಳು ದಂಡಿಯಾಗಿ ದೊರೆಯುತ್ತವೆ. ಹೀಗೆ ಈ ಸಾಮಾನ್ಯ ಸಂಗತಿಗಳು ಜರುಗುವ ಕಾಲ ಮಾತ್ರ ಚಲನೆಯಿಲ್ಲದಂತೆ ನಿಂತುಬಿಡುತ್ತದೆ.

ಮೂರನೇ ತಂತ್ರವೆಂದರೆ ಭೂತದಲ್ಲಿನ ಕಾಲ ಎನ್ನುವುದು 'ಈಗ ಮತ್ತು ಇಲ್ಲೇ' ನಡೆದಂತೆ ಘಟನೆಗಳನ್ನು ಈ ಪಠ್ಯಗಳು ವಿವರಿಸಿಕೊಳ್ಳುವುದು. ಅಂದರೆ ಇಲ್ಲಿ ಕಾಲ ಎನ್ನುವುದು ಶಾಲೆಯ ಅಥವಾ ಹಬ್ಬ-ಹರಿದಿನಗಳ ಘಟನೆಗಳಿಗೆ ಸಂಬಂಧಿಸಿದಂತೆ ಇರುತ್ತದೆ. ಇಲ್ಲಿ ಒಂದು ಸರಳ ರೇಖಾತ್ಮಕ ಕಾಲ ಎನ್ನುವುದು ಇರುವುದಿಲ್ಲ. ಇಲ್ಲಿ ಘಟನೆಗಳು ಹಿಮ್ಮುಖವಾಗಿಯೂ, ಮುಮ್ಮುಖವಾಗಿಯೂ ಚಲಿಸುತ್ತಿರುತ್ತವೆ. ಅಂದರೆ ಭೂತ ಎನ್ನುವುದು ವರ್ತಮಾನವಾಗುವಾಗ ಮುಖ್ಯವಾಗುವ ಕಾಲ ಎಂದರೆ 'ಈಗ' ಅಷ್ಟೆ.

ಹಾಗಾದರೆ ಈ ಪಠ್ಯಗಳನ್ನು ಇಟ್ಟುಕೊಂಡು ಜಾತಿಯನ್ನು ಅರ್ಥೈಸಬಹುದೇ?

ಈ ಕೃತಿಗಳ ಲೇಖಕರಿಬ್ಬರಿಗೂ ಸಾಮಾಜಿಕವಾಗಿ ನಿಗದಿಯಾಗಿರುವ ಐಡೆಂಟಿಟಿ ಎನ್ನುವುದು ಗಾಢವಾದ ಅಸ್ಪೃಶ್ಯತೆಯ ಅವಮಾನವನ್ನುಂಟು ಮಾಡುವಂಥದ್ದು. ಇದು ಸಾರ್ವಜನಿಕವಾಗಿ ಯಾವುದೇ ಮುಲಾಜಿಲ್ಲದೆ ಇರುವಂಥದ್ದು. ಹೀಗಿರುವಾಗ ಇಂಥ ಅನುಭವವನ್ನು ಇಟ್ಟು ಜಾತಿ ಯನ್ನು ಸಾಮಾಜಿಕ ವಿಜ್ಞಾನಗಳು ವಿವರಿಸಿಕೊಂಡಿವೆ ಎಂಬುದನ್ನು ಪಾಂಡಿಯನ್ ಚರ್ಚೆಗೆ ತೆಗೆದುಕೊಳ್ಳುತ್ತಾರೆ. ಇದಕ್ಕೆ ಉದಾಹರಣೆಯಾಗಿ ಎಂ ಎನ್ ಶ್ರೀನಿವಾಸ್ ಪ್ರತಿಪಾದಿಸುವ ಪರಿಕಲ್ಪನೆಗಳಾದ **'ಸಂಸ್ಕೃತೀಕರಣ'** ಮತ್ತು **'ಪಾಶ್ಚಾತ್ಯೀಕರಣ'**ವನ್ನು ತೆಗೆದುಕೊಳ್ಳೋಣ. ಇವುಗಳ ಮೂಲಕ ಎಮ್ ಎನ್ ಶ್ರೀನಿವಾಸ್ ಜಾತಿಯ ಕ್ರಿಯಾಶೀಲತೆಯನ್ನು ವಿವರಿಸಿಕೊಳ್ಳುತ್ತಾರೆ. ಪಾಂಡಿಯನ್‌ರವರು ವಾದಿಸುವ ಪ್ರಕಾರ ಈ ಪರಿಕಲ್ಪನೆಗಳು ಇಂದು ಭಾರತೀಯ ಮಧ್ಯಮವರ್ಗಗಳ ಬದುಕಿನ ಭಾಗವಾಗಿವೆ. ಇದರಿಂದಾಗಿ ಜಾತಿ ಎನ್ನುವುದು ಭಾವನಾತ್ಮಕ ಸಂಗತಿ ಯಾಗಿ ಅಸ್ಪೃಶ್ಯತೆಯನ್ನು ಪೋಷಿಸುತ್ತದೆ. ಮೇಲಿನ ಕೃತಿಗ ಳೆರಡರಲ್ಲೂ ಸಹ ಜಾತಿ ಎನ್ನುವುದು ಒಂದು ರಾಜಕೀಯ ಪ್ರಶ್ನೆಯಾಗಿ ತಕ್ಷಣದ ಮಹತ್ವವನ್ನು ಪಡೆದುಕೊಂಡರೆ, ಎಂ. ಎನ್. ಶ್ರೀನಿವಾಸ್‌ರಲ್ಲಿ ಅದು ಇಂಥ ಯಾವುದೇ ನೈತಿಕ ಅಥವಾ ರಾಜಕೀಯ ಮಹತ್ವ ಇಲ್ಲದ್ದಾಗುತ್ತದೆ. ಆದ್ದರಿಂದ ಭಾರತೀಯ ಸಮಾಜ ವಿಜ್ಞಾನಗಳು ಜಾತಿ ಯನ್ನು ಕಾರ್ಯ-ಕಾರಣ ಸಂಬಂಧದಿಂದ ತೆಗೆದು ಬಿಟ್ಟು ಅದೊಂದು ತಾತ್ಕಾಲಿಕ ಸ್ವರೂಪದ್ದು ಎಂದುಬಿಡುತ್ತವೆ.

ದಲಿತ ಬದುಕಿನ ಜಾತಿ ಪ್ರತ್ಯಕ್ಷವಾದ ನೇರ ಅಪಮಾನದ, ಹಿಂಸೆಯ ಅನುಭವದಿಂದ ಕೂಡಿದ್ದಾಗಿದ್ದು, ಅದು ತನ್ನದೇ ಆದ ವಿಶಿಷ್ಟ ಅಭಿವ್ಯಕ್ತಿಯಾಗಿ ಕೃತಿಯಲ್ಲಿ ಹೊರಹೊಮ್ಮುತ್ತದೆ. ಆದರೆ ಇದು ಮೇಲ್ಜಾತಿಗಳಲ್ಲಿ ಎಲ್ಲೋ ಆಚೆಗಿನದ್ದು ಎಂದು ಕಾಣುತ್ತದೆ. ಇದಕ್ಕೆ ಒಂದು ಉದಾಹರಣೆಯೆಂದರೆ ಎಂ ಎನ್ ಶ್ರೀನಿವಾಸ್ ಎಂದೂ ಸಹ ತನ್ನ ಬ್ರಾಹ್ಮಣ ಜಾತಿಯ ಬಗ್ಗೆ ಬರೆದುಕೊಳ್ಳುವುದಿಲ್ಲ. ಆದರೆ ಯಾವಾಗ ಆತ ಬ್ರಾಹ್ಮಣ ಸಮಾಜಶಾಸ್ತ್ರಜ್ಞನೆಂದು ಟೀಕೆಗೆ ಒಳಗಾಗುತ್ತಾನೋ, ಆಗ ತನ್ನ ಜಾತಿಯ ಅನುಭವವನ್ನು ಸಕಾರಾತ್ಮಕ ಅನುಭವದ ಮೂಲಕ ವಿವರಿಸಿಕೊಳ್ಳುತ್ತಾನೆ ಹೀಗೆ ಹೇಳುವಾಗಲೂ ಆತ ಎಲ್ಲೂ ಸಹ ಜಾತಿ ಎನ್ನುವುದು ಇತರರಿಗೆ ಹಾನಿಯನ್ನುಂಟು ಮಾಡುವ ಸಂಗತಿ ಎಂದು ಬಗೆಯುವುದಿಲ್ಲ. ಬದಲಾಗಿ ದಕ್ಷತೆಯನ್ನು ಅಪಹರಿಸುವ ವಿಷಯವಾಗಿ ವರ್ಣಿತವಾಗುತ್ತದೆ. ಹೀಗೆ ಜಾತಿ ಎನ್ನುವುದು ತನ್ನೊಳಗಿನ ಸಮಸ್ಯೆಯಾ ಗದೆ ಇತರರ ಸಮಸ್ಯೆಯಾಗುತ್ತದೆ. ಇದೇ ಸಮಸ್ಯೆ ಪ್ರಸ್ತುತ ಸಾಮಾಜಿಕ ವಿಜ್ಞಾನಗಳಲ್ಲೂ ಎದ್ದು ಕಾಣುತ್ತದೆ. ಇಲ್ಲಿ ಯಾವುದು ನೈಜ ಎನ್ನುವುದು ಮರೆಯಾಗಿ ಅಸ್ಪಷ್ಟ ನಿಲುವುಗಳಲ್ಲೇ ಚಲಿಸಿಬಿಡುವಂತಾಗುತ್ತದೆ.

ಆದ್ದರಿಂದ, ದಲಿತ ಬದುಕಿನ ಜಾತಿ ಪ್ರತ್ಯಕ್ಷವಾದ ನೇರ ಅಪಮಾನದ, ಹಿಂಸೆಯ ಅನುಭವದಿಂದ ಕೂಡಿದ್ದಾಗಿದ್ದು, ಅದು ತನ್ನದೇ ಆದ ವಿಶಿಷ್ಟ ಅಭಿವ್ಯಕ್ತಿಯಾಗಿ ಕೃತಿಯಲ್ಲಿ ಹೊರಹೊಮ್ಮುತ್ತದೆ. ಆದರೆ ಇದು ಮೇಲ್ಜಾತಿಗಳಲ್ಲಿ ಎಲ್ಲೋ ಆಚೆಗಿನದ್ದು ಎಂದು ಕಾಣುತ್ತದೆ. ಇದಕ್ಕೆ ಒಂದು ಉದಾಹರಣೆಯೆಂದರೆ ಎಂ ಎನ್ ಶ್ರೀನಿವಾಸ್ ಎಂದೂ ಸಹ ತನ್ನ ಬ್ರಾಹ್ಮಣ ಜಾತಿಯ ಬಗ್ಗೆ ಬರೆದುಕೊಳ್ಳುವುದಿಲ್ಲ. ಆದರೆ ಯಾವಾಗ ಆತ ಬ್ರಾಹ್ಮಣ ಸಮಾಜಶಾಸ್ತ್ರಜ್ಞನೆಂದು ಟೀಕೆಗೆ ಒಳಗಾಗುತ್ತಾನೋ, ಆಗ ತನ್ನ ಜಾತಿಯ ಅನುಭವವನ್ನು ಸಕಾರಾತ್ಮಕ ಅನುಭವದ ಮೂಲಕ ವಿವರಿಸಿಕೊಳ್ಳುತ್ತಾನೆ (ಶ್ರೀನಿವಾಸ್ 1992: 152). ಹೀಗೆ ಹೇಳುವಾಗಲೂ ಆತ ಎಲ್ಲೂ ಸಹ ಜಾತಿ ಎನ್ನುವುದು ಇತರರಿಗೆ ಹಾನಿಯನ್ನುಂಟು ಮಾಡುವ ಸಂಗತಿ ಎಂದು ಬಗೆಯುವುದಿಲ್ಲ. ಬದಲಾಗಿ ದಕ್ಷತೆಯನ್ನು ಅಪಹರಿಸುವ ವಿಷಯವಾಗಿ ವರ್ಣಿತವಾಗುತ್ತದೆ. ಹೀಗೆ ಜಾತಿ ಎನ್ನುವುದು ತನ್ನೊಳಗಿನ ಸಮಸ್ಯೆಯಾಗದೆ ಇತರರ ಸಮಸ್ಯೆಯಾಗುತ್ತದೆ. ಇದೇ ಸಮಸ್ಯೆ ಪ್ರಸ್ತುತ ಸಾಮಾಜಿಕ ವಿಜ್ಞಾನಗಳಲ್ಲೂ ಎದ್ದು ಕಾಣುತ್ತದೆ. ಇಲ್ಲಿ ಯಾವುದು ನೈಜ ಎನ್ನುವುದು ಮರೆಯಾಗಿ ಅಸ್ಪಷ್ಟ ನಿಲುವುಗಳಲ್ಲೇ ಚಲಿಸಿಬಿಡುವಂತಾಗುತ್ತದೆ. ಹೀಗೆ ಥಿಯರಿ ಎನ್ನುವುದು ಅಂತಿಮವಾಗಿ ನಮ್ಮನ್ನು ಅಚಾರಿತ್ರಿಕ ನೆಲೆಗೆ ಕೊಂಡೊಯ್ಯುವ ಸಂಗತಿಯಾಗುತ್ತದೆ. ಆದರೆ ಕರುಕ್ಕು ಮತ್ತು ವಾಡು ಕೃತಿಗಳು ನಮ್ಮನ್ನು ಅಂಥ ಅಪಾಯಗಳಿಂದ ತಪ್ಪಿಸುವುದಲ್ಲದೆ, ಅವುಗಳು ಬಳಸುವ ಭಾಷೆಯಲ್ಲೇ ಜಾತಿಯ ಮತ್ತೊಂದು ಅನುಭವವನ್ನು ಪಡೆಯಲು ಮೇಲ್ಜಾತಿಗಳನ್ನು ತಮ್ಮೆಡೆ ಆಹ್ವಾನಿಸುತ್ತವೆ. ಅಂದರೆ ಈ ಕೃತಿಗಳು ಕಾರ್ಯ-ಕಾರಣ ಸಂಬಂಧದ ಸಂಕಥನದಿಂದ ಆಚೆಗೆ ಸಾಗಿ 'ಪಾಲ್ಗೊಳ್ಳುವಿಕೆಯ ಸಂಕಥನ'ವಾಗಿ ಮಾರ್ಪಡುತ್ತವೆ. ಇಲ್ಲೊಂದು ವಿಸ್ಮಯಕಾರಿ ಜಗತ್ತು ಅನಾವರಣಗೊಳ್ಳುತ್ತಾ ಓದುಗನಲ್ಲಿ ಒಂದು ಕಕ್ಕುಲಾತಿಯ ಭಾವವನ್ನು ಪ್ರಚೋದನೆಯಾಗುತ್ತದೆ. ಇದು ಏಕತರ್ಕದಲ್ಲಿ ಸಾಗುವ ತರ್ಕವನ್ನು ಭಂಜಿಸುವುದಲ್ಲದೆ ಅಂಥ ತರ್ಕದಲ್ಲಿನ ಹಿಂಸೆಯನ್ನು ತೋರಿಸಿಕೊಡುತ್ತದೆ. ಆದ್ದರಿಂದ ಕರುಕ್ಕು ಮತ್ತು ವಾಡುದಂಥ ಕೃತಿಗಳು, ಸಾಮಾಜಿಕ ವಿಜ್ಞಾನಗಳು ಏನನ್ನು ಸಾಧಿಸುವುದಿಲ್ಲವೋ ಅಂಥದನ್ನು ಯಾವುದೇ ದುರಂಹಕಾರವಿಲ್ಲದೆ ಸಾಧಿಸಿ ತೋರಿಸಿಬಿಡುತ್ತವೆ.

ಇಲ್ಲಿ ಒಂದು ಸಂಗತಿಯನ್ನು ಹಂಚಿಕೊಳ್ಳಲೇಬೇಕು. ಸಂವಾದದಲ್ಲಿ ಈ ಚರ್ಚೆಗಳು ಆರಂಭವಾಗುವ ಮೊದಲೇ ಕುವೆಂಪು ವಿ.ವಿ.ಯಲ್ಲಿನ **'ಕ್ಯಾಶ್'** (KASH) ಬಳಗ ಧರ್ಮವನ್ನು ಕುರಿತಂತೆ ದೆಹಲಿಯನ್ನು ಒಂದು ಅಂತರಾಷ್ಟ್ರೀಯ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಆ ವಿಚಾರ ಸಂಕಿರಣದ ಸಂಕ್ಷಿಪ್ತ ವರದಿಯನ್ನು ಸಂವಾದಕ್ಕೆ ಪ್ರಕಟಿಸಲು ಕಳುಹಿಸಲಾಗಿತ್ತು. ಆದರೆ ಆ ವರದಿ ಬ್ರಾಹ್ಮಣ್ಯವನ್ನು ಮತ್ತೆ ಸ್ಥಾಪಿಸುವ ಪಕ್ಕಾ ವರಸೆಯಾಗಿ ಕಂಡದ್ದರಿಂದ ಅದನ್ನು ಸಂವಾದ ಪ್ರಕಟಿಸಿರಲಿಲ್ಲ. □

ಸಾಮ್ರಾಜ್ಯಶಾಹಿ ಪದತಲದಲ್ಲಿ ಮಂಡಿಯೂರಿದ ಭಾರತ !

ಸಂಪಾದಕರೊಡನೆ ಸಂವಾದ

ಚಂದ್ರಭಾನ್ ಪ್ರಸಾದ ಆಲೋಚನೆಗಳೆಲ್ಲವೂ ಒಂದು ಪಾರ್ಶ್ವದಿಂದ ಹುಟ್ಟಿಕೊಂಡಿರುವಂತಹವು, ಇನ್ನೊಂದು ಪಾರ್ಶ್ವವನ್ನು ಗಮನಿಸದಿರುವುದು ದುರಂತ. ಅವರ ಆಸಕ್ತಿಗಳೆಲ್ಲಾ ಇರುವುದು ಐಷಾರಾಮಿ ಜೀವನದಡಿಯಲ್ಲಿ. ಈ ದೇಶದಲ್ಲಿ ಪ್ರತಿನಿತ್ಯ ಹಸಿವಿನಿಂದ ನರಳುವ ಜನರೆಡೆಗೆ ಒಂದೊತ್ತಿನ ಕೂಳಿಗಾಗಿ ತಮ್ಮ ಎಳೆ ಕಂದಮ್ಮಗಳನ್ನೇ ಮಾರಿ ಹೊಟ್ಟೆತುಂಬಿಸಿಕೊಳ್ಳುವ ಜನರೆಡೆಗೆ ಇವರ ಕಾಳಜಿ ಇರುವುದಿಲ್ಲ. ಅತಿಹೆಚ್ಚು ಕಾಲ ನಮ್ಮನ್ನಾಳಿರುವ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಗಳು, ಕೃಷಿ ನೀತಿ, ಹೊಸಕೈಗಾರಿಕಾ ನೀತಿ, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳು ಇವರ ಗಮನಕ್ಕೆ ಬಾರದಿರುವುದು ಈ ದೇಶದ ಜನಸಾಮಾನ್ಯರ ದುರ್ದೈವ. ಇವತ್ತು ಕಮ್ಯೂನಿಷ್ಟ ಪಕ್ಷಗಳು ವಿರೋಧಿಸುತ್ತಿರುವುದು ಹೆಚ್ಚಿನ ವಿದ್ಯುತ್ ಉತ್ಪಾದನೆಯನಲ್ಲ, ಬದಲಾಗಿ ಅಣುಒಪ್ಪಂದವನ್ನು ಏನು ಎಂಬುವದನ್ನು ಚಂದ್ರಭಾನ್ ಮೊದಲು ಅರ್ಥಮಾಡಿಕೊಳ್ಳಬೇಕು.

ಎಂ. ಸಿ. ನಿಂಗಪ್ಪ

ಸಂವಾದ ಸೆಪ್ಟೆಂಬರ್ ಸಂಚಿಕೆಯಲ್ಲಿ ಚಂದ್ರಭಾನ್ ಪ್ರಸಾದ 'ದಲಿತ ಡೈರಿ' ಎತ್ತಿರುವ ಪ್ರಶ್ನೆಗಳು ಮತ್ತು ವಾದ ಮಂಡಿಸುವ ರೀತಿ ಎಲ್ಲವೂ ಅವರು ಯಾವ ಶಕ್ತಿಗಳ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಿದ್ದಾರೆನ್ನುವದನ್ನು ಸ್ಪಷ್ಟಗೊಳಿಸುತ್ತದೆ. ಹಾಗೆ ಅವರು ಲೇಖನದುದ್ದಕ್ಕೂ ಕಾಂಗ್ರೆಸ್ ಪರ ವಕಾಲತ್ತು ವಹಿಸಿರುವುದು ಮುಚ್ಚಿಡಲು ಸಾಧ್ಯವಿಲ್ಲ. ವಿಷಯಗಳ ಆಳ ಅಧ್ಯಯನವಿಲ್ಲದಿರುವುದು ಕೆಲವು ಅಂಶಗಳಲ್ಲಿ ಸ್ಪಷ್ಟವಾಗಿದೆ

ಮೊದಲನೇಯದಾಗಿ ಬಿಜೆಪಿ ಮತ್ತು ಕಮ್ಯೂನಿಷ್ಟ್ ಪಕ್ಷಗಳಿಗೆ ಇರುವ ಮೂಲಭೂತ ಸೈದ್ಧಾಂತಿಕ ಭಿನ್ನತೆಗಳನ್ನು ಗುರುತಿಸುವಲ್ಲಿ ಅವರು ವಿಫಲರಾಗಿದ್ದಾರೆ. ಎರಡೂ ಶಕ್ತಿಗಳು ಉತ್ತರ ದಕ್ಷಿಣ ಧ್ರುವಗಳಿದ್ದಂತೆ ಅವು ಯಾವತ್ತೂ ಒಂದೇ ಬಿಂದುವಿನಲ್ಲಿ ಕೇಂದ್ರೀಕೃತಗೊಳ್ಳುವುದಿಲ್ಲ. ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಷ್ಟು ಕಾಲ ವಿಶ್ವಸಂಸ್ಥೆ, ಐಎಂಎಫ್, ಅಮೇರಿಕನ್ ಸಾಮ್ರಾಜ್ಯಶಾಹಿ ನಿರ್ದೇಶನದಂತೆ ತನ್ನ ನೀತಿಗಳನ್ನು ರೂಪಿಸುತ್ತಿತ್ತೇನ್ನುವುದು ಭಾರತೀಯ ರಾಜಕಾರಣವನ್ನು ಗಂಭೀರವಾಗಿ ಗಮನಿಸುವವರೆಲ್ಲರಿಗೂ ತಿಳಿದಿರುವಂತಹದೇ.

ಕಮ್ಯೂನಿಷ್ಟ್ ಪಕ್ಷಗಳು ಎಂದಾದರೂ ಅಮೇರಿಕಾವನ್ನು ಸ್ನೇಹಿತನಂತೆ ಕಾಣಲು ಸಾಧ್ಯವೇ? ಇಂತಹ ಮೂಲಭೂತ ಅಂಶಗಳನ್ನು ಅರ್ಥೈಸಿಕೊಳ್ಳಲು ಚಂದ್ರಭಾನ್‌ರವರು ಸೋತಿದ್ದಾರೆ. ಈಗ ತೀವ್ರ ವಿವಾದಕ್ಕೆ ಒಳಗಾಗಿರುವ ಅಣುಒಪ್ಪಂದ ಪ್ರಶ್ನೆಯನ್ನು ಕೇವಲ ವಿದ್ಯುತ್ ಉತ್ಪಾದನೆಯಲ್ಲ, ಬದಲಾಗಿ ಅದು ಈ ದೇಶದ ಸಾರ್ವಭೌಮತೆಯ ಪ್ರಶ್ನೆಯೆನ್ನುವುದನ್ನು ಮಾನ್ಯ ಪ್ರಸಾದರವರಿಗೆ ಯಾರು ಹೇಳಬೇಕು? ಅಣು ಒಪ್ಪಂದದ ಕುರಿತು ಮಾತನಾಡುವ ನಾವೆಲ್ಲರೂ 123ಒಪ್ಪಂದದಲ್ಲಿ ಅಡಗಿರುವ ನಮ್ಮ ದೇಶದ ರಕ್ಷಣಾವಲಯ, ಶಿಕ್ಷಣ, ಕೃಷಿ ವಲಯದ ಮೇಲೆ ಬೀರಬಹುದಾದ ಪರಿಣಾಮಗಳನ್ನು ಅರ್ಥೈಸಿಕೊಳ್ಳಲಾರದೇ ಹೋದರೆ ತುಂಬಾ ದೊಡ್ಡ ತಪ್ಪೇ ಮಾಡಿದಂತಾಗುತ್ತದೆ.

ಚಂದ್ರಭಾನ್ ಪ್ರಸಾದ ಆಲೋಚನೆಗಳೆಲ್ಲವೂ ಒಂದು ಪಾರ್ಶ್ವದಿಂದ ಹುಟ್ಟಿಕೊಂಡಿರುವಂತಹವು, ಇನ್ನೊಂದು ಪಾರ್ಶ್ವವನ್ನು ಗಮನಿಸದಿರುವುದು ದುರಂತ. ಅವರ ಆಸಕ್ತಿಗಳೆಲ್ಲಾ ಇರುವುದು ಐಷಾರಾಮಿ ಜೀವನದಡಿಯಲ್ಲಿ. ಈ ದೇಶದಲ್ಲಿ ಪ್ರತಿನಿತ್ಯ ಹಸಿವಿನಿಂದ ನರಳುವ ಜನರೆಡೆಗೆ ಒಂದೊತ್ತಿನ ಕೂಳಿಗಾಗಿ ತಮ್ಮ ಎಳೆ ಕಂದಮ್ಮಗಳನ್ನೇ ಮಾರಿ ಹೊಟ್ಟೆ ತುಂಬಿಸಿಕೊಳ್ಳುವ ಜನರೆಡೆಗೆ ಇವರ ಕಾಳಜಿ ಇರುವುದಿಲ್ಲ. ಇಂತಹ ಹಲವು ಸಮಸ್ಯೆಗಳಿಗೆ ಕಾರಣವಾದ ಸ್ವಾತಂತ್ರ ನಂತರದಲ್ಲಿ ಅತಿಹೆಚ್ಚು ಕಾಲ ನಮ್ಮನ್ನಾಳಿರುವ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಗಳು, ಕೃಷಿ ನೀತಿ, ಹೊಸಕೈಗಾರಿಕಾ ನೀತಿ, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳು ಇವರ ಗಮನಕ್ಕೆ ಬಾರದಿರುವುದು ಈ ದೇಶದ ಜನಸಾಮಾನ್ಯರ ದುರ್ದೈವ.

ಇವತ್ತು ಕಮ್ಯೂನಿಷ್ಟ ಪಕ್ಷಗಳು ವಿರೋಧಿಸುತ್ತಿರುವುದು ಹೆಚ್ಚಿನ ವಿದ್ಯುತ್ ಉತ್ಪಾದನೆಯನಲ್ಲ, ಬದಲಾಗಿ ಅಣುಒಪ್ಪಂದವನ್ನು ಏನು ಎಂಬುವದನ್ನು ಚಂದ್ರಭಾನ್ ಮೊದಲು ಅರ್ಥಮಾಡಿಕೊಳ್ಳಬೇಕು.

ಭಾರತ ಪ್ರಸ್ತುತ 1,43,000 ಮೆಗಾವ್ಯಾಟ್ ವಿದ್ಯುತ್‌ನ್ನು ಉತ್ಪಾದಿಸುತ್ತಿದೆ. ಇದರಲ್ಲಿ 4,120ಮೆಗಾವ್ಯಾಟ್ ಅಂದರೆ ಒಟ್ಟು ಉತ್ಪಾದನೆಯ ಶೇ. 3ರಷ್ಟು ಮಾತ್ರ ಭಾರತೀಯ ಪರಮಾಣುವಿನಿಂದ ಉತ್ಪಾದಿಸಲಾಗುತ್ತಿದೆ. ಕಲ್ಲಿದ್ದಲಿನಿಂದ ಶೇ. 55ರಷ್ಟು, ಜಲಸಂಪನ್ಮೂಲ ಬಳಸಿ ಶೇ.25ರಷ್ಟು ವಿದ್ಯುತ್ತ್‌ನ್ನು ಉತ್ಪಾದಿಸಲಾಗುತ್ತಿದೆ. ಭಾರತಕ್ಕೆ ಇನ್ನೂ ನೂರುವರ್ಷಗಳಿಗೆ ಬೇಕಾಗುವ ವಿದ್ಯುತ್ತ್‌ನ್ನು ಉತ್ಪಾದಿಸಲು ಬೇಕಾಗುವ ಕಲ್ಲಿದ್ದಲಿನ ಖನಿಜ ಸಂಪತ್ತು ಹೇರಳವಾಗಿದ್ದಲ್ಲದೇ, ಜಲ ಸಂಪತ್ತನ್ನು ಬಳಸಿಕೊಂಡು ವಿದ್ಯುತ್ತ್ ಉತ್ಪಾದಿಸಬಹುದು.

ಹೀಗೆ ವಿದ್ಯುತ್ ಉತ್ಪಾದಿಸುವಾಗ ಒಂದೊಂದು ವಿಧಾನಕ್ಕೆ ತಗಲುವ ಖರ್ಚಾದರೂ ಎಷ್ಟು? ಕಲ್ಲಿದ್ದಲಿನಿಂದ ಉತ್ಪಾದಿಸಲಾಗುವ ಒಂದು ಯೂನಿಟ್ ವಿದ್ಯುತ್ತ್‌ಗೆ ರೂ.2.50 ಅದೇ ಪರಮಾಣುವಿನಿಂದ ಉತ್ಪಾ ದಿಸಲಾಗುವ ಒಂದು ಯೂನಿಟ್ ವಿದ್ಯುತ್ತ್‌ಗೆ ರೂ.5.10ರಿಂದ 5.50ವರೆಗೆ ಖರ್ಚಾಗುತ್ತದೆ. ದೇಶಿಯ ಸಂಪನ್ಮೂಲಗಳನ್ನು ಬಳಸಿ ಕೊಂಡು ನಮಗೆ ಬೇಕಾದಷ್ಟು ವಿದ್ಯುತ್ತ್‌ನ್ನು ಉತ್ಪಾದಿಸಬಹುದು. ಆದರೆ, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಪರಮಾಣು ಒಪ್ಪಂದದ ಹಿಂದೆ ಬಿದ್ದಿರುವುದಾದರೂ ಯಾಕೆ ಎನ್ನುವುದು ಪ್ರಶ್ನೆ. ಇವತ್ತು ಈ ದೇಶದ ಎಲ್ಲಾ ನೀತಿಗಳನ್ನು ನಿರ್ದೇಶಿಸುತ್ತಿರುವುದು ಅಮೇರಿಕಾವೇ ಎನ್ನುವುದು ಇವತ್ತಿನ ರಾಜಕೀಯ ವಿದ್ಯಮಾನಗಳನ್ನು ಗಮನಿಸಿದರೆ ಯಾರಿಗಾದರೂ ಅರ್ಥವಾಗುತ್ತದೆ. ಹೀಗಾಗಿ ಅಮೇ ರಿಕಾವನ್ನು ಸಂತೃಪ್ತಿಗೊಳಿಸಲು ಯುಪಿಎ ಸರ್ಕಾರ ಅಣುಒಪ್ಪಂದದ ಹಿಂದೆ ಬಿದ್ದಿದೆ.

ಮುಖ್ಯವಾಗಿ ಗಮನಿಸಬೇಕಾಗಿರುವುದು ಭಾರತಕ್ಕೆ ಒದಗಿಸುತ್ತಿರುವ ಪರಮಾಣುವನ್ನು ಅಮೇರಿಕಾ ಅದು ತನ್ನ ದೇಶದಲ್ಲಿ ಯಾವ ರೀತಿ ಬಳಸಿಕೊಳ್ಳುತ್ತಿದೆ ಎನ್ನುವುದು ಗಮನಿಸಬೇಕು. 1996ರಿಂದ ಈಚೆಗೆ ಅಮೇರಿಕಾದಲ್ಲಿ ಯಾವುದೇ ಪರಮಾಣು ರಿಯಾಕ್ಟರುಗಳು ಆರಂಭವಾಗಿಲ್ಲ. ಹಾಗೆ, ಕಳೆದ 27ವರ್ಷಗಳಿಂದ ಯಾವುದೇ ಹೊಸ ರಿಯಾಕ್ಟರುಗಳಿಗೆ ಅಲ್ಲಿನ ಸರ್ಕಾರ ಲೈಸನ್ಸ್ ನೀಡಿಲ್ಲ. ಹೀಗಾಗಿ ಅಮೇರಿಕಾದಲ್ಲಿನ ಪರಮಾಣು ಉದ್ದಿಮೆಗಳು ಹೊಸ ಆರ್ಡರ್‌ಗಳಿಲ್ಲದೇ ತೊಳಲಾಡುತ್ತಿವೆ. ಆದರೆ, ಈಗ ನಡೆಯುತ್ತಿರುವ ಅಣುಒಪ್ಪಂದ ಅಲ್ಲಿಯ ಉದ್ದಿಮೆಗಳಿಗೆ ಹೊಸ ಆಸೆ ಮೂಡಿಸಿದೆ. ಆ ಮೂಲಕ ಕೋಟ್ಯಾಂತರ ಡಾಲರ್‌ಗಳ ಮೌಲ್ಯದ ರಿಯಾಕ್ಟರುಗಳನ್ನು ಭಾರತಕ್ಕೆ ಮಾರುವ ಖುಷಿಯಲ್ಲಿವೆ. ನಮ್ಮ ದೇಶದ ಪ್ರಧಾನ ಮಂತ್ರಿ ಮನಮೋಹನಸಿಂಗ್‌ರವರು ಅಮೇರಿಕಾ ಮತ್ತು ಜಾರ್ಜ್‌ಬುಷ್‌ರನ್ನು ಹಾಡಿ ಹೊಗಳುತ್ತಿದ್ದಾರೆ. ಅವರಿಗೆ ಭಾರತೀಯ ಜನತೆಯ ಬಗ್ಗೆ ಕಾಳಜಿ, ಕನಿಕರವಿದೆ ಎನ್ನುತ್ತಾರೆ. ಆದರೆ, ಅಮೇರಿಕಾಕ್ಕೆ ಭಾರತದ ಅಭಿವೃದ್ಧಿಯ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ ಇರಾನ್, ಪಾಕಿಸ್ತಾನ ಮತ್ತು ಭಾರತ ಮೂರು ದೇಶಗಳಲ್ಲಿ ನಡೆಯುತ್ತಿರುವ ಅನಿಲ ಕೊಳವೆ ಮಾರ್ಗ ಒಪ್ಪಂದಕ್ಕೆ ಸಹಿ ಹಾಕದಂತೆ ತಡೆಹಿಡಿಯುತ್ತಿರುವುದ್ಯಾಕೆನ್ನುವುದನ್ನು ಅಣುಒಪ್ಪಂದದ ಪರ ವಕಾಲತ್ತು ವಹಿಸುವವರು ಯೋಚಿಸಬೇಕಾಗಿದೆ.

ಅಣು ಒಪ್ಪಂದದ 123 ಒಳಗೆ ಅಮೇರಿಕಾ ಮತ್ತು ಭಾರತ ಸಾಮರಿಕ

ಒಪ್ಪಂದವು ಅಡಕವಾಗಿದೆನ್ನು ವುದೆನ್ನು ಒಪ್ಪಂದದ ಪರ ವಾದಿಸುವವರು ಉದ್ದೇಶಪೂರ್ವಕವಾಗಿ ಮರೆಮಾಚುತ್ತಾರೆ. ಜೂನ್ 28 2005 ವಾಷಿಂಗಟನ್ ಭಾರತ ಮತ್ತು ಅಮೇರಿಕಾದ ಮಧ್ಯೆ ನಡೆದ ಸಭೆಯಲ್ಲಿ "ಭಾರತ ಅಮೇರಿಕಾ ರಕ್ಷಣಾ ಸಂಬಂಧಗಳ ಹೊಸಚೌಕಟ್ಟು" ಎಂಬ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಇದರೊಳಗೆ ಭಾರತ ಮತ್ತು ಅಮೇರಿಕಾದ ಜಂಟಿ ಸಮರಾಭ್ಯಾಸಗಳು ಜಂಟಿಯೋಜನೆಗಳು, ಬೇರೆ ದೇಶಗಳಲ್ಲಿ ಜಂಟಿ ಕಾರ್ಯಾಚರಣೆಗಳು ಮತ್ತು ರಕ್ಷಣಾ ಖರೀದಿಗಳು, ಸಾಮರಿಕ ಮಿಲಿಟರಿ ಸಂಬಂಧಗಳು ಸೇರಿವೆ. ಇದರ ಭಾಗವಾಗಿ ಮನಮೋಹನಸಿಂಗ್‌ರವರು ಜಾರ್ಜ ಬುಷ್‌ನೊಂದಿಗೆ "ಸೈನಿಕ ಜಮಾವಣೆ ಮತ್ತು ಸೇವಾ" ಒಪ್ಪಂದ (Acquisition & cross servicing agree mint.)ACSA ಒಪ್ಪಂದ ಎನ್ನಲಾಗುತ್ತಿದೆ.

ಇದರ ಒಟ್ಟು ಉದ್ದೇಶವಿಷ್ಟೇ ಅಮೇರಿಕಾದ ಹಡಗು ಮತ್ತು ವಿಮಾನಗಳಿಗೆ ಇರಾನ್ ಮತ್ತಿತರ ರಾಷ್ಟ್ರಗಳ ಮೇಲೆ ಯುದ್ಧ ಹೂಡುವಂತ ಸಂಧರ್ಭದಲ್ಲಿ ನಮ್ಮ ದೇಶದಲ್ಲಿ ತಂಗಲು ಅವಕಾಶ ಮಾಡಿಕೊಡುವುದು ಮತ್ತು ಅವುಗಳಿಗೆ ಇಂಧನ ತುಂಬಿ ಕಳುಹಿಸುವುದಾಗಿದೆ. ಇನ್ನು 123 ಒಪ್ಪಂದದಿಂದಾಗಿ ಅಮೇರಿಕಾದ ಮಿಲಿಟರಿ ಉತ್ಪಾದಕರು ಭಾರತದಿಂದ ರಕ್ಷಣಾ ಕಾಂಟ್ರಾಕ್ಟುಗಳನ್ನು ದಕ್ಕಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ಈಗ ಭಾರತಕ್ಕೆ 126 ಬಹುಪಾತ್ರಗಳ ಯುದ್ಧ ವಿಮಾನಗಳ ಖರೀದಿಯ ಜಾಗತಿಕ ಟೆಂಡರ್ ಕರೆಯುವ ನೀರಿಕ್ಷೆಯಿದೆ. ಇದು 45ಸಾವಿರ ಕೋಟಿರೂಪಾಯಿ ಬಹುದೊಡ್ಡ ವ್ಯವಹಾರ. ವಿಶ್ವದ ವಿಮಾನ ಉತ್ಪಾದಕರು ಭಾರತಕ್ಕೆ ತಮ್ಮ ಉತ್ಪಾದನೆಗಳನ್ನು ಮಾರಲು ತುದಿಗಾಲ ಮೇಲೆ ನಿಂತಿದ್ದಾರೆ. ಅಮೇರಿಕಾದ ಲಾಕ್ ಹೀಡ್-ಮಾರ್ಟಿನ್ ವಿಮಾನ ಉತ್ಪಾದನಾ ಸಂಸ್ಥೆ ತಮ್ಮ ಎಫ್/ಎ 18 ಹಾಗೂ ಎಫ್-16 ಯುದ್ಧ ವಿಮಾನಗಳನ್ನು ಮಾರಲು ಈ ಅಣುಒಪ್ಪಂದವನ್ನು ಬಳಸಿಕೊಳ್ಳುತ್ತಿದ್ದಾರೆನ್ನುವುದು ಸ್ಪಷ್ಟವಾಗಿದೆ.

ಭಾರತ 2007ರಿಂದ 2012ರ ಅವಧಿಯಲ್ಲಿ 30 ಬಿಲಿಯನ್ ಡಾಲರ್ ಅಥವಾ 1,35,000 ಕೋಟಿ ರೂಪಾಯಿಗಳ ಖರೀದಿ ವ್ಯವಹಾರ ನಡೆಸುವ ನೀರಿಕ್ಷೆಯಿದೆ. ಅಮೇರಿಕಾ ತನ್ನ ಹಳೆಯ ಐಎಸ್‌ಎಸ್ ಜಲಾಶ್ವ! ಯುದ್ಧ ನೌಕೆಯನ್ನು ಯುಎಸ್‌ಎಸ್ ಟ್ರೆಂಟನ್‌ಗೆ ಹೊಸ ರೂಪ ಕೊಟ್ಟು ಅದನ್ನು ಭಾರತಕ್ಕೆ 480ಮಿಲಿಯನ್ ಡಾಲರುಗಳಿಗೆ ಅಂದರೆ 2160ಕೋಟಿಗಳಿಗೆ ಮಾರಲಾಗಿದೆ. ಹಾಗೆ ಸಿ130ಜೆ ಮಿಲಿಟರಿ ಸಾಗಾಣಿಕೆ 6ವಿಮಾನಗಳು 1ಬಿಲಿಯನ್ ಡಾಲರ್ ಅಂದರೆ 4500ಕೋಟಿ. ಇನ್ನು 6ವಿಮಾನಗಳನ್ನು ಖರೀದಿಸುವ ಸಾಧ್ಯತೆಗಳಿವೆ. 200ಮಿಲಿಯನ್ ಡಾಲರುಗಳ ಮೌಲ್ಯದ 12ಶಸ್ತ್ರಾಸ್ತ್ರಗಳನ್ನು ಅಮೇರಿಕಾದ ರೆಥಿಯಾನ್‌ನಿಂದ ಖರೀದಿಸಲಾಯಿತು. ಲಾಕ್‌ಹೀಡ್-ಮಾರ್ಟಿನ್‌ನಿಂದ 650ಮಿಲಿಯ ಡಾಲರುಗಳಲ್ಲಿ ಪಿ3-ಸಿಬಿರಿಯನ್ ನೌಕಾಕಣ್ಣಾಗಾವಲು ವಿಮಾನಗಳನ್ನು ಖರೀದಿಸುವ ಮತ್ತು ರೆಥಿಯಾನ್‌ನಿಂದ ಪೆಟ್ರೇಯಿಟ್ ಪಿಎಸಿ-3 ಕ್ಷಿಪಣಿ ನಿರೋಧಕ ವ್ಯವಸ್ಥೆಗಳನ್ನು ಖರೀದಿಸುವ ಬಗ್ಗೆ ಮಾತುಕತೆಗಳು ನಡೆಯುತ್ತಿವೆ.

ಕೆಲವರು ಈ ಅಣುಒಪ್ಪಂದದ ಮಾತನಾಡುವಾಗ ಮಾಜಿರಾಷ್ಟ್ರಪತಿಗಳಾಗಿದ್ದ ವಿಜ್ಞಾನಿಗಳಾದ ಡಾ॥ ಎ.ಪಿ.ಜೆ. ಅಬ್ದುಲ್‌ಕಲಾಂರ ಹೇಳಿಕೆಗಳನ್ನು ಉದ್ಗರಿಸಿ ತಮ್ಮ ವಾದವನ್ನು ಸಮರ್ಥಿಸಿಕೊಳ್ಳುತ್ತಾರೆ. ಅವರಿಗೆ ಮುಖ್ಯವಾಗಿ ತಿಳಿದಿರಬೇಕಾದ ಸಂಗತಿ ಡಾ॥ ಕಲಾಂರವರು ಪರಮಾಣು ತಜ್ಞರಲ್ಲ ಬದಲಾಗಿ ಅವರು ಕ್ಷಿಪಣಿ ತಜ್ಞರೆಂಬುವುದನ್ನು ಗಮನದಲ್ಲಿಡಬೇಕು. ಇವತ್ತು ಅಣುಒಪ್ಪಂದವನ್ನು ಗಂಭೀರವಾಗಿ ವಿರೋಧಿಸುತ್ತಿರುವವರು ಕೇವಲ ಕಮ್ಯೂನಿಷ್ಟ ಪಾರ್ಟಿಗಳು ಮಾತ್ರವಲ್ಲ ಸ್ವತಃ ಪರಮಾಣು ವಿಜ್ಞಾನಿಗಳಾದ ಅಣುಶಕ್ತಿ ಆಯೋಗದ ಮಾಜಿ ಅಧ್ಯಕ್ಷ ಡಾ॥ ಪಿ.ಕೆ ಅಯ್ಯಂಗಾರ, ಅಣುಶಕ್ತಿ ನಿಯಂತ್ರಣ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ॥ ಎ. ಗೋಪಾಲಕೃಷ್ಣನ್ ಮತ್ತು ಬಾಬಾ ಅಣುಶಕ್ತಿ ಕೇಂದ್ರ ಮಾಜಿ ನಿರ್ದೇಶಕ ಡಾ॥ ಎ.ಎಸ್. ಪ್ರಸಾದ ಈ ಒಪ್ಪಂದವನ್ನು ವಿರೋಧಿಸಿ ಸಂಸತ್ ಸದಸ್ಯರಿಗೆ ಪತ್ರ ಬರೆದಿರುವುದನ್ನು ಉದ್ದೇಶಪೂರ್ವಕವಾಗಿ ಜನರಿಂದ ಮರೆಮಾಚಲಾಗುತ್ತಿದೆ ಇದು ಅಣುಒಪ್ಪಂದದ ಒಳತಿರುಳು.

ಎಡಪಕ್ಷಗಳು ಕಾಂಗ್ರೇಸ್‌ಗೆ ಬೆಂಬಲ ನೀಡಿರುವುದು ಬಿಜೆಪಿಯನ್ನು ಅಧಿಕಾರದಿಂದ ದೂರವಿಡಬೇಕೆಂಬ ಕಾರಣಕ್ಕಾಗಿ ಆಗಂತ ಕಾಂಗ್ರೇಸ್ ಮನಸೋಇಚ್ಚೇ ವರ್ತಿಸಿದರೇ, ಕಮ್ಯೂನಿಷ್ಟ ಪಕ್ಷಗಳು ಸುಮ್ಮನೆ ಕೂಡಲಾಗುವುದಿಲ್ಲ. ಬೆಂಬಲ ನೀಡಿದ್ದು ಸಾಮಾನ್ಯ ಕನಿಷ್ಠ ಕಾರ್ಯಕ್ರಮ. ಅದರ ಭಾಗವಾಗಿ ಒಂದಿಷ್ಟು ಉದ್ದಿಮೆಗಳು ಇನ್ನೂ ಸಾರ್ವಜನಿಕ ಒಡೆತನದಲ್ಲಿ ಉಳಿದುಕೊಂಡಿರುವುದು. ಅಶಕ್ತ ಜನಸಮುದಾಯದ ಒಂದೊತ್ತಿನ ಗಂಜಿಗೆ ಸಹಾಯವಾಗಬಹುದಾದ ಉದ್ಯೋಗಖಾತ್ರಿ ಯೋಜನೆ ಕಮ್ಯೂನಿಷ್ಟ ಪಾರ್ಟಿಗಳಿಂದಾಗಿ ಜಾರಿಯಾಗಿದೆಯೆಂಬುವುದನ್ನು ಅರ್ಥಮಾಡಿಕೊಳ್ಳಬೇಕು.

ಕಮ್ಯೂನಿಷ್ಟರಿಗೆ ಅಧಿಕಾರದ ಆಸೆ ಇಲ್ಲದಿರುವುದರಿಂದಾಗಿ ಜ್ಯೋತಿಬಸುರವರು ಪ್ರಧಾನಮಂತ್ರಿ ಆಗುವ ಅವಕಾಶವನ್ನು ಮನೆ ಬಾಗಿಲಿಗೆ ಬಂದಾಗಲೂ ಕೂಡ ತಿರಸ್ಕರಿಸಲಾಯಿತು. ಅಧಿಕಾರದ ಬೆನ್ನುಹತ್ತಿದ ಸೋಮನಾಥ ಚಟರ್ಜಿಯವರನ್ನು ಪಕ್ಷದಿಂದ ಹೊರಹಾಕಲಾಯಿತು. ಬೆಂಗಳೂರು ಬ್ರಾಹ್ಮಣ, ಕೇರಳ ಶೂದ್ರ ಸಿಪಿಐ(ಎಂ) ಎನ್ನುವುದು ಚಂದ್ರಬಾನ್ ಪ್ರಸಾದರವರ ಕಲ್ಪನೆಯಷ್ಟೆ. ಒಂದಿಡೀ ಅನ್ನಕ್ಕಾಗಿ, ಒಂದು ಸೂರಿಗಾಗಿ ಬಡೆದಾಡುವ ಜನರನ್ನು ಸಂಘಟಿಸಿ ಅವರ ಅಗತ್ಯಗಳಿಗೆ ಸ್ಪಂದಿಸುವುದು ಸಿ.ಪಿ.ಐ(ಎಂ)

ಚಂದ್ರಭಾನ್‌ರವರು ಹೇಳುವಂತೆ ಸಿ.ಪಿ.ಐ(ಎಂ) ಸ್ಥಾಪನೆಯಾದ್ದು 1928ಅಲ್ಲ. ಬದಲಾಗಿ 1964ರಲ್ಲಿ. ಪಕ್ಷ ಹುಟ್ಟಿ ಕೇವಲ 44ವರ್ಷಗಳು ಆಸ್ಸುವದನ್ನು ಅವರು ಗಮನಿಸಬೇಕು. ಅವರು ಸಿಪಿಐ(ಎಂ) ಮತ್ತು ಬಿಜೆಪಿಗೂ ಇರುವ ಸೈದ್ಧಾಂತಿಕ ವೈರುಧ್ಯಗಳನ್ನು ಅರ್ಥ ಮಾಡಿಕೊಳ್ಳುವ ಅನಿವಾರ್ಯತೆಯಿದೆ.

ಅವರ ಈ ಮಾತುಗಳನ್ನೇ ಗಮನಿಸಿ. "ಅಮೇರಿಕಾದೊಂದಿಗಿನ ಸ್ನೇಹ ಮತ್ತು ಭಾರತೀಯ ಪಾಶ್ಚಾತೀಕರಣ" ಕುರಿತು ಬಿಜೆಪಿ ಮತ್ತು ಎಡಪಕ್ಷಗಳಿಗೆ ಸಮಾನ ಅಭಿಪ್ರಾಯಗಳಿವೆ ಎನ್ನುತ್ತಾರೆ. ಅದೆಷ್ಟು ಅಸಂಬದ್ಧ ತಿಳುವಳಿಕೆ ಎಂದರೆ ಎಂದಾದರೂ ಕಮ್ಯೂನಿಷ್ಟ ಪಕ್ಷಗಳು ಅಮೇರಿಕಾಕ್ಕೆ ಸ್ನೇಹಹಸ್ತ ಚಾಚುವುದು ಸಾಧ್ಯವೇ. ಇದೆಂತ ಬಾಲಿಶತನದ ಆಲೋಚನೆ ಎಂದೆನಿಸು ವುದಿಲ್ಲವೇ. ಅವರು ಯಾವುದನ್ನು ಸ್ಪಷ್ಟವಾಗಿ ಅರ್ಥೈಸಿ ಕೊಳ್ಳದೇ ಪೂರ್ವಾಗ್ರಹ ಪೀಡಿತರಾಗಿ ವಾದ ಮಂಡಿಸುವ ಬದಲಾಗಿ ಎಲ್ಲವನ್ನು ಸಮಗ್ರವಾಗಿ ಅಧ್ಯಯನ ಮಾಡಿ ಅರ್ಥೈಸಿಕೊಳ್ಳಬೇಕು. ಇಲ್ಲದಿದ್ದರೆ ಅದು ಒಣ ಪಾಂಡಿತ್ಯವಾಗುತ್ತದೆ ಎನ್ನುವದನ್ನು ನೆನಪಿನಲ್ಲಿಡಬೇಕು. □

ಭಾರತ ಪ್ರಸ್ತುತ 1,43,000 ಮೆಗಾ ವ್ಯಾಟ್ ವಿದ್ಯುತ್‌ನ್ನು ಉತ್ಪಾದಿಸುತ್ತಿದೆ. ಇದರಲ್ಲಿ 4,120ಮೆಗಾವ್ಯಾಟ್ ಅಂದರೆ ಒಟ್ಟು ಉತ್ಪಾದನೆಯ ಶೇ. 3ರಷ್ಟು ಮಾತ್ರ ಭಾರತೀಯ ಪರಮಾಣುವಿನಿಂದ ಉತ್ಪಾದಿಸಲಾಗುತ್ತಿದೆ. ಕಲ್ಲಿದ್ದಲಿನಿಂದ ಶೇ. 55 ರಷ್ಟು, ಜಲಸಂಪನ್ಮೂಲ ಬಳಸಿ ಶೇ.25 ರಷ್ಟು ವಿದ್ಯುತ್‌ನ್ನು ಉತ್ಪಾದಿಸಲಾಗುತ್ತಿದೆ. ಭಾರತಕ್ಕೆ ಇನ್ನು ನೂರು ವರ್ಷಗಳಿಗೆ ಬೇಕಾಗುವ ವಿದ್ಯುತ್‌ನ್ನು ಉತ್ಪಾದಿಸಲು ಬೇಕಾಗುವ ಕಲ್ಲಿದ್ದಲಿನ ಖನಿಜ ಸಂಪತ್ತು ಹೇರಳವಾಗಿದ್ದಲ್ಲದೇ, ಜಲಸಂಪತ್ತನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸಬಹುದು. ಹೀಗೆ ಒಂದೊಂದು ವಿಧಾನಕ್ಕೆ ತಗಲುವ ಖರ್ಚಾದರೂ ಎಷ್ಟು? ಕಲ್ಲಿದ್ದಲಿನಿಂದ ಉತ್ಪಾದಿಸಲಾಗುವ ಒಂದು ಯೂನಿಟ್ ವಿದ್ಯುತ್ತ್‌ಗೆ ರೂ.2.50 ಅದೇ ಪರಮಾಣುವಿನಿಂದ ಉತ್ಪಾದಿಸಲಾಗುವ ಒಂದು ಯೂನಿಟ್ ವಿದ್ಯುತ್ತ್‌ಗೆ ರೂ.5. 10ರಿಂದ 5.50ವರೆಗೆ ಖರ್ಚಾಗುತ್ತದೆ.

ಗೋಪುರ

ಎಲ್ಲ ಪತ್ರಿಕೆಗಳೂ
ಪೀಸಾ ಗೋಪುರಗಳೇ!
ಎಡಕ್ಕೆ ಇಲ್ಲ
ಬಲಕ್ಕೆ ವಾಲುತ್ತವೆ!
ಸೆಟೆದು ನೇರಕ್ಕೆ
ನಿಲ್ಲುವವು ಇಲ್ಲ!

ಅಲ್ಲಮಪ್ರಭು ಬೆಟದೂರು

ಮತಾಂತರ ಮತ್ತು ಸಂವಿಧಾನ

ನಾ. ದಿವಾಕರ

> **ಒಂದು ರೀತಿಯಲ್ಲಿ ಒರಿಸ್ಸಾ ಗಲಭೆಗಳು ಸಂಘಪರಿವಾರದೊಳಗೇ ನಡೆಯುತ್ತಿರುವ ಶೀತಲ ಯುದ್ಧದ ಪರಿಣಾಮ ವೆಂದೂ ಹೇಳಬಹುದು. ಭಾಜಪ ನಾಯಕತ್ವವು ಚುನಾವಣಾ ಸಂದರ್ಭ ಗಳಲ್ಲಿ ತನ್ನ ಹಿಂದುತ್ವದ ಪ್ರಚಾರಕ್ಕೆ ವಿಹಿಂಪ ಮತ್ತು ಭಜರಂಗದಳವನ್ನು ಬಳ ಸಿಕೊಂಡರೂ, ಈ ಸಂಘಟನೆಗಳ ಸದಸ್ಯರಿಗೆ ಸೂಕ್ತ ಸ್ಥಾನಮಾನಗ ಳನ್ನು ಕೊಡುವುದಿಲ್ಲ ಎಂಬ ಆಪಾದನೆ ಭಾಜಪ ನಾಯಕತ್ವದ ಮೇಲೆ ಹೊರಿಸಲಾಗುತ್ತಿದೆ. ಗುಜ ರಾತ್ ಚುನಾವಣೆಗಳಲ್ಲಿ ಪ್ರವೀಣ್ ತೊಗಾಡಿಯಾ ರವರು ಪ್ರಚಾರ ಕಾರ್ಯ ದಿಂದ ದೂರ ಉಳಿದಿ ದ್ದನ್ನು ಇಲ್ಲಿ ಸ್ಮರಿಸಬ ಹುದು. ಭಾಜಪ ಹಿಂದುತ್ವ ಕಾರ್ಯಸೂಚಿಯಿಂದ ದೂರ ಸರಿಯುತ್ತಿದೆ ಎಂದೂ ಆರೋಪ ಮಾಡಲಾಗುತ್ತಿದೆ. ಹಾಗಾ ಗಿಯೇ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಯಲ್ಲಿ ಹಿಂದುತ್ವ ಕಾರ್ಯ ಸೂಚಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು.**

ಡಿಸೆಂಬರ್ ೨೪ ೨೦೦೭, ಗುಜರಾತ್ ವಿಧಾನಸಭಾ ಚುನಾವಣೆಗಳಲ್ಲಿ ನರೇಂದ್ರ ಮೋದಿಯವರ ಅಪ್ರತಿಮ ಗೆಲುವು ಸಂಘಪರಿವಾರದಲ್ಲಿ ಹರ್ಷೋಲ್ಲಾಸಗಳನ್ನು ಸೃಷ್ಟಿಸಿದ್ದ ದಿನ. ದೇಶದೆಲ್ಲೆಡೆ ಭಾಜಪ ಮತ್ತು ಸಂಘಪರಿವಾರದ ಕಾರ್ಯಕರ್ತರು ನರಮೇಧೇಂದ್ರ ಮೋದಿಯವರ ಗೆಲುವನ್ನು ಆಚರಿಸುತ್ತಿದ್ದರು. ಅದೇ ಸಮಯದಲ್ಲಿ ಒರಿಸ್ಸಾದ ಕಂಧಮಾಲ್‌ನಲ್ಲಿ ದಲಿತ ಮತ್ತು ಆದಿವಾಸಿ ಕ್ರೈಸ್ತರ ಮನೆಗಳ ಮೇಲೆ ಮಾರಣಾಂತಿಕ ಆಕ್ರಮಣ ನಡೆಸುತ್ತಿದ್ದರು. ಮೋದಿಯವರ ಗೆಲುವು ಇತರ ಸೆಕ್ಯುಲರ್ ಪಕ್ಷಗಳಿಗೆ ಒಂದು ನಿರ್ಧಿಷ್ಟ ಸಂದೇಶ ರವಾನಿಸಿದಂತೆಯೇ, ಕಂಧಮಾಲ್‌ನ ಆಕ್ರಮಣಗಳು ಸಂಘ ಪರಿವಾರದ ನಿರ್ಧಿಷ್ಟ ಸಂದೇಶವನ್ನು ಸಾರುವಂತಿತ್ತು. ಕ್ರೈಸ್ತ ಸಮುದಾಯದ ವಿರುದ್ಧ ನಡೆದ ಆಕ್ರಮಣಗಳ ನೇತೃತ್ವವನ್ನು ವಹಿಸಿದ್ದ, ಹಿಂದುತ್ವದ ಸೈದ್ಧಾಂತಿಕ ಅಸ್ತ್ರವಾದ, ವಿಶ್ವ ಹಿಂದು ಪರಿಷತ್ (ವಿಹಿಂಪ) ಈ ಆಕ್ರಮಣಗಳನ್ನು ತನ್ನ ಹಿಂದುತ್ವ ಕಾರ್ಯಸೂಚಿಯಲ್ಲಿ ನಿರ್ವಹಿಸಲಾದ ಒಂದು ಕಾರ್ಯಕ್ರಮ ಎಂದೇ ಘೋಷಿಸಿತ್ತು. *'ಗುಜರಾತಿನ ಚುನಾವಣಾ ವಿಜಯದಿಂದ ಭಾವುಕರಾಗಿ ನಿರ್ಲಕ್ಷ್ಯ ತೋರಬೇಡಿ ಎಂದು ಸಂಘಪರಿವಾರಕ್ಕೆ ಸಂದೇಶ ನೀಡುವ ನಿಟ್ಟಿನಲ್ಲಿ ಪ್ರವೀಣ್ ತೊಗಾಡಿಯಾರವರು ಕಂಧಮಾಲ್‌ನಲ್ಲಿ ಈ ಆಕ್ರಮಣಗಳನ್ನು ನಡೆಸಿದ್ದಾರೆ'* ಎನ್ನುತ್ತಾರೆ ಉತ್ತರ ಪ್ರದೇಶದ ಆರ್.ಎಸ್.ಎಸ್ ನೇತಾರರು. ತೊಗಾಡಿಯಾ ಮತ್ತು ಮೋದಿಯವರ ನಡುವಿನ ವೈಷಮ್ಯಕ್ಕೆ ಕಂಧಮಾಲ್‌ನ ಕ್ರೈಸ್ತರು ಬೆಲೆ ತೆರಬೇಕಾಯಿತು.

ಒಂದು ರೀತಿಯಲ್ಲಿ ಒರಿಸ್ಸಾ ಗಲಭೆಗಳು ಸಂಘಪರಿವಾರದೊಳಗೇ ನಡೆಯುತ್ತಿರುವ ಶೀತಲ ಯುದ್ಧದ ಪರಿಣಾಮವೆಂದೂ ಹೇಳಬಹುದು. ಭಾಜಪ ನಾಯಕತ್ವವು ಚುನಾವಣಾ ಸಂದರ್ಭಗಳಲ್ಲಿ ತನ್ನ ಹಿಂದುತ್ವದ ಪ್ರಚಾರಕ್ಕೆ ವಿಹಿಂಪ ಮತ್ತು ಭಜರಂಗದಳವನ್ನು ಬಳಸಿಕೊಂಡರೂ, ಈ ಸಂಘಟನೆಗಳ ಸದಸ್ಯರಿಗೆ ಸೂಕ್ತ ಸ್ಥಾನಮಾನಗಳನ್ನು ಕೊಡುವುದಿಲ್ಲ ಎಂಬ ಆಪಾದನೆ ಭಾಜಪ ನಾಯಕತ್ವದ ಮೇಲೆ ಹೊರಿಸಲಾಗುತ್ತಿದೆ. ಗುಜರಾತ್ ಚುನಾವಣೆಗಳಲ್ಲಿ ಪ್ರವೀಣ್ ತೊಗಾಡಿಯಾರವರು ಪ್ರಚಾರ ಕಾರ್ಯದಿಂದ ದೂರ ಉಳಿದಿದ್ದನ್ನು ಇಲ್ಲಿ ಸ್ಮರಿಸಬಹುದು. ಭಾಜಪ ಹಿಂದುತ್ವ ಕಾರ್ಯಸೂಚಿಯಿಂದ ದೂರ ಸರಿಯುತ್ತಿದೆ ಎಂದೂ ಆರೋಪ ಮಾಡಲಾಗುತ್ತಿದೆ. ಹಾಗಾಗಿಯೇ ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯಲ್ಲಿ ಹಿಂದುತ್ವ ಕಾರ್ಯಸೂಚಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು.

ಆದಾಗ್ಯೂ ವಿಹಿಂಪ ಮತ್ತು ಭಜರಂಗದಳಕ್ಕೆ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು• ಭಾಜಪದ ನೆರವು ಅಗತ್ಯವಾಗಿರುತ್ತದೆ. ಹಾಗೆಯೇ ತನ್ನ ಕೋಮುವಾದಿ ರಾಜಕಾರಣವನ್ನು ನಾಜೂಕಾಗಿ ಜಾರಿಗೊಳಿಸಲು ಭಾಜಪಕ್ಕೂ ಈ ಸಂಘಟನೆಗಳ ನೆರವು ಅತ್ಯಗತ್ಯವಾಗಿರುತ್ತದೆ. 'ಭಾಜಪದ ಚುನಾವಣಾ ಯಶಸ್ಸುಗಳ ಹಿಂದೆ ಕೇವಲ ವಾಜಪೇಯಿ, ಅದ್ವಾನಿ ಮತ್ತು ಮೋದಿಯವರ ವರ್ಚಸ್ಸು ಮಾತ್ರವಲ್ಲದೆ ಸಂಘ ಪರಿವಾರದ ಸಂಘಟನೆಗಳು ಕಾಲಾನುಕಾಲಕ್ಕೆ ಕೈಗೊಳ್ಳುವ ಸೈದ್ಧಾಂತಿಕ ಕಾರ್ಯಾಚರಣೆಗಳೂ ಕಾರಣವಾಗಿವೆ ಎಂದು ಸಂಘ ಪರಿವಾರದ ಹಾಗೂ ಭಾಜಪದ ನಾಯಕರಿಗೆ ತಿಳಿಸುವುದೇ ವಿಹಿಂಪದ ಉದ್ದೇಶ' ಎಂಬ ಮಾತುಗಳು ಆರ್.ಎಸ್.ಎಸ್ ನಾಯಕರಿಂದಲೇ ಕೇಳಿಬರುತ್ತಿದೆ.

ಈ ನಿಟ್ಟಿನಲ್ಲಿ ಭಾಜಪ ನಾಯಕತ್ವದಲ್ಲೂ ಸಾಕಷ್ಟು ಚಿಂತನ ಮಂಥನಗಳು ನಡೆದು, ೨೦೦೫ರಲ್ಲೇ ಸಂಘ ಪರಿವಾರವು ತನ್ನ ನಿಲುವನ್ನು ಸ್ಪಷ್ಟಪಡಿಸಿತ್ತು. ೨೦೦೫ರಲ್ಲಿ ನಡೆದ ಭಾಜಪದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ನಂತರದಲ್ಲಿ ೨೦೦೬ರ ರಾಷ್ಟ್ರೀಯ ಸಮಿತಿಯ ಸಭೆ ಕೆಲವು ಮಹತ್ವದ ನಿರ್ಣಯಗಳನ್ನು ಕೈಗೊಂಡಿತು. ಈ ನಿರ್ಣಯಗಳ ಅನುಸಾರವಾಗಿ ಸಂಘಪರಿವಾರದ ಆಂತರಿಕ ಸಂಘರ್ಷಗಳನ್ನು ಪರಿಹರಿಸಿಕೊಂಡು ಹಿಂದುತ್ವ ಕಾರ್ಯಸೂಚಿಯನ್ನು ದೇಶದೆಲ್ಲೆಡೆ ಜಾರಿಗೊಳಿಸುವ ತಂತ್ರಗಳನ್ನು ರೂಪಿಸಲಾಯಿತು. ಈ ಹಿನ್ನೆಲೆಯಲ್ಲೇ ವಿಹಿಂಪ ದೇಶದ ವಿವಿಧೆಡೆಗಳಲ್ಲಿ ಧರ್ಮ ಸಂಸತ್ತುಗಳನ್ನೂ ಏರ್ಪಡಿಸಿತ್ತು. ಒರಿಸ್ಸಾದ ಪುರಿ ಮತ್ತು ಗುಜರಾತ್‌ನ ಡಾಂಗ್ಸ್ ಜಿಲ್ಲೆಗಳಲ್ಲಿ ಪ್ರಮುಖವಾಗಿ ನಡೆದ ಧರ್ಮ ಸಂಸತ್ತಿನಲ್ಲಿ ಕೈಗೊಳ್ಳಲಾದ ನಿರ್ಣಯಗಳ ಪ್ರಕಾರ ಸೈದ್ಧಾಂತಿಕವಾಗಿ, ಸಾಂಘಿಕವಾಗಿ ಮತ್ತು ರಾಜಕೀಯವಾಗಿ ಸಂಘ ಪರಿವಾರದ ಕಾರ್ಯಸೂಚಿಯನ್ನು ವಿವಿಧ ಮಜಲುಗಳಲ್ಲಿ, ವಿವಿಧ ತಂತ್ರಗಳನ್ನು ಅನುಸರಿಸಿ ಜಾರಿಗೊಳಿಸಲು ತೀರ್ಮಾನಿಸಲಾಯಿತು.

೨೦೦೬ರ ಫೆಬ್ರವರಿ ೧೮–೧೯ರಂದು ಒರಿಸ್ಸಾದ ಪುರಿಯಲ್ಲಿ ನಡೆದ ಧರ್ಮ ಸಂಸತ್ತಿನಲ್ಲಿ ಸಂಘಪರಿವಾರ ೧೩ ಅಂಶಗಳ ಹಿಂದೂ ಶಾಸನವನ್ನು ಬಿಡುಗಡೆ ಮಾಡಿತ್ತು. ಇದನ್ನು ಹಿಂದುತ್ವ ಕಾರ್ಯಸೂಚಿಯ 'ಮೂಲ ಸೈದ್ಧಾಂತಿಕ ನೀಲಿನಕ್ಷೆ' ಎಂದೇ ಪರಿಗಣಿಸಲಾಗಿತ್ತು. ಗೋಹತ್ಯಾ ನಿಷೇಧ, ಗಂಗಾನದಿಯ ಶುದ್ಧೀಕರಣ, ಸಮಾನ ನಾಗರಿಕ ಸಂಹಿತೆಯ ಅನುಷ್ಠಾನ, ಸಂವಿಧಾನ ವಿಧಿ ೩೭೦ರ ರದ್ದತಿ, ಮತಾಂತರ ನಿಷೇಧ ಮುಂತಾದವುಗಳು ಈ ಶಾಸನದ ಪ್ರಮುಖ ಅಂಶಗಳಾಗಿವೆ. *'ಎಲ್ಲಾ ಜಾತಿ ಹಾಗೂ ಸಾಮುದಾಯಿಕ ಅಸ್ಮಿತೆಗಳನ್ನು ಮೀರಿ, ಹಿಂದೂಗಳನ್ನು ಧೃವೀಕರಿಸಿ, ಮುಸ್ಲಿಂ ವೋಟ್ ಬ್ಯಾಂಕಿಗೆ ಪ್ರತಿಯಾಗಿ ಹಿಂದೂ ವೋಟ್ ಬ್ಯಾಂಕ್ ಸೃಷ್ಟಿಸುವುದು ಈ ಶಾಸನದ ಉದ್ದೇಶವಾಗಿದೆ'* ಈ ಶಾಸನದ ಪರಿಣಾಮವನ್ನು ಗುಜರಾತ್ ಮತ್ತು ಕರ್ನಾಟಕ ಚುನಾವಣೆಗಳಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿತ್ತು. ದೇಶದ ಪ್ರತಿಯೊಂದು ಮತಗಟ್ಟೆಗಳಲ್ಲೂ ಸಂಘ ಪರಿವಾರದ ತಂಡಗಳನ್ನು ನೇಮಿಸುವುದರ ಮೂಲಕ ಹಿಂದೂ ವೋಟ್ ಬ್ಯಾಂಕುಗಳನ್ನು ಸೃಷ್ಟಿಸುವ ಈ ಯೋಜನೆ ಎರಡೂ ರಾಜ್ಯಗಳಲ್ಲಿ ಉತ್ತಮ ಪರಿಣಾಮ ಬೀರಿತ್ತು.

ಗುಜರಾತ್‌ನ ಡಾಂಗ್ಸ್ ಜಿಲ್ಲೆಯಲ್ಲಿ ೨೦೦೬ರಲ್ಲಿ ನಡೆದ ಶಬರಿ ಕುಂಭಮೇಳದಲ್ಲಿ ಸಂಘ ಪರಿವಾರದ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಸಲುವಾಗಿಯೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಮೇಳದಲ್ಲಿ ವನವಾಸಿಗಳನ್ನು, ಸಂಘಪರಿವಾರದ ಪರಿಭಾಷೆಯಲ್ಲಿ ಆದಿವಾಸಿಗಳನ್ನು ಹೀಗೆಯೇ ಕರೆಯಲಾಗುತ್ತದೆ, ಹಿಂದೂ ಸಂಸ್ಕೃತಿಯೊಳಗೆ ಸೆಳೆಯಲು ಮತ್ತು ಆದಿವಾಸಿಗಳು ಕ್ರೈಸ್ತ ಮತಕ್ಕೆ ಪರಿವರ್ತಿತವಾಗುವುದನ್ನು ತಡೆಗಟ್ಟಲು ಹೆಚ್ಚಿನ ಒತ್ತು ನೀಡಲಾಗಿತ್ತು. 'ಕ್ರೈಸ್ತ ಮಿಷನರಿಗಳು ಮತ್ತು ಮುಸ್ಲಿಂ ಮದರಸಾಗಳು ವ್ಯವಸ್ಥಿತವಾಗಿ ಹಿಂದೂಗಳನ್ನು ಮತಾಂತರಕ್ಕೆ ಪ್ರಚೋದಿಸುವ ಮೂಲಕ ಹಿಂದೂ ಧರ್ಮಕ್ಕೆ ಸಂಚಕಾರ ತರುತ್ತಿವೆ. ಮುಂದೊಂದು ದಿನ ಭಾರತ ಮುಸ್ಲಿಮರ–ಕ್ರೈಸ್ತರ ರಾಷ್ಟ್ರವಾಗುವುದನ್ನು ತಪ್ಪಿಸಲು ಮತಾಂತರದ ವಿರುದ್ಧ ಸಮರ ಸಾರುವುದು ಅಗತ್ಯವಾಗಿದೆ' ಎಂಬ ಸಂದೇಶವನ್ನು ಹೊತ್ತ ಶಬರಿ ಕುಂಭಮೇಳ, ಸಂಘ ಪರಿವಾರದ ಯೋಜನೆಗಳಿಗೆ ಸ್ಪಷ್ಟ ನೀಲಿನಕ್ಷೆಯನ್ನು ಒದಗಿಸಿತ್ತು. ಈ ಸಂದರ್ಭದಲ್ಲಿಯೇ ಆರ್.ಎಸ್.ಎಸ್. ನಾಯಕ ಸುದರ್ಶನ್ ಅವರು *'ಭಾರತೀಯ ಸಮಾಜದಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರು ತಮ್ಮ ಅಧಿಪತ್ಯ ಸಾಧಿಸುವುದನ್ನು ತಪ್ಪಿಸುವ. ಸಲುವಾಗಿ ಹಿಂದೂಗಳು ಕುಟುಂಬ ಯೋಜನೆಗೆ ಮೊರೆಹೋಗದೆ ಹಿಂದೂ ಜನಸಂಖ್ಯೆಯನ್ನು ಹೆಚ್ಚಿಸಬೇಕು'* ಎಂದು ಕರೆ ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.

'ಪೆಹಲೆ ಕಸಾಯಿ ಫಿರ್ ಇಸಾಯಿ' ಅಂದರೆ ಮೊದಲು ಕಸಾಯಿಯವರು(ಮುಸ್ಲಿಮರು) ನಂತರ ಇಸಾಯಿಗಳು (ಕ್ರೈಸ್ತರು) ಎಂಬ ಘೋಷಣೆಯನ್ನು ಅಧಿಕೃತವಾಗಿ ನೀಡಿದ ವಿಹಿಂಪ ೨೦೦೫-೦೬ರಿಂದಲೇ ತನ್ನ ಕಾರ್ಯಾಚರಣೆಗೆ ಚಾಲನೆ ನೀಡಿದೆ. ಎಲ್.ಕೆ. ಅದ್ವಾನಿ ಮತ್ತು ವಾಜಪೇಯಿಯವರ ಅಧಿಕಾರವನ್ನು ಶಿಥಿಲಗೊಳಿಸುವ ದೃಷ್ಟಿಯಿಂದಲೇ ರಾಜನಾಥಸಿಂಗ್‌ರವರನ್ನು ಭಾಜಪದ ಅಧ್ಯಕ್ಷರನ್ನಾಗಿ ಮಾಡಲಾಯಿತು. ಆರ್.ಎಸ್.ಎಸ್‌ನ ಪ್ರಧಾನ ಕಾರ್ಯದರ್ಶಿ ಮೋಹನ ರಾವ್ ಭಗವತ್‌ರವರ ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಗಳು ಒರಿಸ್ಸಾದಲ್ಲಿ ಪ್ರಥಮ ಹಂತವಾಗಿ ಅನಾವರಣಗೊಂಡಿದೆ. *ಗುಜರಾತ್ ನಮ್ಮ ಸಂಘಪರಿವಾ ರದ ಗುಪ್ತ ಕಾರ್ಯಸೂಚಿಯ ಅನುಷ್ಠಾನಕ್ಕೆ ಮೊದಲ ಪ್ರಯೋಗಶಾಲೆಯಾಗಿತ್ತು. ನರೇಂದ್ರಮೋದಿಯವರ ನೇತೃತ್ವದಲ್ಲಿ ಗುಜರಾತಿನಲ್ಲಿ ಅಪ್ರತಿಮ ಯಶಸ್ಸು ಕಂಡ ನಂತರ ನಾವು ಒರಿಸ್ಸಾದ ಕಡೆಗೆ ಗಮನಹರಿಸುತ್ತಿದ್ದೇವೆ. ಅಲ್ಲಿನ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ನಮ್ಮ ಸಂಘಟನೆಯವರಲ್ಲದೆ ಹೋದರೂ, ನಮ್ಮ ಕಾರ್ಯಾಚರಣೆಗಳಿಗೆ ಅವರ ಸಂಪೂರ್ಣ ಸಹಕಾರ ಮತ್ತು ಬೆಂಬಲವಿದೆ'* ಎನ್ನುತ್ತಾರೆ ಉತ್ತರ ಪ್ರದೇಶದ ಆರ್.ಎಸ್.ಎಸ್. ನೇತಾರರು. (ಫ್ರಂಟ್‌ಲೈನ್ ಅಕ್ಟೋಬರ್ ೨೬ ೨೦೦೮)

ಕಳೆದ ಎರಡು ತಿಂಗಳುಗಳ ಅವಧಿಯಲ್ಲಿ ಕರ್ನಾಟಕ ಮತ್ತು ಒರಿಸ್ಸಾಗಳಲ್ಲಿ ಕ್ರೈಸ್ತರ ಮೇಲೆ ನಡೆಯುತ್ತಿರುವ ಆಕ್ರಮಣಗಳನ್ನು ಸಂಘಪರಿವಾರದ ಈ ಕಾರ್ಯಸೂಚಿಯ ದೃಷ್ಟಿಯಿಂದಲೇ ವಿಶ್ಲೇಷಿಸಬೇಕಾಗುತ್ತದೆ.

ಮತಾಂಧತೆಗೆ ಮತಾಂತರದ ಲೇಪನ

ಡಿಸೆಂಬರ್ ೨೦೦೭ರಲ್ಲಿ ವಿಹಿಂಪ ನಾಯಕ ಲಕ್ಷ್ಮಣಾನಂದ ಸ್ವಾಮಿಯ ನೇತೃತ್ವದಲ್ಲಿ ಸಂಘಪರಿವಾರವು ಒರಿಸ್ಸಾದ ಕಂಧಮಾಲ್ ಜಿಲ್ಲೆಯಲ್ಲಿ ಕ್ರೈಸ್ತ ಮಿಷನರಿಗಳ ವಿರುದ್ಧ ಆಕ್ರಮಣ ಪ್ರಾರಂಭಿಸಿತು. ಕ್ರೈಸ್ತ ಮತಕ್ಕೆ ಪರಿವರ್ತಿತರಾದ ಆದಿವಾಸಿಗಳನ್ನು ಪುನಃ ಹಿಂದೂ ಧರ್ಮಕ್ಕೆ ಕರೆತರುವ ನಿಟ್ಟಿನಲ್ಲಿ ಶುದ್ಧೀಕರಣ ಮತ್ತು ಮರು ಮತಾಂತರ ಪ್ರಕ್ರಿಯೆಗೆ ಚಾಲನೆ ನೀಡಿತ್ತು. ಈ ಸಂದರ್ಭದಲ್ಲಿ ಸಂಭವಿಸಿದ ಗಲಭೆಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಆದಿವಾಸಿಗಳು ನಿರಾಶ್ರಿತರಾಗಿದ್ದರು. ಒಂಬತ್ತು ಚರ್ಚುಗಳನ್ನು ಧ್ವಂಸ ಮಾಡಲಾಗಿತ್ತು. ತಮ್ಮ ಗ್ರಾಮಗಳಿಗೆ ಹಿಂದಿರುಗಬೇಕಾದಲ್ಲಿ ಈ ಕ್ರೈಸ್ತ ದಲಿತರಿಗೆ ಮತ್ತು ಆದಿವಾಸಿಗಳಿಗೆ ಹಿಂದೂಧರ್ಮವನ್ನು ಒಪ್ಪಿಕೊಳ್ಳಬೇಕಾಗಿತ್ತು. ಆದಿವಾಸಿ ಸಮುದಾಯ ಮತ್ತು ದಲಿತರ ನಡುವಿನ ವೈಮನಸ್ಯಗಳನ್ನು ಉಪಯೋಗಿಸಿಕೊಂಡು ಈ ಪ್ರದೇಶದಲ್ಲಿ ತಮ್ಮ ನೆಲೆ ಕಂಡುಕೊಂಡಿರುವ ಸಂಘ ಪರಿವಾರದ ಕಾರ್ಯಕರ್ತರು ಪ್ರತಿಯೊಂದು ಗ್ರಾಮವನ್ನೂ ತಮ್ಮ ಹಿಡಿತದಲ್ಲಿರಿಸಿಕೊಂಡಿದ್ದು, ರಾಜ್ಯ ಸರ್ಕಾರದ ನೆರವಿನಿಂದ ಆದಿವಾಸಿಗಳನ್ನು ಕಳೆದ ಆರು ತಿಂಗಳಿನಿಂದ ನಿರಾಶ್ರಿತರ ತಾಣಗಳಲ್ಲೇ ಇರುವಂತೆ ಮಾಡಿದ್ದರು. ಈ ಹಿನ್ನೆಲೆಯಲ್ಲೇ ಆಗಸ್ಟ್ ತಿಂಗಳಲ್ಲಿ ಲಕ್ಷ್ಮಣಾನಂದರ ಹತ್ಯೆಯಾಗಿತ್ತು.

ಮಾವೋವಾದಿಗಳು ತಾವೇ ವಿಹಿಂಪ ನಾಯಕರ ಹತ್ಯೆ ಮಾಡಿರುವುದಾಗಿ ಬಹಿರಂಗವಾಗಿ ಘೋಷಿಸಿದರೂ, ಕ್ರೈಸ್ತ ಸಮುದಾಯದ ವಿರುದ್ಧ ಸಮರ ಸಾರಿರುವ ಸಂಘಪರಿವಾರವು ತಮ್ಮ ವ್ಯವಸ್ಥಿತ ಯೋಜನೆಗನುಗುಣವಾಗಿ ಎಲ್ಲ ಕ್ರೈಸ್ತ ಮಿಷನರಿಗಳ ತಾಣಗಳ ಮೇಲೆ ಆಕ್ರಮಣ ಪ್ರಾರಂಭಿಸಿತ್ತು. ಸಾವಿರಾರು ಕ್ರೈಸ್ತರ ಮನೆಗಳು, ಗುಡಿಸಲುಗಳು ಬೆಂಕಿಗೆ ಆಹುತಿಯಾದವು. ಇಪ್ಪತ್ತಕ್ಕೂ ಹೆಚ್ಚು ಜನರ ಹತ್ಯೆಮಾಡಲಾಯಿತು. ಆಗಸ್ಟ್ ೨೫ರಂದು ಸಂಘ ಪರಿವಾರ ಮತ್ತು ಭಾಜಪ ಜಂಟಿಯಾಗಿ ಒರಿಸ್ಸಾ ಬಂದ್ ಕರೆ ನೀಡಿದ್ದು ಪರಿವಾರದ ಕಾರ್ಯಾಚರಣೆಗೆ ಮುಕ್ತ ಅವಕಾಶ ನೀಡಿತ್ತು. ಅನೇಕ ಕ್ರೈಸ್ತ ಪಾದ್ರಿಗಳನ್ನು, ಸನ್ಯಾಸಿನಿಯರನ್ನು ಜೀವಂತವಾಗಿ ಸುಡಲಾಯಿತು. ಈ ದುಷ್ಕೃತ್ಯಗಳೆಲ್ಲವೂ ಪೊಲೀಸರ ಕಣ್ಣೆದುರಿನಲ್ಲೇ ನಡೆಯುತ್ತಿದ್ದರೂ ಪೊಲೀಸರು ಮತ್ತು ಸಾರ್ವಜನಿಕರು ಮೂಕ ಪ್ರೇಕ್ಷಕರಾಗಿದ್ದುದು ಅಲ್ಲಿನ ಪರಿಸ್ಥಿತಿಗೆ ನಿದರ್ಶನವಷ್ಟೆ

> **ಗುಜರಾತ್‌ನ ಡಾಂಗ್ಸ್ ಜಿಲ್ಲೆಯಲ್ಲಿ ೨೦೦೬ರಲ್ಲಿ ನಡೆದ ಶಬರಿ ಕುಂಭಮೇಳದಲ್ಲಿ ಸಂಘ ಪರಿವಾರದ ಕಾರ್ಯಕರ್ತರಲ್ಲಿ ಆತ್ಮವಿಶ್ವಾಸ ಹೆಚ್ಚಿಸುವ ಸಲುವಾಗಿಯೇ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಮೇಳದಲ್ಲಿ ವನವಾಸಿಗಳನ್ನು, ಸಂಘಪರಿವಾರದ ಪರಿಭಾಷೆಯಲ್ಲಿ ಆದಿವಾಸಿಗಳನ್ನು ಹೀಗೆಯೇ ಕರೆಯಲಾಗುತ್ತದೆ, ಹಿಂದೂ ಸಂಸ್ಕೃತಿಯೊಳಗೆ ಸೆಳೆಯಲು ಮತ್ತು ಆದಿವಾಸಿಗಳು ಕ್ರೈಸ್ತ ಮತಕ್ಕೆ ಪರಿವರ್ತಿತವಾಗುವುದನ್ನು ತಡೆಗಟ್ಟಲು ಹೆಚ್ಚಿನ ಒತ್ತು ನೀಡಲಾಗಿತ್ತು. 'ಕ್ರೈಸ್ತ ಮಿಷನರಿಗಳು ಮತ್ತು ಮುಸ್ಲಿಂ ಮದರಸಾಗಳು ವ್ಯವಸ್ಥಿತವಾಗಿ ಹಿಂದೂಗಳನ್ನು ಮತಾಂತರಕ್ಕೆ ಪ್ರಚೋದಿಸುವ ಮೂಲಕ ಹಿಂದೂ ಧರ್ಮಕ್ಕೆ ಸಂಚಕಾರ ತರುತ್ತಿವೆ. ಮುಂದೊಂದು ದಿನ ಭಾರತ ಮುಸ್ಲಿಮರ-ಕ್ರೈಸ್ತರ ರಾಷ್ಟ್ರವಾಗುವುದನ್ನು ತಪ್ಪಿಸಲು ಮತಾಂತರದ ವಿರುದ್ಧ ಸಮರ ಸಾರುವುದು ಅಗತ್ಯವಾಗಿದೆ' ಎಂಬ ಸಂದೇಶವನ್ನು ಹೊತ್ತ ಶಬರಿ ಕುಂಭ ಮೇಳ, ಸಂಘ ಪರಿವಾರದ ಯೋಜನೆಗಳಿಗೆ ಸ್ಪಷ್ಟ ನೀಲಿನಕ್ಷೆಯನ್ನು ಒದಗಿಸಿತ್ತು.**

ಒರಿಸ್ಸಾದಲ್ಲಿ ತಮ್ಮ ಕಾರ್ಯಸಾಧನೆಯಾದ ನಂತರ ಕರ್ನಾಟಕವನ್ನು ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡ ಸಂಘ ಪರಿವಾರಕ್ಕೆ ಕರ್ನಾಟಕದಲ್ಲಿ ಭಾಜಪ ಸರ್ಕಾರವಿರುವುದು ಒಂದು ವರದಾನವೇ ಸರಿ. ಕರ್ನಾಟಕದ ಮುಖ್ಯಮಂತ್ರಿ ಯಡ್ಯೂರಪ್ಪ ಮತ್ತು ಗೃಹ ಮಂತ್ರಿ ವಿ. ಎಸ್.ಆಚಾರ್ಯರವರು ತಾವು ಇನ್ನೂ ಖಾಕಿ ಚಡ್ಡಿ ಧರಿಸಿರುವ ಸಂಘ ಪರಿವಾರದ ಕಾರ್ಯಕರ್ತರೆಂದೇ ಭಾವಿಸಿದ್ದಾರೆನಿಸುತ್ತದೆ. ಬೆಂಗಳೂರು, ಮಂಗಳೂರು, ಭಟ್ಕಳ, ಉಡುಪಿ, ಕಾರವಾರ, ದಾವಣಗೆರೆ, ಹರಪನಹಳ್ಳಿ, ಕೋಲಾರ, ಹೀಗೆ ರಾಜ್ಯದಾದ್ಯಂತ ಭಜರಂಗದಳದ ಕಾರ್ಯಕರ್ತರು ಕ್ರೈಸ್ತರ ಪೂಜಾಸ್ಥಳಗಳ ಮೇಲೆ ಮಾರಣಾಂತಿಕ ದಾಳಿ ನಡೆಸುತ್ತಿದ್ದಾಗ್ಯೂ ಈ ಮಹಾಶಯರು *'ಇದು ಮತಾಂತರದ ವಿರುದ್ಧ ನಡೆಯುತ್ತಿರುವ ದಾಳಿಯಾಗಿದೆ, ಬಲವಂತದ ಮತಾಂತರ ನಡೆಯದಿದ್ದರೆ ಈ ದಾಳಿಗಳೂ ನಡೆಯುವುದಿಲ್ಲ '* ಎಂದು ಸಮರ್ಥನೆ ನೀಡಿದ್ದು ಇದಕ್ಕೆ ನಿದರ್ಶನ.

ಸಾರ್ವಜನಿಕ ವಲಯ ಮತ್ತು ಹಲವು ಮಾಧ್ಯಮಗಳಲ್ಲೂ ಸಹ ಒರಿಸ್ಸಾ ಮತ್ತು ಕರ್ನಾಟಕದಲ್ಲಿ ಕ್ರೈಸ್ತ ಮಿಷನರಿಗಳ ವಿರುದ್ಧ ನಡೆಯುತ್ತಿರುವ ಕೋಮುವಾದಿ ಆಕ್ರಮಣಗಳನ್ನು ಮತಾಂತರ ವಿರೋಧಿ ಪ್ರಕ್ರಿಯೆ ಎಂದು ಸಮರ್ಥಿಸಿಕೊಳ್ಳಲಾಗುತ್ತಿದೆ. ಕ್ರೈಸ್ತ ಮಿಷನರಿಗಳು ಬಲವಂತವಾಗಿ, ಪ್ರಲೋಭನೆಗಳನ್ನೊಡ್ಡಿ, ಆಸೆ ಆಮಿಷಗಳನ್ನು ತೋರಿಸಿ ಮತಾಂತರಕ್ಕೆ ಪ್ರಚೋದಿಸುತ್ತಿದ್ದಾರೆ ಎಂಬ ಆರೋಪಕ್ಕೆ ಸೂಕ್ತ ಸಾಕ್ಷ್ಯಾಧಾರಗಳಿಲ್ಲದಿರುವುದು ಒಂದೆಡೆಯಾದರೆ, ಇನ್ನೊಂದೆಡೆ ಕೆಲವು ಸಾಂಸ್ಕೃತಿಕ ಆರಕ್ಷಕ ಪಡೆಗಳ ಭಾವನೆ ಮತ್ತು ಅಭಿಪ್ರಾಯಗಳನ್ನೇ ಅಂತಿಮ ಸತ್ಯ ಎಂದೆಣಿಸುವುದು ಪ್ರಸ್ತುತ ಸನ್ನಿವೇಶಕ್ಕೆ ಕಾರಣವಾಗಿದೆ. ಒಂದು ವೇಳೆ ಕ್ರೈಸ್ತ ಮಿಷನರಿಗಳು ಮತಾಂತರದಲ್ಲಿ ತೊಡಗದೆ ಇದ್ದಿದ್ದಲ್ಲಿ ಗಲಭೆಗಳು ನಡೆಯುತ್ತಿರಲಿಲ್ಲವೇ ಎಂಬ ಪ್ರಶ್ನೆಗೆ ಬಹುಶಃ ಸೂಕ್ತ ಉತ್ತರ ದೊರಕಲಾರದು. *'ಮತಾಂತರವನ್ನು ಒಪ್ಪಬಹುದು ಆದರೆ ಬಲವಂತದ ಮತಾಂತರ ಒಪ್ಪಲಾಗುವುದಿಲ್ಲ'* ಎಂಬ ಉದಾರವಾದಿ ಚಿಂತನೆಗೂ ಸಾಕಷ್ಟು ಮೆರುಗು ನೀಡುವಲ್ಲಿ ಪ್ರಸ್ತುತ ಬೆಳವಣಿಗೆಗಳು ಸಹಕಾರಿಯಾಗಿವೆ. ಭಾರತದ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ಮತ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಮತ್ತು ಪಾಲಿಸುವ ಸಂವಿಧಾನಾತ್ಮಕ ಹಕ್ಕು ಇರುವುದಾದರೂ, ಸಂವಿಧಾನವನ್ನು ಒಪ್ಪಿರುವ ರಾಜಕೀಯ ಪಕ್ಷಗಳೇ ಮತಾಂತರದ ವಿರುದ್ಧ ಸಮರ ಸಾರುತ್ತಿರುವುದು ಮತ ನಿರಪೇಕ್ಷ ಸಂವಿಧಾನಕ್ಕೆ ದ್ರೋಹ ಬಗೆದಂತಾಗಿದೆ. ಮತಾಂತರ-ಬಲವಂತದ ಮತಾಂತರ ಸಂವಿಧಾನ ಬಾಹಿರ ಎಂಬ ಮಿಥ್ಯೆಯೇ ಒರಿಸ್ಸಾ ಮತ್ತು ಕರ್ನಾಟಕದಲ್ಲಿನ ಗಲಭೆಗಳಿಗೆ ಪೂರಕ ಅಂಶಗಳಾಗಿವೆ. ಕರ್ನಾಟಕ ಸರ್ಕಾರವೂ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಲು ಹವಣಿಸುತ್ತಿದೆ. ಈ ಕಾಯ್ದೆಯ ಮೂಲಕ ತನ್ನ ಹಿಂದೂ ರಾಷ್ಟ್ರ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಭಾಜಪದ ತಂತ್ರಗಳಿಗೆ ಕರ್ನಾಟಕ ಒಂದು ಪ್ರಯೋಗಾಲಯವಾಗಲೂಬಹುದು. ಮತಾಂತರ ನಿಷೇಧ ಕಾಯ್ದೆಯಲ್ಲಿಯೇ ಇರುವ ಕೆಲವು ನ್ಯೂನತೆಗಳು ಮತಾಂಧರಿಗೆ ನೆರವಾಗುವ ಸಾಧ್ಯತೆಗಳಿರುವುದರಿಂದ ಈ ಕಾಯ್ದೆಯ ಹಿನ್ನೆಲೆಯನ್ನು ವಿಶ್ಲೇಷಿಸುವುದು ಅಗತ್ಯವಾಗಿದೆ.

ಮತಾಂತರ ಮತ್ತು ಧಾರ್ಮಿಕ ನಂಬಿಕೆ

ಸ್ವತಂತ್ರ ಭಾರತದಲ್ಲಿ ಮೊಟ್ಟ ಮೊದಲನೆಯದಾಗಿ ಧರ್ಮ ಪರಿವರ್ತನೆಯ ವಿರುದ್ಧ ಶಾಸನ ಜಾರಿಗೊಳಿಸಿದ್ದು ಒರಿಸ್ಸಾದಲ್ಲಿ, ೧೯೬೭ರ ಒರಿಸ್ಸಾ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆಯ ಮೂಲಕ. ಈ ಕಾಯ್ದೆಯಲ್ಲಿ *'ಯಾವುದೇ ವ್ಯಕ್ತಿಯು ನೇರವಾಗಿ ಅಥವಾ ಪರೋಕ್ಷವಾಗಿ ಮತ್ತೊಬ್ಬ ವ್ಯಕ್ತಿಯನ್ನು, ಪ್ರಲೋಭನೆಯಿಂದ, ಬಲಾತ್ಕಾರದಿಂದ ಅಥವಾ ವಂಚನೆಯಿಂದ, ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಪರಿವರ್ತಿಸುವಂತಿಲ್ಲ'* ಎಂದು ಹೇಳಲಾಗಿದೆ. ತದನಂತರದಲ್ಲಿ ಇದೇ ಜಾಡನ್ನು ಹಿಡಿದು ಮಧ್ಯಪ್ರದೇಶ-೧೯೬೮, ಅರುಣಾಚಲಪ್ರದೇಶ-೧೯೭೮, ಗುಜರಾತ್-೨೦೦೩, ಛತ್ತಿಸ್‌ಗಢ್-೨೦೦೩, ರಾಜಸ್ತಾನ-೨೦೦೫, ಹಿಮಾಚಲ ಪ್ರದೇಶ-೨೦೦೬ ಮತ್ತು ತಮಿಳುನಾಡು-

೨೦೦೩ರಲ್ಲಿ ಇದೇ ರೀತಿಯ ಶಾಸನವನ್ನು ಜಾರಿಗೊಳಿಸಿದ್ದವು. ತಮಿಳುನಾಡಿನಲ್ಲಿ ೨೦೦೪ರಲ್ಲಿ ಈ ಕಾಯ್ದೆಯನ್ನು ಹಿಂಪಡೆಯಲಾಯಿತು.

ಸ್ವಾತಂತ್ರ್ಯ ಪೂರ್ವದಲ್ಲೂ ಸಹ, ೧೯೩೬ರಲ್ಲಿ ರಾಯ್‌ಘರ್, ೧೯೪೨ರಲ್ಲಿ ಸರಗುಜಾ, ೧೯೪೬ರಲ್ಲಿ ಉದಯ್‌ಪುರ ಸಂಸ್ಥಾನಗಳು ಮತಾಂತರ ನಿಷೇದ ಕಾಯ್ದೆಯನ್ನು ಜಾರಿಗೊಳಿಸಿದ್ದನ್ನು ದಾಖಲಿಸಲಾಗಿದೆ. ೧೯೫೦ರಲ್ಲಿ ಭಾರತೀಯ ಸಂವಿಧಾನವನ್ನು ಅನುಷ್ಠಾನಗೊಳಿಸಿದ ಸಂದರ್ಭದಲ್ಲಿ ಸಂವಿಧಾನದ ವಿಧಿ ೨೫ರ ಅಡಿ ಪ್ರತಿಯೊಬ್ಬ ಭಾರತೀಯ ಪ್ರಜೆಗೂ ತನ್ನದೇ ಆದ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ, ಪಾಲಿಸುವ, ಆಚರಿಸುವ ಮತ್ತು ಪ್ರಚಾರ ಮಾಡುವ ಹಕ್ಕನ್ನು ಮಾನ್ಯ ಮಾಡಲಾಯಿತು. ಹಾಗಾಗಿ ಈ ರಾಜ ಸಂಸ್ಥಾನಗಳ ಶಾಸನಗಳು ಅನೂರ್ಜಿತವಾದವು. ಆದಾಗ್ಯೂ ಹೆಚ್ಚು ಸಂಖ್ಯೆಯ ಆದಿವಾಸಿಗಳನ್ನೊಳಗೊಂಡಿದ್ದ ಮಧ್ಯ ಪ್ರದೇಶ ಮತ್ತು ಒರಿಸ್ಸಾ ರಾಜ್ಯಗಳಲ್ಲಿ ವ್ಯಾಪಕವಾಗಿ ಕಾರ್ಯನಿರತವಾಗಿದ್ದ ಕ್ರೈಸ್ತ ಮಿಷನರಿಗಳ ಚಟುವಟಿಕೆಗಳ ಬಗ್ಗೆ ಗುಮಾನಿ ವ್ಯಕ್ತವಾಗುತ್ತಿದ್ದ ಹಿನ್ನೆಲೆಯಲ್ಲಿ ಮಧ್ಯ ಪ್ರದೇಶ ಸರ್ಕಾರವು ಮಿಷನರಿಗಳ ಕಾರ್ಯವೈಖರಿಯ ಮೇಲೆ ನಿಗಾವಹಿಸಲು ಸಮಿತಿಯೊಂದನ್ನು ನೇಮಿಸಿತ್ತು. ಸಮಿತಿಯು ತನ್ನ ವರದಿಯಲ್ಲಿ ವಿದೇಶದಿಂದ ಹರಿದುಬರುವ ಹಣದ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದ್ದು, ಸಮಾಜ ಸೇವೆ ಮತ್ತು ದಾನಶೀಲತೆಯ ಹೆಸರಿನಲ್ಲಿ ದುರುಪಯೋಗ ನಡೆಯಬಹುದೆಂದು ಶಂಕೆ ವ್ಯಕ್ತಪಡಿಸಿತ್ತು. ಈ ಸಮಿತಿಯ ವರದಿಯೇ ಒರಿಸ್ಸಾದ ಕಾಯ್ದೆಗೆ ತಳಹದಿಯಾಗಿ ಪರಿಣಮಿಸಿತು.

ಒರಿಸ್ಸಾ ಕಾಯ್ದೆಯ ಪೀಠಿಕೆಯಲ್ಲಿ *'ಮತಾಂತರ ಪ್ರಕ್ರಿಯೆಯು ಇತರ ಮತ ಧರ್ಮಗಳ ನಂಬಿಕೆಗಳನ್ನು ಶಿಥಿಲಗೊಳಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಬಲಾತ್ಕಾರ, ಪ್ರಲೋಭನೆ, ವಂಚನೆಯಿಂದ ಕಾರ್ಯ ನಿರ್ವಹಿಸುವುದು ಮತ್ತು ದಾರಿದ್ರ್ಯತೆ, ಜನರ ಅಜ್ಞಾನ ಮತ್ತು ಅಮಾಯಕತೆಯ ದುರುಪಯೋಗಗಳು ನಡೆದಲ್ಲಿ ಇನ್ನೂ ಆಕ್ಷೇಪಣಾರ್ಹವಾಗುತ್ತದೆ.'* ಎಂದು ಹೇಳಿರುವುದು ಚರ್ಚಾಸ್ಪದವಾಗಿದೆ. ನಂತರದಲ್ಲಿ ಮತಾಂತರ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿದ ಎಲ್ಲ ರಾಜ್ಯಗಳಿಗೂ ಈ ಕಾಯ್ದೆಯೇ ಆಧಾರವಾಗಿದ್ದರಿಂದ, ಒರಿಸ್ಸಾದ ಕಾಯ್ದೆಯನ್ನು ಕೂಲಂಕುಷವಾಗಿ ವಿಶ್ಲೇಷಿಸುವುದು ಅಗತ್ಯವಾಗುತ್ತದೆ. ಒರಿಸ್ಸಾ ಕಾಯ್ದೆಯ ಸೆಕ್ಷನ್ ೩ರಲ್ಲಿ *'ಯಾವುದೇ ವ್ಯಕ್ತಿಯು ಪರೋಕ್ಷವಾಗಿಯಾಗಲೀ, ನೇರವಾಗಿಯಾಗಲೀ ಮತ್ತೊಬ್ಬ ವ್ಯಕ್ತಿಯನ್ನು, ಬಲಾತ್ಕಾರದಿಂದ, ವಂಚನೆಯಿಂದ, ಪ್ರಲೋಭನೆಯಿಂದ, ಒಂದು ಧರ್ಮದಿಂದ ಮತ್ತೊಂದು ಧರ್ಮಕ್ಕೆ ಪರಿವರ್ತಿಸಲೆತ್ನಿಸುವುದು, ಅಥವಾ ಅಂತಹ ಯತ್ನಗಳಿಗೆ ಕುಮ್ಮಕ್ಕು ನೀಡುವುದು ನಿಷಿದ್ಧ'* ಎಂದು ಹೇಳಿರುವುದರಿಂದ, ಯಾವುದೇ ರೀತಿಯ ಮತಾಂತರಗಳೂ ಸಹ ಈ ಕಾಯ್ದೆಯ ವ್ಯಾಪ್ತಿಗೆ ಸೇರಿಬಿಡುತ್ತದೆ.

ಒಂದು ಧರ್ಮವನ್ನು ತ್ಯಜಿಸಿ ಮತ್ತೊಂದು ಧರ್ಮವನ್ನು ಸ್ವೀಕಾರ ಮಾಡುವುದು ಮತಾಂತರವಾಗುತ್ತದೆಂದು ಕಾಯ್ದೆಯಲ್ಲಿ ಹೇಳಲಾಗಿದೆ. ಬಲಪ್ರದರ್ಶನ ಮಾಡುವುದು, ಗಾಯಗೊಳಿಸಲು ಹೆದರಿಸುವುದು, ದೇವರು ಮುನಿಸಿಕೊಳ್ಳುತ್ತಾನೆಂದು ನಂಬಿಸುವುದು, ಸಾಮಾಜಿಕ ಬಹಿಷ್ಕಾರದ ಬೆದರಿಕೆ ಹಾಕುವುದು ಮುಂತಾದವುಗಳನ್ನು ಬಲಾತ್ಕಾರವೆಂದು ಪರಿಗಣಿಸಲಾಗುತ್ತದೆ.

> **ಲಕ್ಷ್ಮಣಾನಂದ ಸ್ವಾಮಿಯ ನೇತೃತ್ವದಲ್ಲಿ ಸಂಘಪರಿವಾರವು ಒರಿಸ್ಸಾದ ಕಂಧಮಾಲ್ ಜಿಲ್ಲೆಯಲ್ಲಿ ಕ್ರೈಸ್ತ ಮಿಷನರಿಗಳ ವಿರುದ್ಧ ಆಕ್ರಮಣ ಪ್ರಾರಂಭಿಸಿತ್ತು. ಕ್ರೈಸ್ತ ಮತಕ್ಕೆ ಪರಿವರ್ತಿತರಾದ ಆದಿವಾಸಿಗಳನ್ನು ಪುನಃ ಹಿಂದೂ ಧರ್ಮಕ್ಕೆ ಕರೆತರುವ ನಿಟ್ಟಿನಲ್ಲಿ ಶುದ್ಧೀಕರಣ ಮತ್ತು ಮರು ಮತಾಂತರ ಪ್ರಕ್ರಿಯೆಗೆ ಚಾಲನೆ ನೀಡಿತ್ತು. ಈ ಸಂದರ್ಭದಲ್ಲಿ ಸಂಭವಿಸಿದ ಗಲಭೆಗಳಲ್ಲಿ ಒಂಬತ್ತು ಚರ್ಚುಗಳನ್ನು ಧ್ವಂಸ ಮಾಡಲಾಗಿತ್ತು. ಆದಿವಾಸಿ ಸಮುದಾಯ ಮತ್ತು ದಲಿತರ ನಡುವಿನ ವೈಮನಸ್ಯಗಳನ್ನು ಉಪಯೋಗಿಸಿಕೊಂಡು ಈ ಪ್ರದೇಶದಲ್ಲಿ ತಮ್ಮ ನೆಲೆ ಕಂಡುಕೊಂಡಿರುವ ಸಂಘ ಪರಿವಾರದ ಕಾರ್ಯಕರ್ತರು ಪ್ರತಿಯೊಂದು ಗ್ರಾಮವನ್ನೂ ತಮ್ಮ ಹಿಡಿತದಲ್ಲಿರಿಸಿಕೊಂಡಿದ್ದು, ರಾಜ್ಯ ಸರ್ಕಾರದ ನೆರವಿನಿಂದ ಆದಿವಾಸಿಗಳನ್ನು ಕಳೆದ ಆರು ತಿಂಗಳಿನಿಂದ ನಿರಾಶ್ರಿತರ ತಾಣಗಳಲ್ಲೇ ಇರುವಂತೆ ಮಾಡಿದ್ದರು. ಈ ಹಿನ್ನೆಲೆಯಲ್ಲೇ ಆಗಸ್ಟ್ ತಿಂಗಳಲ್ಲಿ ಲಕ್ಷ್ಮಣಾನಂದರ ಹತ್ಯೆಯಾಗಿತ್ತು.**

ಯಾವುದೇ ಹಣದ ಮೂಲಕ ಅಥವಾ ಬೇರಾವುದೇ ರೀತಿಯಲ್ಲಿ ಉಡುಗೊರೆ ಅಥವಾ ಪ್ರತಿಫಲ ನೀಡುವುದು, ಯಾವುದೇ ಸೌಲಭ್ಯಗಳನ್ನು ಒದಗಿಸುವುದು ಪ್ರಲೋಭನೆ ಒಡ್ಡಿದಂತೆ ಎಂದು ಕಾಯ್ದೆಯಲ್ಲಿ ಅರ್ಥೈಸಲಾಗಿದೆ. ತಪ್ಪು ಮಾಹಿತಿ ನೀಡುವುದು ಮತ್ತು ಇನ್ನಿತರ ಯಾವುದೇ ವಂಚಕ ತಂತ್ರಗಳನ್ನು ಹೂಡುವುದನ್ನು ವಂಚನೆ ಎಂದು ಪರಿಗಣಿಸಲಾಗುತ್ತದೆ. ಈ ವ್ಯಾಖ್ಯಾನಗಳನ್ನು ಯಾವ ರೀತಿಯಲ್ಲಾದರೂ ಅರ್ಥೈಸುವ ಸಾಧ್ಯತೆ ಇರುವುದರಿಂದ ಸರ್ಕಾರಿ ಅಧಿಕಾರಿಗಳು ಈ ಕಾಯ್ದೆಯನ್ನು ದುರುಪಯೋಗಪಡಿಸಿಕೊಳ್ಳುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಮಧ್ಯ ಪ್ರದೇಶದ ಮತಾಂತರ ನಿಷೇಧ ಕಾಯ್ದೆಯಲ್ಲಿ **ಪ್ರಲೋಭನೆ** ಎಂಬ ಪದದ ಬದಲಾಗಿ **ಆಕರ್ಷಣೆ** ಎಂಬ ಪದವನ್ನು ಸೇರಿಸಲಾಗಿದೆಯಾದರೂ, ಕಾಯ್ದೆಯ ಕಾರ್ಯ ವ್ಯಾಪ್ತಿಯಲ್ಲಿ ಯಾವುದೇ ಬದಲಾವಣೆ ಕಂಡುಬರುವುದಿಲ್ಲ. ಆದರೆ ಈ ಕಾಯ್ದೆಯಡಿಯಲ್ಲಿ ಮತಾಂತರ ಹೊಂದಿದ ವ್ಯಕ್ತಿ ವಿಷಯವನ್ನು ಜಿಲ್ಲಾ ಮ್ಯಾಜಿಸ್ಟ್ರೇಟ್ ಕಛೇರಿಗೆ ಕೂಡಲೇ ತಿಳಿಸದಿದ್ದಲ್ಲಿ ಒಂದು ವರ್ಷದ ಕಾಲ ಜೈಲುವಾಸ ಅನುಭವಿಸಬೇಕಾಗುತ್ತದೆ. ಈ ಎರಡೂ ಕಾಯ್ದೆಗಳ ಔಚಿತ್ಯವನ್ನು ಆಯಾ ಉಚ್ಚ ನ್ಯಾಯಾಲಯಗಳಲ್ಲಿ ಪ್ರಶ್ನಿಸಲಾಗಿತ್ತು. ಒರಿಸ್ಸಾ ಉಚ್ಚ ನ್ಯಾಯಾಲಯವು ರಾಜ್ಯದ ಕಾಯ್ದೆಯನ್ನು ಸಂವಿಧಾನದ ೨೫ನೆಯ ವಿಧಿಯ ಉಲ್ಲಂಘನೆಯಾಗುವುದೆಂದು ತೀರ್ಪು ನೀಡಿ ಅನೂರ್ಜಿತಗೊಳಿಸಿತ್ತು. ರಾಜ್ಯ ವಿಧಾನಸಭೆಗೆ ಇಂತಹ ಶಾಸನವನ್ನು ಜಾರಿಗೊಳಿಸುವ ಸಂವಿಧಾನಾತ್ಮಕ ಹಕ್ಕು ಇಲ್ಲವೆಂದೂ ನ್ಯಾಯಾಲಯ ತೀರ್ಪು ನೀಡಿತ್ತು. ಆದರೆ ಮಧ್ಯಪ್ರದೇಶ ಉಚ್ಚ ನ್ಯಾಯಾಲಯವು ಅಲ್ಲಿನ ಸರ್ಕಾರದ ಕಾಯ್ದೆಯನ್ನು ಎತ್ತಿ ಹಿಡಿದಿತ್ತು. ಈ ಎರಡೂ ತೀರ್ಪುಗಳ ವಿರುದ್ಧ ಸಲ್ಲಿಸಲಾದ ಮೇಲ್ಮನವಿಯ ವಿಚಾರಣೆಯ ಸಂದರ್ಭದಲ್ಲಿ ಸರ್ವೋಚ್ಚ ನ್ಯಾಯಾಲಯವು ಎರಡೂ ಕಾಯ್ದೆಗಳನ್ನು ಎತ್ತಿ ಹಿಡಿದಿತ್ತು (ಸ್ಟೈನಿಸ್ಲಾಸ್ ಮತ್ತು ಮಧ್ಯ ಪ್ರದೇಶ ಸರ್ಕಾರ ಮತ್ತಿತರರು ೧೯೭೭) ಸರ್ವೋಚ್ಚ ನ್ಯಾಯಾಲಯದ ಈ ತೀರ್ಪು ಇತರ ರಾಜ್ಯಗಳಲ್ಲೂ ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಲು ನಾಂದಿಯಾಗಿತ್ತು. ಸಂವಿಧಾನದ ವಿಧಿ ೨೫(೧)ರ ಅನ್ವಯ ಈ ಕಾಯ್ದೆಗಳು ಸಂವಿಧಾನ ನಿಯಮಗಳ ಉಲ್ಲಂಘನೆಯಾಗಿದೆಯೇ ಮತ್ತು ರಾಜ್ಯ ವಿಧಾನ ಸಭೆಗಳು ಈ ಶಾಸನ ಜಾರಿಗೊಳಿಸಲು ಅರ್ಹವೇ ಎಂಬ ಅಂಶಗಳನ್ನೇ ಸರ್ವೋಚ್ಚ ನ್ಯಾಯಾಲಯವು ಪ್ರಧಾನವಾಗಿ ಪರಿಗಣಿಸಿದ್ದರಿಂದ, ನ್ಯಾಯಾಲಯದ ತೀರ್ಪನ್ನು ವಿಶ್ಲೇಷಿಸುವುದು ಅಗತ್ಯವಾಗುತ್ತದೆ.

ಧರ್ಮ ಪ್ರಸಾರದ ಸಂವಿಧಾನಿಕ ಹಕ್ಕು

'ಸಾರ್ವಜನಿಕ ರೀತಿ ರಿವಾಜುಗಳು, ನೈತಿಕತೆ ಮತ್ತು ಆರೋಗ್ಯಕರ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು, ಸಂವಿಧಾನದ ಮೂರನೇ ಪರಿಚ್ಛೇದದ ಇತರ ನಿಯಮಗಳಿಗೆ ಒಳಪಟ್ಟಂತೆ, ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಆತ್ಮಸಾಕ್ಷಿಗನುಗುಣವಾಗಿ ಯಾವುದೇ ಧರ್ಮವನ್ನು ಒಪ್ಪಿಕೊಳ್ಳುವ, ಆಚರಿಸುವ, ಮುಕ್ತವಾಗಿ ಅನುಸರಿಸುವ, ಪ್ರಸಾರ ಮಾಡುವ ಹಕ್ಕು ಇರುತ್ತದೆ' ಎಂದು ಸಂವಿಧಾನ ವಿಧಿ ೨೫(೧)ರಲ್ಲಿ ಹೇಳಲಾಗಿದೆ. ಧರ್ಮವನ್ನು ಪ್ರಸಾರ ಮಾಡುವ ಹಕ್ಕು ಎಂದರೆ ಇತರರನ್ನು ತನ್ನ ಧರ್ಮಕ್ಕೆ ಪರಿವರ್ತಿಸುವ ಹಕ್ಕು ಎಂದೂ ಅರ್ಥೈಸಬಹುದು ಎಂಬ ವಾದವನ್ನು ಸರ್ವೋಚ್ಚ ನ್ಯಾಯಾಲಯ ತಳ್ಳಿಹಾಕಿತ್ತು. "ಪ್ರಸಾರ ಮಾಡುವುದು ಎಂದರೆ ಮತಾಂತರ ಮಾಡುವ ಹಕ್ಕು ಇದೆ ಎಂದು ವ್ಯಾಖ್ಯಾನಿಸಲಾಗುವುದಿಲ್ಲ. ವಿಧಿ ೨೫ರಲ್ಲಿ ಯಾವುದೇ ವ್ಯಕ್ತಿಗೆ ತನ್ನ ಧರ್ಮದ ತತ್ವಗಳನ್ನು ಪ್ರಚಾರ ಮಾಡುವ ಹಕ್ಕು ನೀಡಲಾಗಿದೆಯೇ ಹೊರತು ಮತ್ತೊಬ್ಬರನ್ನು ಮತಾಂತರಗೊಳಿಸಲು ಹಕ್ಕು ನೀಡಲಾಗಿಲ್ಲ " ಎಂದು ನ್ಯಾಯಾಲಯದ ತೀರ್ಪಿನಲ್ಲಿ ಉಲ್ಲೇಖಿಸಲಾಗಿತ್ತು. ಇದೇ ತೀರ್ಪಿನಲ್ಲಿ ಆತ್ಮಸಾಕ್ಷಿ ಸ್ವಾತಂತ್ರ್ಯವನ್ನು ವಿಶ್ಲೇಷಿಸಿದ ನ್ಯಾಯಾಲಯವು " ವಿಧಿ ೨೫(೧)ರ ಅನ್ವಯ ಆತ್ಮಸಾಕ್ಷಿ ಸ್ವಾತಂತ್ರ್ಯ ಎಲ್ಲ ಧರ್ಮದ ಜನರಿಗೂ ಸಮಾನವಾಗಿ ಲಭಿಸಿರುತ್ತದೆ. ಹಾಗಾಗಿ ಯಾವುದೇ ವ್ಯಕ್ತಿಯು, ತನ್ನ ಧರ್ಮದ ತತ್ವಗಳನ್ನು ಪ್ರಸಾರ ಮಾಡುವ ನೆಪದಲ್ಲಿ, ಮತ್ತೊಬ್ಬರನ್ನು ತನ್ನ ಧರ್ಮಕ್ಕೆ ಪರಿವರ್ತಿಸಲು ಯತ್ನಿಸಿದರೆ ಅದು ಪರಿವರ್ತಿತ ವ್ಯಕ್ತಿಯ ಆತ್ಮಸಾಕ್ಷಿ ಸ್ವಾತಂತ್ರ್ಯದ ಹರಣವಾಗುತ್ತದೆ " ಎಂದು ವ್ಯಾಖ್ಯಾನಿಸಿತ್ತು.

ಈ ತೀರ್ಪಿನಲ್ಲಿ ಕಂಡುಬರುವ ನ್ಯೂನತೆಗಳ ಬಗ್ಗೆ ಖ್ಯಾತ ನ್ಯಾಯವಾದಿ ದಿ. ಎಚ್.ಎಂ. ಸೀರ್ವಾಯಿಯವರು ಅನೇಕ ಸಂದರ್ಭಗಳಲ್ಲಿ ಉಲ್ಲೇಖಿಸಿರುವುದನ್ನು ಇಲ್ಲಿ ಸ್ಮರಿಸಬಹುದು. ಭಾರತದ ಸಂವಿಧಾನ ಬದ್ಧ ಕಾನೂನು ಎಂಬ ಬೃಹತ್ ಗ್ರಂಥವನ್ನು ರಚಿಸಿರುವ ಸೀರ್ವಾಯಿಯವರು ತಮ್ಮ ಕೃತಿಯಲ್ಲಿ (ಸಂಪುಟ ೨ ೧೯೯೩) ಈ ತೀರ್ಪಿನ ಬಗ್ಗೆ ಉಲ್ಲೇಖಿಸಿ, ಸರ್ವೋಚ್ಚ

ನ್ಯಾಯಾಲಯವು ಮೊಕದ್ದಮೆಯೊಳ್ಳಿ ವಿಧಿ ೨೫ರ ಶಾಸನ ರಚನೆಯ ಇತಿಹಾಸವನ್ನು ಪರಿಗಣಿಸಬೇಕಿತ್ತು ಎಂದು ಎಚ್ಚರಿಸುತ್ತಾರೆ. (ಪು ೧೨೮೭). ಸಂವಿಧಾನ ರಚನಾ ಮಂಡಲಿಯಲ್ಲಿ **ಪ್ರಸಾರ** ಎಂಬ ಪದವನ್ನು ಬಳಸುವ ಸಂದರ್ಭದಲ್ಲಿ ಸಾಕಷ್ಟು ಚರ್ಚೆಗಳಾಗಿದ್ದವು. " ಟಿ.ಟಿ. ಕೃಷ್ಣಮಾಚಾರಿಯವರು ಈ ಬಗ್ಗೆ ವ್ಯಾಖ್ಯಾನ ಮಾಡುವ ಸಂದರ್ಭದಲ್ಲಿ, ಸಂವಿಧಾನದ ವಿಧಿ ೨೫ರ ಅನ್ವಯ ಕ್ರೈಸ್ತರಿಗೆ, ಮುಸ್ಲಿಮರಿಗೆ, ಜೈನರಿಗೆ ಮತ್ತು ಬೌದ್ಧರಿಗೆ ತಮ್ಮ ಧರ್ಮಗಳ ಪ್ರಸಾರದ ಹಕ್ಕು ಇರುವುದಾದಲ್ಲಿ, ಆರ್ಯ ಸಮಾಜ ಮತ್ತು ಹಿಂದೂಗಳಿಗೂ ಸಹ ತಮ್ಮ ಶುದ್ಧಿ ಪ್ರಸಾರವನ್ನು ಮುಂದುವರೆಸುವ ಹಕ್ಕು ಇರುತ್ತದೆ ಎಂದು ಹೇಳಿದ್ದುದನ್ನು " ಎಂದು ಸೀರ್ವಾಯಿಯವರು ಉಲ್ಲೇಖಿಸುತ್ತಾರೆ.

ಕ್ರೈಸ್ತ ಧರ್ಮದ ತತ್ವಗಳ ಪ್ರಕಾರ ಧರ್ಮ ಪ್ರಸಾರ [illegible] ಭಾಗವಾಗಿದ್ದರಿಂದ ಸಂವಿಧಾನದ ವಿಧಿ ೨೫ರ [illegible] ಸಂದರ್ಭದಲ್ಲಿ **ಪ್ರಸಾರ** ಎಂಬ ಪದಕ್ಕೆ ವಿಶಿಷ್ಟ ಅರ್ಥ ನೀಡಲಾಗಿತ್ತೆಂದು ಕೆ.ಎಂ. ಮುನ್ಷಿಯವರು ತಮ್ಮ ಭಾಷಣದಲ್ಲಿ ಹೇಳುವುದನ್ನು ಸೀರ್ವಾಯಿಯವರು ನೆನೆಯುತ್ತಾರೆ. ವಿಧಿ ೨೫ರಲ್ಲಿ **ಪ್ರಸಾರ** ಎಂಬ ಪದದ ಉಲ್ಲೇಖ ಇಲ್ಲದೆ ಹೋಗಿದ್ದರೂ ಸಂವಿಧಾನಾತ್ಮಕವಾಗಿ ಲಭ್ಯವಾಗಿರುವ ವಾಕ್ ಸ್ವಾತಂತ್ರ್ಯದ ಪರಿಮಿತಿಯಲ್ಲೇ ಇತರರನ್ನು ತನ್ನ ಧರ್ಮಕ್ಕೆ ಸೇರುವಂತೆ ಪ್ರೇರೇಪಿಸುವುದು ಮೂಲಭೂತ ಹಕ್ಕಾಗುತ್ತದೆ. ಹಾಗಾಗಿ **ಪ್ರಸಾರ** ಎಂಬ ಪದಕ್ಕೆ ವಿಶಿಷ್ಟವಾದ ಅರ್ಥಗಳನ್ನು ಕಲ್ಪಿಸುವ ಅಗತ್ಯವಿಲ್ಲ ಎಂದೂ ಮುನ್ಷಿಯವರು ಹೇಳುತ್ತಾರೆ.

ಸರ್ವೋಚ್ಚ ನ್ಯಾಯಾಲಯವು ಸ್ಟೈನಿಸ್ಲಾಸ್ ಮೊಕದ್ದಮೆಯ ಸಂದರ್ಭದಲ್ಲಿ ಮತಾಂತರ ಪ್ರಕ್ರಿಯೆ ಕ್ರೈಸ್ತ ಧರ್ಮದ ಒಂದು ಅಂಶಿಕ ಭಾಗವೇ ಎಂಬ ಅಂಶವನ್ನು ಪರಿಗಣಿಸಿಯೇ ಇರಲಿಲ್ಲ, ಒರಿಸ್ಸಾದ ಉಚ್ಚ ನ್ಯಾಯಾಲಯವು ಇದೇ ಅಂಶವನ್ನೇ ಪರಿಗಣಿಸಿ ತನ್ನ ತೀರ್ಪು ನೀಡಿದ್ದುದರ ಹಿನ್ನೆಲೆಯಲ್ಲಿ, ಈ ತೀರ್ಪಿನ ವಿರುದ್ಧ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನು ಆಲಿಸುತ್ತಿದ್ದ ಸರ್ವೋಚ್ಚ ನ್ಯಾಯಾಲಯವು ಮತಾಂತರ ಪ್ರಕ್ರಿಯೆ ಕ್ರೈಸ್ತ ಧರ್ಮದ ತತ್ವಗಳಲ್ಲಿ ಒಂದು ಎಂಬ ಅಂಶವನ್ನು ಪರಿಗಣಿಸಬೇಕಿತ್ತು ಎಂದು ಸೀರ್ವಾಯಿಯವರು ಸ್ಪಷ್ಟವಾಗಿ ವಾದಿಸುತ್ತಾರೆ.

ಒರಿಸ್ಸಾದ ಉಚ್ಚ ನ್ಯಾಯಾಲಯದ ತೀರ್ಪನ್ನು ಅನೂರ್ಜಿತಗೊಳಿಸಿದ ಸರ್ವೋಚ್ಚ ನ್ಯಾಯಾಲಯವು 'ಸಂವಿಧಾನದ ವಿಧಿ ೨೫(೧)ರ ಪ್ರಕಾರ ಧರ್ಮ ಪ್ರಸಾರ ಮತ್ತು ಮತಾಂತರ ಮಾಡುವುದು ಕ್ರೈಸ್ತ ಧರ್ಮದ ಒಂದು ಅಂಗ' ಎಂಬ ಉಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲೇಖಿಸದೆಯೇ ಅಥವಾ ತಳ್ಳಿಹಾಕದೆಯೇ ತೀರ್ಪು ನೀಡಿರುವುದರಿಂದ, ಒರಿಸ್ಸಾ ನ್ಯಾಯಾಲಯದ ತೀರ್ಪು ಇಂದಿಗೂ ಸಮ್ಮತವಾಗಿದೆ ಎಂದು ಸೀರ್ವಾಯಿಯವರು ತಮ್ಮ ಕೃತಿಯಲ್ಲಿ ಪ್ರತಿಪಾದಿಸುತ್ತಾರೆ.

'ಎ ಎಂಬ ವ್ಯಕ್ತಿಯು ತನ್ನ ಧರ್ಮವನ್ನು ಪ್ರಸಾರ ಮಾಡುವ ನಿಟ್ಟಿನಲ್ಲಿ ಬಿ ಎಂಬ ವ್ಯಕ್ತಿಯನ್ನು ಮತಾಂತರಗೊಳಿಸಿದರೆ ಅದು ಬಿ ಎಂಬ ವ್ಯಕ್ತಿಯ ಆತ್ಮಸಾಕ್ಷಿ ಸ್ವಾತಂತ್ರ್ಯ ಹರಣವಾಗುತ್ತದೆ ಎಂದು ಸರ್ವೋಚ್ಚ ನ್ಯಾಯಾಲಯ ಹೇಳುತ್ತದೆ. ಆದರೆ ವಸ್ತುನಿಷ್ಠವಾಗಿ ನೋಡಿದಾಗ ಬಿ ಎಂಬ ವ್ಯಕ್ತಿಯು ತನ್ನ ಧರ್ಮದ ತತ್ವಗಳನ್ನು ಒಪ್ಪಿಕೊಳ್ಳಲಿ ಎಂಬ ಉದ್ದೇಶದಿಂದ ಎ ಎಂಬಾತನು ಧರ್ಮ ಪ್ರಸಾರ ಮಾಡಿದಲ್ಲಿ ಅದು ಬಿ ಎಂಬಾತನಿಗೆ ತನ್ನದೇ ಆದ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಮುಕ್ತ ಅವಕಾಶವನ್ನು ನೀಡುತ್ತದೆ' ಎಂದು ಹೇಳುವ ಮೂಲಕ ಸೀರ್ವಾಯಿ ಯವರು ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ನ್ಯೂನತೆಯನ್ನು ಹೊರಗೆಡವುತ್ತಾರೆ.

ಧಾರ್ಮಿಕ ಸ್ವಾತಂತ್ರ್ಯದ ಪರಿಮಿತಿ

ಸಂವಿಧಾನದ ವಿಧಿ ೨೫(೧)ರನ್ವಯ ನೀಡಲಾಗಿರುವ 'ಧಾರ್ಮಿಕ ಸ್ವಾತಂತ್ರ್ಯ'ದ ಪರಿಕಲ್ಪನೆಯು ಯಾವುದೇ ವ್ಯಕ್ತಿಯು ಜನ್ಮ ತಳೆದ ಧರ್ಮಕ್ಕಷ್ಟೆ ಸೀಮಿತಗೊಳ್ಳದೆ ಎಲ್ಲ ಧರ್ಮಗಳನ್ನೂ ಒಳಗೊಳ್ಳುತ್ತದೆ ಎಂದು ಸೀರ್ವಾಯಿಯವರು ಪ್ರತಿಪಾದಿಸುತ್ತಾರೆ. ಆತ್ಮಸಾಕ್ಷಿ ಸ್ವಾತಂತ್ರ್ಯವೂ ಸಹ ಇದೇ ನಿಟ್ಟಿನಲ್ಲಿ ರೂಪುಗೊಂಡಿದ್ದು ವಿಧಿ ೨೫(೧)ರಲ್ಲಿ ಆತ್ಮಸಾಕ್ಷಿ ಸ್ವಾತಂತ್ರ್ಯದ ಹಕ್ಕನ್ನು ಉಲ್ಲೇಖಿಸಿರುವುದು ಪ್ರಜೆಗಳಿಗೆ ತಮ್ಮದೇ ಆದ ಧರ್ಮವನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ನೀಡುವ ಉದ್ದೇಶದಿಂದ ಮಾತ್ರ ಎಂದು ಸೀರ್ವಾಯಿಯವರು ಹೇಳುತ್ತಾರೆ. ಹಾಗಾಗಿ ಸಂವಿಧಾನದ ಪ್ರಕಾರ ಯಾವುದೇ ಭಾರತೀಯ ಪ್ರಜೆಗೆ ತಾನು ಜನಿಸಿದ ಧರ್ಮವನ್ನೇ ಆಗಲೀ, ಅಥವಾ ತನ್ನ ಆತ್ಮಸಾಕ್ಷಿಯು ಒಪ್ಪಿಕೊಳ್ಳುವಂತಹ ಯಾವುದೇ ಇತರ ಧರ್ಮವನ್ನು ಸ್ವೀಕರಿಸುವ ಮತ್ತು ಆಚರಿಸುವ ಹಕ್ಕು ಇರುತ್ತದೆ ಎಂದು ಹೇಳಬಹುದು.

'ಧರ್ಮ ಪ್ರಸಾರದ ಹಕ್ಕು ಒಂದು ರೀತಿಯಲ್ಲಿ ಆಯ್ಕೆಯ ಸ್ವಾತಂತ್ರ್ಯವನ್ನೂ ನೀಡುತ್ತದೆ. ಯಾವುದೇ ವ್ಯಕ್ತಿಯು ತಾನು ಆಯ್ಕೆ ಮಾಡಿಕೊಳ್ಳುವ ಮಾರ್ಗದಲ್ಲಿನ ಬಗ್ಗೆ ಸಂಪೂರ್ಣ ಜ್ಞಾನ ಗಳಿಸದೆ ಒಪ್ಪಿಕೊಳ್ಳುವುದಿಲ್ಲ. ಹಾಗಾಗಿ ಧರ್ಮ ಪ್ರಸಾರವೆಂದರೆ ಕೇವಲ ಆ ಧರ್ಮದ ಬಗ್ಗೆ ತಿಳುವಳಿಕೆ ಮೂಡಿಸುವುದಷ್ಟೆ ಅಲ್ಲದೆ ಆ ಧರ್ಮವನ್ನು ಒಪ್ಪಿಕೊಳ್ಳುವಂತಹ ನೈತಿಕ, ಬೌದ್ಧಿಕ ನಂಬಿಕೆಯನ್ನು ಮೂಡಿಸುವುದು ಎಂದಾಗುತ್ತದೆ. ಹಾಗಾಗಿ ಯಶಸ್ವಿ ಧರ್ಮ ಪ್ರಸಾರ ಕಾರ್ಯವು ಮತಾಂತರದಲ್ಲೇ ಪರ್ಯವಸಾನ ಹೊಂದುತ್ತದೆ' ಎಂದು ಸ್ಪಷ್ಟವಾಗಿ ಹೇಳುವ ಮೂಲಕ ಸೀರ್ವಾಯಿಯವರು ಸರ್ವೋಚ್ಚ ನ್ಯಾಯಾಲಯದ ಸ್ಟೈನಿಸ್ಲಾಸ್ ಮೊಕದ್ದಮೆಯ ತೀರ್ಪನ್ನು ಪುನರ್ ಪರಿಶೀಲಿಸಲು ಆಗ್ರಹಿಸುತ್ತಾರೆ. ಈ ತೀರ್ಪನ್ನು ಆಧರಿಸಿಯೇ ಮತಾಂತರ ಮಾಡುವುದು ಸಂವಿಧಾನ ವಿರೋಧಿ ಕೃತ್ಯ ಎಂಬ ಮಿಥ್ಯೆಯನ್ನು ಸೃಷ್ಟಿಸಿ, ಒರಿಸ್ಸಾ ಮತ್ತಿತರ ರಾಜ್ಯಗಳಲ್ಲಿ ಕ್ರೈಸ್ತರ ವಿರುದ್ಧ ಆಕ್ರಮಣ ನಡೆಸಲಾಗುತ್ತಿದೆ

ಅಂತಿಮವಾಗಿ

ಮತಾಂತರ ಎನ್ನುವುದು ಇತ್ತೀಚಿನ ದಿನಗಳ ವಿದ್ಯಮಾನವೇನಲ್ಲ. ಅಥವಾ ಕ್ರೈಸ್ತರು, ಮುಸ್ಲಿಮರು ಭಾರತಕ್ಕೆ ಬಂದ ನಂತರ ಉಗಮಗೊಂಡ ಪ್ರಕ್ರಿಯೆಯೂ ಅಲ್ಲ. ಮತ ಧರ್ಮಗಳು ಪ್ರಾರಂಭವಾದಂದಿನಿಂದಲೂ ಈ ಪ್ರಕ್ರಿಯೆ ಒಂದಲ್ಲ ಒಂದು ರೀತಿಯಲ್ಲಿ ವ್ಯಕ್ತವಾಗುತ್ತಲೇ ಇದೆ. ಯಾವುದೇ ವ್ಯಕ್ತಿ ತನ್ನ ಧರ್ಮವನ್ನು ತೊರೆದು ಅನ್ಯ ಧರ್ಮವನ್ನು ಅನುಸರಿಸುವುದು ಮಹಾಪರಾಧವೆಂದಾದರೆ ಬಸವಣ್ಣ, ಬುದ್ಧ, ಮಹಾವೀರ ಮುಂತಾದ ಅನೇಕ ಮಹಾನ್ ಯೋಗಿಗಳನ್ನೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕಾಗುತ್ತದೆ. ಜಾಗತಿಕ ಇತಿಹಾಸದಲ್ಲಿ ಮಾನವನ ಐಹಿಕ ಮತ್ತು ಭೌತಿಕ ಸೌಕರ್ಯಗಳಿಗಾಗಿ, ಭೋಗವಿಲಾಸಗಳಿಗಾಗಿ ಉಗಮಗೊಂಡ ಮತ ಧರ್ಮಗಳು ಶ್ರೇಷ್ಠತೆಯ ಪ್ರತೀಕವೇ ಆಗಿದ್ದಲ್ಲಿ ಎಲ್ಲ ಧರ್ಮಗಳಲ್ಲೂ ಒಂದೇ ಶಾಖೆಗಳಿರುತ್ತಿದ್ದವು. ಉನ್ನತ ಆದರ್ಶಗಳನ್ನು ಅನುಸರಿಸಿ ಹೊಸದಾದ ಧರ್ಮವನ್ನು ಸ್ಥಾಪಿಸಿದ ಬುದ್ಧ, ಮಹಾವೀರ ಮತ್ತು ಬಸವಣ್ಣನವರ ಸ್ವಪ್ರಯತ್ನಗಳೇ ಕಾಲಾನುಘಟ್ಟದಲ್ಲಿ ವಿಘಟನೆ ಹೊಂದಿರುವುದನ್ನು ಇತಿಹಾಸ ನಿರೂಪಿಸಿದೆ. ಬೌದ್ಧ, ಜೈನ, ವೀರಶೈವ, ಇಸ್ಲಾಂ, ಕ್ರೈಸ್ತ ಧರ್ಮಗಳು ಎಲ್ಲವೂ ಒಂದು ಹಂತದಲ್ಲಿ ವಿಘಟಿತವಾಗಿದ್ದು, ಮತಾಂತರ ಪ್ರಕ್ರಿಯೆಗೆ ಪೂರಕ ವಾತಾವರಣವನ್ನು ಸೃಷ್ಟಿಸಿವೆ. ಹಿಂದೂ ಧರ್ಮ ಎಂಬ ಪರಿಕಲ್ಪನೆಯೇ ಇತ್ತೀಚಿನ ಶತಮಾನಗಳ ಆವಿಷ್ಕಾರವಾಗಿರುವುದರಿಂದ ಸಂಘ ಪರಿವಾರ ಪ್ರತಿಪಾದಿಸುವ ಹಿಂದೂ ಧರ್ಮದಲ್ಲಿ ವಿಘಟನೆ ಕಂಡುಬರುವುದಿಲ್ಲ. ಆದಾಗ್ಯೂ ಧಾರ್ಮಿಕ ಕಟ್ಟಳೆಗಳನ್ನು ವಿರೋಧಿಸಿ, ತಮ್ಮದೇ ಆದ ವಿಭಿನ್ನ ಹಾದಿಯನ್ನು ಅನುಸರಿಸಿದ ಘಟನೆಗಳು ಭಾರತೀಯ ಸಮಾಜದಲ್ಲೂ ನಡೆದಿವೆ. ಚಾರ್ವಾಕನಿಂದ ಹಿಡಿದು ರಾಮಕೃಷ್ಣ ಪರಮಹಂಸರವರೆಗೆ ವೈದಿಕ ಧರ್ಮದ ವಿರುದ್ಧ ಸೆಟೆದು ನಿಂತವರಿದ್ದಾರೆ. ಇಂದು ಹಿಂದೂ ಧರ್ಮವನ್ನು ತನ್ನ ಹಿಡಿತದಲ್ಲಿರಿಸಿಕೊಂಡಿರುವ ವೈದಿಕ ಧರ್ಮಕ್ಕೆ ಮತಾಂತರದ ವಿರುದ್ಧ ಮಾತನಾಡುವ ನೈತಿಕ ಹಕ್ಕು ಇಲ್ಲವೆಂದು ಈ ಘಟನೆಗಳೇ ನಿರೂಪಿಸುತ್ತವೆ.

ಆದಾಗ್ಯೂ ಭಾರತದ ಸಂವಿಧಾನದಲ್ಲಿ ಯಾವುದೇ ವ್ಯಕ್ತಿಗೆ ತನ್ನ ಸ್ವ ಇಚ್ಛೆಯಿಂದ ಯಾವುದೇ ಮತ–

ಒರಿಸ್ಸಾದಲ್ಲಿ ತಮ್ಮ ಕಾರ್ಯ ಸಾಧನೆಯಾದ ನಂತರ ಕರ್ನಾಟಕವನ್ನು ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡ ಸಂಘ ಪರಿವಾರಕ್ಕೆ ಕರ್ನಾಟಕದಲ್ಲಿ ಭಾಜಪ ಸರ್ಕಾರವಿರುವುದು ಒಂದು ವರದಾನವೇ ಸರಿ. ಕರ್ನಾಟಕದ ಮುಖ್ಯಮಂತ್ರಿ ಯಡ್ಯೂರಪ್ಪ ಮತ್ತು ಗೃಹ ಮಂತ್ರಿ ವಿ.ಎಸ್.ಆಚಾರ್ಯರವರು ತಾವು ಇನ್ನೂ ಖಾಕಿ ಚಡ್ಡಿ ಧರಿಸಿರುವ ಸಂಘ ಪರಿವಾರದ ಕಾರ್ಯಕರ್ತರೆಂದೇ ಭಾವಿಸಿದ್ದಾರೆನಿಸುತ್ತದೆ. ಬೆಂಗಳೂರು, ಮಂಗಳೂರು, ಭಟ್ಕಳ, ಉಡುಪಿ, ಕಾರವಾರ, ದಾವಣಗೆರೆ, ಹರಪನಹಳ್ಳಿ, ಕೋಲಾರ, ಹೀಗೆ ರಾಜ್ಯದಾದ್ಯಂತ ಭಜರಂಗದಳದ ಕಾರ್ಯಕರ್ತರು ಕ್ರೈಸ್ತರ ಪೂಜಾಸ್ಥಳಗಳ ಮೇಲೆ ಮಾರಣಾಂತಿಕ ದಾಳಿ ನಡೆಸುತ್ತಿದ್ದಾಗ್ಯೂ ಈ ಮಹಾಶಯರು '*ಇದು ಮತಾಂತರದ ವಿರುದ್ಧ ನಡೆಯುತ್ತಿರುವ ದಾಳಿಯಾಗಿದೆ, ಬಲವಂತದ ಮತಾಂತರ ನಡೆಯದಿದ್ದರೆ ಈ ದಾಳಿಗಳೂ ನಡೆಯುವುದಿಲ್ಲ*' ಎಂದು ಸಮರ್ಥನೆ ನೀಡಿದ್ದು ಇದಕ್ಕೆ ನಿದರ್ಶನ.

ಧರ್ಮವನ್ನು ಆಚರಿಸುವ, ಪಾಲಿಸುವ ಹಕ್ಕು ಲಭ್ಯವಾಗಿದೆ. ತನಗೆ ಬೇಕಾದ ಧರ್ಮವನ್ನು ಆಯ್ದುಕೊಳ್ಳುವ ಹಕ್ಕು ಇದೆ ಎಂದಾದಲ್ಲಿ, ಮತಾಂತರದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಯಾವುದೇ ವ್ಯಕ್ತಿಯು ತಾನು ಹುಟ್ಟಿದ ಧರ್ಮದಲ್ಲೇ ಕೊನೆಯುಸಿರಿರುವವರೆಗೂ ಬಾಳಬೇಕೆಂದು ನಿರ್ಬಂಧ ವಿಧಿಸುವುದು ಸಂವಿಧಾನ ವಿರೋಧಿ ಮಾತ್ರ ವಲ್ಲ, ಜನವಿರೋಧಿ ಕೃತ್ಯವಾಗುತ್ತದೆ. ಮತಾಂತರ ನಿಷೇಧ ಕಾಯ್ದೆ ಜಾರಿಗೊಳಿಸಿ ಎಂದು ಸರ್ಕಾರವನ್ನು ಆಗ್ರಹಿಸುವ ಮಠಾಧೀಶರುಗಳು ಮತಾಂತರದ ಹಿನ್ನೆಲೆಯನ್ನು ಕುರಿತು ಎಂದಾದರೂ ಯೋಚಿಸಿದ್ದಾರೆಯೇ ? ಹಿಂದೂ ಧರ್ಮಕ್ಕೆ ಸೇರಿದವರು ಇತರ ಧರ್ಮಗಳನ್ನು ಅಪ್ಪಿ ಕೊಂಡರೆ ಅದರ ಹಿಂದೆ ಸಾಮಾಜಿಕ, ಸಾಂಸ್ಕಿಕ ಕಾರಣ ಗಳಿರುತ್ತವೆ. ಹಿಂದೂ ಸಮಾಜದಲ್ಲಿ ತಾಂಡವಾಡುತ್ತಿರುವ ತಾರತಮ್ಯ, ಅಸ್ಪೃಶ್ಯತೆ, ಮೇಲು-ಕೀಳು ಭಾವನೆಗಳೂ ಸಹ ಮತಾಂತರ ಪ್ರಕ್ರಿಯೆಗೆ ಪೂರಕವಾಗಿರುತ್ತದೆ. ಈ ತಾರತಮ್ಯಗಳನ್ನು ಹೋಗಲಾಡಿಸುವಲ್ಲಿ ಮಠಾಧೀಶರು ಗಳು ಯಾವ ಕ್ರಮ ಕೈಗೊಂಡಿದ್ದಾರೆ ? ದಲಿತರ ಕೇರಿಗಳಿಗೆ ಭೇಟಿ ನೀಡುವುದು, ಅವರೊಡನೆ ಸಹಭೋಜನ ಮಾಡುವುದು, ರಾಜಕೀಯ ಪ್ರೇರೇಪಿತ ಕೃತ್ಯಗಳಾಗುವುದೇ ಹೊರತು, ಜಾತಿ ವ್ಯವಸ್ಥೆಯನ್ನಾಗಲೀ, ಅಸ್ಪೃಶ್ಯತೆಯನ್ನಾಗಲೀ ತೊಡೆದುಹಾಕುವ ಪ್ರಕ್ರಿಯೆಯಾ ಗುವುದಿಲ್ಲ.

ಸಂವಿಧಾನಿಕವಾಗಿ ಹಿಂದೂಗಳೆಂದು ಪರಿಗಣಿಸಲ್ಪ ಡುವ ದಲಿತ ಸಮುದಾಯಗಳು ಸಮಾಜದಲ್ಲಿ ನಿರ್ಭಯ ರಾಗಿ ಬಾಳುವುದೂ ದುಸ್ತರವಾಗಿರುವ ಸಂದರ್ಭದಲ್ಲಿ , ಉಸಿರು ಕಟ್ಟುವ ವಾತಾವರಣದಲ್ಲೇ ಇಡೀ ಬಾಳನ್ನು ಕಳೆಯಬೇಕೆಂದು ನಿರ್ಬಂಧಿಸುವುದು ಸಂವಿಧಾನ ವಿರೋಧಿ ಕೃತ್ಯವಾಗುತ್ತದೆ. ಕ್ರೈಸ್ತ ಮಿಷನರಿಗಳು ಪ್ರಲೋಭ ನೆಗಳನ್ನು ಒಡ್ಡಿ ಮತಾಂತರಗೊಳಿಸುವುದು, ಬಲಾತ್ಕಾರ ದಿಂದ ಮತಾಂತರ ಹೊಂದುವುದು ಸಂವಿಧಾನಬಾಹಿರ ಎಂದಾದಲ್ಲಿ, ತಾವು ಹುಟ್ಟಿದ ಧರ್ಮದಲ್ಲಿ ತಮ್ಮ ಅಸ್ಮಿತೆಯನ್ನು ಗುರುತಿಸಿಕೊಳ್ಳಲಾರದಂತೆ ಮಾಡುವ ಸಾಮಾಜಿಕ ಚೌಕಟ್ಟನ್ನು ನಿರ್ಮಾಣ ಮಾಡುವುದೂ , ತಮ್ಮ ಇಚ್ಛೆಗೆ ವಿರುದ್ಧವಾಗಿ ಹುಟ್ಟಿದ ಧರ್ಮದಲ್ಲೇ ಉಳಿಯಲು ಬಲಾತ್ಕಾರದಿಂದ ಪ್ರೇರೇಪಿಸುವುದೂ ಸಂವಿಧಾನ ಬಾಹಿರವಲ್ಲವೇ ? ಬಲವಂತದ ಮತಾಂತರ ಎಂಬ ನೆಪದಲ್ಲಿ ಕ್ರೈಸ್ತ ಮಿಷನರಿಗಳ ವಿರುದ್ಧ, ಮುಸ್ಲಿಮರ ವಿರುದ್ಧ ಆಕ್ರಮಣ ನಡೆಸುವ ಸಂಘ ಪರಿವಾರದವರು, ಗೋಹತ್ಯಾ ನಿಷೇದಕ್ಕಾಗಿ ಆಗ್ರಹಿಸುವ ಮೂಲಕ ಜನತೆಯ ಆಹಾರ ಪದ್ಧತಿಯನ್ನು ಬಲವಂತವಾಗಿ ಬದಲಾಯಿಸುವ ಪ್ರಯತ್ನ ನಡೆಸುತ್ತಿರುವುದು ಮಾನವ ವಿರೋಧಿ ಕೃತ್ಯವಲ್ಲವೇ?

ಮತಾಂತರ, .ಗೋಹತ್ಯೆ, ಭಯೋತ್ಪಾದನೆ ಇವೆಲ್ಲವೂ ಭಾಜಪದ ರಾಜಕೀಯ ಅಧಿಕಾರ ಗ್ರಹಣಕ್ಕೆ ಮತ್ತು ಸಂಘಪರಿವಾರದ ಫ್ಯಾಸಿಸ್ಟ್ ಹಿಂದೂ ರಾಷ್ಟ್ರ ಸ್ಥಾಪನೆಗೆ ಪೂರಕವಾದ ಅಸ್ತ್ರಗಳಾಗಿರುವುದನ್ನು ಕರ್ನಾಟಕ ಮತ್ತು ಒರಿಸ್ಸಾದ ಘಟನೆಗಳು ನಿರೂಪಿಸಿವೆ. ಭಾಜಪ ಆಡಳಿತ ಪಕ್ಷವಾಗಿರುವಲ್ಲಿ ಸಂಘ ಪರಿವಾರವು ಅನಧಿಕೃತ ಆರಕ್ಷಕ ಪಡೆಗಳಾಗಿರುತ್ತದೆ. ಸಾಂಸ್ಕೃತಿಕ ಆರಕ್ಷಕರಾಗಿ ಕಾರ್ಯನಿರ್ವಹಿಸಲು ಭಜರಂಗಿಗಳಿಗೆ ಸರ್ಕಾರದ ಪೂರ್ಣ ಬೆಂಬಲವಿರುತ್ತದೆ. ಪ್ರಜಾತಾಂತ್ರಿಕ ಸಂಸ್ಥೆಗಳ ನಡುವೆಯೇ ಕಾರ್ಯ ನಿರ್ವಹಿಸುತ್ತ ಫ್ಯಾಸಿಸ್ಟ್ ಸಿದ್ಧಾಂತವನ್ನು ಜಾರಿಗೊಳಿಸುವ ಸಂಘ ಪರಿವಾರದ ಕೈಂಕರ್ಯಗಳಿಗೆ ಭಾಜಪ ಸರ್ಕಾರಗಳು ಅಭಯಹಸ್ತ ನೀಡುತ್ತವೆ. ಹಾಗಾಗಿಯೇ ಕರ್ನಾಟಕವನ್ನು ಮತ್ತೊಂದು ಗುಜರಾತ್ ಮಾಡುತ್ತೇವೆ ಎಂದು ಭಾಜಪ ನಾಯಕರು ಹೇಳುತ್ತಿರುತ್ತಾರೆ.

ಧಾರ್ಮಿಕ ಅಸ್ಮಿತೆಗಳಿಂದ ಶ್ರಮಿಕ ವರ್ಗಗಳಲ್ಲಿ ಅನೈಕ್ಯತೆಯನ್ನು ಹುಟ್ಟುಹಾಕಿ, ನವ ಉದಾರವಾದಕ್ಕೆ ವೇದಿಕೆ ಸೃಷ್ಟಿಸುವ ಹಿಂದೂ ಫ್ಯಾಸಿಸಂನ ಈ ಆಕ್ರಮಣ ಕಾರಿ ಮುನ್ನಡೆಯನ್ನು ತಡೆಗಟ್ಟಬೇಕಾದರೆ ದಲಿತ ಸಂಘ ಟನೆಗಳು, ಪ್ರಗತಿಪರ ಸಂಘಟನೆಗಳು ಮತಾಂತರ ಕಾಯ್ದೆಯ ರದ್ದತಿಗಾಗಿ ಮತ್ತು ಮತಾಂತರವನ್ನು ಸಂವಿ ಧಾನಿಕ ಹಕ್ಕೆಂದು ಪರಿಗಣಿಸಲು ಆಗ್ರಹಿಸಿ ಹೋರಾ ಡುವುದು ಸೂಕ್ತವೆನಿಸುತ್ತದೆ. □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು
ಪ್ರಕಟಿತ ಕೃತಿಯ ೨ ಪ್ರತಿಗಳನ್ನು
ಕಳುಹಿಸಿಕೊಡಬೇಕಾಗಿ
ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೦
ದೂರವಾಣಿ : ೩೨೮ ೭೯೪೩/೯೪೪೮೦೪೮೩೦೬

ಕಾವ್ಯ

ಪ್ರಾರ್ಥನೆ



ನಾನು ಯಾವ ನೆಲದಲ್ಲಾದರೂ ನಡೆದಾಡಲಿ
ನನ್ನ ದೇಶದ ಮಣ್ಣವಾಸನೆಯೇ ಸೂಸಿ ಬರುತಿರಲಿ
ನಾನು ಕಾಶ್ಮೀರದ ಕಣಿವೆಯ ಸುವಾಸನೆ ಮೂಸಿರುವೆನು
ದ್ವೇಷದ ವಿಷಗಾಳಿ ವರ್ಜವಾಗಿದೆ ನನಗೆ
ಸ್ಫೋಟಕ ಮದ್ದಿನ ಘಮಟು ವಾಸನೆ ಒಗ್ಗಲಾರದು
ನನಗೆ ಹಿಮಚ್ಛಾದಿತ ಹಿಮಾಲಯವೇ ಅಚ್ಚುಮೆಚ್ಚು
ಆದರೂ ಅವರೇಕೆ ಹೇಳುತ್ತಿದ್ದಾರೆ
ನನಗೆ ರಾಸ ಪರ್ವತ ಪ್ರೀತಿಯೆಂದು?

ನಾನು ಹಜ್ ಯಾತ್ರೆ ಕೈಕೊಂಡರೂ
ಮದೀನಾದ ನೆಲದಲ್ಲಿ ಪ್ರಾರ್ಥಿಸಿದರೂ
ಭಾರತದ ಏಳ್ಗೆಗಾಗಿಯೇ ಪ್ರಾರ್ಥಿಸುತ್ತೇನೆ
ನನ್ನ ದೇಶದ ಸುಖ ಸಮೃದ್ಧಿ ಬಯಸುತ್ತೇನೆ
ನನಗೆ ಆಡಲು ಮಡಿಲು
ನೀರು, ಆಹಾರ, ಗಾಳಿ ನೀಡಿದ
ಮಾತೃಭೂಮಿಯ ಶ್ರೇಯಸ್ಸು ಬಯಸುವೆ
ನನ್ನ ದೇಹದ ಹನಿ ಹನಿ ರಕ್ತದಲ್ಲೂ
ಭಾರತದ ಹೆಸರೇ ಪ್ರತಿಧ್ವನಿಸುತ್ತದೆ
ಆದರೂ ಅವರೇಕೆ ಹೇಳುತ್ತಿದ್ದಾರೆ
ನೀನು ಗಡಿಯಾಚೆಯವಳೆಂದು?

ನನ್ನ ದೇಶದಲ್ಲಿ ಸದಾ ಹರಿಯುತ್ತಿವೆ
ಗಂಗೆ, ಯಮುನೆ, ಕೃಷ್ಣೆ, ಕಾವೇರಿಯರು
ಪ್ರೀತಿಯ ತಾಜಮಹಲು ನನ್ನ ದೆಶದಲ್ಲಿಯೇ ಇದೆ
ಚಾರ್‌ಮಿನಾರ್, ಕುತುಬ್ ಮಿನಾರುಗಳು
ಬದುಕಿರುವೆನು ನಾನು ಕಾಶಿ, ಮಥುರಾ
ಅಜ್ಮೀರ್ ಬಾಬಾನ ಸೌಹಾರ್ದ ನೆಲೆಗಳಲ್ಲಿ
ಸೌಹಾರ್ದ ತಾಣ ಸುಂದರ ಹೂಬನ ಪೋಷಿಸಿರುವೆನು
ಆದರೂ ಅವರೇಕೆ ಹೇಳುತ್ತಿದ್ದಾರೆ
ನನಗೆ ಕೋಮಲ ಹೂಗಳ ದ್ವೇಷಿಯೆಂದು?

ನಾನು ಲೋಕದ ಯಾವ
ಮೂಲೆಯಲ್ಲಾದರೂ ಕೊನೆಯುಸಿರೆಳೆಯಲಿ
ದೂರದಿಂದಲಾದರೂ ನನ್ನ ಭಾರತದ
ಗಡಿ ಕಾಣುತ್ತಿರಬೇಕೆಂದು ಬಯಸುವೆನು
ಯಾವ ದೇಶದ ನೀರೇ ಕುಡಿದರೂ
ನಾನು ಅದರಲ್ಲಿ ಗಂಗೆಯ ಸ್ವಾದ ಹುಡುಕುವೆನು
ಪ್ರಾರ್ಥನೆಗೆ ಕೈ ಎತ್ತಿದ ಪ್ರತಿಬಾರಿಯೂ
ನನ್ನ ದೇಶದ ಏಳ್ಗೆಯನೇ ಬಯಸುವೆನು
ಆದರೂ ಅವರೇಕೆ ಹೇಳುತ್ತಿದ್ದಾರೆ
ನಿನ್ನ ಬದ್ಧತೆಯನು ಸಾಬೀತುಪಡಿಸು ಎಂದು?

○ ಕೆ. ಷರೀಫಾ

ಒಡೆತನಕ್ಕೆ ಕೇಡಿಲ್ಲವಾಗಿ–೩

ನೆತ್ತರ ಸವಿಯುವ ನೊಣಗಳ ಚಕ್ರಾಧಿಪತ್ಯ ಹಾಗೂ ಚಮತ್ಕಾರಿಕ ಬೀಜಗಳು

'ಜೈವಿಕ ತಂತ್ರಜ್ಞಾನ ಮಾಡುತ್ತದೆ ಎನ್ನುವ ಎಷ್ಟೇ ಪವಾಡಗಳಿದ್ದರೂ ಅದು ವಂಶವಾಹಿಯೊಂದನ್ನು ಸೃಷ್ಟಿಸಲಾರದು. ನಾವು ವಂಶವಾಹಿಗಳನ್ನು ಸಂಯೋಜಿಸಬಲ್ಲೆವು, ಒಂದು ಪ್ರಭೇದದ ಜೀವಕೋಶದಿಂದ ಇನ್ನೊಂದು ಪ್ರಭೇದದ ಜೀವಕೋಶಕ್ಕೆ ವಂಶವಾಹಿಗಳನ್ನು ವರ್ಗಾಯಿಸಬಲ್ಲೆವು, ವಂಶವಾಹಿಗಳನ್ನು ಏಕತ್ರಗೊಳಿಸಬಲ್ಲೆವು'
– ಎಂ. ಪೋಟಾ

ವೈಜ್ಞಾನಿಕ ಕೃಷಿಯ ಹೆಸರಿನಲ್ಲಿ ಶುರುವಾದ 'ಹಸಿರುಕ್ರಾಂತಿ' ಅಂತಿಮವಾಗಿ ಕೃಷಿಯ ಸ್ವಾವಲಂಬಿ ಸ್ವರೂಪವನ್ನೇ ಛಿದ್ರೀಕರಿಸಿಬಿಟ್ಟಿದೆ. ಆಹಾರ ಸ್ವಾವಲಂಬನೆಗೆಂದು ಶುರುವಾದ ಈ ಕ್ರಿಯಾಸರಣಿ ಆಹಾರ ನಿಯಂತ್ರಣ ವ್ಯವಸ್ಥೆಯನ್ನೇ, ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒಪ್ಪಿಸಿಬಿಟ್ಟಿದೆ. ಇದನ್ನು ಈ ರೀತಿ ವಿವರಿಸಲು ಪ್ರಯತ್ನಿಸಬಹುದು:

೧)ಹಸಿರು ಕ್ರಾಂತಿಯ ಮಿಥ್‌ಗಳು

೨)ಶ್ವೇತ ಕ್ರಾಂತಿಯ ಅವಾಂತರಗಳು

೩) ಹೊಸ ಬೀಜ ನೀತಿ ೧೯೮೮ ಹಾಗೂ ಚಮತ್ಕಾರಿಕ ಬೀಜಗಳು

೪) ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿಘಟನೆ.

೫) ಪೆಪ್ಸಿ ಯೋಜನೆ

ಹಸಿರುಕ್ರಾಂತಿಯ ಮಿಥ್‌ಗಳು:

ಹೈದರಾಬಾದ್‌ನಲ್ಲಿ ನಡೆದ ಭಾರತೀಯ ವಿಜ್ಞಾನ ಸಮ್ಮೇಳನದ ೯೩ನೆಯ ಅಧಿವೇಶನದಲ್ಲಿ ಕೃಷಿಯ ಬಗ್ಗೆ ವಿಜ್ಞಾನಿಗಳನ್ನು ಉದ್ದೇಶಿಸಿ ಮಾತನಾಡಿದ ಮನಮೋಹನ್‌ಸಿಂಗ್ ಎರಡನೆಯ ಹಸಿರು ಕ್ರಾಂತಿಯ ಅವಶ್ಯಕತೆಯನ್ನು ಪ್ರಸ್ತಾಪಿಸಿದ್ದಾರೆ. ಹಸಿರು ಕ್ರಾಂತಿಗೆ 'ಇಂದಿರಾಜಿ'ಯವರ ಕೊಡುಗೆಗಳನ್ನು ಸ್ಮರಿಸಿಕೊಂಡ ಪ್ರಧಾನಿ 'ಹಸಿರು ಕ್ರಾಂತಿಯ ಪ್ರಯೋಜನವನ್ನು ಶ್ರೀಮಂತ ರೈತರಷ್ಟೇ' ಪಡೆದುಕೊಂಡರು ಎಂಬ ಆಪಾದನೆ ನಿಜವಾದರೂ 'ಹಸಿರು ಕ್ರಾಂತಿಯಿಂದಾದ ಲಾಭವನ್ನು ನಿಜಕ್ಕೂ ನಿರ್ಲಕ್ಷಿಸಲಾಗದು' ಎಂದು ಹೇಳಿದ್ದಾರೆ. ನಿಜಕ್ಕೂ ಹಸಿರು ಕ್ರಾಂತಿಯಿಂದ ಮಹತ್ ಸಾಧನೆಯಾಗಿತ್ತೆ? ಹಸಿರು ಕ್ರಾಂತಿಯ ಸಂದರ್ಭದಲ್ಲಿ ವಾಸ್ತವದ ಅರಿವು ಎಷ್ಟರ ಮಟ್ಟಿಗಿತ್ತು? ಆಕ್ಸ್‌ಫರ್ಡ್, ಅರ್ಥಶಾಸ್ತ್ರ ಪರಿಣಿತ ಮನಮೋಹನ್ ಸಿಂಗರ ಮಾತುಗಳನ್ನು ಒಪ್ಪಿಕೊಳ್ಳುವ ಮುನ್ನ ಇವನ್ನೆಲ್ಲ ಪರಿಗಣಿಸಬೇಕಾಗುತ್ತದೆ.

ಅಮರ್ತ್ಯಸೇನ್ ಮೊದಲಿಗೆ ಈ ಲಾಭ/ಸಾಧನೆಯ ಕಲ್ಪನೆಯನ್ನೇ ವಿಶ್ಲೇಷಿಸಬೇಕೆನ್ನುತ್ತಾರೆ. ಈ ರೀತಿಯ ಲೆಕ್ಕಾಚಾರದಲ್ಲಿ ಶ್ರಮೇತರ ಅನುಕೂಲತೆಗಳೇ ಪ್ರಾಬಲ್ಯವನ್ನು ಸಾಧಿಸಿವೆ ಹಾಗೂ ಸಾಂಸ್ಥಿಕ ಅನಾನುಕೂಲತೆಗಳನ್ನು ಇಂಥಲ್ಲಿ ನಿರ್ಲಕ್ಷಿಸಲಾಗುತ್ತದೆ. ಹಾಗೂ ಶ್ರಮೇತರ ವೆಚ್ಚಗಳ ವ್ಯತ್ಯಾಸಗಳಲ್ಲಿ ಮೂಲಭೂತ ಅಸಮಾನತೆ ಇದೆ ಎನ್ನುತ್ತಾರೆ.

ಅಲ್ಲದೆ ಆ ಹೊತ್ತಿಗೆ ಅಭಿವೃದ್ಧಿಯಲ್ಲಿ ಬಳಕೆಯಾಗುವ ಪಾಶ್ಚಾತ್ಯ ಪರಿಭಾಷೆಗಳ ಬಗೆಗಿನ ಮಿರ್ಡಾಲ್ ಹಾಗೂ ಮಡಲನೋಬಿಸ್ ನಡುವಿನ ವಾಗ್ವಾದಗಳ ಬಗ್ಗೆ ನೆನಪು ಮಾಡಿಕೊಳ್ಳುತ್ತಾರೆ. ಗುನ್ನಾರ್ ಮಿರ್ಡಾಲ್ ತಮ್ಮ 'ಏಷಿಯನ್ ಡ್ರಾಮಾ'ದಲ್ಲಿ 'Unfortunately, the persons responsible for statistical enquiries in the region, and behind them the western and indigenous economists and planners, have been reluctant to scrap recieved doctrine and to Degin a fresh by formulating a new conuphral kit appropriate to their economic conditions ಎಂದು ಬರೆದ್ದರೆ ಅದಕ್ಕೆ ಪ್ರತಿಕ್ರಿಯಿಸುತ್ತಾ ಪಿ.ಸಿ. ಮಹಲನೋಬಿಸ್ 'steped as he in the concepts of krest, myrdal connot help evaluating the history and events of south Asia with the forme work of those concepts' ಎಂದು ಬರೆಯುತ್ತಾರೆ.

ಇಂಥವೇ ಗೊಂದಲಗಳು ಹಸಿರುಕ್ರಾಂತಿಯ ವಿಶ್ಲೇಷಣೆಯಲ್ಲೂ ಮುಂದುವರೆದಿದೆ. ಹಸಿರುಕ್ರಾಂತಿಯ ಒಂದು ಮುಖ್ಯ ಅಂಗವಾದ ಟ್ರಾಕ್ಟರೀಕರಣವನ್ನು ಅಭ್ಯಾಸಿಸುತ್ತಾ ಸೇನ್ ಇದನ್ನು ವಿವರಿ ಸುತ್ತಾರೆ. ೧೯೫೧ರಲ್ಲಿ ಭಾರತದಲ್ಲಿ ಸುಮಾರು ೮೫೦೦ ಟ್ರಾಕ್ಟರ ಗಳು ಬಳಕೆಯಲ್ಲಿದ್ದವು. ಇದು ೧೯೬೬ರಲ್ಲಿ ೫೪,೦೦೦ಕ್ಕೆ ಹೆಚ್ಚಿತು ಹಾಗೂ ೧೯೬೯ರಲ್ಲಿ ೬೦,೦೦೦ ವನ್ನು ದಾಟಿತು. ಬಿ.ಸಿಂಗ್ (೧೯೬೮) ಪಂಜಾಬ್‌ನ ನಾಲ್ಕು ಜಿಲ್ಲೆಗಳ– ಭಾಟಿಂಡಾ, ಹಿಸ್ಸಾರ್, ಲೂಧಿಯಾನ ಹಾಗೂ ಸಂಗ್ರೂರ್– ಮಾದರಿಗಳನ್ನು ಅಭ್ಯಸಿಸಿ ಟ್ರಾಕ್ಟರೀಕೃತ ಕೃಷಿಭೂಮಿ ಎಕರೆಗೆ ೧೦೯ ಗಂಟೆಗಳ ಪುರುಷ ಶ್ರಮವನ್ನು ೧೮ ಗಂಟೆಗಳ ಮಹಿಳಾ ಶ್ರಮವನ್ನು ಬಳಸಿಕೊಳ್ಳುತ್ತದೆ; ಟ್ರಾಕ್ಟರುಗಳಿಲ್ಲದ ಸನ್ನಿವೇಶದಲ್ಲಿ ೧೬೧ ಗಂಟೆಗಳ ಪುರುಷ ಶ್ರಮವೂ ೧೩ ಗಂಟೆಗಳ ಮಹಿಳಾ ಶ್ರಮವೂ ಸರಾಸರಿಯಾಗಿ ಬಳಕೆಯಾಗು ತ್ತದೆ ಎಂದು ಕಂಡುಕೊಂಡರು. ಅಂದರೆ ೩೮ ಪ್ರತಿಶತ ಶ್ರಮ ಟ್ರಾಕ್ಟ ರುಗಳ ಬಳಕೆಯಿಂದ ಉಳಿತಾಯವಾಗಿದೆ.

ಸರ್ಕಾರ ಹಾಗೂ ಪ್ರಹ್ಲಾದಾಚಾರ್(೧೯೬೬) ಧಾರವಾಡದ ೩೯ ಕೃಷಿ ಭೂಮಿಗಳಲ್ಲಿ ನಡೆಸಿದ ಅಧ್ಯಯನ ೧೭ ಪ್ರತಿಶತ ಶಾಶ್ವತ ಶ್ರಮದ ಉಳಿತಾಯವನ್ನು ದಾಖಲಿಸಿತು. ಆದರೆ ಇದಕ್ಕೆ ವಿರುದ್ಧವಾಗಿ ಅಶೋಕ್‌ರುದ್ರ, ಅಬ್ದುಲ್‌ಮಜೀದ್ ಹಾಗೂ ಬಿಡಿಪಾ ಲೀಬ್ ಪಂಜಾಬ್‌ನಲ್ಲಿ ನಡೆಸಿದ ಅಧ್ಯಯನ (೧೯೭೧) ಟ್ರಾಕ್ಟರು ಗಳು ಅನಿಶ್ಚಿತ ಶ್ರಮಗಳನ್ನು ಸ್ಥಳಾಂತರಿಸಿ ಶಾಶ್ವತ ಶ್ರಮದ ಬೇಡಿಕೆ ಯನ್ನು ಉಂಟುಮಾಡುತ್ತವೆ ಎಂಬುದನ್ನು ಗಮನಿಸಿತು. ಹನುಮಂತರಾವ (೧೯೭೨) ಪಂಜಾಬ್‌ನ ಫಿರೋಜ್ಪುರ ಜಿಲ್ಲೆಯ ೧೫೩ ಕೃಷಿ ಕ್ಷೇತ್ರಗಳ ೧೯೬೮–೬೯ರ ದತ್ತಾಂಶಗಳನ್ನು ಆಧರಿಸಿ ನಡೆಸಿದ ಅಧ್ಯಯನ ಟ್ರಾಕ್ಟರೀಕರಣ ಶ್ರಮದ ಬಳಕೆಯಲ್ಲಿ ಯಾವುದೇ ಗಮನಾರ್ಹ ಏರುಪೇರನ್ನು ಮಾಡುವುದಿಲ್ಲ ಎಂದು ತೋರಿಸಿತು. ಹನುಮಂತರಾವ್ ಅವರ ವಾದದ ಪ್ರಕಾರ ಟ್ರಾಕ್ಟರಿನ ಬಳಕೆಯಿಂದ ಕ್ಷೇತ್ರ ದಲ್ಲುಂಟಾದ ಶ್ರಮದ ಉಳಿತಾಯವನ್ನು ಹೆಚ್ಚಿದ ಇಳುವರಿ ಸೃಷ್ಟಿಸಿದ ಶ್ರಮದ ಬೇಡಿಕೆ ಸರಿದೂಗಿಸುತ್ತದೆ ಎಂಬುದಾಗಿದೆ. ಆದರೆ ಬ್ರಾನ್ ಲಾಕ್‌ವುಡ್ (೧೯೭೨) ಟ್ರಾಕ್ಟರಗಳು ಕೂಲಿಕೆಲಸವನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸುತ್ತದೆ ಎಂದು ಹೇಳುತ್ತಾರೆ. ಹರಿಯಾಣದಲ್ಲಿ ನಡೆಸಿದ ಅಧ್ಯಯನದ ಆಧಾರದಲ್ಲಿ ಆರ್. ಕೆ. ಶರ್ಮಾ (೧೯೭೨) ಈ ನಿರ್ಧಾರಕ್ಕೆ ಬರುತ್ತಾರೆ: ಟ್ರಾಕ್ಟರೀಕೃತ ಕೃಷಿ ಕ್ಷೇತ್ರದಲ್ಲಿ ಶ್ರಮದ ಬಳಕೆ ದರ(= ಎಕರೆ ಬೆಳೆಗೆ ಬಳಕೆಯಾದ ಶ್ರಮ) ೭ ಪ್ರತಿಶತ ಹೆಚ್ಚಿದೆ. ಅಲ್ಲಿ ಉಳುಮೆಗ

ಭಾರತದ ಅನೇಕ ಪ್ರದೇಶಗಳಲ್ಲಿ ಸಣ್ಣ ರೈತನೊಬ್ಬನ ಮಗುವಾಗುವುದಕ್ಕಿಂತ ಭಾರೀ ಜಮೀಂದಾರನ ವಿದೇಶಿ ಹಸುವಾಗುವುದು ಹೆಚ್ಚು ಸೌಖ್ಯದಾಯಕ. ಏಕೆಂದರೆ ಬಹುಪಾಲು ಹಳ್ಳಿಗರು ಹಳ್ಳದ ನೀರು ಕುಡಿಯುತ್ತಾರೆ. ವಿದೇಶಿ ತಳಿಗೆ ಶುದ್ಧ ನೀರು ಸಿಗುತ್ತದೆ. ಗೃಹ ಸಂಬಂಧಿ ಡೇರಿ ಸಂಸ್ಕರಣೆ ಭಾರಿ ಬಂತವಾಳದ ಉದ್ಯಮವಾಗಿ ಬಿಟ್ಟದ್ದರಿಂದ ಉಂಟಾದ ಅನಿವಾರ್ಯ ಪರಿಣಾಮ ಇದು. ಭಾರತದಲ್ಲಿ ಕೃಷಿ ಹಾಗೂ ಮಣ್ಣಿನೊಡನೆ ಸೂಕ್ಷ್ಮ ಸಂಬಂಧ ಹೊಂದಿದ್ದ ಪಶುಪಾಲನೆಯನ್ನು ಛಿದ್ರೀಕರಿಸಿ ಹೈನೋದ್ಯಮವನ್ನಾಗಿಸಿದ ಪರಿಣಾಮ ಕೃಷಿಯ ಮೇಲೆ ಕೂಡಾಆಗಿದೆ. ಇಲ್ಲಿ ಹಸು ಕೇವಲ ಹಾಲು ಉತ್ಪಾದನೆಯ ಯಂತ್ರವಾಗಿದೆ ಡೇರಿ ಯೋಜಕರು ಹಸುವನ್ನು ನೋಡಿದಾಗ ಅವರಿಗೆ ಕಾಣುವುದು ಅದರ ಕೆಚ್ಚಲು ಮಾತ್ರ. ಅವರ ದೃಷ್ಟಿಯಲ್ಲಿ ಹಸು ಎಂದರೆ ಹಾಲು. ಅದು ಉತ್ಪಾದಿಸುವ ಸೆಗಣಿ, ಚರ್ಮ, ಕೊಂಬು, ಗೊರಸುಗಳನ್ನು ಅವರು ನೋಡುವುದೇ ಇಲ್ಲ.

ಶ್ರೀಶ ಉಡುಪ

ಶ್ರಮದ ಬಳಕೆ ಗಣನೀಯವಾಗಿ ಕಡಿಮೆಯಾದರೂ ನೀರಾವರಿ ಹಾಗೂ ಕೊಯ್ಲುಗಳಂತ ಕೆಲಸಗಳಿಗೆ ಹೆಚ್ಚಿನ ಶ್ರಮದ ಬಳಕೆ ಇರುತ್ತದೆ. ಆದರೆ ವಶಿಷ್ಠ (೧೯೭೨) ಈ ಹೆಚ್ಚಿನ ಉದ್ಯೋಗ ಹಾಗೂ ಇಳುವರಿಯ ಪ್ರಮೇಯವನ್ನು ಅಲ್ಲಗಳೆಯುತ್ತಾರೆ.

ಆದರೆ ಇಷ್ಟು ವರ್ಷ ಕಳೆದ ಮೇಲೆ ಹಿನ್ನೋಟದಲ್ಲಿ ನೋಡುವಾಗ ಇಂಥ ಗೊಂದಲಗಳ ಅವಶ್ಯಕತೆ ಇಲ್ಲ. ಹಸಿರು ಕ್ರಾಂತಿಯ ನಂತರದ ದಿನಗಳಲ್ಲಿ ಸಾಧಿತವಾದ 'ಮಿಗತೆ' ಹಾಗೂ ಆಹಾರ ಸ್ವಯಂಪೂರ್ಣತೆಯನ್ನು ಅಂಕಿಅಂಶಗಳು ತೋರಿಸುತ್ತವೆ. ೧೯೬೬ರಲ್ಲಿ ೬೬ ದಶ ಲಕ್ಷ ಟನ್ ಇದ್ದ ಆಹಾರ ಸಂಗ್ರಹ ೧೯೮೫ರಲ್ಲಿ ೧೨೮ ದಶಲಕ್ಷ ಟನ್‌ಗಳಿಗೆ ಏರಿತು. ಆದರೆ ಈ ಮಿಗತೆ ಸಾಧಿತ ವಾದ ಸ್ವರೂಪವನ್ನು ಕೂಡ ಜೊತೆಗೆ ಅರ್ಥಮಾಡಿಕೊಳ್ಳ ಬೇಕಾಗಿದೆ. ಖ್ಯಾತ ಪೋಷಣಾತಜ್ಞ ಡಾ. ಸಿ. ಗೋಪಾಲನ್ 'ನಮ್ಮ ಕಾಪು ದಾಸ್ತಾನು ಧಾನ್ಯ ಜನರ ಬಡತನದ ಸೂಚಕವೇ ಹೊರತು ನಿಜವಾದ ಆಹಾರ ಮಿಗತೆಯಲ್ಲ' ಎನ್ನುತ್ತಾರೆ. ಇದು ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿಘಟನೆಯ ಬಗೆಗಿನ ಚರ್ಚೆಯಲ್ಲಿ ಇನ್ನಷ್ಟು ಸ್ಪಷ್ಟವಾಗುತ್ತದೆ. ಅರ್ಥಶಾಸ್ತ್ರಜ್ಞ ವಿಕೆ.ಆರ್.ವಿ ರಾವ್ ಪ್ರಕಾರ ಈ ಮಿಗತೆಯ ಪ್ರಚಾರ ಒಂದು ಮಿಥ್ಯೆ-ಏಕೆಂದರೆ ಇದು ಜನರ ಕೊಳ್ಳುವ ಶಕ್ತಿ, ಕಡಿಮೆಯಾದದ್ದರಿಂದ ಸೃಷ್ಟಿಯಾಗಿದೆ. ೧೯೬೬-೮೫ರ ಅವಧಿಯಲ್ಲಿ ತಲಾವಾರು ದಿನವಹಿ ಆಹಾರ ಸೇವನೆ ೪೮೦ಗ್ರಾಂನಿಂದ ೪೬೩ ಗ್ರಾಂಗೆ ಇಳಿಯಿತು. ಈಗ ಮನಮೋಹನ್ ಸಿಂಗ್ ಹೇಳುವ ಎರಡನೇ ಹಸಿರು ಕ್ರಾಂತಿಯೆಂದರೆ ಹಸಿವಿನ ವಿಸ್ತರಣೆಯೊಂದಿಗೆ ಇದುಕೂ ಹರಾಜಾದೀತು. ಇದಕ್ಕಾಗಿ ಇಳುವರಿಯ ಜೊತೆ ಬದುಕಿನ ಸಮೃದ್ಧಿಯ ಮಿಥ್ಯೆಯನ್ನು ರೂಪಿಸೋಣವೇ?

ಶ್ವೇತಕ್ರಾಂತಿಯ ಅವಾಂತರಗಳು

ಇದು ಪ್ರಾಜೆಕ್ಟ್ ಸಮನ್ವಿತಾಗೆ ಬಲಿಯಾದ ಖರಿಯಾರ್ ತಳಿಯ ಕಥೆ, ವರದಿ ಮಾಡಿದವರು ಪಿ.ಸಾಯಿನಾಥ್. ನಾಲ್ಕು ಏಜೆನ್ಸಿಗಳು ಈ ಪ್ರಾಜೆಕ್ಟಿನಲ್ಲಿ ಪಾಲ್ಗೊಂಡಿದ್ದವು. ಅವು: ಭಾರತೀಯ ಆಗ್ರೋ ಇಂಡಸ್ಟ್ರೀಸ್ ಫೌಂಡೇಶನ್(BAIF), ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸದ್ಗುರು ಸೇವಾ ಟ್ರಸ್ಟ್ ಅನ್ನುವ ಒಂದು ಎನ್‌ಜಿಓ ಹಾಗೂ ಮಫತ್‌ಲಾಲ್ ಅನ್ನುವ ಕಾರ್ಪೋರೇಟ್‌ನ ಒಂದು ಸಂಸ್ಥೆ. ಉದ್ದೇಶ ಬಡತನವನ್ನು ನಿವಾರಿಸುವ ಡೇರಿ ಅಭಿವೃದ್ಧಿ ಯೋಜನೆ. ಪ್ರಹಸನದ ಸ್ಥಳ ನೌಪಾದ(ಒರಿಸ್ಸಾ)

ಪಶ್ಚಿಮ ಒರಿಸ್ಸಾ ಕೃಷಿ ಜೀವಿ ಸಂಘದ ಜಗದೀಶ್ ಪ್ರಧಾನ್ ಗುರುತಿಸುವಂತೆ ಪಶುಪಾಲನೆ-ಹಾಲು ಉತ್ಪನ್ನಗಳು ಸಮೃದ್ಧವಾಗಿದ್ದ ಜಿಲ್ಲೆಗೆ ಡೇರಿ ಅಭಿವೃದ್ಧಿ ಯೋಜನೆಯ ಅವಶ್ಯಕತೆಯಾದರೂ ಏನಿತ್ತು ಎಂಬುದನ್ನು ಯಾರು ಕೇಳಲಿಲ್ಲ. ಇರಲಿ. ಅಂತೂ ಬಡತನ ನೀಗಿಸಲು ಪವಾಡ ಸದೃಶ ದನವನ್ನು ಕೊಡುವುದೆಂದು ನಿರ್ಧರಿಸಲಾಯಿತು. ಮಂಗಲ್ ಸುನಾನಿ ಪುಳಕಿತನಾದ. ಸರಕಾರ ಒಂದೆಕರೆ ಜಮೀನನ್ನು ಪುಕ್ಕಟೆಯಾಗಿ ಕೊಟ್ಟಿತು. ಅದರಲ್ಲಿ ಆಸ್ತ-ಸಬಾಬುಲ್ ಮರಗಳನ್ನು ಪಶುಗಳ ಮೇವಿಗಾಗಿ ಬೆಳೆಸಬೇಕಿತ್ತು. ತಮ್ಮದೇ ಆದ ಆ ಉಚಿತ ಜಮೀನಿನಲ್ಲಿ ತಾವೇ ಕೆಲಸಮಾಡಿದ್ದಕ್ಕೆ ಯಾವಾಗ ಸರಕಾರ ಕನಿಷ್ಠ ಕೂಲಿಯನ್ನು ಕೂಡ ನೀಡಿತೋ ಆಗ ಸುನಾನಿಯ ಅಚ್ಚರಿಗೆ ಪಾರವೇ ಇರಲಿಲ್ಲ. ಆತನಂತೆಯೇ ಉಲ್ಪಾ ಹಳ್ಳಿಯಲ್ಲಿ ಮೂವತ್ತೆಂಟು ಫಲಾನುಭವಿಗಳಿದ್ದರು ಹಾಗೂ ಕೊಮ್ನಾ ವಿಭಾಗದಲ್ಲಿ ಸಾವಿರಾರು.

ಎಲ್ಲ ಕಡೆಯಿಂದ ಯೋಜನೆಗೆ ಒತ್ತಡ ಹೆಚ್ಚಾದಂತೆ ಅಧಿಕಾರಿಗಳೂ ಹೆಚ್ಚು ನಿಷ್ಠರಾದರು. ಯೋಜನೆಯ ಪ್ರಕಾರ ಈ 'ಪವಾಡ ಸದೃಶ ದನ'ಗಳನ್ನು ಜೆರ್ಸಿ ವೀರ್ಯದಿಂದ ಬಸಿರು ಮಾಡಬೇಕಿತ್ತು. ಇದನ್ನು ಖಚಿತ ಪಡಿಸಿಕೊಳ್ಳುವುದು ಹೇಗೆ? ಕೊಮ್ನಾ ಹೈಸ್ಕೂಲಿನ ಪ್ರಿನ್ಸಿಪಾಲ್ ವಿಶ್ವಂಭರ ಜೋಷಿ ಹೇಳುವಂತೆ ಕೊಮ್ನಾ ಹಾಗೂ ಖರಿಯಾರ್‌ಗಳ ಎಲ್ಲಾ ಎತ್ತುಗಳನ್ನು ವೀರ್ಯ ಗುಂದಿಸಲಾಯಿತು. ಆನಂತರವಷ್ಟೇ ಫಲಾನುಭವಿಗಳ ದನಗಳಿಗೆ ಜೆರ್ಸಿ ವೀರ್ಯದಿಂದ ಗರ್ಭಧಾರಣೆ ಮಾಡಿಸಲಾಯಿತು. ಇವೆಲ್ಲ ನಡೆದಿದ್ದು ೧೯೭೮ರ ಹೊತ್ತಿಗೆ. ಫಲಾನುಭವಿಯೊಬ್ಬ ಹೇಳುವಂತೆ, ಎಂಟು ಕರುಗಳು ಹುಟ್ಟಿದವು. ಅವೆಲ್ಲ ತುಂಬ ಸಣ್ಣವು. ಕೆಲವು ಸತ್ತರೆ ಇನ್ನು ಕೆಲವನ್ನು ಮಾರಲಾಯಿತು. ಜನ ಆ ಭೂಮಿಯಲ್ಲಿ ಆಹಾರ ಬೆಳೆಯಲಾರಂಭಿಸಿದರು; ತರಕಾರಿ ಬೆಳೆದರು. ಇದು ತಜ್ಞರ ಕಣ್ಣನ್ನು ಕೆಂಪಗಾಗಿಸಿತು. ಇಂಥ ಚಟುವಟಿಕೆಗಳು ಒಂದು ಗಂಭೀರ ಪ್ರಯೋಗವನ್ನು ಅಪಾಯಕ್ಕೆ ಸಿಲುಕಿಸುತ್ತವೆ ಎಂದು ಅವರ ಅಭಿಪ್ರಾಯ. ಹಾಗಾಗಿ ಮೇವನ್ನು ಬಿಟ್ಟು ಬೇರೇನನ್ನಾದರೂ ಬೆಳೆದರೆ ಕೂಲಿಯು ಇಲ್ಲ ಜಮೀನು ಇಲ್ಲ ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದರು. ಕೊನೆಗೆ ಜನರಿಗೆ ಮೇವೂ ಇರಲಿಲ್ಲ, ಆಹಾರವೂ ಇಲ್ಲ; ದನ-ಜಮೀನುಗಳೂ ಕೂಡ ಇರಲಿಲ್ಲ. ಯಾಕೆಂದರೆ ಭುವನೇಶ್ವರದಿಂದ ಬಂದ ಅಧಿಕಾರಿಯೊಬ್ಬ ಪ್ರಾಜೆಕ್ಟ್ ಸಮನ್ವಿತಾ ಮುಗಿಯಿತೆಂದು ಮೂರು ವರ್ಷಗಳ ನಂತರ ಘೋಷಿಸಿದ.

ಆದರೆ ಈ 'ಪ್ರಯೋಗ'ಕ್ಕಾಗಿ ನಡೆದ ಸಾಮೂಹಿಕ ವೀರ್ಯ ಗುಂದಿಸುವಿಕೆಯಿಂದಾಗಿ ಆ ಪ್ರದೇಶದಲ್ಲಿ ಒಂದು ಬೀಜದ ಹೋರಿಯು ಉಳಿಯಲಿಲ್ಲ. ಜನರ ಜೀವನ ಭಾಗವೇ ಆಗಿದ್ದ ಬಲಿಷ್ಠ ಖರಿಯಾರ್ ತಳಿ ಶ್ವೇತಕ್ರಾಂತಿಯ ಪ್ರಯೋಗದ ಅನಾಹುತದಿಂದಾಗಿ ಆ ಪ್ರದೇಶದಿಂದ ನಶಿಸಿಯೇ ಹೋಯಿತು. ಇದು ವಿಫಲತೆಯ ಕತೆಯಾದರೆ ಇನ್ನೊಂದು ಮುಖ ವಾಸ್ತವದ ಸ್ಥಿತಿ. ಇಂಥ ವೈಫಲ್ಯಗಳ ಬಗ್ಗೆ ಶಾಂತಿ ಜಾರ್ಜ್ ಹೀಗೆ ಹೇಳುತ್ತಾರೆ: 'ಅಡ್ಡ ತಳಿ ಹಸುವಿನ ಒಂದೇ ಒಂದು ದೋಷವೆಂದರೆ ಅದು ತಪ್ಪು ಸ್ಥಳದಲ್ಲಿದೆ. ತಪ್ಪು ಕೃಷಿ ಹವಾಮಾನ ಪರಿಸ್ಥಿತಿಯದ್ದಲ್ಲ, ಯಾಕೆಂದರೆ ಇಲ್ಲಿ ಹವಾ ನಿಯಂತ್ರಕಗಳು ಹಾಗೂ ಲಸಿಕೆಗಳು ಸಿಗುತ್ತವೆ. ಬದಲಾಗಿ ತಮ್ಮ ಮಕ್ಕಳಿಗೆ ಅಗತ್ಯ ಪೋಷಕಾಂಶ ಹಾಗೂ ಆರೋಗ್ಯ ರಕ್ಷಣೆ ಒದಗಿಸಲಾಗದ ಅಸಂಖ್ಯ ಜನ ಈ ರಾಸುಗಳ ಮಾಲೀಕರಾಗಬಲ್ಲರೆ ಎನ್ನುವುದರಲ್ಲಿದೆ.' ಭಾರತದ ಅನೇಕ ಪ್ರದೇಶಗಳಲ್ಲಿ ಸಣ್ಣ ರೈತನೊಬ್ಬನ ಮಗುವಾಗುವುದಕ್ಕಿಂತ ಭಾರೀ ಜಮೀಂದಾರನ ವಿದೇಶಿ ಹಸುವಾಗುವುದು ಹೆಚ್ಚು ಸೌಖ್ಯದಾಯಕ. ಏಕೆಂದರೆ ಬಹುಪಾಲು ಹಳ್ಳಿಗರು ಹಳ್ಳದ ನೀರು ಕುಡಿಯುತ್ತಾರೆ. ವಿದೇಶಿ ತಳಿಗೆ ಶುದ್ಧ ನೀರು ಸಿಗುತ್ತದೆ. ಭಾರತದಲ್ಲಿ ಅತ್ಯಂತ ವಿಸ್ತಾರವಾದ ಹಾಗೂ ಕ್ಷಮತೆಯ ಪಶು ಸಂಗೋಪನಾ ವ್ಯವಸ್ಥೆ ಇದೆ ಎನ್ನಲಾದ ಆನಂದದಲ್ಲಿ ರೋಗಗ್ರಸ್ತ ಪಶುವಾಗಿ ವೈದ್ಯ ಸುಲಭವಾಗಿ ಸಿಗುತ್ತಾನೆ. ಆದರೆ ರೋಗಗ್ರಸ್ತ ಮನುಷ್ಯರಿಗೆ ಅಲ್ಲಿ ವೈದ್ಯ ಸಿಗುವುದಿಲ್ಲ.' ಗೃಹ ಸಂಬಂಧಿ ಡೇರಿ ಸಂಸ್ಕರಣೆ ಭಾರಿ ಬಂಡವಾಳದ ಉದ್ಯಮವಾಗಿ ಬಿಟ್ಟಿದ್ದರಿಂದ ಉಂಟಾದ ಅನಿವಾರ್ಯ ಪರಿಣಾಮ ಇದು. ಭಾರತದಲ್ಲಿ ಕೃಷಿ ಹಾಗೂ ಮಣ್ಣಿನೊಡನೆ ಸೂಕ್ಷ್ಮ ಸಂಬಂಧ ಹೊಂದಿದ್ದ ಪಶುಪಾಲನೆಯನ್ನು ಛಿದ್ರೀಕರಿಸಿ ಹೈನೋದ್ಯಮವನ್ನಾಗಿಸಿದ ಪರಿಣಾಮ ಕೃಷಿಯ ಮೇಲೆ ಕೂಡಆಗಿದೆ. ಇಲ್ಲಿ ಹಸು ಕೇವಲ ಹಾಲು ಉತ್ಪಾದನೆಯ ಯಂತ್ರವಾಗಿದೆ ಡೇರಿ ಯೋಜಕರು ಹಸುವನ್ನು ನೋಡಿದಾಗ ಅವರಿಗೆ ಕಾಣುವುದು ಅದರ ಕೆಚ್ಚಲು ಮಾತ್ರ. ಅವರ ದೃಷ್ಟಿಯಲ್ಲಿ ಹಸು ಎಂದರೆ ಹಾಲು. ಅದು ಉತ್ಪಾದಿಸುವ ಸೆಗಣಿ, ಇಂಧನ, ಚರ್ಮ, ಕೊಂಬು, ಗೊರಸುಗಳನ್ನು ಅವರು ನೋಡುವುದೇ ಇಲ್ಲ.

ಕ್ಷೀರ ಉತ್ಪಾದನೆಯನ್ನೇ ಏಕಮಾತ್ರ ಅಂಶವಾಗಿ ಪರಿಗಣಿಸಿ ಶ್ವೇತಕ್ರಾಂತಿ ತಂದು ಹಾಕಿದ ಒಳಸುರಿ ಹಾಗೂ ಹೊರಸುರಿಗೆ ಸಂಬಂಧಪಟ್ಟಂತೆ.

ಹೈಬ್ರಿಡ್ ತಳಿಯನ್ನು ನಾಟಿ ಹಸುವಿನೊಂದಿಗೆ ಹೋಲಿಸಿ ನೋಡಲು ಒಮ್ಮೆ ಪ್ರಯತ್ನಿಸೋಣ.

ಸೂಚಿಕೆ ೦೮ನ್ನು ನೋಡಿ

ಒಳಸುರಿ, ಹೊರಸುರಿ ಹಾಗೂ ಕ್ಷಮತೆ ಈ ಮೂರನ್ನು ಪರಿಗಣಿಸುವುದಾದರೂ ಹೈಬ್ರಿಡ್ ತಳಿಗಳಿಗಿಂತ ನಾಟಿ ರಾಸುಗಳೇ ಹೆಚ್ಚು ಉತ್ತಮವಾಗಿವೆ. ಭಾರತೀಯ ಹಸು ತಾನು ತಿಂದದ್ದಕ್ಕಿಂತ ಹೆಚ್ಚು ಉತ್ಪಾದಿಸುತ್ತದೆ ಆದರೆ ಹೈಬ್ರಿಡ್‌ತಳಿ ತಾನು ಉತ್ಪಾದಿಸುವುದಕ್ಕಿಂತ ೬ಪಟ್ಟು ಹೆಚ್ಚು ಆಹಾರ ಕಬಳಿಸುತ್ತದೆ. ಆದರೆ ಕ್ಷೀರೋದ್ಯಮಕ್ಕೆ ಈ

ಸೂಚಿಕೆ: ೦೮:		ಪದಾರ್ಥ (೧೦ಕೆಜಿ)		ಶಕ್ತಿ (೧೦ಕ್ಯಾಲೋರಿ)		ಪ್ರೋಟಿನ್ (೧೦ಕೆಜಿ)	
		ಅಮೇರಿಕಾ	ಭಾರತ	ಅಮೆರಿಕಾ	ಭಾರತ	ಅಮೆರಿಕಾ	ಭಾರತ
ಒಳಸುರಿ:	ಮನುಷ್ಯನ ಆಹಾರ	೧೧.೯೦	೦.೬೮	೩೮.೮೦	೧.೭೦	೧೬.೦೦	೨.೧೦
	ಪಶು ಆಹಾರ	೨೨.೨೦	೪೦.೦೦	೮೮.೦೦	೧೨೦.೫೦	೨೫.೧೦	೩೩.೩೦
	ಒಟ್ಟು	೩೪.೧೦	೪೦.೬೮	೧೨೬.೮೦	೧೨೨.೨೦	೪೧.೧೦	೩೫.೪೦
ಹೊರಸುರಿ:	ಕೆಲಸ	–	–	–	೬.೫೦	–	–
	ಹಾಲು	೧.೧೨	೦.೫೧	೫.೦೪	೨.೦೯	೨.೦೬	೦.೮೮
	ಮಾಂಸ	೦.೯೦	೦.೫೦	೪.೪೦	೨.೨೩	೦.೧೭	೦.೧೧
	ಚರ್ಮ	೦.೧೧	೦.೦೭	–	–	–	–
	ಗೊಬ್ಬರ	೦.೮೭	೧೦.೮೧	–	–	–	–
	ಒಟ್ಟು	೩.೦	೧೧.೮೯	–	–	–	–
	ಕ್ಷಮತೆ (ಪ್ರತಿಶತ)	೯	೨೯	೭	೨೨	೫	೩

ಆಕರ: ಬ್ರೂಸ್ ಲಿಯಾನ್ ; ಎನ್‌ವಿರೋನಮೆಂಟ್ ಸಂ. ೧೭ ಸಂ. ೯ (೧೯೭೫)೩೫

ಯಾವ ಪರಿಗಣನೆಗಳೂ ಬೇಕಾಗಿಲ್ಲ.

ಹಾಲಿನ ಉತ್ಪಾದನೆಯ ಹೆಚ್ಚಳವೊಂದೇ ಶ್ವೇತ ಕ್ರಾಂತಿಯ ಗುರಿ. ಭಾರತೀಯ ಕೃಷಿ ಅನುಸಂಧಾನ ಮಂಡಳಿ ಎಚ್ಚರಿಸಿದಂತೆ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಿದರೆ, ಪಶುವಿನ ಭಾರ ಎಳೆಯುವ ಶಕ್ತಿ ಕುಂಠಿತಗೊಂಡು ಅಪರೋಕ್ಷವಾಗಿ ಭಾರತೀಯ ಕೃಷಿಯ ಮೂಲಕ್ಕೇ ಏಟು ಬೀಳುತ್ತದೆ. ಪಶುಪಾಲನೆ ಹಾಗೂ ಕೃಷಿಯ ನಡುವಿನ ಸಾವಯವ ಸಂಬಂಧದ ವಿಘಟನೆ ಕೂಡ ತನ್ನಷ್ಟಕ್ಕೆ ಇದ್ದ ರೈತನ ಮೇಲೆ ಒತ್ತಡ ಸಂಚಯಿಸಿದ ಒಂದು ಅಂಶವಾಗಿದೆ. ಬಾಣಾವರದ ಕುರುಬರಹಳ್ಳಿಯ ಭೈರೇಶ್‌ನ ಸಾಲದಲ್ಲಿ ಎರಡು ಹಸುಗಳಿಗಾಗಿ ತೆಗೆದ ಸಾಲವೂ ಇತ್ತು ಹಾಗೂ ಒಂದು ಹಸು ಸತ್ತು ಹೋಗಿತ್ತು ಎಂಬುದನ್ನು ಪ್ರಾಸಂಗಿಕವಾಗಿ ಇಲ್ಲಿ ನೆನಪಿಸುತ್ತೇನೆ.

ಚಮತ್ಕಾರಿಕ ಬೀಜಗಳು:

ಹಸಿರುಕ್ರಾಂತಿಯ ಮಿಥ್ಯಾ ಪ್ರಭಾವಳಿ ದುರ್ಬಲವಾದಂತೆ ಎರಡನೇ ಆಟ ಸೃಷ್ಟಿಸುವ ಕೆಲಸ ಶುರುವಾಯಿತು. ಅದು ಜಿ.ಎಂ.ಓಗಳ ಅನ್ವೇಷಣೆ. ಅದರ ಮೂಲವಿರುವುದು ವಂಶವಾಹಿನಿ ಬದಲಾವಣೆಯಲ್ಲಿ. ಹಸಿರುಕ್ರಾಂತಿಯ ಸಫಲತೆಗೆ ಕಾರಣವಾದ ಉನ್ನತ ಇಳುವರಿಯ ಪ್ರಭೇದ(ಎಚ್‌ವೈವಿ)ಗಳನ್ನು ಸ್ಥಳಾಂತರಿಸಲು ವಂಶವಾಹಿ ಬದಲಾವಣೆಗೆ ಒಳಪಟ್ಟು ಮುಕ್ತ ಪರಾಗಸ್ಪರ್ಶ ಪ್ರಭೇದವೇ ಆಗಿದ್ದ ಬೀಜಗಳು ಬಂದವು. ೧೯೮೮ರ ಹೊಸ ಬೀಜ ನೀತಿ ಈ ಪಲ್ಲಟವನ್ನು ಬಹಿರಂಗವಾಗಿಯೇ ವ್ಯಕ್ತಪಡಿಸಿತು. ಇದರ ಜೊತೆಗೆ ಉದಾರೀಕರಣ ಕೂಡ ಸೇರಿಕೊಂಡು ಪಶ್ಚಿಮದ ಬಿಟಿ ತಂತ್ರಜ್ಞಾನದ ಪ್ರಯೋಗಗಳಿಗೆ ತೃತೀಯ ಜಗತ್ತಿನಲ್ಲಿ ಪ್ರಯೋಗ ಕ್ಷೇತ್ರ ಮಾರ್ಕೆಟಾಗಿ ದೊರೆತಾಗ ಹೈಬ್ರಿಡ್ ಬೀಜಗಳ ಯುಗ ಆರಂಭವಾಯಿತು. ಇವಂತೂ ನಿಜಕ್ಕೂ ಪವಾಡ ಸದೃಶ ಬೀಜಗಳೇ. ಏಕೆಂದರೆ ರೈತ ಪ್ರತಿವರ್ಷ ಅವನ್ನು ಮಾರ್ಕೆಟ್‌ನಲ್ಲಿ ಕೊಂಡು ಬಿತ್ತಬೇಕು. ಅವು ಮರು ಉತ್ಪಾದಿಸಲಾರವು. ಈ ರೀತಿಯಾಗಿ ಆಹಾರ ಸರಪಳಿಯ ಮೊದಲ ಕೊಂಡಿಯಾಗಿರುವ ಬೀಜದಿಂದಲೇ ಜೀವನ ದ್ರವ್ಯವನ್ನು ಬಸಿದು ತೆಗೆವ ಪವಾಡಕ್ಕೆ ಜೈವಿಕ ತಂತ್ರಜ್ಞಾನ ಎನ್ನಲಾಯಿತು.

ಭಾರತೀಯ ಬೀಜೋದ್ಯಮ: ಸಾರ್ವಭೌಮತ್ವದಿಂದ ಗುಲಾಮಗಿರಿಯತ್ತ:

ಬೆಳೆದ ಬೆಳೆಯಿಂದಲೇ ಶೇಖರಿಸಿ ಆಯ್ದು ಬಿತ್ತುತ್ತಿದ್ದ ಹೊತ್ತಿನಲ್ಲಿ ಜೈವಿಕ ವೈವಿಧ್ಯ ಹಾಗೂ ಸ್ವಯಂ ಮರು ಉತ್ಪಾದನೆಯ ಮೂಲವಾದ ಜೀವದ್ರವ್ಯ ಸಂಪೂರ್ಣವಾಗಿ ರೈತನ ನಿಯಂತ್ರಣದಲ್ಲೇ ಇತ್ತು. ಹಸಿರುಕ್ರಾಂತಿಯ ಸಂದರ್ಭದ ಉನ್ನತ ಇಳುವರಿಯ ಪ್ರಭೇದಗಳು ಈ ನಿಯಂತ್ರಣವನ್ನು ಬೀಜ ಮಾರುಕಟ್ಟೆಗೆ (ಸರ್ಕಾರಿ ಬೀಜ ನಿಗಮಗಳಿಗೆ) ಸ್ಥಳಾಂತರಿಸಲು ಯತ್ನಿಸಿದರೂ ಅವೂ ಕೂಡ ಮುಕ್ತ ಪರಾಗ ಸ್ಪರ್ಶಿ ಪ್ರಭೇದಗಳೇ ಆಗಿದ್ದವು. ಆದರೆ ಸುಧಾರಣಾಯುಗದ (೯೦ರ ನಂತರದ reform period) ಸರ್ಕಾರಿ ನೀತಿಗಳು ಹಾಗೂ ಅಂತರರಾಷ್ಟ್ರೀಯ ಒಪ್ಪಂದಗಳ ಪರಿಣಾಮವಾಗಿ ಈ ನಿಯಂತ್ರಣ ಈಗ ಮಾನ್ಸಂಟೋ, ಕಾರ್ಗಿಲ್, ಸಿಜೆಂಟಾದಂತಹ ಉದ್ದಿಮೆಗಳ ಪಾಲಾಗಿವೆ. ಇವೇ ಈಗ ಭಾರತೀಯ ಬೀಜ ಮಾರುಕಟ್ಟೆಯನ್ನು ನಿತಂತ್ರಿಸುತ್ತಿವೆ. ಮಾರ್ಕೆಟ್‌ನ ಹಿಡಿತವನ್ನು ಇವುಗಳ ಕೈಗೆ ಒಪ್ಪಿಸಿದ ಪ್ರಯತ್ನಗಳಲ್ಲಿ ಸರ್ಕಾರದ ಪಾಲೇ ಹೆಚ್ಚು.

೧೯೮೮ರ ಬೀಜನೀತಿ ಬೀಜ ಮಾರುಕಟ್ಟೆಯನ್ನು ಖಾಸಗೀ ಕ್ಷೇತ್ರಕ್ಕೆ ಮುಕ್ತವಾಗಿಸಿತು. ಈ ಮುನ್ನ ಉನ್ನತ ಇಳುವರಿಯ ಬೀಜಗಳನ್ನು ಆಮದು ಮಾಡಿಕೊಳ್ಳಲು ಸ್ಥಾಪನೆಯಾದ ರಾಷ್ಟ್ರೀಯ ಬೀಜ ನಿಗಮ(೧೯೬೩) ಹಾಗೂ ೧೯೭೫ರಲ್ಲಿ ವಿಶ್ವಬ್ಯಾಂಕಿನ ಅನುದಾನದೊಂದಿಗೆ ಸ್ಥಾಪನೆಗೊಂಡ ಹದಿಮೂರು ರಾಜ್ಯ ಬೀಜ ನಿಗಮಗಳಿದ್ದವು. ICAR, ICRISAT ಹಾಗೂ ವಿಶ್ವವಿದ್ಯಾನಿಲಯಗಳು ಸಂಶೋಧನೆ ನಡಸುತ್ತಿದ್ದವು. ಅಲ್ಲದೇ ಸಾರ್ವಜನಿಕ ರಂಗದ ಪಾಲು ಮುಕ್ತ ಪರಾಗಸ್ಪರ್ಶಿ ಪ್ರಭೇದಗಳ ಅಭಿವೃದ್ಧಿಗಷ್ಟೇ ಸೀಮಿತವಾಯಿತು. ವಾಣಿಜ್ಯಕವಾಗಿ ಆಕರ್ಷಕವಲ್ಲದ ಕೆಲವು ಹೈಬ್ರಿಡ್ ಪ್ರಭೇದಗಳನ್ನು ಇವುಗಳ ವ್ಯಾಪ್ತಿಗೆ ಸೇರಿಸಲಾಯಿತಾದರೂ ಬೀಜ ನಿಗಮಗಳು ಉತ್ಪಾದನೆಯನ್ನು ಕಡಿಮೆ ಮಾಡಬೇಕೆಂಬ ವಿಶ್ವಬ್ಯಾಂಕ್ ಒತ್ತಡ ನಿರಂತರವಾಗಿತ್ತು. ಉದಾರೀಕರಣ ಈ ಮಾರುಕಟ್ಟೆಯನ್ನು ಕೂಡ ಎಂ.ಎನ್.ಸಿ.ಗಳಿಗೆ ಉದಾರವಾಗಿ ತೆರೆದಿಟ್ಟಿತ್ತು. ಪುಷ್ಟಿಪಡೆದ ಪ್ರಚಾರದಿಂದಾಗಿ ರೈತ ಶೇಖರಿಸಿಟ್ಟ ಬಿತ್ತನೆ ಬೀಜಗಳ ಕಲ್ಪನೆ ಅಸಂಗತವಾಗತೊಡಗಿದೆ.

ರೈತ ಸೋತಿದ್ದಾನೆ:

ಭಾರತಕ್ಕೆ ವಂಶವಾಹಿ ಪಲ್ಲಟಿತ ಪ್ರಭೇದಗಳು ದೊಡ್ಡ ಮಟ್ಟಿನಲ್ಲಿ ಪರಿಚಯವಾಗಿದ್ದು ಬಿಟಿ ಹತ್ತಿಯ ಮೂಲಕ. Bacillus thurengiensis (Bt) ಹತ್ತಿಯನ್ನು ಭಾರತದಲ್ಲಿ ಬೆಳೆಯಲು ಮಾರ್ಚ್ ೨೦೦೨ರಲ್ಲಿ ವಂಶವಾಹಿ ತಾಂತ್ರಿಕತೆಯ ಅನುಮೋದನಾ ಸಮಿತಿ(GEAC) ಒಪ್ಪಿಗೆ ನೀಡಿತು. ಮಾನ್ಸಾಂಟೋದ ಸಬ್ಸಿಡಿಯರಿ ಸಂಸ್ಥೆಯಾದ ಮಾಹಿಕೊ(MAHYCO- Maharustra Hybrid seeds Company) ಭಾರತದಲ್ಲಿ ಪ್ರಥಮ ಬಾರಿಗೆ ವಾಣಿಜ್ಯಕ ಕೃಷಿಗೆ ಬಿಟಿ ಹತ್ತಿಯನ್ನು ಅಭಿವೃದ್ಧಿ ಪಡಿಸಿತು. ಈ ಅನುಮೋದನೆಗೆ ಮುಂಚೆ ಮಾಹಿಕೊದ ಅರ್ಜಿಯನ್ನು GEAC ಒಮ್ಮೆ ತಿರಸ್ಕರಿಸಿತ್ತು ಹಾಗೂ ಭಾರತೀಯ ಕೃಷಿ ಸಂಶೋಧನಾ ಮಂಡಲಿಯ ಪರಿವೀಕ್ಷಣೆಯ ಅಡಿಯಲ್ಲಿ ಇನ್ನಷ್ಟು ಸಂಶೋಧನೆ ನಡೆಸಲು ಆದೇಶಿಸಿತ್ತು. ಕುತೂಹಲದ ಅಂಶವೆಂದರೆ ಈ ನಿರ್ಧಾರ ಹತ್ತಿ ಬೆಳೆಗಾರರಲ್ಲಿ ಬಹುಪಾಲು ಅತೃಪ್ತಿಗೆ ಕಾರಣವಾಗಿತ್ತು ಹಾಗೂ ಇನ್ನೊಮ್ಮೆ ತಿರಸ್ಕರಿಸಿದಲ್ಲಿ ಪ್ರತಿಭಟನೆಯ ಬೆದರಿಕೆಯನ್ನು ಒಡ್ಡಲಾಗಿತ್ತು. ಅಂತಿಮವಾಗಿ ಮೂರು ರೀತಿಯ ಬಿಟಿಹತ್ತಿಗಳನ್ನು – mech-9,mech-12,mech-162- ಆಂಧ್ರಪ್ರದೇಶ, ಕರ್ನಾಟಕ, ಗುಜರಾತ, ಮಹಾರಾಷ್ಟ್ರ, ಮಧ್ಯಪ್ರದೇಶ ಹಾಗೂ ತಮಿಳುನಾಡುಗಳಲ್ಲಿ ಬೆಳೆಯಲು ಅನುಮತಿಯನ್ನು ಮೂರು ವರ್ಷಗಳ ಮಟ್ಟಿಗೆ ನೀಡಲಾಯಿತು. ಈ ಅನುಮೋದನೆಗೆ ಈ ಕೆಳಗಿನ ನಿರೀಕ್ಷೆಗಳು ಆಧಾರವಾಗಿದ್ದವು:

ಅ) ಜೈವಿಕ ತಂತ್ರಜ್ಞಾನ ಇಲಾಖೆ ರೈತರಿಗೆ ಎಕರೆಗೆ ಹತ್ತು ಸಾವಿರದಷ್ಟು ಹೆಚ್ಚುವರಿ ಆದಾಯ ಬರುತ್ತದೆಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿತು ಹಾಗೂ ಬೆಳೆಯ ಇಳುವರಿ ಎಂಭತ್ತು ಪ್ರತಿಶತದಷ್ಟು ಹೆಚ್ಚುವುದೆಂದು ಅಂದು ಕೊಳ್ಳಲಾಗಿತ್ತು.

ಆ) GEAC ಯ ಅಧ್ಯಕ್ಷರು ಇದು ೮೦ ಪ್ರತಿಶತ

ಸೂಚಿಕೆ: ೦೯: (ರಾಷ್ಟ್ರೀಯ ಸರಾಸರಿ) ರೈತರ ಆದಾಯ, ವೆಚ್ಚ ಹಾಗೂ ಸಾಲಗಳು: ಜುಲೈ ೨೦೦೨–ಜೂನ್ ೨೦೦೩ (ರೂಪಾಯಿಗಳಲ್ಲಿ)

	ವಾರ್ಷಿಕ ಕೃಷಿ ಆದಾಯ	ವಾರ್ಷಿಕ ಆದಾಯ	ಒಟ್ಟು ವಾರ್ಷಿಕ ಕೃಷಿ ವೆಚ್ಚ	ವಾ.ಜೀವನ ವೆಚ್ಚ	೨–೪	೩–೫	ಸಾಲ
ಆಂಧ್ರ ಪ್ರದೇಶ	೮೯೧೬	೧೯೬೦೮	೧೨೦೮೫	೨೮೬೩೨	–೩೧೬೯	–೯೦೨೪	೮೨.೦
ಅಸ್ಸಾಂ	೨೧೫೦೪	೩೭೯೩೨	೩೩೭೦	೩೨೫೬೮	೧೮೧೩೪	೫೩೬೪	೧೮.೧
ಬಿಹಾರ	೧೦೧೫೨	೨೧೭೨೦	೬೮೦೯	೨೯೫೦೮	೩೩೪೩	–೭೭೮೮	೩೩.೦
ಗುಜರಾತ್	೧೩೯೬೮	೩೨೨೦೮	೧೧೪೫೬	೩೭೫೨೪	೨೫೧೨	–೫೩೧೬	೫೧.೯
ಹರಿಯಾಣ	೧೭೯೨೮	೩೪೫೮೪	೧೮೨೭೦	೫೨೯೬೮	–೩೪೨	–೧೮೩೮೪	೫೩.೧
ಜ.ಕಾಶ್ಮೀರ	೨೯೧೧೨	೬೫೮೫೬	೬೩೪೨	೪೯೩೦೮	೨೨೭೭೦	೧೬೫೪೮	೩೧.೮
ಕರ್ನಾಟಕ	೧೫೧೯೨	೩೧೩೯೨	೧೦೩೪೪	೩೧೨೯೬	೪೮೪೮	೯೬	೬೧.೬
ಕೇರಳ	೧೩೪೪೦	೪೮೦೪೮	೭೭೯೩	೫೧೦೦೦	೫೬೪೭	–೨೯೫೨	೬೪.೪
ಮಧ್ಯಪ್ರದೇಶ	೧೧೯೫೨	೧೭೧೬೦	೮೮೮೬	೨೮೦೬೮	೩೦೬೬	–೧೦೯೦೮	೫೦.೮
ಮಹಾರಾಷ್ಟ್ರ	೧೫೧೫೬	೨೯೫೫೬	೧೦೯೭೩	೩೨೨೬೮	೪೩೬೩	–೨೭೧೨	೫೪.೮
ಒರಿಸ್ಸಾ	೪೦೩೨	೧೨೭೪೪	೩೧೪೩	೨೦೩೬೪	೮೮೯	–೭೬೨೦	೪೭.೮
ಪಂಜಾಬ್	೩೩೮೬೪	೫೯೫೨೦	೨೫೯೪೫	೫೮೦೮೦	೭೯೧೯	೧೪೪೦	೬೫.೪
ರಾಜಸ್ಥಾನ	೪೩೦೮	೧೭೯೭೨	೭೬೬೮	೩೯೪೫೬	–೩೩೬೦	–೨೧೪೮೦	೫೨.೪
ತಮಿಳುನಾಡು	೭೯೦೮	೨೪೮೬೪	೮೫೯೭	೩೦೦೭೨	–೬೮೯	–೫೨೦೮	೭೪.೫
ಉತ್ತರ ಪ್ರದೇಶ	೧೦೦೩೨	೧೯೫೯೨	೯೧೫೧	೩೪೭೮೮	೮೮೧	–೧೫೧೯೨	೪೦.೩
ಪ.ಬಂಗಾಲ	೮೮೪೪	೨೪೯೪೮	೮೪೨೯	೩೨೦೧೬	೪೧೫	–೭೦೬೮	೫೦.೧
ಒಟ್ಟು ಭಾರತ	೧೧೬೨೮	೨೫೩೮೦	೮೭೯೧	೩೩೨೪೦	೨೮೩೭	–೭೮೬೦	೪೮.೬

ಆಕರ: NSSO (೨೦೦೫ ಹಾಗೂ ೨೦೦೫ b) EPW-XLI–೬ರಲ್ಲಿ ಉಲ್ಲೇಖಿಸಿದಂತೆ.

ದಷ್ಟು ಕೀಟನಾಶಕದ ಬಳಕೆಯನ್ನು ಕಡಿಮೆಮಾಡುತ್ತಿದೆ ಎಂದುಕೊಂಡಿದ್ದರು.

ಆದರೆ ಆ ನಂತರದಲ್ಲಿ ಕರ್ನಾಟಕ ಹಾಗೂ ಆಂಧ್ರ ಪ್ರದೇಶದ ಕೃಷಿ ಮಂತ್ರಿಗಳು ಬಿಟಿ ಹತ್ತಿ ವಿಫಲಗೊಂಡ ಬಗ್ಗೆ ಪ್ರಕಟಣೆ ನೀಡಬೇಕಾಯಿತು. Research Foundation for science, Technology and ecology ಹಾಗೂ Gens Campaignಗಳು ನಡೆಸಿದ ಅಧ್ಯಯನಗಳು ಇದನ್ನು ಸಮರ್ಥಿಸಿದವು. ಕರ್ನಾಟಕದ -ಧಾರವಾಡ, ಹಾವೇರಿ ಹಾಗೂ ರಾಯಚೂರು ಈ ಮೂರು ಜಿಲ್ಲೆಗಳಲ್ಲಿ ಅಧ್ಯಯನ ನಡೆಸಿದ ಗ್ರೀನ್ ಪೀಸ್ ಇಂಡಿಯಾ ಬಿಟಿ ಹತ್ತಿಯ ಸರಾಸರಿ ಇಳುವರಿ ಬಿಟಿಯೇತರ ಹತ್ತಿಗಿಂತ ಕಡಿಮೆ ಇದೆ ಎಂಬುದನ್ನು ತೋರಿಸಿಕೊಟ್ಟಿತು. ಆದರೆ ಮಾನ್ಸಂಟೋ ತಾನೂ ಕೂಡ ಸರ್ವೇ ನಡೆಸಿ ೩೦ಪ್ರತಿಶತ ಇಳುವರಿಯ ಹೆಚ್ಚಳ ಹಾಗೂ ಕೀಟನಾಶಕಗಳ ಬಳಕೆ ೬೫ರಿಂದ ೭೦ ಪ್ರತಿಶತ ಕಡಿಮೆಯಾಗಿದೆ ಹಾಗೂ ಇದರಿಂದ ರೈತರಿಗೆ ಎಕರೆಗೆ ಏಳು ಸಾವಿರ ರೂಪಾಯಿಗಳಷ್ಟು ಹೆಚ್ಚಿನ ಆದಾಯಬಂದಿದೆ ಎಂದು ಹೇಳಿ ಕೊಂಡಿತು. ಮಾರ್ಕೆಟ್‌ನ ದೃಷ್ಟಿಯಿಂದ ಈ ನಿರೀಕ್ಷಿತ ಫಲಿತಾಂಶ ಅದಕ್ಕೆ ಅನಿವಾರ್ಯ ಕೂಡ.

ಇಳುವರಿ-ವೆಚ್ಚಗಳ ಪ್ರಶ್ನೆಯಷ್ಟೇ ಅಲ್ಲ; ಇದಕ್ಕೆ ಇನ್ನೊಂದು ಆಯಾಮ ಕೂಡ ಇದೆ:ಆವರ್ಷ ಗುಜರಾತ್‌ನ ಹತ್ತಿ ಬೆಳೆಗಾರರು ಬಂಪರ್ ಫಸಲಿನ ನಿರೀಕ್ಷೆಯಲ್ಲಿದ್ದರು. ಸರ್ಕಾರದಿಂದ ಒಂದು ವಿಚಿತ್ರ ಆದೇಶ ಬರುವ ತನಕವೂ ಅವರು ಖುಷಿಯಾಗಿಯೇ ಇದ್ದರು. ಬೆಳೆದ ಬೆಳೆಯನ್ನೆಲ್ಲ ಸುಟ್ಟು ನಾಶ ಮಾಡಬೇಕೆಂದು ಆದೇಶಿಸಲಾಗಿತ್ತು. ಈ ಆದೇಶಕ್ಕೆ GEACಯ ನಿರ್ಧಾರ ಮೂಲ ಕಾರಣವಾಗಿತ್ತು. ರೈತರು ಅಹಮದಾಬಾದ್ ಮೂಲದ ಕಂಪೆನಿಯಿಂದ 'ನವಭಾರತ್' ಬೀಜಗಳನ್ನು ಖರೀದಿಸಿ ದ್ದರು. ಇವು ಬಾಲ್‌ವರ್ಮ್‌ಗಳಿಂದ ಅಭಾದಿತವಾಗಿ ಉಳಿದುಕೊಂಡಿದ್ದವು. ಇದನ್ನು ವರದಿ ಮಾಡಲಾಗಿ GEAC ಮಾನ್ಸಂಟೋದಾ ಮಾಹಿಕೊ ಜೊತೆಗೆ ತನಿಖೆ ನಡೆಸಿ ಈ ಬೆಳೆಗಳಲ್ಲಿ Cry/Ac ವಂಶವಾಹಿಗಳು ಇದ್ದದನ್ನು ಪತ್ತೆ ಮಾಡಿತು. ಇದರ ಆಧಾರದಲ್ಲಿ ಆ ಬೆಳೆಗಳನ್ನೆಲ್ಲಾ ಕಾನೂನುಬಾಹಿರ ಎಂದು ಪರಿಗಣಿಸಿ ಅವನ್ನೆಲ್ಲಾ ಸುಟ್ಟುಬಿಡಲು ಆದೇಶಿಸಿತು.

ಯಾಕೆಂದರೆ ಪೇಟೆಂಟ್ ಕಾಯ್ದೆಯಡಿ ಆ ವಂಶವಾಹಿ ಮಾನ್ಸೆಂಟೊ ಒಡೆತನದಲ್ಲಿತ್ತು. ಆ ಹೊತ್ತಿಗಾಗಲೇ ಆಂಧ್ರಪ್ರದೇಶ, ಮಹಾರಾಷ್ಟ್ರ, ಪಂಜಾಬ್ ಹರಿಯಾಣಗಳಲ್ಲೂ ಮಾರಾಟಗೊಂಡಿದ್ದ ಈ ಬೀಜಗಳನ್ನು ಖರೀದಿಸಿದ್ದಕ್ಕಾಗಿ ರೈತರು ಬೆಲೆ ತೆರಬೇಕಾಯಿತು.

ಗಮನಿಸಿ: ಇದು ನಡೆದಿದ್ದು ೨೦೦೧ರಲ್ಲಿ ಆದರೆ ಮಾನ್ಸೆಂಟೊದ ಬಿಟಿ ಹತ್ತಿಯನ್ನು ಭಾರತದ ಮಾರುಕಟ್ಟೆಯಲ್ಲಿ ಮಾರಲು ಅದಕ್ಕೆ ಅನುಮತಿ ನೀಡಿದ್ದು ಮಾರ್ಚ್ ೨೦೦೨ರಲ್ಲಿ. ಹಾಗಿದ್ದಾಗ್ಯೂ ಬಳಕೆಯಾದ ಬೀಜದಲ್ಲಿದ್ದ Cry/Ac ವಂಶವಾಹಿ ಮಾನ್ಸೆಂಟೊಗೆ ಸೇರಿದ್ದರಿಂದ ಆ ಬೀಜವನ್ನು (ನವಭಾರತ ಬೀಜವೆಂದು ನವಭಾರತ ಕಂಪೆನಿಯಿಂದ ಖರೀದಿಸಿದ ಬೀಜವನ್ನು) ಬಳಸಿ ಬೆಳೆ ತೆಗೆದರೆ ಅದು ಕಾನೂನು ಬಾಹಿರವಾಗುತ್ತದೆ.

ಸೂಚಿಕೆ: ೧೦ ಅಕ್ಕಿ ಹಾಗೂ ಗೋಧಿಗೆ ಪಿಡಿಎಸ್ ಅವಲಂಬಿಸಿದ ಕುಟುಂಬಗಳು (ಪ್ರತಿಶತ) (೨೦೦೪-೦೫)

	ಅಕ್ಕಿ		ಗೋಧಿ		ಕಾರ್ಡ್ ಹೊಂದಿರದವರು	
	ಗ್ರಾಮೀಣ	ನಗರ	ಗ್ರಾಮೀಣ	ನಗರ	ಗ್ರಾಮೀಣ	ನಗರ
ಆಂಧ್ರಪ್ರದೇಶ	೬೨.೨	೩೧.೧	೦.೬	೦.೭	೨೮	೫೪
ಕರ್ನಾಟಕ	೫೮.೫	೨೧.೦	೪೫.೬	೧೪.೬	೨೩	೫೧
ಕೇರಳ	೩೪.೬	೨೩.೩	೧೨.೨	೧೨.೧	೧೩	೧೯
ಮಹಾರಾಷ್ಟ್ರ	೨೭.೫	೬.೦	೨೫.೮	೬.೯	೧೯	೬೭
ತಮಿಳುನಾಡು	೭೮.೯	೪೭.೭	೮.೯	೧೦.೭	೧೧	೬೪
ಒಟ್ಟು ಭಾರತ	೨೪.೪	೧೩.೧	೧೧.೦	೫.೮	೧೮.೭	೩೩.೧

ಆಕರ: ಭಾರತ ಸರ್ಕಾರ:(೨೦೦೭) ಸಾರ್ವಜನಿಕ ವಿತರಣಾ ವ್ಯವಸ್ಥೆ ಹಾಗೂ ಕೌಟುಂಬಿಕ ಅನುಚ್ಛೇದದ ಇತರ ಮೂಲಗಳು ಇಪಿಡಬ್ಲ್ಯೂ- XLiii-೧೮ರಲ್ಲಿ ಉಲ್ಲೇಖಿಸಿದಂತೆ.

ಕೊನೆಯದಾಗಿ ಕೆನಡಾದ ಶೀಮರ್ ಪ್ರಕರಣವನ್ನೊಮ್ಮೆ ನೋಡೋಣ: ಪರ್ಸಿ ಶೀಮರ್ ಬಹಳ ವರ್ಷಗಳಿಂದ ಕನೋಲಾವನ್ನು ಬೆಳೆದುಕೊಂಡಿದ್ದ ಸಸ್ಕೆಚುವಾನ್ ಪ್ರಾಂತದ ಒಬ್ಬ ರೈತ. ಅವನ ಅಕ್ಕಪಕ್ಕದ ರೈತರು ಮಾನ್ಸಂಟೋ ಕನೋಲಾ ಪ್ರಭೇದ ಮಾರುಕಟ್ಟೆಗೆ ಬಂದ ಮೇಲೆ ಅದನ್ನೇ ಬೆಳೆಯಲು ನಿರ್ಧರಿಸಿದರು. ಆದರೆ ಶೀಮರ್ ಈ ವಂಶವಾಹಿ ಪಲ್ಲಟಿತ ಪ್ರಭೇದವನ್ನು ಬಳಸಲು ಬಯಸಲಿಲ್ಲ. ಆದರೂ ಶೀಮರ್‌ನ ಹೊಲದ ಸ್ಯಾಂಪಲ್‌ಗಳಲ್ಲಿ ಜಿ.ಎಂ. ಬೀಜಗಳ ಸಾಂಧ್ರತೆಯನ್ನು ಮಾನ್ಸಂಟೋ, ತನ್ನ ಪೇಟೆಂಟಿನಲ್ಲಿದ್ದ ಕನೋಲಾವನ್ನು ಅಕ್ರಮವಾಗಿ ಬೆಳೆದಿದ್ದಾನೆ ಎಂದು ಆರೋಪಿಸಿ ಮೊಕದ್ದಮೆ ದಾಖಲಿಸಿತು. 'ತನಗೆ ಈ ಬಗ್ಗೆ ಗೊತ್ತಿಲ್ಲ; ಹೊಲದಲ್ಲಿ ಬೆಳೆದಿದ್ದ ಬೀಜಗಳನ್ನೇ ಮತ್ತೆ ಬಿತ್ತಿದೆ. ಅದರ ಮೇಲೆ ಮಾನ್ಸಂಟೋ ಪೇಟೆಂಟ್ ಹೊಂದಿರುವುದು ತನಗೆ ಗೊತ್ತಿಲ್ಲ' ಎಂಬ ಶೀಮರ್ ವಾದವನ್ನು ನ್ಯಾಯಾಲಯ ಒಪ್ಪಲಿಲ್ಲ. 'ಈ ಸಸಿಗಳ ಮೂಲಗಳು ಅಸ್ಪಷ್ಟವಾಗಿದ್ದರೂ(the origin of the plants is unclear) ಸರ್ವೋಚ್ಚ ನ್ಯಾಯಾಲಯ ತನ್ನ ಅಂತಿಮ ತೀರ್ಪಿನಲ್ಲಿ ಪರ್ಸಿಶೀಮರ್ ಮಾನ್ಸಂಟೋದ ಪೇಟೆಂಟ್ ಹಕ್ಕನ್ನು ಉಲ್ಲಂಘಿಸಿದ್ದಾನೆ ಎಂದು ಹೇಳಿದೆ. ಕೆಳ ನ್ಯಾಯಾಲಯ ಆತನಿಗೆ ಬಂದ ಲಾಭ ೧೪,೪೦೦ ಡಾಲ ರನ್ನು ದಂಡವಾಗಿ ಕೊಡಬೇಕೆಂದು ಆದೇಶಿಸಿತ್ತು.

ತನ್ನ ಪೇಟೆಂಟ್ ಹಕ್ಕಿನ ರಕ್ಷಣೆಗಾಗಿ ಮಾನ್ಸಂಟೋ ನ್ಯಾಯಾಲಯಕ್ಕೆ ಹೋಗುತ್ತದೆ. ಆದರೆ ಮಾರ್ಕೆಟ್‌ನಿಂದ ಖರೀದಿಸಿದ ಆಲೂ ಬೀಜ ಹೊಲದಲ್ಲಿ ಕರಗಿ ಹೋದರೆ ಕೃಷಿ ಪದ್ಧತಿಯಲ್ಲೇ ದೋಷವನ್ನು ತೋರಿಸುವುದನ್ನು ಸೇರಿ ಕಂಪೆನಿಗಳು ಹಲವು ಕಾರಣಗಳನ್ನು ಕೊಡುತ್ತದೆ. ಆದರೆ ಹಾಸನದ ಈರಯ್ಯ ಕೇಳಲು ಕೂಡ ಹೋಗುವುದಿಲ್ಲ. ಆತ ಆತ್ಮಹತ್ಯೆಯನ್ನಷ್ಟೇ ಮಾಡಿಕೊಳ್ಳುತ್ತಾನೆ.

ಸಾರ್ವಜನಿಕ ವಿತರಣಾ ವ್ಯವಸ್ಥೆ:

ಕೊಳ್ಳುವ ಸಾಮರ್ಥ್ಯ ಕಡಿಮೆ ಇರುವವರ ಅವಶ್ಯಕತೆಗಳನ್ನು ಪೂರೈಸಲು ಕಲ್ಯಾಣ ರಾಜ್ಯ ರೂಪಿಸಿಕೊಂಡ ವ್ಯವಸ್ಥೆಯೆಂದು ಅರ್ಥಶಾಸ್ತ್ರ ಸಾರ್ವಜನಿಕ ವಿತರಣಾ ವ್ಯವಸ್ಥೆ (PDS)ಯನ್ನು ಗುರುತಿಸುತ್ತದೆ. ಇಂಥ ಕ್ರಮಗಳು ಕೇವಲ ಆರ್ಥಿಕ ಅವಶ್ಯಕತೆಗಳಿಗಾಗಿ ಅಷ್ಟೇ ರೂಪುಗೊಳ್ಳುವುದಿಲ್ಲ, ಬಹುಮಂದಿ ಬಡವರಾಗಿರುವ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ಚೌಕಟ್ಟಿನೊಳಗಿನ ರಾಜಕೀಯ ಸ್ವಾತಂತ್ರ್ಯದ ಪ್ರಶ್ನೆಯೂ ಇಲ್ಲಿದೆ ಎಂದು ಅಮರ್ತ್ಯಸೇನ್ ಪ್ರತಿಪಾದಿಸುತ್ತಾರೆ. ಆದರೆ ಜಾಗತಿಕ ಬಂಡವಾಳಶಾಹಿ ಸಂರಚನೆಗಳು, ಇವನ್ನು ತೃತೀಯ ಜಗತ್ತಿನ ರಾಷ್ಟ್ರಗಳು ತಮ್ಮ ಆಳ್ವಿಕೆಯನ್ನು ಕಾನೂನುಬದ್ಧಗೊಳಿಸಲು ಹತಾರಿಗಳಾಗಿ ಬಳಸಿಕೊಳ್ಳುತ್ತವೆ ಎಂದು ವಾದಿಸುತ್ತದೆ. ಭಾರತದಲ್ಲಿ ಪಿಡಿಎಸ್ ವಿಕಾಸಗೊಂಡಿದ್ದು ೧೯೪೦ರ ಯುದ್ಧಕಾಲದ ರೇಷನಿಂಗ್‌ನ ಮೂಲಕ. ಭಾರತ ಸರಕಾರ ೧೯೪೭ರಲ್ಲಿ ಇದನ್ನು ರದ್ದುಗೊಳಿಸಿ ೧೯೫೦ರಲ್ಲಿ ಮತ್ತೆ ಪ್ರಾರಂಭಿಸಿತು. ಸೇನ್ ಗುರುತಿಸಿದಂತೆ ಸಮಾಜವಾದಿ ಪ್ರಜಾತಾಂತ್ರಿಕ ಚೌಕಟ್ಟಿನ ರಾಜಕೀಯ ಹಾಗೂ ಆರ್ಥಿಕ ಆಯಾಮಗಳನ್ನೊಳಗೊಂಡ ಸಾರ್ವಜನಿಕ ವಿತರಣಾ ವ್ಯವಸ್ಥೆ ಮುಕ್ತ ಮಾರುಕಟ್ಟೆಯ ದಿನಗಳಲ್ಲಿ ನಿರ್ಲಕ್ಷಿಸಲ್ಪಟ್ಟಿದೆಯೇ? ಆಹಾರ ಭದ್ರತೆಯನ್ನೊದಗಿಸುವ ಇದರ ವಿಘಟನೆ ಗ್ರಾಮೀಣ ಆರ್ಥಿಕತೆಯಲ್ಲಿ ಏನೇನು ಒತ್ತಡಗಳನ್ನು ಸೃಷ್ಟಿಸಿದೆ? ಈ ಬೆಳವಣಿಗೆಯಿಂದ ರೈತನ ಮೇಲಾದ ಪರಿಣಾಮ ಏನು? ಒಂದೊಂದಾಗಿ ಪರಿಶೀಲಿಸಬೇಕಾಗಿದೆ. ರೈತರ ಆರ್ಥಿಕ ಸ್ಥಿತಿಗತಿ, ಅದರಿಂದ ಸೃಷ್ಟಿಯಾದ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲಿನ ಅವಲಂಬನೆ ಹಾಗೂ ಪಿಡಿಎಸ್‌ನ ಪ್ರಸ್ತುತ ಪರಿಸ್ಥಿತಿಯನ್ನು ಗುರುತಿಸಬೇಕಾಗುತ್ತದೆ.

ಸೂಚಿಕೆ:೯ನ್ನು ನೋಡಿ

ಕರ್ನಾಟಕದ ರೈತ ಕುಟುಂಬದ ಸರಾಸರಿ ಒಟ್ಟು ವಾರ್ಷಿಕ ಆದಾಯ ೩೧೯೨. ಅಂದರೆಒಂದು ಇಡೀ ಕುಟುಂಬದ ದಿನದ ಆದಾಯ ಸುಮಾರು ೮೬ ರೂಪಾಯಿಗಳು; ಜೀವನ ವೆಚ್ಚ ಕೂಡ ಸುಮಾರು ೮೫.೭೪ ರೂಪಾಯಿಗಳು. ಸರ್ಕಾರಿ ಅಂಕಿ ಅಂಶಗಳ ಪ್ರಕಾರವೇ ಸಾಲದ ಪ್ರಮಾಣ ೬೧.೬ ಪ್ರತಿಶತ. ಪ್ರತ್ಯೇಕವಾಗಿರುವ ಕೈಸಾಲವನ್ನು (SASಪ್ರಕಾರ ಇಂಥ ಸಾಲಗಳು ೪೨%) ಸೇರಿಸಿಕೊಂಡರೆ ದಿನದ ಸರಾಸರಿ 'ಆದಾಯ' ಹಾಗೂ ಒಟ್ಟು ವಾರ್ಷಿಕ ಉಳಿತಾಯ (೯೬ ರೂ.) ಬಹಳಷ್ಟು ಕಡಿಮೆಯಾಗುತ್ತದೆ. ಇಷ್ಟರಲ್ಲೇ ಒಂದಿಡೀ ಕುಟುಂಬ ಜೀವನ ಸಾಗಿಸಬೇಕಾಗುತ್ತದೆ. ಹಾಗೇ ಅಖಿಲ ಭಾರತ ಮಟ್ಟದ ದೈನಿಕ ಜೀವನ ವೆಚ್ಚ (೯೧.೦೭)ಕ್ಕಿಂತ ಇದು ಕಡಿಮೆ ಇದೆ ಎಂಬುದನ್ನು ಗಮನಿಸಿಕೊಳ್ಳಬೇಕು.

ತುಲನಾತ್ಮಕವಾಗಿ ಇತರ ರಾಜ್ಯಗಳಿಗಿಂತ ಕರ್ನಾಟಕದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೇಲಿನ ಅವಲಂಬನೆ ಹೆಚ್ಚಾಗಿದೆ. ಆಯ್ದ ಅಂಕಿ ಅಂಶಗಳನ್ನು ಗಮನಿಸುವುದಾದರೆ:

ಸೂಚಿಕೆ:೧೦ನ್ನು ನೋಡಿ

ಅಕ್ಕಿ ಹಾಗೂ ಗೋಧಿ-ಇವೆರಡರ ಮೇಲೆ ಕೂಡ ಜನರ ಪಿಡಿಎಸ್ ಮೇಲಿನ ಅವಲಂಬನೆ ರಾಷ್ಟ್ರೀಯ ಪ್ರತಿಶತಕ್ಕಿಂತ ಗಣನೀಯವಾಗಿಯೇ ಹೆಚ್ಚಾಗಿದೆ. ಅಂದರೆ ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು ಮುಖ್ಯ ಅಹಾರ ವಸ್ತುಗಳಾದ ಅಕ್ಕಿ ಹಾಗೂ ಗೋಧಿಗಳಿಗಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನೇ ಅವಲಂಬಿಸಿದ್ದಾರೆ. ಇದರ ಜೊತೆಗೆ ಗಮನಿಸಿಕೊಳ್ಳಬೇಕಾದ ಇನ್ನೆರಡು ಅಂಶಗಳು -ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಈ ಅವಲಂಬನೆ ನಗರ ಪ್ರದೇಶದಲ್ಲಿ

[illegible] ಇಲ್ಲ ಎನ್ನುವುದು ಹಾಗೂ [illegible] [illegible] ಗ್ರಾಮೀಣ ಪ್ರದೇಶದ ೨೩ ಪ್ರತಿಶತ ಹಾಗೂ ನಗರ ಪ್ರದೇಶದ ೫೧ ಪ್ರತಿಶತ ಕುಟುಂಬಗಳು ಕಾರ್ಡುಗಳನ್ನು ಹೊಂದಿಲ್ಲ ಎಂಬುದು. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಅಪ್ರಸ್ತುತತೆಯ ಬಗ್ಗೆ ಏನೆಲ್ಲ ವಾದಗಳಿದ್ದರೂ ಕರ್ನಾಟಕದ ಮಟ್ಟಿಗಾದರೂ ಗ್ರಾಮೀಣ ಕುಟುಂಬಗಳು ಅದನ್ನೇ ಬಹುಪಾಲು ಅವಲಂಬಿಸಿದೆ. ಎಂಬುದು ಸಿದ್ಧವಾಯಿತು.

ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪರಿಸ್ಥಿತಿ ಹೇಗಿದೆ? ಲಭ್ಯವಿರುವ ಆಹಾರ ಧಾನ್ಯಗಳ ದಾಸ್ತಾನು ಹಾಗೂ ಬೆಲೆಗಳ ಮಾನದಂಡವನ್ನಿಟ್ಟುಕೊಂಡು ಇದನ್ನು ಚರ್ಚಿಸಬಹುದು.

ಸೂಚಿಕೆ: ೧೧ನ್ನು ನೋಡಿ

ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಉಂಟಾದ ಬೆಲೆಗಳ ಹೆಚ್ಚಳದ ಪ್ರಮಾಣ ಆಹಾರ ವಸ್ತುದರ ಸೂಚಿಯ ಏರಿಕೆಯ ಪ್ರಮಾಣಕ್ಕಿಂತಲೂ ಹೆಚ್ಚಾಗಿದೆ. ಇದಕ್ಕೆ ಹೋಲಿಸಿದರೆ ಚಿಲ್ಲರೆ ಮಾರಾಟದ ದರದಲ್ಲಿ ಉಂಟಾದ ಬದಲಾವಣೆ ತುಂಬಾ ಕಡಿಮೆ. ಪಿಡಿಎಸ್‌ನಡಿಯಲ್ಲಿ ಗೋಧಿಯ ಬೆಲೆ ಏರಿಕೆಯ ವ್ಯತ್ಯಾಸ ಪ್ರತಿಶತ ೮.೧೧ರಷ್ಟಿದ್ದರೆ ಚಿಲ್ಲರೆ ಮಾರಾಟದಲ್ಲಿ ಅದು ಕೇವಲ ೨.೨೬ರ ಪ್ರತಿಶತದಷ್ಟು ಮಾತ್ರ ಆಗಿದೆ.

ಸೂಚಿಕೆ: ೧೨ನ್ನು ನೋಡಿ

ಸೂಚಿಕೆಯಿಂದ ತಿಳಿದು ಬರುವಂತೆ ಆಹಾರ ಧಾನ್ಯಗಳ (ಅಕ್ಕಿ ಹಾಗೂ ಗೋಧಿ) ದಾಸ್ತಾನು ೧೯೯೮ರಿಂದ ನಿರಂತರವಾಗಿ ಹೆಚ್ಚಾಗಿದೆ ಹಾಗೂ ನಿಗದಿಪಡಿಸಿದ ಪ್ರಮಾಣಕ್ಕಿಂತಲೂ (norm)ದಾಸ್ತಾನು ಪ್ರಮಾಣ ತುಂಬ ಹೆಚ್ಚಿದೆ. ೨೦೦೧ರಲ್ಲಿ ಈ ವ್ಯತ್ಯಾಸ ಎರಡೂವರೆ ಪಟ್ಟಿಗಿಂತಲೂ ಅಧಿಕವಾಗಿದೆ. ಈ ವರ್ಷಗಳಲ್ಲಿ ಆಹಾರ ಧಾನ್ಯಗಳ ತಲಾವಾರು ಲಭ್ಯತೆ (ಪಿಡಿಎಸ್) ಕಡಿಮೆಯಾಗಿದೆ. ೧೯೯೮-೯೯ ಹಾಗೂ ೨೦೦೦-೦೧ರ ನಡುವಿನ ವರ್ಷಗಳಲ್ಲೇ ಇದು ೧೬.೯೫ ಗ್ರಾಂಗಳಷ್ಟು ಕುಸಿತ ಕಂಡಿದೆ. ದಾಸ್ತಾನು ಹೆಚ್ಚಳ, ತಲಾವಾರು ಲಭ್ಯತೆ ಹಾಗೂ ಬೆಲೆ ಹೆಚ್ಚಳಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗಿದೆ. ಬೆಲೆ ಏರಿಕೆಯಿಂದಾಗಿ ಬಹಳಷ್ಟು ಮಂದಿ ಪಿಡಿಎಸ್ ನೆಟ್‌ನಿಂದ ಹೊರಗುಳಿದಿದ್ದಾರೆ. ಮುಕ್ತ ಮಾರುಕಟ್ಟೆ ಪಿಡಿಎಸ್ ಅನ್ನು ಅವಾಸ್ತವಗೊಳಿಸುತ್ತಿರುವುದರ ಜೊತೆ ಸರ್ಕಾರಿ ನೀತಿಗಳೂ ಇದನ್ನು ಛಿದ್ರೀಕರಿಸುತ್ತಿವೆ. ಜನ ತಾವಾಗಿಯೇ ಮುಕ್ತ ಮಾರುಕಟ್ಟೆಯತ್ತ ತಿರುಗುವಂತಾಗಲು ಅಗತ್ಯವಾದ ಒತ್ತಡಗಳು ಸೃಷ್ಟಿಯಾಗುತ್ತಿವೆ. ೧೯೯೭ರಲ್ಲಿ ಸರ್ಕಾರ ಗುರಿ ನಿರ್ದೇಶಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು (ಟಿಪಿಡಿಎಸ್)ಜಾರಿಗೆತಂದಿತು. ಸಾರ್ವತ್ರಿಕ ಪಿಡಿಎಸ್‌ನಿಂದ ವಿಮುಖಗೊಂಡ ಸರ್ಕಾರಿ ನೀತಿಗಳು ಆಹಾರ ಭದ್ರತೆಗೆ ವಿದಾಯ ಹೇಳಿರುವುದನ್ನು ಸೂಚಿಸುತ್ತದೆ ಎಂದು ಶಕ್ತಿಕಾಕ್ ಅಭಿಪ್ರಾಯಪಟ್ಟರೆ ಸ್ವಾಮಿನಾಥನ್ ಇದು ಪಿಡಿಎಸ್‌ನ ಅಂತ್ಯದ ಮುನ್ನುಡಿಯಂತಿದೆ ಎನ್ನುತ್ತಾರೆ. ಸುಧಾರಣಾ ಯುಗದಲ್ಲಿ ಆಹಾರ ಧಾನ್ಯಗಳ ಬೇಡಿಕೆಯಲ್ಲಿ ಉಂಟಾದ ಕುಸಿತವನ್ನು ಗಮನಿಸಿದರೆ ಪಿಡಿಎಸ್ ಅನ್ನು ಸಾರ್ವತ್ರೀಕರಿಸಬೇಕಾಗಿದೆಯೇ ಹೊರತು ಛಿದ್ರೀಕರಿಸುವುದಲ್ಲ ಎಂದು ಉ. ಪಟ್ನಾಯಕ್ ವಾದಿಸುತ್ತಾರೆ.

ಸೂಚಿಕೆ: ೧೧: ಬೆಲೆಗಳ ಏರಿಕೆ ದರ (ವಾರ್ಷಿಕ ಪ್ರತಿಶತ)

ಧಾನ್ಯ	ಬೆಲೆ	೧೯೮೦-೮೧ ರಿಂದ ೮೯-೯೦	೧೯೯೦-೯೧ ರಿಂದ೯೯-೦೦
ಗೋಧಿ	ಚಿಲ್ಲರೆ ಮಾರಾಟ ಬೆಲೆ	೬.೬೨	೮.೮೮
	ಪಿಡಿಎಸ್ ಬೆಲೆ	೩.೭೪	೧೧.೮೫
ಅಕ್ಕಿ	ಚಿಲ್ಲರೆ ಮಾರಾಟ ಬೆಲೆ	೭.೩೬	೮.೬೯
	ಪಿಡಿಎಸ್ ಬೆಲೆ	೫.೮೦	೧೨.೯೬
ಆಹಾರ ವಸ್ತು ದರಸೂಚಿ		೮.೩೮	೯.೩೯

ಆಕರ; ೧) ಆರ್ಥಿಕ ಸರ್ವೆ: ಭಾರತ ಸರ್ಕಾರ ೨೦೦೧-೦೨ ೨) ಗ್ರಾಹಕ ವ್ಯವಹಾರ ಖಾತೆಯ ಸಂಚಿಕೆಗಳು- EPW-XL-11ರಲ್ಲಿ ಉಲ್ಲೇಖಿಸಿದಂತೆ.

ಆಫ್ರಿಕಾದ ಆಹಾರ ಕೊರತೆ, ಹಸಿವು ಹಾಗೂ ಕ್ಷಾಮ ನೇರವಾಗಿ ಆ ದೇಶ ಆಹಾರ ಬೆಳೆಗಳನ್ನು ಬಲಿಕೊಟ್ಟು ವಾಣಿಜ್ಯ ಬೆಳೆಗಳನ್ನು ಬೆಳೆದದ್ದರ ಪರಿಣಾಮ. ಅದು ವಾಣಿಜ್ಯ ಬೆಳೆಗಳ ಮೇಲೆ ಭಾರಿ ಪ್ರಮಾಣದ ಬಂಡವಾಳ ಹೂಡಿದ್ದ ರಿಂದ ಆಹಾರೋತ್ಪಾದನೆ ಕುಸಿಯಿತು. ೧೯೭೦ರ ಕೊನೆಯ ಭಾಗದಲ್ಲಿ ಆಫ್ರಿಕಾದ ಆರ್ಥಿಕತೆ ರಫ್ತು ಆಧಾರಿತ ವಾಣಿಜ್ಯ ಬೆಳೆಯನ್ನು ಆಧರಿಸಿತು.

ಸೂಚಿಕೆ: ೧೨: ಆಹಾರ ಧಾನ್ಯಗಳ ದಾಸ್ತಾನು ಹಾಗೂ ಪಿಡಿಎಸ್ ಮೂಲಕ ತಲಾವಾರು ಲಭ್ಯತೆ

ವರ್ಷ	ಜನವರಿ ಮಿ.(ಟನ್)	ಎಪ್ರೀಲ್ ಮಿ. (ಟನ್)	ಜೂನ್ ಮಿ.(ಟನ್)	ಅಕ್ಟೋಬರ್ ಮಿ.(ಟನ್)	ವರ್ಷ	ಪಿಡಿಎಸ್ ಮೂಲಕ ಲಭ್ಯತೆ
೧೯೯೦	೧೧.೭	೧೨.೯	೧೮.೯	೧೬.೫	೧೯೯೦-೯೧	೩೪.೫೯
೧೯೯೫	೩೦.೧	೨೬.೮	೩೫.೬	೨೯.೮	೯೫-೯೬	೩೫.೧೮
೧೯೯೬	೨೮.೫	೨೦.೯	೨೭.೦	೧೯.೮	೯೬-೯೭	೪೨.೪೦
೧೯೯೭	೨೦.೦	೧೬.೪	೨೨.೪	೧೫.೩	೯೭-೯೮	೩೬.೪೮
೧೯೯೮	೧೮.೩	೧೮.೨	೨೮.೫	೨೪.೨	೯೮-೯೯	೪೪.೬೮
೧೯೯೯	೨೪.೪	೨೧.೯	೩೩.೧	೨೮.೦	೯೯-೦೦	೩೮.೯೨
೨೦೦೦	೩೧.೪	೨೧.೭	೪೨.೨	೪೦.೦	೦೦-೦೧	೨೭.೭೩
೨೦೦೧	೪೫.೭	೪೪.೭	೬೦.೪	೫೮.೩		
Norm 92-98	೧೫.೪	೧೪.೫	೨೨.೩	೧೬.೬		
Norm 99ರಿಂದ	೧೬.೮	೧೫.೮	೨೪.೩	೧೮.೧		

ಆಕರ: ೧) ಆರ್ಥಿಕ ಸರ್ವೆ: ಭಾರತ ಸರ್ಕಾರ ೨೦೦೧-೦೨ ೨) ಗ್ರಾಹಕ ವ್ಯವಹಾರ ಖಾತೆಯ ಸಂಚಿಕೆಗಳು- EPW-XL-11 ರಲ್ಲಿ ಉಲ್ಲೇಖಿಸಿದಂತೆ.

ಜೆಲೆಏರಿಕೆ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿಘಟನೆ ಹಾಗೂ ಹಣದುಬ್ಬರಕ್ಕೆ ಪಕ್ಕಾಗುವ ಮುಕ್ತ ಮಾರುಕಟ್ಟೆಯತ್ತ ಸ್ಥಳಾಂತರಿತ ಅವಲಂಬನೆಗಳು ದಿನಕ್ಕೆ ಎಂಬತ್ತೈದು ರೂಪಾಯಿಗಳಷ್ಟು ಕುಟುಂಬ ವೆಚ್ಚವನ್ನೂ ಮಾಡಲಾಗದ ರೈತನ ಜೀವನ ನಿರ್ವಹಣಾ ಒತ್ತಡವನ್ನು ನಿರಾಂತಕವಾಗಿ ಹೆಚ್ಚಿಸುತ್ತಿವೆ.

ಪೆಪ್ಸಿ ಯೋಜನೆ:

'ತುತೂರಿಗಳು ಮೊಳಗಿ
ಭೂಲೋಕದಲ್ಲಿ ಎಲ್ಲ ಅಣಿಯಾದಾಗ
ಭಗವಂತ ತನ್ನ ಪೃಥ್ವಿಯನ್ನ ವಿಭಾಗಿಸಿದ

ಚಿಲಿಯ ಪಾಬ್ಲೊ ನೆರುಡ ತನ್ನ 'ಯುನೈಟೆಡ್ ಫ್ರೂಟ್ ಕಂಪನಿ' ಎಂಬ ಕವನವನ್ನು ಶುರುಮಾಡುವುದು ಹೀಗೆ. ಮಧ್ಯ ಹಾಗೂ ಲ್ಯಾಟಿನ್ ಅಮೆರಿಕಾಗಳನ್ನು ಹರಿದು ತಿಂದ ಕಂಪನಿಗಳ ಬಗೆಗಿನ ಕಥನ ಇದು. ಹೀಗೆ ಪೃಥ್ವಿ ಯನ್ನು ವಿಭಾಗಿಸಿದ ಭಗವಂತ ಅನಕೊಂಡ ಸಂಸ್ಥೆ, ಫೋರ್ಡ್ ಮೋಟಾರ್ಸ್, ಕೊಕಕೋಲಾ ಕಂಪನಿ- ಇಂಥವುಗಳಿಗೆ ಹಂಚಿದ. ಅವುಗಳಲ್ಲಿ ಯುನೈಟೆಡ್ ಫ್ರೂಟ್ ಕಂಪನಿಯು ಒಂದು. 'ಅಮೆರಿಕಾದ ಆಹ್ಲಾದಕರ ಸೊಂಟ' ಹಾಗೂ ರಸಭರಿತ ಚಿಲಿಯ ಹೃದ್ಭಾಗ ಹಾಗೂ ಕರಾವಳಿ ಅದಕ್ಕೆ ಮೀಸಲಾ ಯಿತು. ತಮ್ಮ ಹೊಸ ಸೊತ್ತುಗಳಿಗೆ ಬಾಳೆಹಣ್ಣು ಗಣ ರಾಜ್ಯ ಎಂಬ ಪುನರ್ ನಾಮಕರಣ ಮಾಡಿದರು. ಜೋಲು ಮೊಗದ ಮೃತರ ಮೇಲೆ ಆ ಜನಗಳು ಅಪೆರಾ ಥಿಯೇಟರ್‌ಗಳನ್ನ ಕಟ್ಟಿದರು. ಟ್ರುಕಿಲ್ಲೋ, ಟ್ರಾಚೋ, ವಿಬಿಕೊ-ನಂತರದ ಪಿನೋಶೆ- ಇಂಥ ಪಿಡುಗು ನೊಣಗಳ ದೌರ್ಜನ್ಯದಾಳ್ವಿಕೆಯನ್ನು ನೆಲೆಗೊಳಿಸಿದರು.

'ಇವರೆಲ್ಲ ಗಲೀಜು ನೊಣಗಳೇ
ತಮ್ಮ ಬಡ ಹಿಡುವಳಿದಾರರ
ಮುರಬ್ಬದ ಸವಿಯ ನೆತ್ತರಲ್ಲಿ
ತೊಯ್ದು ತೊಪ್ಪೆಯಾದ ನೊಣಗಳು.'

ಈ ನೊಣಗಳ ಕೊಲೆಪಾತಕ ಚಕ್ರಾಧಿಪತ್ಯದಲ್ಲಿ ಯುನೈಟೆಡ್ ಫ್ರೂಟ್ ಕಂಪನಿಯ ಕೊನೆಯಿಲ್ಲದ ಲೂಟಿ ಶುರುವಾಯಿತು. ಕಾಫಿ, ಹಣ್ಣುಗಳ ಕೊಳ್ಳೆಯಿಂದ ತುಂಬಿ ತುಳುಕಿದ ದೋಣಿಗಳು ಹರಿವಾಣಗಳ ಹಾಗೆ ಸದ್ದಿಲ್ಲದೆ ಸರಿದವು ಎನ್ನುತ್ತಾನೆ ನೆರುಡ. ಇಂಥವೇ ಒಂದು ಸದ್ದಿಲ್ಲದ ಲೂಟಿಯ ಯೋಜನೆಗೆ ಕೊಟ್ಟ ಹೆಸರು 'ಪೆಪ್ಸಿಯೋಜನೆ'. ದೇಶದ ಆಹಾರ ಅಗತ್ಯ ಪೂರೈಸಲು ಗೋಧಿ ಹಾಗೂ ಭತ್ತ ಬೆಳೆಯುವೆಡೆಗೆ ಕೇಂದ್ರೀಕೃತವಾಗಿದ್ದ ಹಸಿರು ಕ್ರಾಂತಿಗಿಂತ ಇದು ಭಿನ್ನ. ಇದರ ಮೂಲ ಉದ್ದೇಶ ಕೃಷಿ ವೈವಿಧ್ಯವನ್ನು ಧಾನ್ಯ ಬೆಳೆಯಿಂದ ರಫ್ತು ಆಧರಿಸಿದ ಉತ್ಪಾದನೆಗಳಿಗೆ ಬದಲಾಯಿಸುವುದು. ಅಂದರೆ ರಫ್ತಿಗಾಗಿ ಹಣ್ಣು ಹಾಗೂ ತರಕಾರಿಗಳ ಕೃಷಿ ಮತ್ತು ಸಂಸ್ಕರಣೆ. ಮೊದಲ ವರ್ಷವೇ ಅದು ೫೫ಕೋಟಿ ರಫ್ತಿನ ಗುರಿ ಇರಿಸಿಕೊಂಡಿತ್ತು. ಈ ತನಕ ಆಹಾರ ಧಾನ್ಯಗಳನ್ನು ಬೆಳೆಯುತ್ತಿದ್ದ ಜಮೀನಿನಲ್ಲಿ ಇವುಗಳನ್ನು ಬೆಳೆಯಲಾಗುತ್ತದೆ. ಹಾಗಾದರೆ ಆಹಾರಕ್ಕೇನು ಮಾಡುವುದು? ಅಮೆರಿಕಾದಿಂದ ಗೋಧಿ

ಯನ್ನು ಆಮದು ಮಾಡಿಕೊಳ್ಳುವುದು!

ಈ ಅವಲಂಬನೆಯನ್ನು ಬೆಳೆಸುವುದೇ ಇದರ ಕಾರ್ಯತಂತ್ರ. ಇದು ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕಾಗಳಲ್ಲಿ ಸಾಬೀತಾಗಿದೆ. ಯುನೈಟೆಡ್ ಪ್ರೂಟ್ ಕಂಪನಿಗಳಂಥವುಗಳ ಸೂರೆಯಿಂದ ರಾಷ್ಟ್ರಗಳು ದಿವಾಳಿಯಾಗಿರುವ ಉದಾಹರಣೆಗಳು ಸಾಕಷ್ಟಿವೆ. ಅರ್ಥ್ ರಿಸೋರ್ಸ್ ಇನ್ಸ್‌ಟಿಟ್ಯೂಟ್‌ನ 'ಅಗ್ರಿ ಬಿಸಿನೆಸ್ ಇನ್ ಆಫ್ರಿಕಾ' ವರದಿಯ ಪ್ರಕಾರ ೧೯೭೦ರ ತನಕ ಆಫ್ರಿಕಾ ತನ್ನ ಅಗತ್ಯ ಪೂರೈಸುವಷ್ಟು ಆಹಾರ ಉತ್ಪಾದಿಸುತ್ತಿತ್ತು. ಆದರೆ ೧೯೮೪ರ ಹೊತ್ತಿಗೆ ೫೩೧ದಶಲಕ್ಷ ಆಫ್ರಿಕನ್ನರಲ್ಲಿ ೧೪೦ದಶಲಕ್ಷ ಆಫ್ರಿಕನ್ನರು ಆಮದಾದ ಆಹಾರವನ್ನು ಆಶ್ರಯಿಸಬೇಕಾಯಿತು. ಆಫ್ರಿಕಾದ ಆಹಾರ ಕೊರತೆ, ಹಸಿವು ಹಾಗೂ ಕ್ಷಾಮ ನೇರವಾಗಿ ಆ ದೇಶ ಆಹಾರ ಬೆಳೆಗಳನ್ನು ಬಲಿಕೊಟ್ಟು ವಾಣಿಜ್ಯ ಬೆಳೆಗಳನ್ನು ಬೆಳೆದದ್ದರ ಪರಿಣಾಮ. ಅದು ವಾಣಿಜ್ಯ ಬೆಳೆಗಳ ಮೇಲೆ ಭಾರಿ ಪ್ರಮಾಣದ ಬಂಡವಾಳ ಹೂಡಿದ್ದರಿಂದ ಆಹಾರೋತ್ಪಾದನೆ ಕುಸಿಯಿತು. ೧೯೭೦ರ ಕೊನೆಯ ಭಾಗದಲ್ಲಿ ಆಫ್ರಿಕಾದ ಆರ್ಥಿಕತೆ ರಫ್ತು ಆಧಾರಿತ ವಾಣಿಜ್ಯ ಬೆಳೆಯನ್ನು ಆಧರಿಸಿತು. ಇದ್ದೆಲ್ಲಾ ಸಂಪನ್ಮೂಲಗಳನ್ನು ವಾಣಿಜ್ಯ ಬೆಳೆಗಳಿಗೆ ಬಳಸಿದ್ದರಿಂದ ಆಹಾರ ಉತ್ಪಾದನೆ ಕುಸಿದು ಮಾನವ ಸಂಕಷ್ಟಕ್ಕೆ, ಭಾರೀ ಪಾರಿಸರಿಕ ಅಸ್ಥಿರತೆಗೆ ಕಾರಣವಾಯಿತು.

ಪಂಜಾಬ್‌ನ ಕೃಷಿಯನ್ನು ಕಾರ್ಪೋರೇಟೀಕರಣಗೊಳಿಸುವ ಹುನ್ನಾರದ ಪೆಪ್ಸಿ ಯೋಜನೆ ತಕ್ಷಣಕ್ಕೆ ಆಕರ್ಷಕವಾಗಿ ಕಂಡರೂ ದೀರ್ಘಕಾಲೀನವಾಗಿ ಅದು ಭಾರತವನ್ನು ಸಾಲ ಹಾಗೂ ಕ್ಷಾಮಗಳ ಉರುಳಿಗೆ ತಳ್ಳುತ್ತದೆ. ಕ್ಲೇರ್‌ಮಾಂಟ್ ಹಾಗೂ ಕೆವನಾಗ್ ಗುರುತಿಸಿದಂತೆ 'ಇದರ ಪರಿಣಾಮ ಗ್ರೀಕ್ ದುರಂತ ನಾಟಕಗಳಂತೆ ಪಾರಾಗಲಾರದ ದುರಂತ. ತೃತೀಯ ದೇಶಗಳು ವಿಶ್ವ ಮಾರುಕಟ್ಟೆಗೆ ಹೆಚ್ಚು ಹೆಚ್ಚು ಸರಕುಗಳನ್ನು ಕಡಿಮೆ ಬೆಲೆಯಲ್ಲಿ ತುಂಬುತ್ತವೆ. ಬದಲಾಗಿ ಅವು ಹೆಚ್ಚು ಬೆಲೆಯ ಪದಾರ್ಥ-ಸೇವೆಗಳನ್ನು ಆಮದು ಮಾಡಿಕೊಳ್ಳುತ್ತವೆ' ಈ ಆಮದು ಆಹಾರದ ಜಗತ್ತಿನಲ್ಲಿ ರೈತ, ಕಾರ್ಮಿಕ ಏನು ಮಾಡುತ್ತಾನೆ? ಇದನ್ನು ಕವಿತೆಯ ಅಂತ್ಯ ಭಾಗದಲ್ಲಿ ನೆರುಡ ವಿವರಿಸುವುದು ಹೀಗೆ:

'ಇದೆಲ್ಲ ಜರುಗುತಿರುವಾಗ
ನಮ್ಮ ಬಂದರಿನ ಸಕ್ಕರೆ ಕಾರ್ಖಾನೆಯ ನರಕಗಳಲ್ಲಿ
ಬೆಳಗಿನ ಜಾವ, ಎಲ್ಲೊ ಒಂದೆಡೆ
ಸುತ್ತ ವಿಷಾನಿಲದಿಂದ ಇಂಡಿಯನ್ ಕೂಲಿಯೊಬ್ಬ ಉರುಳಿಬಿದ್ದ:

ನೆರುಡನ ರೂಪಕ ತೀಕ್ಷ್ಣವಾಗಿದೆ: ಸಕ್ಕರೆ ಕಾರ್ಖಾನೆಗಳು ಕಬ್ಬಿನಿಂದ ರಸಹೀರಿ ಜಲ್ಲೆಯನ್ನು ಎಸೆದು ಬಿಡುತ್ತವೆ, ಭಗವಂತನಿಂದ ಭೂಮಿಪಡೆದ ಕಂಪನಿಗಳು ಜನರ ನೆಸೆದಂತೆ; ಸಾರ ಹೀರಿ ಎದ್ದು ನಡೆದಂತೆ, ಅಲ್ಲಿ ಉಳಿದಿದ್ದು:

'ತಿರ್ರನೆ ತಿರುಗಿಸಿ ಎಸೆಯಲ್ಪಟ್ಟ ದೇಹ,
ಅಜ್ಞಾತ ಚರಾಸ್ತಿ
ಯಾವುದೋ ಸಂಖ್ಯೆಯ ದೊಂಬರಲಾಗ
ಹಣ್ಣು ಹೀರಿದ, ಹೊಲಸುನಾತದ
ಕೊಳೆತ ಮಾಂಸದ ಕೊಪ್ಪರಿಕೆಯಲ್ಲಿ
ತನ್ನೊಡನೆ ಓಡಿರುವ
ಸಾವಿನ ಜೊತೆಗಿನ ಒಂದು ಶಾಖೆ.' □

ಸಮುದಾಯ ಶೈಲಿಯ ಗಜಲ್



ತಿರುಗಿಸು ಶಬ್ದಗಳನು ಬೆತ್ತದಂತೆ ತಿರುಗಿಸಿ ಬಡಿ
ತಲೆಯ ಮೇಲಿನ ತೆಂಗು ಒಡೆಯಲಿ, ತಲೆ ಮಾತ್ರ ಒಡೆಯದಿರಲಿ

ಬೀಸು ಸಮುದಾಯಿ ಖಡ್ಗದಂತೆ ಶಬ್ದಗಳನು ಬೀಸಿ ಸೀಳು
ತಲೆಯ ಮೇಲಿನ ನಿಂಬುಸೀಳಲಿ, ತಲೆ ಮಾತ್ರ ಸೀಳದಿರಲಿ

ಕಾಸು ಪತ್ತಾರನಂತೆ ಜೀವವನು ಕಾಸಿ ಕಾಸಿ ಸತತ ಬಡಿ
ಸುಟ್ಟು ಹೋಗಲಿ ಕಲ್ಮಶವೆಲ್ಲ, ಸುಡದ ಅಪರಂಜಿ ಉಳಿಯಲಿ

ಬೀಸು ಮಡಿವಾಳನಂತೆ, ಮೈಲಿಗೆ ಬಟ್ಟೆ ಬೀಸಿ ಒಗೆ
ಮರೆವಿನ ಮೈಲಿಗೆ ಹೋಗಲಿ, ಅರಿವಿನ ಅರಿವೆ ಉಳಿಯಲಿ

ಹಾಕು, ಸುತ್ತಿಗೆಯಿಂದ ಶಿಲ್ಪಿಯಂತೆ ಸತತ ಪಟ್ಟು ಹಾಕು
ಕಲ್ಲಿನ ಹೃದಯದಿಂದ ಸುಂದರ ಜೀವ ಶಿಲ್ಪ ಮೂಡಿಬರಲಿ

ಆರಿಸು, ರಸ್ತೆಯೊಳಗಿನ ಕಾವ್ಯ ವಸ್ತುವನ್ನಾರಿಸು
ಕಸವನು ರಸಮಾಡಿ ನೀಡಿ, ಕಾವ್ಯರಸ ಜಗ ಉಣ್ಣಲಿ

○ ಜಂಬಣ್ಣ ಅಮರಚಿಂತ

ಜಾಗತೀಕರಣವೆಂಬ ದುಃಸ್ವಪ್ನ

ವಿಶ್ವ ವ್ಯಾಪಾರ ಸಂಘಟನೆ ರೂಪಿಸಿದ್ದ ಜಾಗತೀಕರಣ ಸೂತ್ರಗಳು ಇದೀಗ ವಿಶ್ವಬ್ಯಾಂಕ್-ಐ.ಎಂ.ಎಫ್. ಸೇರಿದಂತೆ ಶ್ರೀಮಂತ ರಾಷ್ಟ್ರಗಳ ಕೊರಳಿಗೆ ಸುತ್ತಿಕೊಂಡು, ಉರುಳುಗಳಾಗಿವೆ. ಕಳೆದ ಎರಡು ವರ್ಷಗಳಿಂದ ವಿಶ್ವದ ಅನೇಕ ರಾಷ್ಟ್ರಗಳು ಎದುರಿಸುತ್ತಿರುವ ಆರ್ಥಿಕ ಹಿಂಜರಿತ ಹಾಗೂ ಹಣದುಬ್ಬರ, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದೇ ಸಮನೆ ಏರುತ್ತಿರುವ ತೈಲ ಬೆಲೆ, ಹೆಚ್ಚುತ್ತಿರುವ ಭಯೋತ್ಪಾದನೆ ಮತ್ತು ಹಿಂಸಾಚಾರ ಈಗ ಜಾಗತೀಕರಣಕ್ಕಿಂತ ಹೆಚ್ಚು ಪ್ರಾಶಸ್ತ್ಯ ಪಡೆದಿವೆ. ಜಾಗತೀಕರಣದ ವ್ಯವಸ್ಥೆಯಿಂದಾಗಿ ಬಡ ಹಾಗೂ ಶ್ರೀಮಂತ ರಾಷ್ಟ್ರಗಳ ನಡುವಿನ ಅಂತರ ವೃದ್ಧಿಸುತ್ತಿದ್ದು, ಹಸಿವು-ಬಡತನಗಳನ್ನು ಜಾಗತೀಕರಣ ಪ್ರಕ್ರಿಯೆ ಮೂಲಕ ತೊಲಗಿಸುವುದು ಅಸಾಧ್ಯ ಎಂಬ ಕಟುವಾಸ್ತವ ಸಂಗತಿ ಈಗ ವಿಶ್ವಮಟ್ಟದ ನಾಯಕರಿಗೆ ಹಾಗೂ ಜಾಗತೀಕರಣ ವ್ಯವಸ್ಥೆಯ ಬಾಲಬಡುಕರಿಗೆ ಮನವರಿಕೆ ಯಾಗತೊಡಗಿದೆ.

ಡಾ. ಎನ್. ಜಗದೀಶ್ ಕೊಪ್ಪ

ಜಾಗತೀಕರಣವನ್ನು ವಿಶ್ವದಾದ್ಯಂತ ಜಾರಿಗೆ ತರಲು 'ವಿಶ್ವ ವ್ಯಾಪಾರ ಸಂಘಟನೆ' ಎಂಬ ಸಂಸ್ಥೆಯ ಅಡಿಯಲ್ಲಿ ಮುಕ್ತ ಮಾರುಕಟ್ಟೆ ಎಂಬ ಪರಿಕಲ್ಪನೆಯಿಂದ ಮಾತ್ರ ಸಮಾನತೆ ಸಾಧ್ಯ ಎಂಬ ಘೋಷಣೆಯೊಡನೆ ಅಭಿವೃದ್ಧಿ ರಾಷ್ಟ್ರಗಳು ದಿಗ್ವಿಜಯಕ್ಕೆ ಹೊರಟಾಗ, ಈ ಶ್ರೀಮಂತ ರಾಷ್ಟ್ರಗಳ ಪಾಲಿಗೆ ಸಹಕಾರ-ಬೆಂಬಲಕ್ಕಿಂತ ಅಡಚಣೆಗಳು ಮತ್ತು ವಿರೋಧಗಳೇ ಎದುರಾದದ್ದು ಹೆಚ್ಚು. ಜಾಗತೀಕರಣವೆಂಬುದು ಈಗ ಅಸಹನೆಗೆ ಪರ್ಯಾಯವೇನೊ ಎಂಬಂತಾಗಿದೆ.

ಸದ್ಯದ ಸ್ಥಿತಿಯಲ್ಲಿ ಜಾಗತೀಕರಣವೆಂಬುದು ಎಷ್ಟೇ ವಿರೋಧವಿದ್ದರೂ ವಿಶ್ವ ವ್ಯಾಪಿಯಾಗಿರುವುದು ನಿಜ. ಈ ವ್ಯವಸ್ಥೆಯನ್ನು ಸಂಪೂರ್ಣವಾಗಿ ತೊಡೆದು ಹಾಕುವ ಸ್ಥಿತಿಯಲ್ಲಿ ಯಾವ ರಾಷ್ಟ್ರವೂ ಇಲ್ಲ ಎಂಬ ವಾಸ್ತವಿಕ ನೆಲೆಗಟ್ಟಿನಲ್ಲಿ ಜಾಗತೀಕರಣದ ಬಗ್ಗೆ ಗಂಭೀರ ಚಿಂತನೆ, ಹಾಗೂ ಪರ್ಯಾಯ ವ್ಯವಸ್ಥೆಗಳ ಬಗ್ಗೆ ಪರಾಮರ್ಶೆ ನಡೆಯಬೇಕಿದೆ. ಇತ್ತೀಚೆಗೆ ಜಾಗತಿಕ ಮಟ್ಟದಲ್ಲಿ ಅನಿರೀಕ್ಷಿತವಾಗಿ ಜರುಗಿದ ಅನೇಕ ವಿದ್ಯಮಾನಗಳಿಂದಾಗಿ ಈವರೆಗೆ ಜಾಗತೀಕರಣವನ್ನು ಪ್ರತಿಪಾದಿಸಿಕೊಂಡು ಬಂದ ಅಮೇರಿಕಾ ನೇತೃತ್ವದ ಶ್ರೀಮಂತ ರಾಷ್ಟ್ರಗಳ ಗುಂಪು, ಐರೋಪ್ಯ ಸಮುದಾಯ ರಾಷ್ಟ್ರಗಳು, ವಿಶ್ವ ವ್ಯಾಪಾರ ಸಂಘಟನೆ (W.T.O.) ಅಂತಾರಾಷ್ಟ್ರೀಯ ಹಣಕಾಸು ನಿಧಿ (I.M.F.) ಮತ್ತು ವಿಶ್ವಬ್ಯಾಂಕ್ ಈ ಎಲ್ಲವುಗಳು ಈಗ ಜಾಗತೀಕರಣ ಕುರಿತಂತೆ ಮರು ಚಿಂತನೆಗೆ ತೊಡಗಿರುವುದು ಒಂದು ಆಶಾದಾಯಕ ಬೆಳವಣಿಗೆ ಎಂದೇ ಹೇಳಬಹುದು. ತಾವು ಕನಸಿದ್ದ ಜಾಗತೀಕರಣ ವ್ಯವಸ್ಥೆಯನ್ನು ಏಕ ರೂಪದಲ್ಲಿ ವಿಶ್ವದಾದ್ಯಂತ ಜಾರಿಗೆ ತರಲು ಅಸಾಧ್ಯ ಎಂಬ ಸತ್ಯ ಈ ಗುಂಪುಗಳಿಗೆ ಮನವರಿಕೆಯಾಗಿದೆ.

ವಿಶ್ವ ವ್ಯಾಪಾರ ಸಂಘಟನೆ ರೂಪಿಸಿದ್ದ ಜಾಗತೀಕರಣ ಸೂತ್ರಗಳು ಇದೀಗ ವಿಶ್ವಬ್ಯಾಂಕ್-ಐ.ಎಂ.ಎಫ್. ಸೇರಿದಂತೆ ಶ್ರೀಮಂತ ರಾಷ್ಟ್ರಗಳ ಕೊರಳಿಗೆ ಸುತ್ತಿಕೊಂಡು, ಉರುಳುಗಳಾಗಿವೆ. ಕಳೆದ ಎರಡು ವರ್ಷಗಳಿಂದ ವಿಶ್ವದ ಅನೇಕ ರಾಷ್ಟ್ರಗಳು ಎದುರಿಸುತ್ತಿರುವ ಆರ್ಥಿಕ ಹಿಂಜರಿತ ಹಾಗೂ ಹಣದುಬ್ಬರ, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದೇ ಸಮನೆ ಏರುತ್ತಿರುವ ತೈಲ ಬೆಲೆ, ಧರ್ಮಯುದ್ಧದ ಹೆಸರಿನಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆ ಮತ್ತು ಹಿಂಸಾಚಾರ ಈಗ ಜಾಗತೀಕರಣಕ್ಕಿಂತ ಹೆಚ್ಚು ಪ್ರಾಶಸ್ತ್ಯ ಪಡೆದಿವೆ. ಜೊತೆಗೆ ಜಾಗತೀಕರಣದ ವ್ಯವಸ್ಥೆಯಿಂದಾಗಿ ಬಡ ಹಾಗೂ ಶ್ರೀಮಂತ ರಾಷ್ಟ್ರಗಳ ನಡುವಿನ ಅಂತರ ದಿನೇ ದಿನೇ ವೃದ್ಧಿಸುತ್ತಿದ್ದು, ಜಾಗತಿಕ ಸವಾಲುಗಳಾದ ಹಸಿವು-ಬಡತನಗಳನ್ನು ಜಾಗತೀಕರಣ ಪ್ರಕ್ರಿಯೆ ಮೂಲಕ ತೊಲಗಿಸುವುದು ಅಸಾಧ್ಯ ಎಂಬ ಕಟುವಾಸ್ತವ ಸಂಗತಿ ಈಗ ವಿಶ್ವ ಮಟ್ಟದ ನಾಯಕರಿಗೆ ಹಾಗೂ ಜಾಗತೀಕರಣ ವ್ಯವಸ್ಥೆಯ ಬಾಲಬಡುಕರಿಗೆ ಮನವರಿಕೆ ಯಾಗತೊಡಗಿದೆ.

ಈ ಕುರಿತಂತೆ ವಿಶ್ವಬ್ಯಾಂಕ್ ಪ್ರಕಟಿಸಿರುವ ೨೦೦೮ರ ಅಭಿವೃದ್ಧಿ ವರದಿ, ಅಂತರಾಷ್ಟ್ರೀಯ ಹಣಕಾಸು ನಿಧಿ ಸಂಸ್ಥೆ ಪ್ರಕಟಿಸಿರುವ ೨೦೦೮ರ ವಾರ್ಷಿಕ ವರದಿ ಹಾಗೂ ವಿಶ್ವ ಸಂಸ್ಥೆಯು ಬಡತನ-ಹಸಿವು-ಆರೋಗ್ಯ-ಶಿಕ್ಷಣ ಇತ್ಯಾದಿ ಕುರಿತಂತೆ ೧೫ ವರ್ಷಗಳ ಯೋಜನೆ ಹಾಕಿಕೊಂಡಿದ್ದು, ೮ ವರ್ಷದ ಸಾಧನೆ-ವೈಫಲ್ಯ ಕುರಿತು ನಡೆಸಿರುವ ಮೌಲ್ಯಮಾಪನ ವರದಿ ಇವೆಲ್ಲವೂ ಜಾಗತೀಕರಣದ ನೈಜ ಸ್ವರೂಪವನ್ನು ಜಗತ್ತಿಗೆ ಅನಾವರಣಗೊಳಿಸಿವೆ. (ಈ ಕುರಿತ ವರದಿಗಳನ್ನು ನೀವು ಇಂಟರ್‌ನೆಟ್ ಮೂಲಕ ಈ ಸಂಸ್ಥೆಗಳ ವೆಬ್‌ಸೈಟ್‌ನ ಪ್ರಕಟಣೆ ವಿಭಾಗದಲ್ಲಿ ಗಮನಿಸಬಹುದು.)

೨೦೦೦ ದ ಸೆಪ್ಟೆಂಬರ್‌ನಲ್ಲಿ ವಿಶ್ವಸಂಸ್ಥೆ 'ಶತಮಾನದ ಅಭಿವೃದ್ಧಿಯ ಗುರಿಗಳು' (Millenium Development Goals) ಎಂಬ ಯೋಜನೆಯಡಿ ೧೫ ವರ್ಷಗಳ ಅವಧಿಯಲ್ಲಿ ವಿಶ್ವದ ಎಲ್ಲಾ ಭಾಗದ ರಾಷ್ಟ್ರಗಳಲ್ಲಿ ಹಸಿವು-ಬಡತನ ನಿವಾರಣೆ ಹಾಗೂ ಮೂಲಭೂತ ಸೌಕರ್ಯಗಳಾದ ವಸತಿ-ಶಿಕ್ಷಣ-ಆರೋಗ್ಯ, ಕುಡಿಯುವ ನೀರು, ಶೌಚಾಲಯ ಇವುಗಳನ್ನು ಒದಗಿಸಬೇಕೆಂಬ ಗುರಿ ಹಾಕಿಕೊಂಡಿತ್ತು.

ಈ ಕುರಿತು ೮ ವರ್ಷಗಳ ಸಾಧನೆ-ವೈಫಲ್ಯ ಕುರಿತಂತೆ ಮತ್ತು ಮುಂದಿನ ಸವಾಲುಗಳ ಬಗ್ಗೆ ವಿಶ್ವ ಸಂಸ್ಥೆ ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆ U.N.Cronical [illegible] ಸಂಚಿಕೆಗಳಲ್ಲಿ ಜಗತ್ತಿನ ೧೫೦ಕ್ಕೂ ವಿವಿಧ ಚಿಂತಕರು ತಜ್ಞರು ಪರಾಮರ್ಶೆ ನಡೆಸಿದ್ದಾರೆ. ಈ ಪರಾಮರ್ಶೆಗೆ ಮುನ್ನುಡಿ ಬರೆದಿರುವ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ 'ಬಾನ್ ಕಿ ಮೂನ್' ೨೦೧೫ರ ವೇಳೆಗೆ ಯೋಜನೆ ಗುರಿ ತಲುಪುವುದು ಅಸಾಧ್ಯ ಎಂದು ಒಪ್ಪಿಕೊಂಡಿದ್ದಾರೆ.

ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ಇಂದಿಗೂ ೫೦ ಕೋಟಿ ಜನತೆ ಒಂದು ಹೊತ್ತಿನ ಊಟಕ್ಕೆ ಪರದಾಡುತ್ತಿದ್ದರೆ, ಪ್ರತಿವರ್ಷ ೩ಕೋಟಿ ೫೦ಲಕ್ಷ ಮಕ್ಕಳು ಅಸಹಜ ಸಾವಿಗೆ ತುತ್ತಾಗುತ್ತಿದ್ದಾರೆ. ೩೫ಕೋಟಿ ಜನತೆಗೆ ಕುಡಿಯುವ ನೀರಿಲ್ಲ. ೬೫ಕೋಟಿ ಜನತೆಗೆ ಶೌಚಾಲಯವಿಲ್ಲ. ಏಷ್ಯಾ ಪೆಸಿಫಿಕ್ ರಾಷ್ಟ್ರಗಳಲ್ಲಿ ಶೇ. ೬೫ರಷ್ಟು ಮಂದಿ ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ, ಎಂಬುದನ್ನು ವಿಶ್ವ ಸಂಸ್ಥೆಯ ವರದಿ ದೃಢಪಡಿಸಿದೆ.

ಇನ್ನು ವಿಶ್ವಬ್ಯಾಂಕ್ ಪ್ರಕಟಿಸಿರುವ ಅಭಿವೃದ್ಧಿ ವರದಿ-೨೦೦೮ರಲ್ಲಿ ಆರ್ಥಿಕ ಚಟುವಟಿಕೆಯ ಅಸಹಜ ಬೆಳವಣಿಗೆಯಿಂದಾಗಿ ಜಾಗತಿಕ ಮಟ್ಟದಲ್ಲಿ ಕೃಷಿರಂಗಕ್ಕೆ ಹಿನ್ನಡೆಯುಂಟಾಗಿದೆ ಎಂದು ತಿಳಿಸಿದೆ. ಈ ಆರ್ಥಿಕ ಅಸಮಾನತೆಯಿಂದಾಗಿ ಹಲವಾರು ರಾಷ್ಟ್ರಗಳಲ್ಲಿ ಸಾಮಾಜಿಕ ಕ್ಷೋಭೆ, ಹಿಂಸಾಚಾರ ಮುಗಿಲು ಮುಟ್ಟಿದ್ದರೆ, ಬಾಂಗ್ಲಾ-ಚೀನಾ-ಶ್ರೀಲಂಕಾ ರಾಷ್ಟ್ರಗಳನ್ನು ಹೊರತುಪಡಿಸಿ, ಉಳಿದ ರಾಷ್ಟ್ರಗಳಲ್ಲಿ ಕೃಷಿರಂಗದಿಂದ ವಿಮುಖಗೊಂಡ ಶ್ರಮಿಕರು ನಗರಗಳತ್ತ ವಲಸೆ ಹೋಗುತ್ತಿರುವುದು ಬಡತನ ನಿವಾರಣೆಗೆ ದೊಡ್ಡ ಅಡ್ಡಿಯುಂಟಾಗಿದೆ ಎಂದು ವಿಶ್ವಬ್ಯಾಂಕ್ ಆತಂಕ ವ್ಯಕ್ತಪಡಿಸಿದೆ.

ಐ.ಎಂ.ಎಫ್. ಕೂಡ ಈ ಮೇಲಿನ ಎರಡು ವರದಿಗಳಿಗಿಂತ ಭಿನ್ನವಾಗಿಲ್ಲ. ವಿಶ್ವದ ಎಲ್ಲೆಡೆ ತಾಂಡವವಾಡುತ್ತಿರುವ ಆರ್ಥಿಕ ಹಿಂಜರಿತ, ಹಣದುಬ್ಬರ, ಆಹಾರ ಧಾನ್ಯಗಳ ಬೆಲೆಏರಿಕೆ, ತೈಲಬೆಲೆಯ ಅಸ್ಥಿರತೆಯಿಂದ ಶೇ. ೪.೯ರಷ್ಟು ಇದ್ದ ಜಾಗತಿಕ ಆರ್ಥಿಕ ಬೆಳವಣಿಗೆ ೨೦೦೮ರ ಅಂತ್ಯದ ವೇಳೆಗೆ ಶೇ. ೪.೧ರಷ್ಟು ತಲುಪಿ, ೨೦೦೯ಕ್ಕೆ ಶೇ. ೩.೫ರ ಆಸುಪಾಸಿನಲ್ಲಿರುತ್ತದೆ ಎಂದು ಅಂದಾಜಿಸಿದೆ. ಜಾಗತೀಕರಣವನ್ನು ಪ್ರತಿಪಾದಿಸುತ್ತಲೇ ಬಂದಿರುವ ಈ ಸಂಸ್ಥೆಗಳ ವರದಿಗಳನ್ನು ಅವಲೋಕಿಸಿದರೆ ಜಾಗತೀಕರಣದ ಬಗ್ಗೆ ಮರುಚಿಂತನೆ ಅಗತ್ಯ ಎಂಬ ಅರಿವು ತಜ್ಞರಲ್ಲಿ ಮೂಡತೊಡಗಿದೆ.

ಇದೀಗ ಜಾಗತೀಕರಣ ಪ್ರಕ್ರಿಯೆಯನ್ನು ಜಾರಿಗೆ ತರುವ ಹೊಣೆ ಹೊತ್ತಿರುವ ವಿಶ್ವವ್ಯಾಪಾರ ಸಂಘಟನೆಯಲ್ಲಿ (W.T.O.) ೧೫೩ ಸದಸ್ಯ ರಾಷ್ಟ್ರಗಳಿದ್ದು, ದೋಹಾ ಸುತ್ತಿನ ಮಾತುಕತೆ ಕಳೆದ ೭ ವರ್ಷಗಳಿಂದ ಯಶಸ್ವಿಯಾಗದೆ ಮುಂದೂಡುತ್ತಲೆ ಬಂದಿದೆ. ೨೦೦೮ರ ಫೆಬ್ರವರಿಯಲ್ಲಿ ಜಿನೀವಾ ನಗರದಲ್ಲಿ ನಡೆದ ಸಂಧಾನದ ಮಾತುಕತೆ ಜುಲೈ ತಿಂಗಳಿಗೆ ಮುಂದೂಡಲ್ಪಟ್ಟಿದ್ದು, ಕೃಷಿ ಹಾಗೂ ಸರಕುಗಳ ಸುಂಕ ಕುರಿತಂತೆ ಶ್ರೀಮಂತ ರಾಷ್ಟ್ರಗಳ ಅಭಿವೃದ್ಧಿಶೀಲ

ರಾಷ್ಟ್ರಗಳ ನಡುವೆ ಈವರೆಗೆ ಒಪ್ಪಂದವೇರ್ಪಡಿಸಲು ಸಾಧ್ಯವಾಗಿಲ್ಲ.

ಅಮೇರಿಕಾ ತನ್ನ ರೈತರಿಗೆ ನೀಡುತ್ತಿರುವ ಕೃಷಿ ಸಬ್ಸಿಡಿ ಹಾಗೂ ರಫ್ತು ಪ್ರೋತ್ಸಾಹ ಧನವನ್ನು ಕಡಿಮೆ ಮಾಡಲು ಒಪ್ಪದಿರುವುದು ಕೃಷಿ ಒಪ್ಪಂದಕ್ಕೆ ಅಡ್ಡಿಯಾಗಿದೆ. ಜಾಗತೀಕರಣ ಕುರಿತಂತೆ ಜಾಗತಿಕ ಅಸಮಾಧಾನಕ್ಕೆ ಮತ್ತೊಂದು ಪ್ರಮುಖ ಕಾರಣವೆಂದರೆ ಸರಕುಗಳ ಮೇಲಿನ ಆಮದು ಸುಂಕ ಕುರಿತದ್ದು. ಯಾವುದೇ ಬಡ ಅಥವಾ ಅಭಿವೃದ್ಧಿಶೀಲ ರಾಷ್ಟ್ರ ಮುಂದುವರೆದ ಶ್ರೀಮಂತ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಪ್ರಮಾಣ ಶೇ. ೧೫ಕ್ಕಿಂತ ಹೆಚ್ಚಾದರೆ ಅವುಗಳ ಮೇಲೆ ಆಮದು ಸುಂಕ ಹೇರುವ ಹಕ್ಕು ಇರಬೇಕೆಂದು. ಭಾರತ ಸೇರಿದಂತೆ ೧೨೧ ರಾಷ್ಟ್ರಗಳ ನಿಲುವು. ಆದರೆ ಈ ಪ್ರಮಾಣ ಶೇ. ೪೦ಕ್ಕಿಂತ ಹೆಚ್ಚಾದಾಗ ಮಾತ್ರ ಆಮದು ಸುಂಕ ಹಾಕಬೇಕೆಂಬುದು ಅಮೇರಿಕಾ ನೇತೃತ್ವದ ಶ್ರೀಮಂತ ರಾಷ್ಟ್ರಗಳ ವಾದ. ಸಧ್ಯದ ಪರಿಸ್ಥಿತಿಯನ್ನು ಗಮನಿಸಿದಾಗ ಈ ಮಾತುಕತೆ ಯಶಸ್ವಿಯಾಗುವುದಿಲ್ಲ.

ಈ ಅಂಶವನ್ನು ಸ್ವತಃ ವಿಶ್ವ ವ್ಯಾಪಾರ ಸಂಘಟನೆಯ ಅಧ್ಯಕ್ಷ ಪಾಸ್ಕಲ್ ಲಾಮೆ, ಇದೇ ಆಗಸ್ಟ್ ಮೊದಲ ವಾರದಲ್ಲಿ ದೆಹಲಿಗೆ ಬಂದಿದ್ದಾಗ ಮಾಧ್ಯಮಗಳ ಎದುರು ಒಪ್ಪಿಕೊಂಡಿದ್ದಾರೆ. ಹೀಗೆ 'ಮುಕ್ತ ಮಾರುಕಟ್ಟೆ' ಎಂಬ ಪರಿಕಲ್ಪನೆಯ ಅಡಿಯಲ್ಲಿ ವಿಶ್ವದೆಲ್ಲೆಡೆ ಜಾಗತೀಕರಣವನ್ನು ಜಾರಿಗೆ ತರಲು ಹೊರಟ ವಿಶ್ವ ವ್ಯಾಪಾರ ಸಂಘಟನೆಗೆ, ಸದಸ್ಯ ರಾಷ್ಟ್ರಗಳ ನಡುವೆ ಒಪ್ಪಂದ-ಸಂಧಾನ ಏರ್ಪಡಿಸುವ ಸವಾಲು ಒಂದು ಕಡೆಯಾದರೆ, ಜಾಗತಿಕ ಮಟ್ಟದಲ್ಲಿ ತುಯ್ದಾಡುತ್ತಿರುವ ತೈಲಬೆಲೆ, ನಿಯಂತ್ರಣಕ್ಕೆ ಬಾರದ ಮಾರಕ ಏಡ್ಸ್ ಕಾಯಿಲೆ, ಹೆಚ್ಚುತ್ತಿರುವ ಭಯೋತ್ಪಾದನೆ ಮತ್ತು ಹಿಂಸಾಚಾರ ಹಾಗೂ ಆಫ್ರಿಕಾಖಂಡದ ೫೩ ಗಣ ರಾಷ್ಟ್ರಗಳಲ್ಲಿ ಯಾವುದೇ ಅಭಿವೃದ್ಧಿ ಯೋಜನೆ ಯಶಸ್ವಿಯಾಗದಿರುವುದು, ಹವಾಮಾನ ಬದಲಾವಣೆಯಿಂದ ಹೆಚ್ಚುತ್ತಿರುವ ತಾಪಮಾನ ಇವೆಲ್ಲವೂ ವಿಶ್ವವ್ಯಾಪಾರ ಸಂಘಟನೆಯ ತಳ ಮಳ-ಸಂಕಟಕ್ಕೆ ಕಾರಣವಾಗಿದೆ.

ಜಗತ್ತಿನ ಯಾವುದೇ ರಾಷ್ಟ್ರವಿರಲಿ ಅದಕ್ಕೆ ಅದರದೇ ಆದ ವೈಶಿಷ್ಟ್ಯ-ಭಿನ್ನತೆಗಳಿರುತ್ತವೆ. ಪ್ರಾದೇಶಿಕ ಭಿನ್ನತೆ, ಜನತೆಯ ಅಭಿರುಚಿ, ಭೌಗೋಳಿಕ ಪರಿಸರ, ಅಲ್ಲಿನ ಜನತೆ ಪಾರಂಪರಿಕವಾಗಿ ಕಾಪಾಡಿಕೊಂಡು ಬಂದ ಸಂಸ್ಕೃತಿ-ಭಾಷೆ-ಉಡುಪು-ಆಹಾರ ಇವುಗಳ ಚಹರೆಗಳಿರುತ್ತವೆ. ಇವೆಲ್ಲವುಗಳಿಗೂ ಹೊಂದಿಕೊಳ್ಳುವಂತಹ, ಇಡೀ ಜಗತ್ತಿನ ಏಳಿಗೆಗೆ ಸಹಕಾರಿಯಾಗುವಂತಹ, ಮಾನವೀಯತೆಯ ಮುಖವುಳ್ಳ ಜಾಗತೀಕರಣದ ಸೂತ್ರಗಳು ನಮಗಿಂದು ಬೇಕಾಗಿವೆ. ಕೆಲವೇ ರಾಷ್ಟ್ರಗಳ ಹಿತಾಸಕ್ತಿಗಾಗಿ ಏಕರೂಪದ ಸೂತ್ರಗಳನ್ನು ಯಾವುದೇ ಬದಲಾವಣೆ ಇಲ್ಲದೆ ಜಾರಿಗೆ ತರಲು ಹೊರಟಿರುವ ವಿಶ್ವ ವ್ಯಾಪಾರ ಸಂಘಟನೆ ಮತ್ತು ಅಮೇರಿಕಾ ನೇತೃತ್ವದ ಶ್ರೀಮಂತ ರಾಷ್ಟ್ರಗಳ ಗುಂಪಿಗೆ ಭವಿಷ್ಯದಲ್ಲಿ ದುರಂತವೆಂಬುದು ಕಟ್ಟಿಟ್ಟ ಬುತ್ತಿ, ಎಂಬುದನ್ನು ಸಧ್ಯದ ಜಾಗತಿಕ ವರ್ತಮಾನದ ಸವಾಲುಗಳು ಸಾರಿ-ಸಾರಿ ಹೇಳುತ್ತಿವೆ.

ಎರಡು ದಶಕಗಳ ಹಿಂದೆ ಅಮೇರಿಕಾ ಹಾಗೂ ಅದರ ಮಿತ್ರ ರಾಷ್ಟ್ರಗಳ ಕೂಸಾದ ಜಾಗತೀಕರಣವನ್ನು ವಿಶ್ವದೆಲ್ಲೆಡೆ ಆಚರಣೆಗೆ ತರಲು ಹೊರಟಾಗಿನಿಂದ ಅಪವಾದ-ಪ್ರತಿಭಟನೆಗಳೇ ವಿಶ್ವವ್ಯಾಪಾರ ಸಂಘಟನೆಗೆ ಎದುರಾಗಿವೆ. ಅಷ್ಟೇ ಏಕೆ? ವಿಶ್ವವ್ಯಾಪಾರ ಸಂಘಟನೆಯ

೨೦೦೦ ದ ಸೆಪ್ಟೆಂಬರ್‌ನಲ್ಲಿ ವಿಶ್ವಸಂಸ್ಥೆ 'ಶತಮಾನದ ಅಭಿವೃದ್ಧಿಯ ಗುರಿಗಳು' ಎಂಬ ಯೋಜನೆಯಡಿ ೧೫ ವರ್ಷಗಳ ಅವಧಿಯಲ್ಲಿ ವಿಶ್ವದ ಎಲ್ಲಾ ಭಾಗದ ರಾಷ್ಟ್ರಗಳಲ್ಲಿ ಹಸಿವು-ಬಡತನ ನಿವಾರಣೆ ಹಾಗೂ ಮೂಲಭೂತ ಸೌಕರ್ಯಗಳಾದ ವಸತಿ-ಶಿಕ್ಷಣ-ಆರೋಗ್ಯ, ಕುಡಿಯುವ ನೀರು, ಶೌಚಾಲಯ ಇವುಗಳನ್ನು ಒದಗಿಸಬೇಕೆಂಬ ಗುರಿ ಹಾಕಿಕೊಂಡಿತ್ತು. ಈ ಕುರಿತು ೮ ವರ್ಷಗಳ ಸಾಧನೆ-ವೈಫಲ್ಯ ಕುರಿತಂತೆ ಮತ್ತು ಮುಂದಿನ ಸವಾಲುಗಳ ಬಗ್ಗೆ ವಿಶ್ವ ಸಂಸ್ಥೆ ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆ ವಿಶೇಷ ಸಂಚಿಕೆಗಳಲ್ಲಿ ಜಗತ್ತಿನ ೧೦೦ಕ್ಕೂ ವಿವಿಧ ರಂಗಗಳ ತಜ್ಞರು ಪರಾಮರ್ಶೆ ನಡೆಸಿದ್ದಾರೆ. ಈ ಪರಾಮರ್ಶೆಗೆ ಮುನ್ನುಡಿ ಬರೆದಿರುವ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಾನ್ ಕಿ ಮೂನ್ ೨೦೧೫ರ ವೇಳೆಗೆ ಯೋಜನೆ ಗುರಿ ತಲುಪುವುದು ಅಸಾಧ್ಯ ಎಂದು ಒಪ್ಪಿಕೊಂಡಿದ್ದಾರೆ.

ಅಧಿಕೃತ ವೆಬ್‌ಸೈಟ್‌ನಲ್ಲಿ ಕೂಡ ಜಗತ್ತಿನ ಹಲವಾರು ತಜ್ಞರು-ಬುದ್ಧಿಜೀವಿಗಳು 'ಜಾಗತೀಕರಣ ವಿರೋಧಿಸಲು ಪ್ರಬಲ ಕಾರಣಗಳು' ಎಂಬ ತಲೆ ಬರಹದಡಿ ಹಲವಾರು ಪ್ರಶ್ನೆಗಳು ಹಾಗೂ ಅಪವಾದಗಳನ್ನು ಜಾಗತೀಕರಣದ ವಿರುದ್ಧ ಎತ್ತಿದ್ದಾರೆ. ಆಶ್ಚರ್ಯವೆಂದರೆ ಇವುಗಳಿಗೆ ಯಾವುದೇ ಉತ್ತರ ನೀಡದೆ, ಪರ್ಯಾಯ ಮಾರ್ಗದಲ್ಲಿ ಅಂದರೆ ವಿಶ್ವವ್ಯಾಪಾರ ಸಂಘಟನೆ, ವಿಶ್ವಬ್ಯಾಂಕ್, ಐ.ಎಂ.ಎಫ್. ಮುಂತಾದ ಸಂಸ್ಥೆಗಳ ಮೂಲಕ ಜಾಗತೀಕರಣವನ್ನು ದೇಶಗಳ ಮೇಲೆ ಹೇರತೊಡಗಿದೆ.

ಅಮೇರಿಕಾ ನೇತೃತ್ವದ ಜಾಗತೀಕರಣ ವಿರೋಧಕ್ಕೆ ಕಾರಣವಾದ ಪ್ರಮುಖ ಅಂಶಗಳು ಈ ಕೆಳಗಿನಂತಿವೆ.

೧. ಜಾಗತೀಕರಣ ವ್ಯವಸ್ಥೆ ಮೂಲಭೂತವಾಗಿ ಪ್ರಜಾಪ್ರಭುತ್ವದ ಮೌಲ್ಯ ಹಾಗೂ ವ್ಯವಸ್ಥೆಗೆ ವಿರೋಧವಾದುದು. ವಿಶ್ವವ್ಯಾಪಾರ ಸಂಘಟನೆಯಲ್ಲಿ ಪ್ರಜಾಪ್ರಭುತ್ವದ ಯಾವುದೇ ಲಕ್ಷಣಗಳಿಲ್ಲ. ಪಾರದರ್ಶಕತೆ ಎಂಬುದು ಮೊದಲೇ ಇಲ್ಲ. ಇಲ್ಲಿ ಎಲ್ಲ ತೀರ್ಮಾನಗಳು ಅಮೇರಿಕಾದ ಆಶಯಕ್ಕೆ ಅನುಗುಣವಾಗಿ ರೂಪಗೊಳ್ಳುತ್ತವೆ. ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗೆ, ಕೈಗಾರಿಕಾ ವಲಯ ಕುರಿತ ಒಪ್ಪಂದ ಸಮಿತಿಯಲ್ಲಿ ೧೭ಮಂದಿ ಸದಸ್ಯರು ಅಮೇರಿಕಾ ಮೂಲದ ಬಹುರಾಷ್ಟ್ರೀಯ ಕಂಪನಿಗಳ ನಿರ್ದೇಶಕರಾಗಿದ್ದಾರೆ. ನಾಗರಿಕ ಹಕ್ಕು ಅತ್ಯವಶ್ಯಕ ಎಂಬ ಅರಿವು ಎಲ್ಲೆಡೆ ಮೂಡಿರುವಾಗ, ವಿಶ್ವವ್ಯಾಪಾರ ಸಂಘಟನೆಯಲ್ಲಿ ಈ ವಿಷಯಗಳನ್ನು ಗಾಳಿಗೆ ತೂರಲಾಗಿದೆ. ಇದರ ಜೊತೆಗೆ ಜಾಗತೀಕರಣ ಪ್ರಕ್ರಿಯೆ ಕುರಿತಂತೆ, ತೆಗೆದುಕೊಳ್ಳಲಾಗುವ ಯಾವುದೇ ತೀರ್ಮಾನ ಹೊರ ಜಗತ್ತಿಗೆ ಸೋರಿಹೋಗದಂತೆ ತಡೆಹಿಡಿಯಲಾಗಿದೆ.

ಪ್ರಜ್ಞಾವಂತ ನಾಗರಿಕರಿಗೆ ಈ ಕುರಿತು ಚರ್ಚಿಸಲು ಮಾಹಿತಿಯನ್ನು ಕೂಡ ನಿರಾಕರಿಸಲಾಗುತ್ತಿದೆ. ಜಗತ್ತಿಗೆ ಪೀಡವಾಗಿರುವ, ಶ್ರೀಮಂತ ರಾಷ್ಟ್ರಗಳ ಪರವಿರುವ ಜಾಗತೀಕರಣ ಸೂತ್ರಗಳನ್ನು ಸಿದ್ಧಪಡಿಸಲು, ಈ ಗುಪ್ತ ಜಾಗತಿಕ ಸರ್ಕಾರ ರಚಿಸಲು ಇವರಿಗೆ ಹಕ್ಕು ಕೊಟ್ಟವರ್ಯಾರು?

೨. ವಿಶ್ವ ವ್ಯಾಪಾರ ಸಂಘಟನೆಯಲ್ಲಿ ೨೧ನೇ ಶತಮಾನದಲ್ಲಿ ಅನೇಕ ಸವಾಲುಗಳನ್ನು ಎದುರಿಸುತ್ತಿರುವ ವಿಶ್ವ ನಾಗರಿಕ ಜಗತ್ತು ಸುರಕ್ಷಿತವಾಗಿಲ್ಲ. ಮುಕ್ತ ವ್ಯಾಪಾರದ ಮೂಲಕ ಪರಸ್ಪರ ತಿಳುವಳಿಕೆ, ಅಭಿವೃದ್ಧಿ, ಸಮಾನತೆ, ಶಾಂತಿ ಎಂದೆಲ್ಲಾ ಘೋಷಿಸಿರುವ ವಿಶ್ವ ವ್ಯಾಪಾರ ಸಂಘಟನೆಯ ಎಲ್ಲಾ ನಡಾವಳಿಗಳು ಹಾಗೂ ಚಿಂತನೆಗಳು ಅಮೇರಿಕಾ ಹಾಗೂ ಶ್ರೀಮಂತ ರಾಷ್ಟ್ರಗಳ ಒಕ್ಕೂಟದ ಪರವಾಗಿವೆ.

ಜಾಗತಿಕ ಮಟ್ಟದಲ್ಲಿ ನಾಗರಿಕ ಸುರಕ್ಷತೆಯ ಬಗ್ಗೆ ವಿಶ್ವ ವ್ಯಾಪಾರ ಸಂಘಟನೆಗೆ ನಿಜವಾದ ಕಾಳಜಿ ಇದ್ದರೆ, ಅದು ತನ್ನ ಸೂತ್ರಗಳಲ್ಲಿ ಹಾಗೂ ಅಂತರಾಷ್ಟ್ರೀಯ ಒಪ್ಪಂದಗಳಲ್ಲಿ ಮಾನವ ಹಕ್ಕುಗಳ ಬಗ್ಗೆ, ಪರಿಸರ ರಕ್ಷಣೆ ಬಗ್ಗೆ ಗೌರವ ತೋರುವ ಪ್ರಜಾಪ್ರಭುತ್ವದ ಲಕ್ಷಣಗಳನ್ನು ಅಳವಡಿಸಿಕೊಳ್ಳಲಿ. ಜೊತೆಗೆ ಜಾಗತಿಕ ಮಟ್ಟದಲ್ಲಿ ಎಲ್ಲಾ ರಾಷ್ಟ್ರಗಳಿಗೆ, ಎಲ್ಲಾ ಜನತೆಗೆ, ಧರ್ಮ-ವರ್ಣಬೇಧ-ಪ್ರಾದೇಶಿಕ ಮನೋಭಾವ ತೊರೆದು ಜಾಗತಿಕ ನ್ಯಾಯ ಸಮಾನಾಂತರವಾಗಿ ಹಂಚಿಕೆಯಾಗಲಿ. ಇದು ವಿಶ್ವ ವ್ಯಾಪಾರ ಸಂಘಟನೆ ಅಥವಾ ಅಮೇರಿಕಾದಿಂದ ಸಾಧ್ಯವೇ? ಇವುಗಳಿಗೆ ಅಮೇರಿಕಾದ ಹಿಡಿತದಲ್ಲಿರುವ ವಿಶ್ವಬ್ಯಾಂಕ್ ಹಾಗೂ ಐ.ಎಂ.ಎಫ್. ಸಂಸ್ಥೆಗಳ ಉತ್ತರವೇನು?

೩. ವಿಶ್ವ ವ್ಯಾಪಾರ ಸಂಘಟನೆಯ ಮೂಲಭೂತ ಗುರಿ ಲಾಭವೇ ಆಗಿರುವಾಗ, ಬಹುರಾಷ್ಟ್ರಿಯ ಕಂಪನಿಗಳ ಹಿತಾಸಕ್ತಿಗೆ ಅನುಗುಣವಾಗಿ ಕಾಯ್ದೆಗಳು ರೂಪಗೊಳ್ಳುತ್ತವೆ. ಹಾಗಾಗಿ ಜಾಗತೀಕರಣದ ಒಪ್ಪಂದದಿಂದಾಗಿ ಇಂದು ಜಗತ್ತಿನಾದ್ಯಂತ ಕಾರ್ಮಿಕರ ಹಕ್ಕುಗಳು ಮತ್ತು ಮಾನವ ಹಕ್ಕುಗಳು ದಮನಗೊಂಡಿವೆ. ಅಂತರಾಷ್ಟ್ರೀಯ ಸ್ಪರ್ಧೆಯ ನೆಪವೊಡ್ಡಿ, ಕತ್ತು ಕೊಯ್ಯುವ ಇಂದಿನ ಸ್ಪರ್ಧೆಯಲ್ಲಿ ಕಾರ್ಮಿಕರ ಸಂಘಟನೆಯ ಹಕ್ಕುಗಳನ್ನು ಕಸಿದು ಮಹಿಳೆಯರು, ಬಾಲಕರು, ವೃದ್ಧರು ಎಂಬ ಬೇಧ ಭಾವವಿಲ್ಲದೆ ಎಲ್ಲರನ್ನೂ ಶೋಷಣೆಗಿಡು ಮಾಡಲಾಗಿದೆ. ಕಡಿಮೆ ಸಂಬಳ ಅಥವಾ ದಿನಗೂಲಿ ಆಧಾರದ ಮೇಲೆ ಕಾರ್ಮಿಕ ಜಗತ್ತಿನ ಮೇಲೆ ಪರಾಕ್ರಮ ನಡೆಸಿರುವ ಬಹುರಾಷ್ಟ್ರೀಯ ಕಂಪನಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವ ಸ್ಥಳೀಯ ಪ್ರಭುತ್ವ ಅಥವಾ ಸರ್ಕಾರದ ಹಕ್ಕನ್ನು ಕಿತ್ತು ಹಾಕಲಾಗಿದೆ. ಮಾನವ ಹಿತಾಸಕ್ತಿ ಎಂಬುದು ವಿಶ್ವ ವ್ಯಾಪಾರ ಸಂಘಟನೆಯ ದೃಷ್ಟಿಯಲ್ಲಿ ವಾಣಿಜ್ಯ ಮಹತ್ವವಿಲ್ಲದ ಅಂಶವಾಗಿದೆ.

೪.ವಿಶ್ವವ್ಯಾಪಾರ ಸಂಘಟನೆಯು ಎಲ್ಲಾ ನಾಗರಿಕ ಮೂಲಭೂತ ಸೇವೆಗಳನ್ನು ಖಾಸಗೀಕರಣಗೊಳಿಸುವುದರ ಮೂಲಕ ಜಗತ್ತಿನ ಬಹುತೇಕ ಬಡ ಜನತೆಯ ಬದುಕನ್ನು ಅಸಹನೀಯವಾಗಿಸಿದೆ. ಈವರೆಗೆ ಪ್ರತಿಯೊಂದು

[illegible]' ಎಂಬ ಪರಿಕಲ್ಪನೆಯಲ್ಲಿ ಜನತೆಯ ಮೂಲಭೂತ ಸೇವೆ-ಸೌಕರ್ಯಗಳಾದ ಶಿಕ್ಷಣ, ಆರೋಗ್ಯ, ವಸತಿ, ಕುಡಿಯುವ ನೀರು, ರಸ್ತೆ, ಒಳ ಚರಂಡಿ, ಶೌಚಾಲಯ ಇವುಗಳನ್ನು ಸಾರ್ವಜನಿಕ ರಂಗದಲ್ಲಿ ಜನತೆಯ ಕೈಗೆಟಕುವ ದರದಲ್ಲಿ ನೀಡುತ್ತಾ ಬಂದಿದ್ದವು. ಆದರೀಗ ಜಾಗತೀಕರಣದ ಸೂತ್ರದಲ್ಲಿ ೧೬೦ ಸೇವೆಗಳನ್ನು ಖಾಸಗೀಕರಣಗೊಳಿಸಲು ಒತ್ತು ನೀಡಲಾಗಿದೆ. ಈಗಾಗಲೇ ಬಹುತೇಕ ಸೇವೆ-ಸೌಕರ್ಯಗಳು ಖಾಸಗಿ ಒಡೆತನದಲ್ಲಿ ಆಚರಣೆಗೆ ಬಂದಿವೆ, ಬರುತ್ತಿವೆ. ಇದು ಬಡತನ ನಿರ್ಮೂಲನೆಗಿಂತ ಬಡವರ ನಿರ್ಮೂಲನೆ ಕಾರ್ಯವಾಗಿದೆ.

೫. ವಿಶ್ವವ್ಯಾಪಾರ ಸಂಘಟನೆಯು ಬಹುರಾಷ್ಟ್ರೀಯ ಕಂಪನಿಗಳಿಗೆ ಬೆನ್ನೆಲುಬಾಗಿ ನಿಂತಿರುವುದರಿಂದ ಈ ಕಂಪನಿಗಳು ನಡೆಸುತ್ತಿರುವ ಬೃಹತ್ ವ್ಯಾಪಾರ ಕ್ರಮದಿಂದಾಗಿ ಪರಿಸರ ಸಂರಕ್ಷಣೆಗೆ ಅಡ್ಡಿಯಾಗಿದೆ. ಜಗತ್ತಿನೆಲ್ಲೆಡೆ ಅರಣ್ಯ ನಶಿಸುತ್ತಾ ಬಂದಿದ್ದು, ಇಲ್ಲಿ ವಾಸವಾಗಿದ್ದ ಅಪರೂಪದ ಪ್ರಾಣಿ, ಪಕ್ಷಿ ವೈವಿಧ್ಯಮಯ ಜೀವ ಸಂಕುಲಗಳು, ಗಿಡ ಮೂಲಿಕೆಗಳು ನಾಶವಾಗುತ್ತಿವೆ. ಅಲ್ಲದೆ ಸಮುದ್ರದಲ್ಲಿ ಮೀನುಗಾರಿಕೆಗೆ ಬಳಸುತ್ತಿರುವ ಬೃಹತ್ ದೋಣಿಗಳು, ನೈಲಾನ್ ಬಲೆಗಳಿಂದಾಗಿ, ಶಾರ್ಕ್, ತಿಮಿಂಗಲ, ಡಾಲ್ಫಿನ್, ಕಡಲಾಮೆ ಸೇರಿದಂತೆ ಅಪರೂಪದ ಸಮುದ್ರ ಜೀವಿಗಳು ಅವಸಾನದ ಅಂಚಿಗೆ ಸರಿಯುತ್ತಿವೆ. ಹೀಗೆ ನೆಲ-ಜಲ-ಗಾಳಿ-ಪ್ರಕೃತಿ ಎಲ್ಲವೂ ಮಲೀನಗೊಳ್ಳಲು ಜಾಗತೀಕರಣ ಪ್ರಕ್ರಿಯೆ ಪರೋಕ್ಷವಾಗಿ ಕಾರಣವಾಗಿದೆ.

೬. ಜಾಗತೀಕರಣ ಬಡ ಜನತೆಯ ಪಾಲಿಗೆ ಮಾರಕವಾಗಿದೆ. ಇಂದು ಜಗತ್ತನ್ನು ಭಾದಿಸುತ್ತಿರುವ ಬಡತನ,ಹಸಿವು ಇವುಗಳ ಜೊತೆಗೆ ಏಡ್ಸ್, ಮಲೇರಿಯಾ ಮುಂತಾದ ರೋಗಗಳು ಸಹ ದೊಡ್ಡ ಸವಾಲನ್ನು ಒಡ್ಡಿವೆ. ಈ ಕಾಯಿಲೆಗಳಿಗೆ ವಿಶ್ವಾದ್ಯಂತ ಬಹುತೇಕ ಬಡಜನತೆ ತುತ್ತಾಗುತ್ತಿದ್ದಾರೆ. ಭಾರತ ಸೇರಿದಂತೆ ಹಲವಾರು ರಾಷ್ಟ್ರಗಳು ಕಡಿಮೆ ಬೆಲೆಗೆ ಔಷಧಿಗಳನ್ನು ತಯಾರಿಸಿ, ವಿತರಿಸಲು ಸಿದ್ಧವಾಗಿದ್ದರೂ ಕೂಡ, ಬಹುರಾಷ್ಟ್ರೀಯ ಕಂಪನಿಗಳ ಪೇಟೆಂಟ್ ಹಕ್ಕನ್ನು ಮುಂದಿಟ್ಟು ಬಡಜನತೆಯ ಆರೋಗ್ಯ ರಕ್ಷಣೆಗೆ ತಡೆಯೊಡ್ಡಿವೆ. ವಿಶ್ವವ್ಯಾಪಾರ ಸಂಘಟನೆ ಸಭೆಯಲ್ಲಿ (೨೦೦೧ರಲ್ಲಿ) ವಿಶೇಷ ತುರ್ತು ಸಂದರ್ಭದಲ್ಲಿ ಔಷಧಿ ತಯಾರಿಕೆಗೆ ಅನುಮತಿ ನೀಡಿದ್ದರೂ ಕೂಡ ಈ ಒಪ್ಪಂದ ಪರಿಣಾಮಕಾರಿಯಾಗಿ ಈವರೆಗೆ ಜಾರಿಗೆ ಬಂದಿಲ್ಲ. ವಿಶ್ವವ್ಯಾಪಾರ ಸಂಘಟನೆಗೆ ಜಗತ್ತಿನ ಬಹುತೇಕ ಬಡವರ ಅಮೂಲ್ಯ ಜೀವಕ್ಕಿಂತ ಬಹುರಾಷ್ಟ್ರೀಯ ಕಂಪನಿಗಳ ಲಾಭವೇ ಮುಖ್ಯ ಗುರಿಯಾಗಿದೆ.

೭. ಜಾಗತೀಕರಣದ ಮೂಲ ಪರಿಕಲ್ಪನೆಯಾದ 'ಮುಕ್ತ ವ್ಯಾಪಾರ' ನೀತಿಯು ಜಗತ್ತಿನಾದ್ಯಂತ ಬಂಡವಾಳ ಹೂಡಿಕೆ-ವ್ಯಾಪಾರ ವಿಸ್ತರಣೆಗೆ ಅನುವು ಮಾಡಿಕೊಟ್ಟಿದ್ದರೂ ಕೂಡ, ವಿಶ್ವ ಮಟ್ಟದಲ್ಲಿ ಅಸಮಾನತೆಯನ್ನು ಹುಟ್ಟುಹಾಕಿದೆ. ೧೯೬೦ ರಿಂದ ೨೦೦೮ ರವರೆಗೆ ಅಭಿವೃದ್ಧಿ ಕುರಿತಂತೆ ನಡೆಸಿದ ಜಾಗತಿಕ ಸಮೀಕ್ಷಾ ವರದಿಯ ಅನ್ವಯ ಜಗತ್ತಿನ ಶೇ. ೨೦ರಷ್ಟು ಜನತೆ ವಿಶ್ವದ ಶೇ. ೮೦ ರಷ್ಟು ಪ್ರಾಕೃತಿಕ ಸಂಪತ್ತನ್ನು, ಹಾಗೂ ಉಳಿದ ಶೇ.೮೦ ರಷ್ಟು ಜಗತ್ತಿನ ಜನತೆ ಶೇ. ೧೪ರಷ್ಟು ಪ್ರಾಕೃತಿಕ ಸಂಪತ್ತನ್ನು ಅನುಭೋಗಿಸುತ್ತಿದ್ದಾರೆ. ಜಗತ್ತಿನಲ್ಲಿ ಕಡಿಮೆ ಬೆಲೆಗೆ ಎಲ್ಲಿ ಮಾನವ ಸಂಪನ್ಮೂಲ ಹಾಗೂ ಪ್ರಾಕೃತಿಕ

ಇದೀಗ ಜಾಗತೀಕರಣ ಪ್ರಕ್ರಿಯೆಯನ್ನು ಜಾರಿಗೆ ತರುವ ಹೊಣೆ ಹೊತ್ತಿರುವ ವಿಶ್ವ ವ್ಯಾಪಾರ ಸಂಘಟನೆಯಲ್ಲಿ ೧೫೩ ಸದಸ್ಯ ರಾಷ್ಟ್ರಗಳಿದ್ದು, ದೋಹಾ ಸುತ್ತಿನ ಮಾತು ಕತೆ ಕಳೆದ ೭ ವರ್ಷಗಳಿಂದ ಯಶಸ್ವಿಯಾಗದೆ ಮುಂದೂಡುತ್ತಲೆ ಬಂದಿದೆ. ೨೦೦೮ರ ಫೆಬ್ರವರಿಯಲ್ಲಿ ಜಿನೀವಾ ನಗರದಲ್ಲಿ ನಡೆದ ಸಂಧಾನದ ಮಾತುಕತೆ ಜುಲೈ ತಿಂಗಳಿಗೆ ಮುಂದೂಡಲ್ಪಟ್ಟಿದ್ದು, ಕೃಷಿ ಹಾಗೂ ಸರಕುಗಳ ಸುಂಕ ಕುರಿತಂತೆ ಶ್ರೀಮಂತ ರಾಷ್ಟ್ರಗಳ ಅಭಿವೃದ್ಧಿಶೀಲ ರಾಷ್ಟ್ರಗಳ ನಡುವೆ ಈವರೆಗೆ ಒಪ್ಪಂದವೇರ್ಪಡಿಸಲು ಸಾಧ್ಯವಾಗಿಲ್ಲ. ಅಮೇರಿಕಾ ತನ್ನ ರೈತರಿಗೆ ನೀಡುತ್ತಿರುವ ಕೃಷಿ ಸಬ್ಸಿಡಿ ಹಾಗೂ ರಫ್ತು ಪ್ರೋತ್ಸಾಹ ಧನವನ್ನು ಕಡಿಮೆ ಮಾಡಲು ಒಪ್ಪದಿರುವುದು ಕೃಷಿ ಒಪ್ಪಂದಕ್ಕೆ ಅಡ್ಡಿಯಾಗಿದೆ.

ಸಂಪನ್ಮೂಲ ಸಿಗುತ್ತದೆಯೊ ಅಂತಹ ಕಡೆಗೆ ವಿದೇಶ ಬಂಡವಾಳ ಹರಿದು ಬರುತ್ತಿದ್ದು, ಬಡ ಕಾರ್ಮಿಕರ ಮತ್ತು ಪ್ರಕೃತಿಯ ಶೋಷಣೆ ಯಾವುದೇ ಅಡಚಣೆ ಇಲ್ಲದೆ ನಿರಂತರವಾಗಿ ನಡೆಯುತ್ತಿದೆ.

೮. ಜಾಗತೀಕರಣ ವಿಶ್ವದ ಹಸಿವನ್ನು ನೀಗಿಸುವ ಬದಲು ಹೆಚ್ಚಿಸುತ್ತಾ, ಬಡ ಜನತೆಗೆ ಈ ಭೂಮಿಯ ಮೇಲಿನ ಬದುಕು ನರಕ ಸದೃಶ್ಯವನ್ನಾಗಿಸಿದೆ. ಇಂದು ಜಗತ್ತಿನಾದ್ಯಂತ ರೈತರು ಉತ್ಪಾದಿಸುತ್ತಿರುವ ಆಹಾರ ಧಾನ್ಯ ಸುಮಾರು ೬೧೦ ಕೋಟಿ ಜನಸಂಖ್ಯೆಗೆ ಸಾಕಾಗುತ್ತಿದ್ದರೂ ಕೂಡ ಬಹುತೇಕ ಬಹುರಾಷ್ಟ್ರೀಯ ಕಂಪನಿಗಳು ಆಹಾರ ಧಾನ್ಯ ವಿತರಣೆ ವ್ಯವಸ್ಥೆಯನ್ನೂ ಕೈಗೆತ್ತಿಕೊಂಡ ಪರಿಣಾಮ ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ, ಕೊಳ್ಳಲಾಗದ ಬಡಜನತೆ ಹಸಿವಿನಿಂದ ಬಳಲುವಂತಾಗಿದೆ. ವಿಶ್ವ ಮಾನವ ಹಕ್ಕುಗಳ ಒಪ್ಪಂದ ಆಹಾರ ಕೂಡ ಮನುಷ್ಯನ ಮೂಲಭೂತ ಅಗತ್ಯಗಳಲ್ಲಿ ಒಂದು ಎಂದು ಸಾರಿದೆ.

ಆದರೆ ಕೃಷಿ ಒಪ್ಪಂದಗಳ ಸೂತ್ರಗಳ ಮೂಲಕ ವಿಶ್ವವ್ಯಾಪಾರ ಸಂಘಟನೆ ಬಹುರಾಷ್ಟ್ರೀಯ ಕಂಪನಿಗಳಿಗೆ ಹಾಗೂ ಶ್ರೀಮಂತ ರಾಷ್ಟ್ರಗಳ ಕೈಗೆ ಆಹಾರದ ಬೀಗದ ಕೀಲಿ ನೀಡಿದೆ. ಇದರಿಂದಾಗಿ ಶ್ರೀಮಂತ ರಾಷ್ಟ್ರಗಳಲ್ಲಿ ನೀಡುತ್ತಿರುವ ಹೆಚ್ಚುವರಿ ಸಬ್ಸಿಡಿಯಿಂದಾಗಿ ಉತ್ಪಾದಿಸಿದ ಅಧಿಕ ಆಹಾರ-ಧಾನ್ಯಗಳನ್ನು ಬಡ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಕಡಿಮೆ ಬೆಲೆಗೆ ತಂದು ಸುರಿಯುತ್ತಿವೆ. ಇದರಿಂದಾಗಿ ಸ್ಥಳೀಯ ರೈತರು ಕೃಷಿ ಚಟುವಟಿಕೆಯಿಂದ ವಿಮುಖರಾಗುತ್ತಿದ್ದಾರೆ. ಬಿತ್ತಿಬೆಳೆದ ಬೆಳೆಗೆ ಸೂಕ್ತ ಬೆಲೆ ಇಲ್ಲದೆ ರೈತರು ಆತ್ಮಹತ್ಯೆಯ ಹಾದಿ ತುಳಿದಿದ್ದಾರೆ.

೯. ವಿಶ್ವ ವ್ಯಾಪಾರ ಸಂಘಟನೆಯ ಸಭೆಯಲ್ಲಿ ತೆಗೆದುಕೊಳ್ಳಲಾಗುವ ಎಲ್ಲಾ ನಿರ್ಧಾರಗಳು ಏಕಪಕ್ಷೀಯವಾಗಿದ್ದು ಅವುಗಳು ಶ್ರೀಮಂತ ರಾಷ್ಟ್ರಗಳ ಪರವಾಗಿವೆ. ಮುಚ್ಚಿದ ಬಾಗಿಲುಗಳ ಕೊಠಡಿಯಲ್ಲಿ ನಡೆಯುವ ಸಭೆಗೆ ಬಡ ಹಾಗೂ ಅಭಿವೃದ್ಧಿಶೀಲ ರಾಷ್ಟ್ರಗಳ ಪ್ರತಿನಿಧಿಗಳಿಗೆ ಪ್ರವೇಶವಿಲ್ಲ.

೧೦. ಜಾಗತೀಕರಣವೆ ಅಂತಿಮವಲ್ಲ, ಪರ್ಯಾಯ ವ್ಯವಸ್ಥೆ ಕೂಡ ಇದೆ. ಆ ನಿಟ್ಟಿನಲ್ಲಿ ಆಲೋಚಿಸುವ ಹೃದಯಗಳು ಬೇಕಷ್ಟೆ. ಇದೀಗ ಜಾಗತೀಕರಣದ ವಿರುದ್ಧ ಪ್ರತಿಭಟನೆ ದಿನೇ ದಿನೇ ಹೆಚ್ಚಾಗುತ್ತಿದ್ದು, ಜಾಗತೀಕರಣದ ಅಲೆಯೇ ಇಂದು ವಿಶ್ವವ್ಯಾಪಾರ ಸಂಘಟನೆಗೆ ತಿರುಗು ಬಾಣವಾಗಿದೆ. ಸ್ಥಳೀಯ ಹಿತಾಸಕ್ತಿ ಹಾಗೂ ಆಯಾ ನೆಲದ ಕಾನೂನುಗಳನ್ನು ಕಡೆಗಣಿಸಿದ್ದೆ ಈ ಸ್ಥಿತಿಗೆ ಕಾರಣವಾಗಿದೆ.

ಈಗಾಗಲೇ ಹಲವಾರು ರಾಷ್ಟ್ರಗಳು ಜಾಗತೀಕರಣಕ್ಕೆ ಪರ್ಯಾಯವಾಗಿ ಆಯಾ ಪ್ರದೇಶಗಳಲ್ಲಿ ಪರಸ್ಪರ ತಿಳುವಳಿಕೆ ಮತ್ತು ಸಹಕಾರದ ಮೂಲಕ ವ್ಯಾಪಾರ ಮಾರ್ಗವನ್ನು ಕಂಡುಕೊಂಡಿದೆ. ಜಗತ್ತಿನಾದ್ಯಂತ ೧೯೯೯ ರಿಂದ 'ವರ್ಲ್ಡ್ ಸೋಷಿಯಲ್ ಫೋರಂ' ವೇದಿಕೆಯಡಿ ಅನೇಕ ಬುದ್ಧಿಜೀವಿಗಳು, ಪರಿಸರವಾದಿಗಳು, ಆರ್ಥಿಕತಜ್ಞರು ಜಾಗತೀಕರಣದ ವಿರುದ್ಧ ಜನತೆಗೆ ಪ್ರಜ್ಞೆಯ ಬೀಜವನ್ನು ಬಿತ್ತುತ್ತಿದ್ದಾರೆ. ಇಷ್ಟೆಲ್ಲಾ ವಿರೋಧ-ಪ್ರತಿಭಟನೆಗಳ ನಡುವೆ ವಿಶ್ವವ್ಯಾಪಾರ ಸಂಘಟನೆ ಮಾತ್ರ ಜಾಗತೀಕರಣ ಕುರಿತಂತೆ ತಾನು ಪ್ರತಿಪಾದಿಸಿರುವ ಮಾರ್ಗ ಅಂತಿಮ ಎಂಬ ಮನಸ್ಥಿತಿಯಲ್ಲಿದೆ. ಇತ್ತೀಚಿಗಿನ ಜಾಗತಿಕ ವಿದ್ಯಮಾನಗಳು ಜಾಗತೀಕರಣದ ಪ್ರತಿಪಾದಕರನ್ನು ಕಂಗೆಡಿಸಿರುವುದು ಮಾತ್ರ ನಿಜ.

ಜಾಗತಿಕ ಮಟ್ಟದಲ್ಲಿ ತೀವ್ರವಾಗಿ ಜರುಗುತ್ತಿರುವ ಆರ್ಥಿಕ ಹಿಂಜರಿತ, ಹವಾಮಾನ ಬದಲಾವಣೆ, ಜೊತೆಗೆ ಅಚ್ಚರಿಯ ಮಾದರಿಯಲ್ಲಿ ಚೀನಾ-ಭಾರತ ರಾಷ್ಟ್ರಗಳೆರಡು ಬೃಹತ್ ಆರ್ಥಿಕಶಕ್ತ ರಾಷ್ಟ್ರಗಳಾಗಿ ಹೊರ ಹೊಮ್ಮುತ್ತಿರುವುದು. ಇವೆಲ್ಲವೂ ಜಾಗತೀಕರಣದ ಚಿತ್ರಣವನ್ನು ಬದಲಾಯಿಸಿ, ಶ್ರೀಮಂತ ರಾಷ್ಟ್ರಗಳ ನಾಯಕರಲ್ಲಿ ತವಕ-ತಲ್ಲಣಗಳನ್ನುಂಟು ಮಾಡಿವೆ. ಇವೆಲ್ಲವುಗಳ ಜೊತೆ ವಿಶ್ವದ ಆಹಾರ ಭದ್ರತೆಗೆ ಧಕ್ಕೆಯುಂಟಾಗಿರುವ ಬಗ್ಗೆ ತಜ್ಞರು ಆತಂಕ ವ್ಯಕ್ತಪಡಿಸಿರುವುದು ಮತ್ತಷ್ಟು ಕಳವಳಕಾರಿ ಸಂಗತಿಯಾಗಿದೆ.

ಇದೇ ೨೦೦೮ರ ಮೇ ತಿಂಗಳಿನಲ್ಲಿ ಇಟಲಿಯ ರೋಂ ನಗರದಲ್ಲಿ ನಡೆದ ಅಂತರಾಷ್ಟ್ರೀಯ ಸಮಾವೇಶದಲ್ಲಿ ಈ ಆತಂಕ ವ್ಯಕ್ತವಾಗಿದೆ. ಅಂತರಾಷ್ಟ್ರಿಯ ಮಾರುಕಟ್ಟೆಯಲ್ಲಿ ತೈಲಬೆಲೆ ಏರುತ್ತಿರುವ ಕಾರಣ, ಪರ್ಯಾಯ ಇಂಧನ ವ್ಯವಸ್ಥೆಗೆ ಮುಂದಾಗಿರುವ ಹಲವಾರು ರಾಷ್ಟ್ರಗಳಲ್ಲಿ ಕಬ್ಬು, ಮೆಕ್ಕಜೋಳ ಬೆಳೆಯ ಮುಖಾಂತರ ಹಾಗೂ ಎಣ್ಣೆಕಾಳುಗಳ ಮೂಲಕ ಎಥೆನಾಲ್ ಬಳಕೆಗೆ ಮುಂದಾಗಿರುವುದಕ್ಕೆ ಕೃಷಿತಜ್ಞರು ವಿಶ್ವ ಆಹಾರ ಭದ್ರತೆಗೆ ಧಕ್ಕೆ ಉಂಟಾಗಲಿದೆ ಎಂದು ಎಚ್ಚರಿಸಿದ್ದಾರೆ. ಈಗಾಗಲೇ ಹಲವಾರು ರಾಷ್ಟ್ರಗಳಲ್ಲಿ ರೈತರು ಆಹಾರಧಾನ್ಯಗಳ ಬೆಳೆಯನ್ನು ಬದಿಗಿಟ್ಟು, ಹೆಚ್ಚು ಲಾಭ ತರುವ ವಾಣಿಜ್ಯ ಬೆಳೆಗಳತ್ತ ವಾಲಿದ್ದಾರೆ. ಈ ಎಲ್ಲಾ ಅಂಶಗಳು ಜಾಗತೀಕರಣ ಪ್ರಕ್ರಿಯೆ ಕುರಿತಂತೆ ವಿಶ್ವ ಮಟ್ಟದಲ್ಲಿ ಮರುಚಿಂತನೆ ಅಗತ್ಯ ಎಂಬುದನ್ನು ಸಾರಿ ಸಾರಿ ಹೇಳುತ್ತಿವೆ. ಈ ವರೆಗೆ ಈ ಪ್ರಕ್ರಿಯೆಯ ಮುಂಚೂಣಿಯಲ್ಲಿದ್ದ ಅಮೇರಿಕಾದ ಆರ್ಥಿಕ ಬೆಳವಣಿಗೆಯ ಕುಂಠಿತವೇ ಈ ಕುರಿತ ಗಂಭೀರ ಚಿಂತನೆಗೆ ಕಾರಣವಾಗಬಲ್ಲದು.

ಇನ್ನು ಜಾಗತೀಕರಣದ ಪ್ರಭಾವ ಕುರಿತಂತೆ

ಭಾರತದ ಪರಿಸ್ಥಿತಿಯನ್ನು ಅವಲೋಕಿಸಿದರೆ, ಇಲ್ಲಿನ ಸ್ಥಿತಿ ಕೂಡ ಜಾಗತಿಕ ಸ್ಥಿತಿಗಿಂತ ಭಿನ್ನವಾಗಿಲ್ಲ. ಉಳಿದ ರಾಷ್ಟ್ರಗಳಿಗೆ ಹೋಲಿಸಿದಾಗ ಆರ್ಥಿಕ ಬೆಳವಣಿಗೆ ಹಾಗೂ ಚಟುವಟಿಕೆ ಕುರಿತಂತೆ ಪರಿಸ್ಥಿತಿ ತೀರ ಶೋಚನಿಯವಲ್ಲದಿದ್ದರೂ, ಈಗ ಎಚ್ಚೆತ್ತುಕೊಳ್ಳದಿದ್ದರೆ ಭಾರಿ ಬೆಲೆಯನ್ನು ತರಬೇಕಾದೀತು.

ಇಂದಿಗೂ ಮಾಧ್ಯಮಗಳಲ್ಲಿ ಭಾರತದ ಆರ್ಥಿಕ ಬೆಳವಣಿಗೆಯ ಬಗ್ಗೆ ರೋಚಕ ಚಿತ್ರಣವನ್ನು ಪ್ರತಿಬಿಂಬಿಸಲಾಗುತ್ತಿದೆ. ಕೇವಲ ಒಂದು ವಲಯದ ಅಭಿವೃದ್ಧಿಯನ್ನು ಇಡೀ ದೇಶದ ಸಮಗ್ರ ಅಭಿವೃದ್ಧಿ ಎಂದು ಬಣ್ಣಿಸಲಾಗುತ್ತಿದೆ. ಆದರೆ ವಾಸ್ತವ ಚಿತ್ರಣ ಬೇರೆಯದೇ ಆಗಿದೆ. ಮಾಹಿತಿ ತಂತ್ರಜ್ಞಾನದಲ್ಲಾದ ಕ್ರಾಂತಿಕಾರಿ ಬೆಳವಣಿಗೆಯಿಂದಾಗಿ ಐ.ಟಿ. ಮತ್ತು ಬಿ.ಟಿ. ಜಪದಲ್ಲಿ ಈ ದೇಶದ ಬಹುಸಂಖ್ಯಾತ ಜನರ ಮೂಲ ಕಸುಬು ಹಾಗೂ ಬದುಕಿಗೆ ಆಧಾರವಾದ ಕೃಷಿಯನ್ನು ಕಡೆಗಣಿಸಿದ್ದರ ಫಲವನ್ನು ಈಗ ಎಲ್ಲರೂ ಅನುಭವಿಸುವಂತಾಗಿದೆ.

ಭಾರತದ ಜನಸಂಖ್ಯೆಯ ಶೇ. ೭೪ರಷ್ಟು ಮಂದಿಗೆ ಕೃಷಿಯೇ ಜೀವನಾಧಾರ ಎಂಬ ಸತ್ಯದ ಅರಿವಿದ್ದರೂ, ವ್ಯವಸ್ಥಿತವಾಗಿ ಕೃಷಿಯನ್ನು ನಿರ್ಲಕ್ಷಿಸಲಾಯಿತು. ಕೈಗಾರಿಕೆಗಳಿಗೆ, ಸಿರಿವಂತರ ವಾಹನಗಳಿಗೆ ಅನುಕೂಲವಾಗುವಂತೆ ರಾಜ್ಯ-ರಾಷ್ಟ್ರ ಹೆದ್ದಾರಿಗಳಿಗೆ ಕೃಷಿಯೋಗ್ಯ ಭೂಮಿಯನ್ನು ರೈತನಿಂದ ಕಿತ್ತುಕೊಳ್ಳಲಾಯಿತು. ಇದಲ್ಲದೆ ವಿಶೇಷ ಆರ್ಥಿಕ ವಲಯ ಎಂಬ ಯೋಜನೆಯಡಿ ರಿಯಲ್ ಎಸ್ಟೇಟ್ ಮಾಫಿಯಾ ಹಾಗೂ ಕೈಗಾರಿಕೋದ್ಯಮಿಗಳಿಗೆ ಬಿಸಾಕುವ ಬೆಲೆಗೆ ರೈತನಿಂದ ಭೂಮಿ ಪಡೆದು ನೀಡಲಾಯಿಸಲಾಯಿತು.

ರೈತ ಪರಂಪರಾಗತವಾಗಿ ಉಳಿಸಿಕೊಂಡು ಬಂದಿದ್ದ ಕೃಷಿ ಕುರಿತ ದೇಶಿ ಜ್ಞಾನವನ್ನು ಅವನಿಂದ ಕಸಿದುಕೊಂಡು ಅವನ ಕೈಗೆ ಹೈಬ್ರಿಡ್ ಬೀಜ, ರಾಸಾಯನಿಕ ಗೊಬ್ಬರ, ಕುಲಾಂತರಿಗಳನ್ನು ನೀಡಿ, ಜೀವನ ಪರ್ಯಂತ ಪರಾವಲಂಬಿಯನ್ನಾಗಿ ಮಾಡಲಾಯಿತು. ಭಾರತದ ಕೃಷಿ ವಲಯವನ್ನು ನಿರ್ಲಕ್ಷಿಸಿದ ಪರಿಣಾಮ ೧೯೫೨-೫೩ರಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಶೇ. ೩೬.೪ ರಷ್ಟು ಇದ್ದಪಾಲು ೨೦೦೬-೦೭ ರ ಸಾಲಿನಲ್ಲಿ ಶೇ. ೧೮.೫ಕ್ಕೆ ಕುಸಿದಿದೆ. ಜಾಗತಿಕ ಮಟ್ಟದ ಕೃಷಿ ಉತ್ಪಾದನೆ ಪ್ರತಿ ಹೆಕ್ಟೇರ್‌ಗೆ ೨.೬ ಟನ್ ಇದ್ದರೆ, ಭಾರತದ ಉತ್ಪಾದನೆ ಕೇವಲ ೧.೬ ಟನ್ ಮಾತ್ರ. ಭಾರತದ ರೈತರ ಆತ್ಮಹತ್ಯೆ ವಿಚಾರವಂತೂ ಈ ದೇಶದ ಚರಿತ್ರೆ ಹಾಗೂ ಬೆಳವಣಿಗೆಯ ಮೇಲೆ ಇಟ್ಟ ಒಂದು ಕಪ್ಪು ಚುಕ್ಕೆ. ಅನ್ನದಾತರ ಸಾವು ರಾಷ್ಟ್ರೀಯ ಅಪಮಾನ. ಇಡೀ ದೇಶ ತಲೆ ತಗ್ಗಿಸುವಂತಹ ಸಂಗತಿ ಎಂಬ ಪರಿಜ್ಞಾನವನ್ನು ಆತ್ಮಸಾಕ್ಷಿಗೆ ತಂದುಕೊಳ್ಳಲಾರದಷ್ಟು ವಿಸ್ಮೃತಿಗೆ ಇಲ್ಲಿನ ರಾಜಕಾರಣಿಗಳು- ಅಧಿಕಾರಿಗಳು ದೂಡಲ್ಪಟ್ಟಿದ್ದಾರೆ. ಅಂದರೆ ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಬೇರೊಂದಿಲ್ಲ.

ನವದೆಹಲಿಯಲ್ಲಿರುವ ರಾಷ್ಟ್ರೀಯ ಅಪರಾಧ ದಾಖಲಾತಿ ಕೇಂದ್ರದ ಸಮೀಕ್ಷೆ ಪ್ರಕಾರ ೨೦೦೩ರಿಂದ ೨೦೦೭ರ ಅಂತ್ಯದವರೆಗೆ ದೇಶದಲ್ಲಿ ೧ಲಕ್ಷ ೧೨ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ೨೦೦೬ರಲ್ಲಿ ೧೭ಸಾವಿರದ ೬೦೦ಮಂದಿ ಸಾವಿಗೆ ಶರಣಾಗಿದ್ದು, ಮಹಾರಾಷ್ಟ್ರ ರಾಜ್ಯವೊಂದರಲ್ಲೆ ೪೪೫೩ ರೈತರು ಬಲಿಯಾಗಿದ್ದಾರೆ. ರೈತರ ಆತ್ಮಹತ್ಯೆ ತಡೆಗೆ ಕೇಂದ್ರ ಸರ್ಕಾರ ಅನೇಕ ವಿಶೇಷ ಯೋಜನೆಗಳನ್ನು ಪ್ರಕಟಿಸಿದ್ದರೂ ಕೂಡ, ರೈತ ಸಮುದಾಯಕ್ಕೆ ನೈತಿಕ ಸ್ಥೈರ್ಯ ತುಂಬುವಂತಹ ಕಾರ್ಯ ಯಾವುದೇ ಸರ್ಕಾರದಿಂದ ಸಾಧ್ಯವಾಗಿಲ್ಲ. ಇಂದಿನ ಸ್ಥಿತಿಯಲ್ಲಿ ರೈತರಿಗೆ ಬೇಕಾಗಿರುವುದು ಯೋಜನೆಗಳ ಘೋಷಣೆಯಲ್ಲ, ಅವರಿಗೆ ಸಕಾಲಕ್ಕೆ ಬಿತ್ತನೆ ಬೀಜ, ನೀರು, ವಿದ್ಯುತ್, ಗೊಬ್ಬರ ನಂತರ ಬೆಳೆದ ಫಸಲಿಗೆ ಯೋಗ್ಯ ಬೆಲೆ ಹಾಗೂ ಮಾರುಕಟ್ಟೆ ವ್ಯವಸ್ಥೆ. ಇವುಗಳ ಬಗ್ಗೆ ಯಾವ ರಾಜಕೀಯ ನೇತಾರರು ಕೂಡ ತುಟಿ ಬಿಚ್ಚಲಾರದಷ್ಟು ಅಸಹಾಯಕರಾಗಿದ್ದಾರೆ.

೨೦೦೭-೦೮ರ ಸಾಲಿನ ಒಟ್ಟು ರಾಷ್ಟ್ರೀಯ ಉತ್ಪನ್ನದ (G.D.P.) ಬೆಳವಣಿಗೆ ದರ ಶೇ. ೬.೭ರಷ್ಟು, ಇದರಲ್ಲಿ ಕೃಷಿ ಪಾಲು ಶೇ. ೨.೬ರಷ್ಟು ಮಾತ್ರ. ೧೯೬೦ರ ದಶಕದಲ್ಲಿ ದೇಶದಲ್ಲಿ ಜಾರಿಗೆ ಬಂದ ಹಸಿರು ಕ್ರಾಂತಿ ಯೋಜನೆಯ ಫಲವಾಗಿ ಗ್ರಾಮಾಂತರ ಪ್ರದೇಶದಲ್ಲಿ ಸ್ವಲ್ಪ ಮಟ್ಟಿಗೆ ಬಡತನ ನಿವಾರಣೆಯಾಗುವುದರ ಜೊತೆಗೆ ಆಹಾರ ಕೊರತೆ ಮತ್ತು ಹಸಿವನ್ನು ನೀಗಿಸಲಾಗಿತ್ತು. ಆದರೆ ಹಸಿರು ಕ್ರಾಂತಿಯ ಫಲವಾಗಿ ಭೂಮಿಗೆ ಸುರಿದ ನಿರಂತರ ರಾಸಾಯನಿಕ ಗೊಬ್ಬರಗಳಿಂದಾಗಿ ಭೂಮಿಯ ಫಲವತ್ತತೆ ಹಾಳಾಗಿ ಇಳುವರಿ ಸ್ಥಗಿತಗೊಂಡಿದೆ. ಕೃಷಿಯನ್ನೇ ಮೂಲ ಕಸುಬಾಗಿ ಅವಲಂಬಿಸಿದ್ದ ಕೋಟ್ಯಾಂತರ ಕೃಷಿ ಕಾರ್ಮಿಕರು ಗ್ರಾಮಾಂತರ ಪ್ರದೇಶದಿಂದ ವಲಸೆ ಹೋಗಿ ನಗರದ ಕೊಳಚೆ ಪ್ರದೇಶಗಳಿಗೆ ಜಮೆಯಾಗುತ್ತಿದ್ದಾರೆ.ಚೀನಾ-ಬಾಂಗ್ಲಾ-ಶ್ರೀಲಂಕಾ ರಾಷ್ಟ್ರಗಳನ್ನು ಹೊರತುಪಡಿಸಿ, ಜಗತ್ತಿನ ಉಳಿದ ರಾಷ್ಟ್ರಗಳಲ್ಲಿ ಕೃಷಿ ಕಾರ್ಮಿಕರು ಕೃಷಿ ವಲಯದಿಂದ ವಿಮುಖರಾಗುತ್ತಿದ್ದಾರೆ.

ರೈತ ಪರಂಪರಾಗತವಾಗಿ ಉಳಿಸಿಕೊಂಡು ಬಂದಿದ್ದ ಕೃಷಿ ಕುರಿತ ದೇಶಿ ಜ್ಞಾನವನ್ನು ಅವನಿಂದ ಕಸಿದುಕೊಂಡು ಅವನ ಕೈಗೆ ಹೈಬ್ರಿಡ್ ಬೀಜ, ರಾಸಾಯನಿಕ ಗೊಬ್ಬರ, ಕುಲಾಂತರಿಗಳನ್ನು ನೀಡಿ, ಜೀವನ ಪರ್ಯಂತ ಪರಾವಲಂಬಿಯನ್ನಾಗಿ ಮಾಡಲಾಯಿತು. ಭಾರತದ ಕೃಷಿ ವಲಯವನ್ನು ನಿರ್ಲಕ್ಷಿಸಿದ ಪರಿಣಾಮ ೧೯೫೨-೫೩ರಲ್ಲಿ ಒಟ್ಟು ರಾಷ್ಟ್ರೀಯ ಉತ್ಪನ್ನದಲ್ಲಿ ಶೇ. ೩೬.೪ ರಷ್ಟು ಇದ್ದ ಪಾಲು ೨೦೦೬-೦೭ ರ ಸಾಲಿನಲ್ಲಿ ಶೇ. ೧೮.೫ಕ್ಕೆ ಕುಸಿದಿದೆ. ಜಾಗತಿಕ ಮಟ್ಟದ ಕೃಷಿ ಉತ್ಪಾದನೆ ಪ್ರತಿ ಹೆಕ್ಟೇರ್‌ಗೆ ೨.೬ ಟನ್ ಇದ್ದರೆ, ಭಾರತದ ಉತ್ಪಾದನೆ ಕೇವಲ ೧.೬ ಟನ್ ಮಾತ್ರ. ಭಾರತದ ರೈತರ ಆತ್ಮಹತ್ಯೆ ಈ ದೇಶದ ಚರಿತ್ರೆ ಹಾಗೂ ಬೆಳವಣಿಗೆಯ ಮೇಲೆ ಇಟ್ಟ ಒಂದು ಕಪ್ಪು ಚುಕ್ಕೆ. ಅನ್ನ ದಾತರ ಸಾವು ರಾಷ್ಟ್ರೀಯ ಅಪಮಾನ. ಈ ಸಂಗತಿಯನ್ನು ಆತ್ಮಸಾಕ್ಷಿಗೆ ತಂದುಕೊಳ್ಳಲಾರದಷ್ಟು ವಿಸ್ಮೃತಿಗೆ ಇಲ್ಲಿನ ರಾಜಕಾರಣಿಗಳು- ಅಧಿಕಾರಿಗಳು ದೂಡಲ್ಪಟ್ಟಿದ್ದಾರೆ.

ಇದೇ ೨೦೦೮ರ ಮಾರ್ಚ್ ೧೮ರಂದು ದೆಹಲಿಯಲ್ಲಿ ವಿಶ್ವ ಅಭಿವೃದ್ಧಿ ವರದಿ ೨೦೦೮ ಕೃತಿ ಬಿಡುಗಡೆ ಮಾಡಿ ಮಾತನಾಡಿದ ಯೋಜನಾ ಆಯೋಗದ ಅಧ್ಯಕ್ಷ ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ, ಅನೇಕ ಸೌಲಭ್ಯಗಳ ಕೊರತೆಯಿಂದಾಗಿ ಕೃಷಿ ರಂಗದಲ್ಲಿ ತಳಮಳ ಉಂಟಾಗಿದೆ. ಕೃಷಿ ರಂಗದ ಆಹಾರಧಾನ್ಯದಿಂದ ಬೆಳವಣಿಗೆ ಅಸಾಧ್ಯ, ರೈತನನ್ನು ಇತರೆ ಲಾಭದಾಯಕ ವಾಣಿಜ್ಯಬೆಳೆಗೆ ಪ್ರೋತ್ಸಾಹಿಸಿ, ಇಡೀ ಕೃಷಿ ವಲಯವನ್ನು ಸದೃಢಗೊಳಿಸಬೇಕಾಗಿದೆ ಎಂದಿದ್ದಾರೆ.

ಹಸಿರುಕ್ರಾಂತಿ ಯೋಜನೆಯಿಂದ ಹಲವಾರು ಪ್ರಯೋಜನಗಳಾದರೂ, ದೇಶಾದ್ಯಂತ ಪ್ರಾಕೃತಿಕ ಸಂಪನ್ಮೂಲವಾದ ಜಲದ ದುರ್ಬಳಕೆಯಾಯಿತು. ವಿಶೇಷವಾಗಿ ಕೊಳವೆ ಬಾವಿಗಳಿಂದಾಗಿ ಅಂತರ್ಜಲ ಕುಸಿದು ಅಪಾಯದ ಅಂಚಿಗೆ ಸರಿಯಿತು. ತಮಿಳುನಾಡು, ಪಂಜಾಬ್, ಹರಿಯಾಣ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಮಿತಿಮೀರಿದ ರಾಸಾಯನಿಕ ಬಳಕೆಯಿಂದಾಗಿ (ಗೋಧಿ,ಭತ್ತ) ಭೂಮಿ ಸವಕಳಿಯಾಗಿ ಚೌಳು ಭೂಮಿಯಾಗಿ ಪರಿವರ್ತನೆಗೊಂಡಿತು.

ಗ್ರಾಮೀಣ ಪ್ರದೇಶದಲ್ಲಿ ಕೃಷಿ ಜೊತೆಗೆ ಪೂರಕವಾಗಿ ಹೈನುಗಾರಿಕೆ, ಕೋಳಿಸಾಕಾಣಿಕೆ, ಮೀನುಸಾಕಾಣಿಕೆ, ತೋಟಗಾರಿಕೆ ಮುಂತಾದ ಉಪ ಕಸುಬುಗಳಿಗೆ ಉತ್ತೇಜನ ನೀಡಿ ಗ್ರಾಮೀಣ ಜನತೆಯ ಬದುಕನ್ನು ಸುಧಾರಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕೇರಳ ರಾಜ್ಯ ಇಡೀ ರಾಷ್ಟ್ರಕ್ಕೆ ಮಾದರಿಯಾಗಿದೆ. ಅಲ್ಲಿನ ಸರ್ಕಾರ ಪ್ರತಿ ಹಂತದಲ್ಲೂ ರೈತರ ನೆರವಿಗೆ ಸಿದ್ಧವಾಗಿದೆ. ಸಕಾಲಕ್ಕೆ ಬಿತ್ತನೆ ಬೀಜ, ಗೊಬ್ಬರ, ಕೀಟನಾಶಕ ಮುಂತಾದವುಗಳನ್ನು ರಿಯಾಯಿತಿ ದರದಲ್ಲಿ ರೈತರಿಗೆ ಒದಗಿಸುತ್ತಿರುವ ಕೇರಳ ಸರ್ಕಾರ, ಫಸಲು ಬಂದ ನಂತರ ಪ್ರತಿಯೊಂದು ಬೆಳೆಗೂ ಬೆಂಬಲ ಬೆಲೆ ಘೋಷಿಸಿ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿದೆ.

ವರ್ತಮಾನದ ಭಾರತದ ಸಮಸ್ಯೆ ಕೇವಲ ಕೃಷಿ ಸಮಸ್ಯೆಯಾಗಿ ಉಳಿದಿಲ್ಲ. ಇಡೀ ಭಾರತದ ಮಧ್ಯಮ ಹಾಗೂ ಕೆಳವರ್ಗದ ಜನತೆಯ ಬದುಕು ಸಮಸ್ಯೆಗಳ ಗೂಡಾಗಿದೆ. ದೇಶದಾದ್ಯಂತ ತಾಂಡವವಾಡುತ್ತಿರುವ ರಾಜಕೀಯ ಅಸ್ಥಿರತೆ, ರಾಜಕೀಯ ಪಕ್ಷಗಳ ದೊಂಬರಾಟ, ಎಲ್ಲೆಡೆ ಮೀತಿಮೀರಿದ ಭ್ರಷ್ಟಾಚಾರ, ಧರ್ಮ-ಧರ್ಮಗಳ ನಡುವೆ ಕುಸಿಯುತ್ತಿರುವ ಬಾಂಧವ್ಯ, ಇದರ ಪರಿಣಾಮ ಹೆಚ್ಚುತ್ತಿರುವ ಕೋಮುದಳ್ಳುರಿ-ಹಿಂಸಾಚಾರ, ಉಲ್ಬಣಗೊಳ್ಳುತ್ತಿರುವ ಭಯೋತ್ಪಾದನೆ, ಮೂಲಭೂತವಾದಿಗಳ ಅಟ್ಟಹಾಸ, ಇವೆಲ್ಲವುಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ತಾಳಿ ಅಧಿಕಾರದ ಗದ್ದುಗೆಯೇ ಮುಖ್ಯ ಗುರಿ ಎಂದುಕೊಂಡಿರುವ ಆಳುವ ವರ್ಗ, ಇದೆಲ್ಲದರ ಒಟ್ಟು ಪರಿಣಾಮವನ್ನು ಭಾರತದ ಬಡ ಜನತೆ ಮೂಕವಾಗಿ ಅನುಭವಿಸಬೇಕಾಗಿದೆ.

ಭಾರತದ ಅಭಿವೃದ್ಧಿ ಕುರಿತಂತೆ ವರ್ಣರಂಜಿತವಾಗಿ ಪುಂಖಾನುಪುಂಖವಾಗಿ ಮಾತನಾಡುವ ಜನಕ್ಕೆ ಭಾರತದ ನೈಜ ಸ್ಥಿತಿಯ ಬಗ್ಗೆ ಅಜ್ಞಾನ ಆವರಿಸಿದೆ ಎಂದರೆ ತಪ್ಪಾಗಲಾರದು. ಈ ಸ್ಥಿತಿಯನ್ನು ಬೌದ್ಧಿಕ ದಿವಾಳಿತನ ಎಂದು ಕರೆಯುವುದೋ ಅಥವಾ ಬೌದ್ಧಿಕ ಬಡತನ ಎನ್ನುವುದೋ ತಿಳಿಯದಾಗಿದೆ. ಭಾರತದ ಸುಮಾರು ೧೧೦ ಕೋಟಿ ಜನಸಂಖ್ಯೆಯಲ್ಲಿ ಶೇ. ೮೦ರಷ್ಟು ಜನತೆಯ

ದಿನನಿತ್ಯದ ಆದಾಯ ೧ಡಾಲರ್‌ಗಿಂತ ಕಡಿಮೆ ಅಂದರೆ ೪೦ರೂ.ಗಿಂತ ಕಡಿಮೆ ಎಂಬ ಸಮೀಕ್ಷೆ ಜಿಟಿನ್‌ನಿಂದ ಈ ವರ್ಷ ಜೂನ್‌ನಲ್ಲಿ ಪ್ರಕಟವಾಗಿದೆ. ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿ ಉತ್ತರಪ್ರದೇಶ, ಬಿಹಾರ, ಮಧ್ಯಪ್ರದೇಶ, ಜಾರ್ಖಂಡ, ಹರಿಯಾಣ, ಹಿಮಾಚಲ ಪ್ರದೇಶಗಳಲ್ಲಿ ಶೇ. ೪೫ರಷ್ಟು ಜನರ ದಿನನಿತ್ಯದ ಆದಾಯ ೨೦ರೂಪಾಯಿ ಎಂದು ಸಮೀಕ್ಷೆ ತಿಳಿಸಿದೆ.

ಹಣದುಬ್ಬರದ ಪರಿಣಾಮ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡವರು ಹಸಿವಿನಿಂದ ಅಥವಾ ಕೇವಲ ಒಂದು ಹೊತ್ತಿನ ಊಟದಿಂದ ದಿನ ದೂಡಬೇಕಾಗಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ನಮ್ಮ ನಾಯಕರಲ್ಲಾಗಲಿ ಅಥವಾ ಆರ್ಥಿಕ ತಜ್ಞರಲ್ಲಾಗಲಿ ಯಾವುದೇ ಮಂತ್ರದಂಡವಿಲ್ಲ. ವಿಶ್ವದ ಕೋಟ್ಯಾಧಿಪತಿಗಳ ಪಟ್ಟಿಯಲ್ಲಿ ಭಾರತದ ೧೦ಮಂದಿಗೆ ಸ್ಥಾನ ಲಭಿಸಿದೆ ಎಂದು ಎದೆಯುಬ್ಬಿಸಿ ವರದಿಮಾಡುವ ನಮ್ಮ ಮಾಧ್ಯಮಗಳಿಗೆ ದೇಶದ ೪೦ ಕೋಟಿ ಜನತೆ ದಿನಕ್ಕೆ ಒಂದು ಹೊತ್ತು ಊಟ ಮಾಡಿ ಬದುಕುತ್ತಿರುವುದು ಅಪಮಾನದ ಸಂಗತಿ ಎಂಬ ಕನಿಷ್ಟ ಜ್ಞಾನ ಕೂಡ ಇಲ್ಲ.

೨೦೦೬-೦೭ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ರಾಜ್ಯಗಳಿಗೆ ೧ಲಕ್ಷ ೧೯ಸಾವಿರದ ೫೭೯ ಟನ್ ಆಹಾರ ಧಾನ್ಯವನ್ನು ವಿತರಣೆಗೆ ಬಿಡುಗಡೆ ಮಾಡಿತು. ಇದರಲ್ಲಿ ವಿತರಣೆಯಾದದ್ದು ಕೇವಲ ೧೬,೩೫೦ ಟನ್ ಮಾತ್ರ. ಉಳಿದದ್ದು ಗೋದಾಮುಗಳಲ್ಲಿ ಕೊಳೆತು ಹುಳ ಹಿಡಿದು ಇಲಿ-ಹೆಗ್ಗಣಗಳ ಪಾಲಾಯ್ತು. ಮಹಾರಾಷ್ಟ್ರ ಸರ್ಕಾರ ೨೦೦೬ರ ಅಂತ್ಯದಲ್ಲಿ ವಿದೇಶದಿಂದ ಆಮದು ಮಾಡಿಕೊಂಡಿದ್ದ ೮ ಲಕ್ಷ ಟನ್ ಗೋಧಿ ವಿತರಣೆಯಾಗದೆ ಹುಳ ಹಿಡಿದು ಸಮುದ್ರಕ್ಕೆ ಚೆಲ್ಲಲಾಯಿತು.

ಭಾರತದಲ್ಲಿ ಶೇ. ೭೦ರಷ್ಟು ಜನತೆ ಮೂಲಭೂತ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದ್ದು, ಪ್ರತಿಯೊಬ್ಬ ಪ್ರಜೆಗೆ ದಿನ ನಿತ್ಯ ೨.೪೦೦ ಕ್ಯಾಲೋರಿಗಳಷ್ಟು ಆಹಾರದ ಅಗತ್ಯವಿದ್ದು, ಶೇ. ೪೦ರಷ್ಟು ಜನತೆ ದಿನಕ್ಕೆ ೧.೬೦೦ ಕ್ಯಾಲೋರಿಗಿಂತ ಕಡಿಮೆ ಆಹಾರ ಸೇವಿಸುತ್ತಿರುವುದು ವಿಶ್ವಸಂಸ್ಥೆಯ ವರದಿಯಿಂದ ದೃಢಪಟ್ಟಿದೆ.

ವಿಶ್ವ ಆರೋಗ್ಯ ಸಂಘಟನೆ (W.H.O.) ೨೦೦೮ನೇ ವಾರ್ಷಿಕ ವರದಿ ಅನ್ವಯ ಭಾರತದಲ್ಲಿ ಪ್ರತಿವರ್ಷ ೨೪ಲಕ್ಷ ೨೦ಸಾವಿರ ಐದು ವರ್ಷದ ಒಳಗಿನ ಮಕ್ಕಳು ಅಪೌಷ್ಠಿಕತೆಯಿಂದ ಸಾವಿಗೀಡಾಗುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಶೇ. ೭೫ರಷ್ಟು ಗರ್ಭಿಣಿಯರು ಅಪೌಷ್ಠಿಕತೆಯಿಂದ ಬಳಲುತ್ತಿದ್ದಾರೆ. ಪ್ರತಿವರ್ಷ ಬಡತನ ಮತ್ತು ಆಹಾರದ ಕೊರತೆಯಿಂದ ೧ಕೋಟಿ ೨೦ಲಕ್ಷ ಮಕ್ಕಳು ಬಾಲ ಕಾರ್ಮಿಕರಾಗಿ ಪರಿವರ್ತನೆ ಹೊಂದುತ್ತಿದ್ದಾರೆ. ಪ್ರಸ್ತುತ ಭಾರತದಲ್ಲಿ ೩೦ಲಕ್ಷ ಜನತೆ ಮಾರಕ ಏಡ್ಸ್ ಕಾಯಿಲೆಯಿಂದ ಬಳಲುತ್ತಿದ್ದು, ಈ ರೋಗಿಗಳ ಸಂಖ್ಯೆ ಪ್ರತಿವರ್ಷ ಶೇ. ೧೫ರಷ್ಟು ವೃದ್ಧಿಸುತ್ತಿದೆ. ೧೦ ಕೋಟಿ ಜನ ಸಕ್ಕರೆ ಕಾಯಿಲೆಯಿಂದ ಬಳಲುತ್ತಿದ್ದರೆ, ಬದಲಾದ ಬದುಕಿನ ಕ್ರಮದಿಂದಾಗಿ ಪ್ರತಿವರ್ಷ ಶೇ. ೪೫ರಷ್ಟು ಜನ ಮಧುಮೇಹಿ ರೋಗಿಗಳಾಗಿ ಸೇರ್ಪಡೆಯಾಗುತ್ತಿದ್ದು, ಭಾರತ ಸಕ್ಕರೆ ಕಾಯಿಲೆಯ ರಾಜಧಾನಿ ಎಂಬ ಕುಖ್ಯಾತಿಗೆ ಪಾತ್ರವಾಗಿದೆ.

ದೇಶದಲ್ಲಿ ಲಿಂಗ ತಾರತಮ್ಯ ತಾರಕಕ್ಕೇರಿದ್ದು ಪ್ರತಿವರ್ಷ ಗರ್ಭಪಾತದ ಮೂಲಕ ೧ಕೋಟಿ ೧೦ಲಕ್ಷ ಹೆಣ್ಣು ಭ್ರೂಣಹತ್ಯೆ ನಡೆಯುತ್ತಿದೆ. ಆರೋಗ್ಯ ಸೇವೆಯಿಂದ ವಂಚಿತರಾಗಿ ಶೇ. ೧೫ರಷ್ಟು ಮಂದಿ ೪೦ವರ್ಷಕ್ಕೆ ಮುನ್ನವೇ ಸಾವನ್ನಪ್ಪುತ್ತಿದ್ದಾರೆ. ಭಾರತದಲ್ಲಿ ಶೇ. ೩೪ರಷ್ಟು ಜನತೆ ಮಾತ್ರ ಆರೋಗ್ಯವಂತರು. ಆರೋಗ್ಯದ ವಿಷಯದಲ್ಲಿ ವಿಶ್ವ ಮಟ್ಟದಲ್ಲಿ ಭಾರತದ ಸ್ಥಾನ ೧೧೪ನೆಯದು. ಮಾನವ ಅಭಿವೃದ್ಧಿ ಬೆಳವಣಿಗೆ ವಿಷಯದಲ್ಲಿ U.N.D.P. ವರದಿ ಪ್ರಕಾರ ೨೦೦೦ ಇಸವಿಯಲ್ಲಿ ೧೨೮ ನೇ ಸ್ಥಾನದಲ್ಲಿದ್ದ ಭಾರತ, ೨೦೦೭ನೇ ಅಂತ್ಯಕ್ಕೆ ೧೨೬ನೇ ಸ್ಥಾನಕ್ಕೇರಿದೆ.

೨೧ನೇ ಶತಮಾನದ ಆಧುನಿಕ ಭಾರತದಲ್ಲಿ ಇಂದಿಗೂ ಕೂಡ ೩೪ಲಕ್ಷ ಮಂದಿ ದಲಿತರು ಕೈಯಿಂದ ಮಲವನ್ನು ಬಳಿದು ತಲೆಯ ಮೇಲೆ ಹೊತ್ತು ಸಾಗುತ್ತಿದ್ದಾರೆ. ಮನ ಕಲಕುವ ಇಂತಹ ಸಂಗತಿಗಳು ನಮ್ಮ ಮಾಧ್ಯಮಗಳಿಗೆ ಎಂದೂ ಗಂಭೀರ ವಿಷಯವಾಗಲಿಲ್ಲ. ದೆಹಲಿಯ ನೊಯಿಡಾ ಪ್ರದೇಶದ ಮುಗ್ಧ ಬಾಲಕಿ ಅರುಷಿ ಹತ್ಯೆ ಪ್ರಕರಣದಲ್ಲಿ ಪೊಲೀಸರ ತನಿಖೆಯಿಂದ ಸತ್ಯ ಹೊರ ಬೀಳುವ ಮುನ್ನವೇ ನ್ಯಾಯಾಲಯದ ಕರ್ತವ್ಯ ನಿರ್ವಹಿಸಿ, ತೀರ್ಪು ಪ್ರಕಟಿಸಿ, ಸರ್ವೋಚ್ಚ ನ್ಯಾಯಾಲಯದಿಂದ ಛೀಮಾರಿ ಹಾಕಿಸಿಕೊಂಡ ನಮ್ಮ ಮಾಧ್ಯಮದ ಅನಭಿಷಕ್ತ ದೊರೆಗಳಿಗೆ, ಐಶ್ವರ್ಯ ರೈ ಎಂಬ ಸಿನಿಮಾ ನಟಿ ತನ್ನ ವಿವಾಹದ ದಿನ ಅಂಗೈಗೆ ಬಳಿದುಕೊಂಡ ಮೆಹಂದಿಯಿಂದ ಹಿಡಿದು, ಆಕೆ ಧರಿಸಿದ್ದ ಉಡುಪಿನ ಕುರಿತು ಬಣ್ಣ-ಬಣ್ಣದ ವರದಿ ಒಪ್ಪಿಸುವುದು ಮುಖ್ಯವಾಯಿತೆ ಹೊರತು ಈ ನಾಡಿನ ಅಸಂಖ್ಯಾತ ಜನತೆಯ ದುಃಖ ದುಮ್ಮಾನ, ಬಡತನ, ಹಸಿವು, ರೈತರ ಸಮಸ್ಯೆ, ಶಿಕ್ಷಣ ಹಾಗೂ ಆರೋಗ್ಯದಿಂದ ವಂಚಿತರಾದ ನತದೃಷ್ಟರ ಬದುಕು ಗಣ್ಯವಾಗಲಿಲ್ಲ. ಈ ವಿಷಯದಲ್ಲಿ ಮುದ್ರಣ ಮಾಧ್ಯಮಗಳು ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸುತ್ತಿರುವುದನ್ನು ನಾನು ಅಲ್ಲಗಳೆಯಲಾರೆ. ಒಂದು ರೀತಿ ಸದಾ ವಿಸ್ಮೃತಿ ಮತ್ತು ಭ್ರಮೆಯಲ್ಲಿ ತೊಳಲಾಡುವ ಭಾರತೀಯರಿಗೆ ಈಗ ಧರ್ಮ, ಕ್ರಿಕೆಟ್, ಸಿನಿಮಾ ಇವುಗಳೇ ಅಫೀಮುಗಳಾಗಿವೆ.

ಹಣದುಬ್ಬರದ ಪರಿಣಾಮ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡವರು ಹಸಿವಿನಿಂದ ಅಥವಾ ಕೇವಲ ಒಂದು ಹೊತ್ತಿನ ಊಟದಿಂದ ದಿನ ದೂಡಬೇಕಾಗಿದೆ. ಈ ಸಮಸ್ಯೆಗಳ ಪರಿಹಾರಕ್ಕೆ ನಮ್ಮ ನಾಯಕರಲ್ಲಾಗಲಿ ಅಥವಾ ಆರ್ಥಿಕ ತಜ್ಞರಲ್ಲಾಗಲಿ ಯಾವುದೇ ಮಂತ್ರದಂಡವಿಲ್ಲ. ವಿಶ್ವದ ಕೋಟ್ಯಾಧಿಪತಿಗಳ ಪಟ್ಟಿಯಲ್ಲಿ ಭಾರತದ ೧೦ಮಂದಿಗೆ ಸ್ಥಾನ ಲಭಿಸಿದೆ ಎಂದು ಎದೆಯುಬ್ಬಿಸಿ ವರದಿಮಾಡುವ ನಮ್ಮ ಮಾಧ್ಯಮಗಳಿಗೆ ದೇಶದ ೪೦ ಕೋಟಿ ಜನಕ್ಕೆ ದಿನಕ್ಕೆ ಒಂದು ಹೊತ್ತು ಊಟ ಮಾಡಿ ಬದುಕುತ್ತಿರುವುದು ಅಪಮಾನದ ಸಂಗತಿ ಎಂಬ ಕನಿಷ್ಟ ಜ್ಞಾನ ಕೂಡ ಇಲ್ಲ.೨೦೦೬-೦೭ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ರಾಜ್ಯಗಳಿಗೆ ೧ಲಕ್ಷ ೧೯ಸಾವಿರದ ೫೭೯ ಟನ್ ಆಹಾರ ಧಾನ್ಯವನ್ನು ವಿತರಣೆಗೆ ಬಿಡುಗಡೆ ಮಾಡಿತು. ಇದರಲ್ಲಿ ವಿತರಣೆಯಾದದ್ದು ಕೇವಲ ೧೬,೩೫೦ ಟನ್ ಮಾತ್ರ. ಉಳಿದದ್ದು ಗೋಗಾಮುಗಳಲ್ಲಿ ಕೊಳೆತು ಹುಳ ಹಿಡಿದು ಇಲಿ-ಹೆಗ್ಗಣಗಳ ಪಾಲಾಯ್ತು.

ಈ ನಾಡಿನಲ್ಲಿ ಬೌದ್ಧಿಕ ಪ್ರಜ್ಞೆಯನ್ನು ವಿಸ್ತರಿಸುವ ಶಿಕ್ಷಣ ಕೂಡ ಈಗ ವಾಣಿಜ್ಯವಾಗಿದೆ. ಮಾಹಿತಿ ತಂತ್ರಜ್ಞಾನದಿಂದ ಸುಧಾರಿಸಿದ್ದ ನಿರುದ್ಯೋಗ ಸಮಸ್ಯೆ ಮತ್ತೆ ತಲೆ ಎತ್ತಿ ನಿಂತಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ಡಾಲರ್ ಮೌಲ್ಯದ ಕುಸಿತದಿಂದಾಗಿ ಭಾರತದ ಮಾಹಿತಿ ತಂತ್ರಜ್ಞಾನ, ಹೊರಗುತ್ತಿಗೆ ಸೇವೆ, ಹಣಕಾಸು-ಬ್ಯಾಂಕಿಂಗ್, ಜೀವವಿಮೆ ಇತ್ಯಾದಿ ವಲಯಗಳಲ್ಲಿ ಶೇ. ೩೮ರಷ್ಟು ಉದ್ಯೋಗಕ್ಕೆ ಕತ್ತರಿಬಿದ್ದಿದೆ. ಮಾಹಿತಿ ತಂತ್ರಜ್ಞಾನ, ಕ್ಷೇತ್ರವೊಂದರಲ್ಲೇ ದೇಶದಲ್ಲಿ ೨೦ಲಕ್ಷ ನಿರುದ್ಯೋಗಿ ಸಾಫ್ಟ್‌ವೇರ್ ಇಂಜನಿಯರ್‌ಗಳಿದ್ದಾರೆ. ಭಾರತದಲ್ಲಿ ವರ್ಷಕ್ಕೆ ೪ಲಕ್ಷ ೯೫ಸಾವಿರ ಇಂಜನಿಯರ್‌ಗಳು ಹೊರ ಬೀಳುತ್ತಿದ್ದು, ಇವರಲ್ಲಿ ತಾಂತ್ರಿಕ ಕೌಶಲ್ಯವಿರುವುದು ಕೇವಲ ಶೇ. ೧೦ ಮಂದಿಗೆ ಮಾತ್ರ. ಎಲ್ಲೆಡೆ ನಾಯಿಕೊಡೆಗಳಂತೆ ತಲೆ ಎತ್ತುತ್ತಿರುವ ಇಂಜನಿಯರಿಂಗ್ ಕಾಲೇಜುಗಳಲ್ಲಿ ಉತ್ತಮ ಗುಣಮಟ್ಟದ ಬೋಧನೆ ಇಲ್ಲದಿರುವುದು ಈ ಸ್ಥಿತಿಗೆ ಕಾರಣವಾಗಿದೆ.

ದೇಶದ ೩೦೦ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳಿಂದ ಪ್ರತಿವರ್ಷ ೧೭ಲಕ್ಷ ಪದವೀಧರರು ಹೊರ ಹೊಮ್ಮುತ್ತಿದ್ದಾರೆ. ಇವರಿಗೆ ಉದ್ಯೋಗಕ್ಕೆ ಅರ್ಹರಾಗುವಂತೆ ತರಬೇತಿ ನೀಡುವ ಸಂಸ್ಥೆಗಳದ್ದೇ ದೊಡ್ಡ ಕೊರತೆಯಾಗಿದೆ. ದೇಶದಲ್ಲಿಂದು ಪ್ರತಿಷ್ಠಿತ ಐ.ಐ.ಎಂ. ಹಾಗೂ ಐ.ಐ.ಟಿ ತರಬೇತಿ ಸಂಸ್ಥೆಗಳಿದ್ದು, ಇವುಗಳು ಉಳ್ಳವರ ಮಕ್ಕಳಿಗೆ ಮಾತ್ರ ಸಿಮೀತವಾಗಿವೆ. ಇವುಗಳ ವಾರ್ಷಿಕ ಶುಲ್ಕ ೨ರಿಂದ ೭ಲಕ್ಷ ರೂ. ಇದ್ದು, ಬಡ ಹಾಗೂ ಮಧ್ಯಮ ವರ್ಗದ ಪ್ರತಿಭಾವಂತ ಮಕ್ಕಳು ಇಂತಹ ಸಂಸ್ಥೆಗಳ ಶಿಕ್ಷಣ ಮತ್ತು ತರಬೇತಿಯಿಂದ ವಂಚಿತರಾಗಿದ್ದಾರೆ. ಕಳೆದ ಎಂಟು ವರ್ಷಗಳ ಅವಧಿಯಲ್ಲಿ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರಗಳ ಲಂಗು-ಲಗಾಮು ಇಲ್ಲದ ಕಾರಣ ಶಿಕ್ಷಣದ ವೆಚ್ಚ ೧೬೦ ಪಟ್ಟು ದುಬಾರಿಯಾಗಿದೆ. ಶಿಕ್ಷಣದ ಗುಣಮಟ್ಟ ೨೦೦೧-೦೨ರಲ್ಲಿ ಶೇ. ೬೬ರಷ್ಟು ಇದ್ದದ್ದು, ೨೦೦೭ರ ವೇಳೆಗೆ ಶೇ. ೩೫ಕ್ಕೆ ಕುಸಿದಿದೆ.

ವಿಜ್ಞಾನ ಮತ್ತು ಸಂಶೋಧನೆಗಾಗಿ ನಮ್ಮ ಕೇಂದ್ರ ಸರ್ಕಾರ ಖರ್ಚು ಮಾಡುತ್ತಿರುವ ವಾರ್ಷಿಕ ವೆಚ್ಚ ೧೦೬ ಕೋಟಿ. ಇದರಿಂದಾಗಿ ಸಂಶೋಧಕರಾಗಿ ರೂಪುಗೊಳ್ಳುತ್ತಿರುವವರ ಸಂಖ್ಯೆ ೧ಲಕ್ಷದ ೧೦ಸಾವಿರ ಮಾತ್ರ. ಅಮೇರಿಕಾದ ೨೯ಕೋಟಿ ಜನತೆಗೆ ೧೩ಲಕ್ಷ ವಿಜ್ಞಾನಿಗಳು ಮತ್ತು ಸಂಶೋಧಕರಿದ್ದಾರೆ. ಭಾರತದ ೧೧೦ ಕೋಟಿ ಜನತೆಗೆ ೧ಲಕ್ಷ ೧೦ಸಾವಿರ ಮಾತ್ರ.

೧೧ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ ೭೧ ಲಕ್ಷ ಕೋಟಿ ಹಣ ವ್ಯಯ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಇಂದಿಗೂ ಈ ದೇಶದಲ್ಲಿ ೧ಕೋಟಿ ೩೬ ಲಕ್ಷ ಮಕ್ಕಳು ಪ್ರಾಥಮಿಕ ಶಿಕ್ಷಣದಿಂದ ಕೂಡ ದೂರ

ಉಳಿದಿದ್ದಾರೆ. ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ಮಕ್ಕಳಲ್ಲಿ ೮ನೇ ತರಗತಿ ವೇಳೆಗೆ ಶೇ. ೬೦ರಷ್ಟು ಮಕ್ಕಳು ಶಾಲೆಗಳಿಂದ ಹೊರಗುಳಿಯುತ್ತಿದ್ದಾರೆ. ಶೇ. ೧೧ರಷ್ಟು ಮಂದಿಗೆ ಮಾತ್ರ ಉನ್ನತ ಶಿಕ್ಷಣ ಲಭ್ಯವಾಗುತ್ತಿದ್ದು, ಶೇ. ೩ರಷ್ಟು ಮಂದಿಗೆ ತಾಂತ್ರಿಕ ಉನ್ನತ ಶಿಕ್ಷಣ ಲಭ್ಯವಾಗುತ್ತಿದೆ.

ದೇಶದ ಅಭಿವೃದ್ಧಿ ಬಗ್ಗೆ ಬಾಜಾ ಬಜೆಂತ್ರಿ ಬಾರಿಸುವ ನಮ್ಮ ನಾಯಕರುಗಳಿಗೆ ೧೫ ರಾಜ್ಯಗಳ ೭೫ ಸಾವಿರ ಶಾಲೆಗಳಲ್ಲಿ ಓರ್ವನೇ ಶಿಕ್ಷಕನಿದ್ದರೆ, ೭ರಾಜ್ಯಗಳ ೬೬೪೭ ಶಾಲೆಗಳಲ್ಲಿ ಶಿಕ್ಷಕರೇ ಇಲ್ಲ ಎಂಬ ಆತಂಕಕಾರಿ ವಿಷಯ ಗೊತ್ತಿಲ್ಲ. ಹೀಗೆ ಮೈ ತುಂಬಾ ಮಾಯದ ಕಲೆಗಳಂತೆ, ಸಮಸ್ಯೆಗಳನ್ನು ತುಂಬಿಕೊಂಡಿರುವ ಭಾರತಕ್ಕೆ, ಸಧ್ಯ ಚಾಲ್ತಿಯಲ್ಲಿರುವ ಏಕರೂಪದ, ಹೊಂದಾಣಿಕೆ ಗುಣವಿಲ್ಲದ ಜಾಗತೀಕರಣ ಪ್ರಕ್ರಿಯೆ ಬೇಕೆ ಬೇಡವೇ ಎಂಬ ಪ್ರಶ್ನೆ ನಮ್ಮ ಮುಂದಿದೆ. ಜಾಗತೀಕರಣವನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುವ ಜಾಣ್ಮೆ, ಕೌಶಲ್ಯ ನಮಗಿರಬೇಕು. ಈ ವಿಷಯದಲ್ಲಿ ಚೀನಾ ಜಗತ್ತಿಗೆ ಮಾದರಿಯಾಗಿದೆ. ಇದುವರೆಗೆ ಯಾವುದೇ ವಿಷಯದಲ್ಲಿ ಪಾಶ್ಚಾತ್ಯ ದೇಶಗಳತ್ತ ತಿರುಗಿ ನೋಡುತ್ತಿದ್ದ ಜಗತ್ತಿನ ಕಣ್ಣು ಈಗ ಚೀನಾದತ್ತ ತಿರುಗಿದೆ.

ಇದಕ್ಕೆ ಕಾರಣ ಅಲ್ಲಿನ ಆಳುವವರ ದೂರದರ್ಶಿತ್ವ, ತಮ್ಮ ನಾಡು-ನುಡಿ-ಸಂಸ್ಕೃತಿ ಬಗ್ಗೆ ಇರುವ ಸ್ವಾಭಿಮಾನ, ಏನಾದರೂ ಸರಿ ಸಾಧಿಸಬಲ್ಲೆವು ಎಂಬ ಛಲ. ಜೊತೆಗೆ ನಾಯಕರ ಕನಸಿಗೆ ಕೈಗೂಡಿಸುವ ಸಾಮಾನ್ಯ ಪ್ರಜೆ ಅವರುಗಳ ದೇಶಾಭಿಮಾನ ಇವೆಲ್ಲವೂ ಕಾರಣವಾಗಿದೆ. ಒಲಂಪಿಕ್ಸ್ ಕ್ರೀಡೆಯೊಂದೇ ಚೀನಾದ ದೈತ್ಯ ಶಕ್ತಿಗೆ ಸಾಕ್ಷಿಯಾಯಿತು. ಇಂದು ಈ ಜಗತ್ತಿನಲ್ಲಿ ಮಾನವ ನಿರ್ಮಿತ ಅದ್ಭುತಗಳು ಇರುವುದಾದರೆ ಅವು ಚೀನಾದಲ್ಲಿ ಮಾತ್ರ. ನೂರಾರು ವರ್ಷಗಳ ಹಿಂದೆಯೇ ಸಾವಿರಾರು ಮೈಲಿ ಉದ್ದದ ಬೃಹತ್ ಗೋಡೆ ನಿರ್ಮಿಸಿ, ಮನುಕುಲದ ಇತಿಹಾಸದಲ್ಲಿ ದಾಖಲೆ ನಿರ್ಮಿಸಿದ ಚೀನಿಯರು, ಈ ೨೦ ಮತ್ತು ೨೧ನೇ ಶತಮಾನದಲ್ಲೂ ಕೂಡ ಬೃಹತ್ ಅಣೆಕಟ್ಟು, ರಸ್ತೆ, ಸಮುದ್ರ ಸೇತುವೆ, ಜಗತ್ತಿನ ಅತಿ ಎತ್ತರ ಪ್ರದೇಶದಲ್ಲಿ ರೈಲು ಮಾರ್ಗ, ಕ್ರೀಡಾಂಗಣ ನಿರ್ಮಿಸಿ ದಾಖಲೆ ಸ್ಥಾಪಿಸಿದ್ದಾರೆ.

ಮಾನವ ಸಂಪನ್ಮೂಲದ ಸದ್ಬಳಕೆ, ಭ್ರಷ್ಟಾಚಾರ ರಹಿತ ಸರ್ಕಾರ ಮತ್ತು ಸಮಾಜ, ಪಾರದರ್ಶಕ ಹಾಗೂ ಕಟ್ಟುನಿಟ್ಟಿನ ಆಡಳಿತಕ್ಕೆ ಒಳಪಟ್ಟು ಚೀನಿ ಜನತೆಯ ಶಿಸ್ತು, ಸಂಯಮ ಇವೆಲ್ಲವೂ ಜಾಗತೀಕರಣವನ್ನು ಪಳಗಿಸುವುದರ ಮೂಲಕ ಅದರ ಮೇಲೆ ಸವಾರಿ ಮಾಡುವ ಸ್ಥಿತಿ ತಲುಪಿದ್ದಾರೆ. ಚೀನಾದಲ್ಲಿ ಪ್ರತಿ ವರ್ಷ ೧೮ಸಾವಿರ ಮಂದಿ ಅಧಿಕಾರಿ ಹಾಗೂ ಸರ್ಕಾರಿ ಸಿಬ್ಬಂದಿ ಭ್ರಷ್ಟಾಚಾರದ ಆಪಾದನೆ ಮೇಲೆ ಗಲ್ಲುಗಂಬ ಏರುತ್ತಿದ್ದಾರೆ ಎಂದರೆ, ಇದನ್ನು ಭಾರತದಲ್ಲಿ ಕನಸಿನಲ್ಲೂ ಊಹಿಸಲು ಅಸಾಧ್ಯ.

ಜನಸಂಖ್ಯೆಗೂ, ಬಡತನಕ್ಕೂ ಸಂಬಂಧವಿಲ್ಲ ಎಂಬುದನ್ನು ಚೀನಾ ದೇಶ ದಾಖಲೆ ಸಹಿತ ತೋರಿಸಿಕೊಟ್ಟಿದೆ. ದೇಶದ ಬೃಹತ್ ಮಾನವ ಸಂಪನ್ಮೂಲವನ್ನು ಶಿಕ್ಷಣ, ಆರೋಗ್ಯ ನೀಡಿ ಸದುಪಯೋಗ ಮಾಡಿಕೊಂಡರೆ ಭಾರತದ ಪಾಲಿಗೂ ಜಾಗತೀಕರಣ ಲಾಭದಾಯಕವಾಗಬಲ್ಲುದು. ಸಧ್ಯದ ಸ್ಥಿತಿಯಲ್ಲಿ ಭಾರತ ಎಲ್ಲಾ ರಂಗಗಳನ್ನು ಜಾಗತೀಕರಣಕ್ಕೆ ಎದುರಾಗಿ ಸಜ್ಜುಗೊಳಿಸುವ ತನಕ ಈ ಪ್ರಕ್ರಿಯೆಯಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕಾಗಿದೆ. ಯುವ ಶಕ್ತಿಯ ಸದ್ಬಳಕೆ, ಪ್ರಾಕೃತಿಕ ಸಂಪತ್ತಿನ ಮಿತಬಳಕೆ, ಆಡಳಿತದಲ್ಲಿ ಶಿಸ್ತು, ಪಾರದರ್ಶಕತೆ, ರಾಜಕೀಯ ಸ್ಥಿರತೆ, ಧರ್ಮಾತೀತ, ಜಾತ್ಯಾತೀತ ಮನೋಭಾವ ಸಧ್ಯಕ್ಕೆ ಭಾರತಕ್ಕೆ ಬೇಕಾಗಿರುವ ಅತ್ಯವಶ್ಯ ಗುಣಗಳು. ಇವುಗಳಿಲ್ಲದೆ ಜಾಗತೀಕರಣ ಪ್ರಕ್ರಿಯೆಯನ್ನು ಬಾಗಿಲು ತೆರೆದು ಸ್ವಾಗತಿಸಿದರೆ, ಇದೇ ವಾಸ್ತವಿಕ ದುರಂತದ ಅಧ್ಯಾಯವನ್ನು ನಮ್ಮ ಮುಂದಿನ ಜನಾಂಗ ಕೂಡ ನೋಡಬೇಕಾಗುತ್ತದೆ. □

ಚಿತೆ



ಜೀವನ,
ಒಂದು ಕೆರೆಯಾದರೆ
ನೀನದರ ದಡ;
ಹರಿವ ನದಿಯಾದರೆ
ನೀನದರ ತೀರ;
ಉಕ್ಕುವ ಕಡಲಾದರೆ
ನೀನದರ ಕಿನಾರ;
ಮೇರು ಪರ್ವತವಾದರೆ
ನೀನದರ ಶಿಖರ;
ನಿನ್ನೊಳು
ಶಾಶ್ವತ
ಮನುಕುಲದ
ಸಾಕ್ಷಾತ್ಕಾರ!

○ ನಾ ದಿವಾಕರ್

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಚೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಚೇರಿಗೆ ಲಿಖಿತ ದೂರು ನೀಡಿ ಅದರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨-೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಆದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಕರಗುತ್ತಿರುವ ನಾಗಬನಗಳು ಮತ್ತು ಚಿಗುರುತ್ತಿರುವ ವೈದಿಕ ಉದ್ಯಮ

ವೈವಿಧ್ಯಮಯ ಆಚರಣಾ ಪರಂಪರೆಗಳಿಂದ ಕೂಡಿರುವ ಕರಾವಳಿಯ ವಿಶಿಷ್ಟ ಆರಾಧನಾ ಕ್ರಮಗಳಲ್ಲಿ ನಾಗಾರಾಧನೆ ಕೂಡಾ ಒಂದು. ಜಗತ್ತಿನಾದ್ಯಂತ ನಾಗ, ನಾಗಸಂಕೇತಗಳ ಆರಾಧನೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ ಎನ್ನಲಾಗಿದೆ. ಪ್ರೊ. ಬಾಲಾಜಿ ಮುಂಡ್ಕೂರುರವರ ಅಭಿಪ್ರಾಯದಂತೆ, 'ನಿಸ್ಸಂಶಯವಾಗಿಯೂ ಸರ್ಪವು ಆದಿಮಾನವನಿಂದ ದೈವೀಕರಿಸಲ್ಪಟ್ಟ ಅತಿ ಮೊದಲಿನ ಪ್ರಾಣಿಯಾಗಿತ್ತು'. ವಿಶೇಷವಾಗಿ ಕರಾವಳಿ ಪರಿಸರದಲ್ಲಿ ಈ ಸಂಪ್ರದಾಯದ ಅತಿಸಾಮಾನ್ಯವಾದ ಅಭಿವ್ಯಕ್ತಿಯೆಂದರೆ ನಾಗನ ಕಲ್ಲುಗಳು ಅಥವಾ ಕಲ್ಲಿನ ಹಾಳೆಗಳು. ಈ ಕಲ್ಲುಗಳಲ್ಲಿ ಹೆಚ್ಚಾಗಿ ಎರಡು ನಾಗರಹಾವುಗಳನ್ನು ಗಂಡು ಮತ್ತು ಹೆಣ್ಣು- ಕೆತ್ತಿ ತೋರಿಸುತ್ತಾರೆ. ಕೆಲವೊಮ್ಮೆ ಮರಿನಾಗರಗಳನ್ನು ಅಥವಾ ಮೊಟ್ಟೆ ಮರಿಗಳನ್ನು ಪುಟ್ಟ ಅರ್ಥಗೋಳಗಳನ್ನು ತೋರ್ಪಡಿಸುತ್ತಾರೆ.

ಮುಖ್ಯವಾಗಿ ಇವು ಸಂತಾನಾಪೇಕ್ಷಿತ ವ್ಯಕ್ತಿಗಳು ನೀಡಿದ ಹರಕೆಯ ವಸ್ತುಗಳು.ಸಂತಾನ ಮತ್ತು ಫಲದೇವತೆಯಾಗಿ, ರೋಗಭಯ ನಿವಾರಕ ಅಧಿದೇವತೆಯಾಗಿ ನಮ್ಮ ಜನಪದರ ಪರಿಭಾಷೆಯಂತೆ ಸತ್ಯದೇವತೆಯಾಗಿ ಪರಿಭಾವಿತವಾದ ನಾಗ, ಬಹುಪಾಲು ವಿದ್ವಾಂಸರ ಅಭಿಪ್ರಾಯದಂತೆ ಆರ್ಯೇತರ ಆಚರಣಾ ಪರಂಪರೆಗೆ ಸೇರಿದುದಾಗಿದೆ.ಸರ್ಪನಿಗೆ ಸಂಬಂಧಿಸಿದಂತೆ ಅಥರ್ವವೇದ ಮತ್ತು ಋಗ್ವೇದಗಳಲ್ಲಿ ಸಿಗುವ ಮಾಹಿತಿಗಳು ಇದಕ್ಕೆ ಪುಷ್ಟಿ ನೀಡುತ್ತವೆ. ಆರ್ಯರು ಹಾಗೂ ಸರ್ಪಾರಾಧಕರಾಗಿ ಅವರ ಅಧೀನದಲ್ಲಿದ್ದವರ ವಿರಸ ಸಂಬಂಧಗಳು ಸರ್ಪರಾಕ್ಷಸನಾದ ವೃತ್ರನ ವಿನಾಶಕನಾದ ಇಂದ್ರನನ್ನು ಅರ್ಚಿಸುವ ಉಲ್ಲೇಖಗಳಿಂದ ಪ್ರತೀಕ ರೂಪವಾಗಿ ತೋರಿಸಲ್ಪಟ್ಟಿದೆ.

ಅಥರ್ವವೇದದ ಮಂತ್ರವೊಂದು ಹೀಗೆನ್ನುತ್ತದೆ – "ಓ ಸರ್ಪವೇ ನಿನ್ನ ಮೊತ್ತ ಮೊದಲ ಪೂರ್ವಿಕರನ್ನು ಇಂದ್ರನು ಕೊಂದನು. ಅವರ ಧ್ವಂಸದ ಬಳಿಕ ನಿಜವಾಗಿ ಅವರ ಪ್ರಾಬಲ್ಯವೇನಿರಬಹುದು!' ಹಾಗೂ 'ಪ್ರಥಮ ರಥ ಇಂದ್ರನಿಗೆ ಸೇರಿದ್ದು, ಎರಡನೆಯದು ದೇವತೆಗಳಿಗೆ, ಮೂರನೆಯದು ನಿಜವಾಗಿ ವರುಣನಿಗೆ. ಸರ್ಪದ ರಥ ಕೊನೆಯದು. ಅದು ಸ್ತಂಭ. ಅದು ಸ್ತಂಭವೊಂದಕ್ಕೆ ಸಂಘಟಿಸುವುದು ಹಾಗೂ ದುಃಖಕ್ಕೆ ಒಳಗಾಗುವುದು. (ಪ್ರೊ. ಬಾಲಾಜಿ ಮುಂಡ್ಕೂರು ; ೧೯೭೭). ಡಾ. ರಾಮವಿಲಾಸ್ ಶರ್ಮಾರವರ 'ಭಾರತೀಯ ಭಾಷಾ ಪರಿವಾರ್' ಎಂಬ ಕೃತಿಯಲ್ಲಿ ಉಲ್ಲೇಖವಾದಂತೆ, "ಋಗ್ವೇದದಲ್ಲಿ ವೃತ್ರ ಒಬ್ಬ ನಾಗ. ಅವನ ಉಲ್ಲೇಖವು ಏಕವಚನ ಮತ್ತು ಬಹುವಚನ– ಎರಡೂ ಬಗೆಯಲ್ಲಿ ಬರುತ್ತದೆ. ಜಲದೊಂದಿಗೆ ಅದರ ವಿಶೇಷ ಸಂಬಂಧವಿದೆ. ಇಂದ್ರ ಅವನನ್ನು ವಧಿಸುತ್ತಾನೆ ಮತ್ತು ಪೃಥ್ವಿ, ಆಕಾಶ, ನದಿ ಹಾಗೂ ಮೋಡಗಳ ನೀರನ್ನು ಮುಕ್ತಗೊಳಿಸುತ್ತಾನೆ".

ಅದೇ ಕೃತಿಯಲ್ಲಿ ಮುಂದುವರಿದ ಭಾಗದಲ್ಲಿ ಬರುವಂತೆ, 'ವೃತ್ರ ಶಬ್ದವನ್ನು ಸರ್ಪದ ಪರ್ಯಾಯ ವಾಚಿಯೆಂದು ತಿಳಿಯಬೇಕು. ಇದು ಒಂದು ಮಾನವ ಗಣದ ಹೆಸರು ಅದರ ಪುರಗಳನ್ನು ಇಂದ್ರನು ಧ್ವಂಸ ಮಾಡಿದನು'. ಇದರಿಂದಾಗಿ ವಿದ್ವಾಂಸರು ವೃತ್ರನು ಪ್ರಾಕ್‌ವೈದಿಕ ಆರ್ಯೇತರ ಜನಸಮುದಾಯದೊಂದಿಗೆ ಸಂಬಂಧಿಸಿದಂತೆ ಕಲ್ಪಿಸಿದ್ದಾರೆ (ಡಾ. ಈ. ಭಾಸ್ಕರ ಮಯ್ಯ ; ೨೦೦೨). ಇದೇ ರೀತಿ ಅಭಿಪ್ರಾಯ ವ್ಯಕ್ತಪಡಿಸುವ ಮಂಜೇಶ್ವರ ಗೋವಿಂದ ಪೈಗಳು, 'ಕರಾವಳಿಯ ನಾಗಾರಾಧನೆ ಮೂಲತಃ ಆರ್ಯೇತರ ವಿಧಿಯಾಗಿರಬೇಕು. ಇಲ್ಲಿನ ಮತಾಚಾರಗಳಲ್ಲಿ ನಾಗನು ಆರಾಧ್ಯ ದೈವವಾಗಿದ್ದು ಅಥವಾ ಇಲ್ಲಿನ ಜನಾಂಗಗಳ ಕುಲಲಾಂಛನವಾಗಿದ್ದು, ಮನ್ನಣೆಯನ್ನು ಪಡೆದಿದ್ದಾಗ ಶಿಷ್ಟ ಧರ್ಮಗಳು ಇಲ್ಲಿ ಪ್ರವೇಶಿಸಿದುವು.' ಎನ್ನುತ್ತಾರೆ (ಗೋ.ಪೈ ; ೧೯೮೮). ವರ್ತಮಾನ ಕಾಲದಲ್ಲಿ ನಾಗಾರಾಧನೆಯ ಪರ್ಯಾಯ ರೂಪಗಳ ನಡುವೆಯೂ ಬಹುಮಟ್ಟಿಗೆ ಅದು ವೈದಿಕರ ಹಿಡಿತದಲ್ಲಿರುವುದು ಬಹಳ ಸ್ಪಷ್ಟ.

ಕರಾವಳಿಯಾದ್ಯಂತ ನಾಗನ ಹೆಸರಿನ ಶಿಲೆಗಳು ಅಶ್ವತ್ಥ ಮರದ ಬುಡದಲ್ಲಿ ಪ್ರತಿಷ್ಠಾಪಿತವಾಗಿ ಆಚರಣೆಗೊಳ್ಳುವ ಜೊತೆಗೆ ನಾಗನ ಹೆಸರಿನಲ್ಲಿಯೇ ಇರುವ ನಾಗಬನ, ದೇವರಕಾಡು. ಪುಣ್ಯವನ, ಬನದ್ದೇವರ ಬಲ್ಲಿ, ನಾಗರಬಲ್ಲಿಗಳೆಂಬ ತಾಣಗಳಲ್ಲಿ ನಾಗಾರಾಧನೆಯ ನಾಗ ಸಂಕೇತಗಳು ವಿಪುಲವಾಗಿ ಕಾಣಸಿಗುತ್ತವೆ. ಬಯಲುಸೀಮೆಯ ಜನ ನಾಗರಪಂಚಮಿಯಂದು ನಾಗನಿಗೆ ಹಾಲೆರೆದು, ಉಳಿದಂತೆ ನಾಗರ ಹಾವು ಕಂಡರೆ ಓಡಿಸಿಕೊಂಡು ಹೋಗಿ ಹುಡುಕಿಕೊಲ್ಲುವ ಪರಿಪಾಠ ಹೊಂದಿದ್ದರೆ, ಕರಾವಳಿಯ ಜನ ಕಲ್ಲಿನ ನಾಗನೊಂದಿಗೆ ದಿಟದ ನಾಗನನ್ನೂ ದೇವರೆಂದೇ ಭಾವಿಸುತ್ತಾರೆ.

ಜೊತೆಗೆ ನಾಗನ ಆವಾಸಸ್ಥಾನವಾದ ನಾಗನಬಲ್ಲೆಗೆ 'ಕತ್ತಿ' ಹಾಕಬಾರದೆಂಬ ನಿಷೇಧವನ್ನೂ ಹೇರಿಕೊಂಡು ಪಾಲಿಸುತ್ತಾರಲ್ಲದೆ,'ನಾಗನನಡೆ' ಕಲ್ಪನೆಯಡೆಗೆ ಹಾವಿನ ಮುಕ್ತಸಂಚಾರಕ್ಕೆ ಸಂಚಕಾರವಾಗದಂತೆ ಅತಿಕ್ರಮಣ ಮಾಡದೆ ಮುಕ್ತ ವಲಯಗಳನ್ನಾಗಿ ಬಿಡುತ್ತಾರೆ. 'ನಾಗನ ಕಲ್ಲಿಗೆ ನಾಯಿ ಉಚ್ಚೆ ಹೊಯ್ಯುವುದು ಇಪ್ಪುದೆ' (ನಾಗನ ಕಲ್ಲಿಗೆ ನಾಯಿ ಮೂತ್ರ ಮಾಡುವುದು ಸಹಜ) ಎಂಬ ವಾಗ್ರೂಢಿಯಂತೆ ಆಲಯ ಸಂಸ್ಕೃತಿಯಿಂದ ಹೊರತಾಗಿ ನಿಸರ್ಗದಡಿಗೆ ಮಣ್ಣಿನ ನೇರ ಸಂಪರ್ಕದೊಂದಿಗೆ ಸಹಜಬನಗಳಲ್ಲಿ ಆರಾಧಿಸಲ್ಪಡುವ ನಾಗ ಕೇವಲ ನಾಗದೇವತೆಯಲ್ಲ. ಬಹುಮಟ್ಟಿನ ಭೂತಗಳೂ, ಸ್ವಾಮಿ ಎಂಬ ಹೆಸರಿನಿಂದ ಆರಾಧಿಸಲ್ಪಡುವ ದೈವಗಳೂ ನಾಗಪ್ರಭೇದಗಳಾಗಿ ಕಂಡುಬರುತ್ತವೆ.

ಬಹುಮಟ್ಟಿನ ಈ ಭೂತರಾಧನೆಗಳೂ ಆಲಯ ಸಂಸ್ಕೃತಿಯಿಂದ ಹೊರತಾದವುಗಳು. ಸ್ವಾಮಿ ಮನೆ, ದೈವದ ಮನೆಗಳೆಂದು ಕರೆಸಿಕೊಳ್ಳುವ ಆರಾಧನಾ ಸ್ಥಳಗಳು ತಳಸಂಸ್ಕೃತಿಯ ಸಂಬಂಧವನ್ನು ಸೂಚಿಸುವಂತೆ ಸ್ಥಾನ ಎಂಬ ಪರಿಭಾಷೆಗಿಂತ ಮನೆಯೆನ್ನುವ ಪರಿಕಲ್ಪನೆಯ ಜೊತೆಗೆ ಬೆಸೆದುಕೊಂಡಿರುವುದು ಈ ದಿಸೆಯಲ್ಲಿ ಗಮನಿಸಬೇಕಾದ ಸಂಗತಿ. ಸ್ವಾಮಿ ಮನೆಗಳಲ್ಲಿ ಒಳಗಡೆಯೇ ದೊಡ್ಡ ಗಾತ್ರದ ಹುತ್ತಗಳಿರುವುದು ಸಾಮಾನ್ಯವಾದರೆ, ದೈವದ ಮನೆಯ ಒಳಗೆ ಅಥವಾ ಹೊಂದಿಕೊಂಡ ಹಾಗೆ ಹುತ್ತ ಮತ್ತು ಬಲ್ಲೆಗಳಿರುವುದು ಸರ್ವೇ ಸಾಮಾನ್ಯ. ಹೀಗಾಗಿ ಭೂತರಾಧನೆ ಮತ್ತು ಸ್ವಾಮಿ ಆರಾಧನೆಗಳೂ ಕೂಡಾ ನಾಗಾರಾಧನೆಯ ವಿಸ್ತೃತ ರೂಪಗಳೇ ಆಗುತ್ತವೆ. ಇದಲ್ಲದೇ "ದಕ್ಷಿಣಕನ್ನಡದ ಅನೇಕ ಶಕ್ತಿ ಕ್ಷೇತ್ರಗಳಲ್ಲಿ ನಾಗ ಮತ್ತು ದುರ್ಗಾ ಅಭೇದ್ಯರಾಗಿ ಆರಾಧನೆಗೊಳ್ಳುವ ಕುತೂಹಲವನ್ನು ಗಮನಿಸಬಹುದು. (ಗುರುರಾಜ್ ಭಟ್; ೧೯೬೩).

ಅದೇ ರೀತಿ ಶಕ್ತಿಯೊಂದಿಗೆ ಸಮೀಕರಿಸಲ್ಪಟ್ಟು ಆರಾಧನೆಗೊಳ್ಳುವ ನಾಗನಿಗೆ "ಪುರುಷ ಸ್ವಭಾವವೂ ಉಂಟು, ಸ್ತ್ರೀ ಸ್ವಭಾವವೂ ಉಂಟು". (ರಾಮಚಂದ್ರ ರಾವ್ ; ೧೯೮೮) ಎಂಬ ಮಾತುಗಳು ನಾಗರಾಧನೆಯ ವ್ಯಾಪ್ತಿ ಮತ್ತು ವ್ಯಾಪಕತೆಯನ್ನು ಮನದಟ್ಟು ಮಾಡುವ ಜೊತೆಗೆ ಕರಾವಳಿಯ ಆರಾಧನಾ ಮಾದರಿಗಳಲ್ಲಿ ನಾಗನಿಗೆ ಇರುವ ಮಹತ್ವವನ್ನು ಸಾರುತ್ತವೆ. ನಾಗರಾಧನೆಯ ಪ್ರಧಾನ ಭಾಗವಾದ ನಾಗಬನ ಮತ್ತು ಹುತ್ತಗಳೆರಡಕ್ಕೂ ಹಾನಿಯಾಗದಂತೆ

ಸ್ವಾಮಿ ಮನೆ, ದೈವದ ಮನೆಗಳೆಂದು ಕರೆಸಿಕೊಳ್ಳುವ ಆರಾಧನಾ ಸ್ಥಳಗಳು ತಳಸಂಸ್ಕೃತಿಯ ಸಂಬಂಧವನ್ನು ಸೂಚಿಸುವಂತೆ ಸ್ಥಾನ ಎಂಬ ಪರಿಭಾಷೆಗಿಂತ ಮನೆಯೆನ್ನುವ ಪರಿಕಲ್ಪನೆಯ ಜೊತೆಗೆ ಬೆಸೆದುಕೊಂಡಿರುವುದು ಈ ದಿಸೆಯಲ್ಲಿ ಗಮನಿಸಬೇಕಾದ ಸಂಗತಿ. ಮನೆಗಳಲ್ಲಿ ಒಳಗಡೆಯೇ ದೊಡ್ಡ ಗಾತ್ರದ ಹುತ್ತಗಳಿರುವುದು ಸಾಮಾನ್ಯವಾದರೆ, ದೈವದ ಮನೆಯ ಒಳಗೆ ಅಥವಾ ಹೊಂದಿಕೊಂಡ ಹಾಗೆ ಹುತ್ತ ಮತ್ತು ಬಲ್ಲೆಗಳಿರುವುದು ಸರ್ವೇಸಾಮಾನ್ಯ. ಹೀಗಾಗಿ ಭೂತರಾಧನೆ ಮತ್ತು ಸ್ವಾಮಿ ಆರಾಧನೆಗಳೂ ಕೂಡಾ ನಾಗಾರಾಧನೆಯ ವಿಸ್ತೃತ ರೂಪಗಳೇ ಆಗುತ್ತವೆ. ಇದಲ್ಲದೇ "ದಕ್ಷಿಣಕನ್ನಡದ ಅನೇಕ ಶಕ್ತಿ ಕ್ಷೇತ್ರಗಳಲ್ಲಿ ನಾಗ ಮತ್ತು ದುರ್ಗಾ ಅಭೇದ್ಯರಾಗಿ ಆರಾಧನೆಗೊಳ್ಳುವ ಕುತೂಹಲವನ್ನು ಗಮನಿಸಬಹುದು.

ಹೆಚ್. ಜಯಪ್ರಕಾಶ್ ಶೆಟ್ಟಿ

ಎಚ್ಚರ ವಹಿಸುವ ಜನಪದ ವರ್ಗ ಹುತ್ತಗಳಿಗೆ ಹಾನಿಯಾದರೆ ನಾಗನ ಮರಿಮೊಟ್ಟೆಗಳು ನಾಶಗೊಳ್ಳುತ್ತವೆ ಮತ್ತು ಆ ಮೂಲಕವಾಗಿ ನಾಗದೋಷ ಬರುತ್ತದೆ ಎಂಬ ನಂಬಿಕೆಯಾದ ಭಯ ಹೊಂದಿರುವುದನ್ನು ಈ ಭಾಗದಲ್ಲಿ ನಿಚ್ಚಳವಾಗಿ ಗುರುತಿಸಬಹುದು.

ಕರಾವಳಿಯಾದ್ಯಂತ ಕುಟುಂಬಗಳಿಗೊಂದರಂತೆ ಕಂಡುಬರುವ ನಾಗಬನಗಳನ್ನು ಆಯಾ ಮನೆತನದ ಮೂಲನಾಗಬನಗಳೆಂತಲೂ, ವಿಘಟಿತ ಸಣ್ಣ-ಸಣ್ಣ ಕುಟುಂಬಗಳು ಆರಾಧಿಸುವ ಇನ್ನುಳಿದ ಬನಗಳನ್ನು ಕೇವಲ ನಾಗಬನಗಳೆಂತಲೂ ಪರಿಭಾವಿಸಲಾಗುತ್ತದೆ. ಈ ಬನಗಳಲ್ಲಿ ಸಹಜವಾಗಿ ಬೆಳೆದು ನಿಂತ ಮರ, ಗಿಡ, ಬಳ್ಳಿಗಳಿಂದ ಬೀಳುವ ಎಲೆಗಳು ಕೊಳೆತು ಫಲವತ್ತಾದ ಕಪ್ಪು ಬಣ್ಣದ ಸಮೃದ್ಧ ಮಣ್ಣಿನ ಪದರಗಳು ರಚಿತವಾಗಿರುತ್ತದೆ. ಅನೇಕ ನಮೂನೆಯ ಮೂಲಿಕ ಸಸ್ಯ ಜಾತಿಯ ನೆಲೆಬೀಡಾಗಿರುವ ಈ ಬನಗಳಲ್ಲಿ ಸಮೃದ್ಧವಾಗಿ ಬೆಳೆದಿರುವ ಮರ-ಗಿಡ-ಬಳ್ಳಿಗಳ ನಿಬಿಡವಾದ ಬೇರುಗಳಿಂದಾಗಿ ಬೀಳುವ ಮಳೆ ನೀರು ಹರಿದು ಹೋಗದೆ ತೆವಳಿ ಸಾಗಬೇಕಾದ ನಿಸರ್ಗ ಸಹಜ ಪ್ರತಿರೋಧವು ರಚನೆಗೊಂಡು ಅಂತರ್‌ಜಲ ಪೂರಣ ಕ್ರಿಯೆ ಸಹಜವಾಗಿ ನೆರವೇರುವಂತಾಗುತ್ತದೆ.

ಇದರೊಂದಿಗೆ ಈ ಬನಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಹುತ್ತಗಳು ಕೂಡ ನಿಸರ್ಗ ಸಹಜ ಅಂತರ್‌ಜಲ ವೃದ್ಧಿಕಾರಕಗಳಾಗಿ ನೀರಿಂಗಿಸುವ ಕೆಲಸವನ್ನು ಮಾಡುವುದರಿಂದ ಸುತ್ತಣ ಕೃಷಿ ಕಾಯಕದ ಹೊಲಗಳ ಬೆಳೆಗಳಿಗೆ ಬೇಕಾದ ಭೂಮಿ ಒಳಗಣ ತೇವವನ್ನು ಕಾಯುವ ಕಾರ್ಯ ಈ ಬನಗಳಿಂದ ನಡೆಯುತ್ತದೆ. ಹುತ್ತವು ಹೊಂದಿರುವ ರಂಧ್ರಗಳು ಭೂಮಿಯ ಆಳಕ್ಕೆ ನೀರು ಇಳಿಬಿಟ್ಟು ಜಲಪೂರಣ ಕೆಲಸ ಮಾಡಿದರೆ, ಅದರ ಮಣ್ಣು ಸರ್ಪ ಸಂಸರ್ಗದಿಂದಾಗಿ ಮಾನವ ದೇಹದ ಚರ್ಮ ರೋಗಗಳಿಗೆ ಪ್ರತಿರೋಧವೊಡ್ಡುವ ಶಕ್ತಿಯನ್ನು ಹೊಂದಿರುತ್ತದೆ ಎನ್ನಲಾಗಿದೆ. ಅನನ್ಯ ಸಸ್ಯ ಜಾತಿಗಳಾದ ದೂಫ, ಸುರಗಿ, ಬಕುಲ, ಬನ್ನೇರಳು ಮುಂತಾದವುಗಳ ನೆಲೆಮನೆಯಾಗಿ, ಹೆಗ್ಗಣ ಮುಂತಾದ ಧ್ವಂಸಕಗಳನ್ನು ನಾಶ ಮಾಡುವ ಹಾವುಗಳ ಆವಾಸ ಸ್ಥಾನವಾಗಿ, ನಂಬಿದ ಜನಗಳ ಆರಾಧನಾ ಬನವಾಗಿ, ಭಯ-ಭಕ್ತಿಯ ಕೇಂದ್ರವಾಗಿರುವ ಈ ಸರ್ಪಾರಾಧನೆಯ ತಾಣಗಳು ಕರಾವಳಿಯಾದ್ಯಂತ ಅಸಂಖ್ಯಾ ಸಂಖ್ಯೆಯಲ್ಲಿ ಸಿಗುತ್ತವೆ.

ಈ ಮೇಲೆ ಹೇಳಲಾದಂತೆ ಸರ್ಪಾರಾಧನೆಯ ಅವೈದಿಕ ಮಾದರಿಯನ್ನು ಪುಷ್ಟೀಕರಿಸುವಂತೆ ಕರಾವಳಿ ಭಾಗದಲ್ಲಿಯೇ ಸರ್ಪಪ್ರಭೇಧದ ಹೆಸರಿನಲ್ಲಿಯೇ ಪರ್ಯಾಯ ಆಚರಣೆಗಳು ಕಾಣಸಿಗುತ್ತದೆ. ಈ ದಿಸೆಯಲ್ಲಿ ಪ್ರೊ. ಎ.ವಿ. ನಾವಡರು ಗುರುತಿಸಿದ ಮೇರರ ಸರ್ಪಾಚರಣೆಯ ಮಾದರಿಯಾದ ಕಾದ್ಯನಾಟದಂತಹ ಆಚರಣೆಗಳು ವಿಶೇಷ ಮಹತ್ವವನ್ನು ಪಡೆಯುತ್ತವೆ. ತಮ್ಮ ಕಾದ್ಯನಾಟದ ಕುರಿತ ಲೇಖನದಲ್ಲಿ ನಾವುಡರು ಹೇಳುವಂತೆ 'ನಾಗನಿಗೆ ಇಂದು ನಡೆಯುವ ಉಪಚಾರಗಳಲ್ಲಿ ವೈದಿಕ ಧರ್ಮದ ಪ್ರಭಾವವನ್ನು ನಿಚ್ಚಳವಾಗಿ ಗುರುತಿಸಬಹುದು.

ಆರ್ಥಿಕವಾಗಿ, ಸಾಮಾಜಿಕವಾಗಿ ಸಮಾಜದ ಅಂಚುವಾಸಿಗಳಾಗಿರುವ ಇಂತಹ ಜನಾಂಗಗಳ ವಿಧಿ ಆಚರಣೆಗಳನ್ನು, ಆಲೋಚನೆಗಳನ್ನು, ಹಾಡು-ಕುಣಿತಗಳನ್ನು ವೈದಿಕ ಕಲ್ಪನೆಗಳಿಂದ ಮುಕ್ತವಾಗಿ ನೋಡುವ ದೃಷ್ಟಿ ತೀರಾ ಅವಶ್ಯ (ಎ.ವಿ. ನಾವಡ ; ೨೦೦೦) .ಹಾಗೆಯೇ

ಕರಾವಳಿ ಪರಿಸರದ ವಿಶೇಷವೆಂದರೆ ನಂಬಿದವರು ತಮ್ಮ ದೈವದೊಂದಿಗೆ ಸಂವಾದಿಸಲು ಸಾಧ್ಯವಾಗುವ ದರ್ಶನ/ ದರ್ಶಿನ / ಉಂಟುಮಾಡಿಕೊಳ್ಳುವ ಪದ್ಧತಿ. ಸ್ಥಳೀಯವಾಗಿ ಈ ಉಂಟು ಮಾಡಿಕೊಳ್ಳುವ (ಸಂದರ್ಶನ) ಅವಕಾಶ ನಾಗನಿಗೆ ಸಂಬಂಧಿಸಿದಂತೆ ಸಾಕಷ್ಟು ಚಾಲ್ತಿಯಲ್ಲಿದೆ. ಇಲ್ಲಿ ನಾಗನೆಂದರೆ ಬರಿಯ ಕಲ್ಲೊ.ಬನವೋ ಮಾತ್ರ ವಲ್ಲ,ಅದು ಮಾನವರ ಮೂಲಕ ಸಂದರ್ಶನ ನೀಡುವ ದೇವರೂಹೌದು.ಉಳಿದ ಸಂದರ್ಭಗಳಲ್ಲಿ (ಭೂತಾರಾಧನೆಯಲ್ಲಿ) ದೈವಗಳ ದರ್ಶನ ಪಾತ್ರಿಗಳು ನಂಬುವ ಬ್ರಾಹ್ಮಣೇತರರ ನಡುವಿನವರಾದರೆ, ನಾಗನ ಪಾತ್ರಿಯಾಗುವ ಅವಕಾಶವಿರುವುದು ವೈದಿಕರಿಗೆ ಮಾತ್ರ. ಜಲವಾಚಕ ಮೂಲದ ಆರ್ಯೇತರ ನಾಗನಿಗೆ ಶುದ್ಧ ಸಸ್ಯಾಹಾರಿಗಳೆಂದು ಜಾಹೀರುಗೊಳಿಸಿಕೊಂಡಿರುವ ವೈದಿಕರೇ ಪಾತ್ರಿಗಳು ಆಗುತ್ತಿರುವುದು ಮತ್ತು ಈ ಪಾತ್ರಿಗಳು ಬಹಳ ದುಬಾರಿಯಾಗಿರುವುದುಕೇವಲ ಕಾಕತಾಳೀಯವಲ್ಲ.

ಬಂಟ,ಬಿಲ್ಲವ ಮುಂತಾದ ಬ್ರಾಹ್ಮಣೇತರರಿಂದ ಆರಾಧನೆಗೊಳ್ಳುವ 'ಸ್ವಾಮಿ' ನಾಗ ಪ್ರಭೇಧಗಳಲ್ಲೊಂದು. 'ಸ್ವಾಮಿಯೂ ಸಮ ಭೂಮಿಯೂ ಸಮ'ಎಂಬಂತೆ ಪರಿಭಾವಿತವಾಗಿರುವ ಈ ಸ್ವಾಮಿ ಪರಿಶಿಷ್ಟರೆನಿಸಿದ ಪಾಣರಿಂದ ದಕ್ಕೆಬಲಿ ಮತ್ತು ಕೋಲಸೇವೆಯನ್ನು ಪಡೆಯುತ್ತದೆ. ಇಲ್ಲಿನ ಕೋಲದ ಸಂದರ್ಭದಲ್ಲಿ ಬಳಸುವ ಅಣಿ ಅಥವಾ ಶಿರೋ ಭೂಷಣವು ಹಾವಿನ ಹೆಡೆಗಳನ್ನು ಸಂಕೇತಿಸುವಂತಿರುತ್ತದೆ

ಹಾಗೆಯೇ ಕುಂದಾಪುರದಾದ್ಯಂತ ಕಂಡುಬರುವ ದೈವರಾಧನೆಯ ಪ್ರಮುಖ ಸೇವಾ ಮಾದರಿಯಾದ ಢಕ್ಕೆ ಬಲಿಗಳ ಮಂಡಲಗಳಲ್ಲಿ ಬರೆಯುವ ಚಿಹ್ನೆಗಳು ಪ್ರಧಾನವಾಗಿ ನಾಗಸಂಬಂಧಿ ಚಿಹ್ನೆಗಳೇ ಆಗಿವೆ. ಸ್ವಾಮಿ, ಹೈಗುಳಿ, ಕಾಡ್ಯ ಇನ್ನಿತರ ಮಾದರಿಗಳಲ್ಲಿ ಆರಾಧನೆಗೊಳ್ಳುವ ದೈವಗಳು ತಮ್ಮ ಆರಾಧಕರಿಂದಲೇ ನೇರವಾಗಿ ಮಂತ್ರಾತೀತವಾದ ಆಚರಣಾ ಹಂತದ ಕ್ರಮಬದ್ಧ ಅನುಸರಣೆಯಲ್ಲಿ ಶ್ರದ್ಧಾಪೂರ್ವಕವಾದ ನೇರಪೂಜೆಯನ್ನು ಪಡೆಯುತ್ತವೆ. ಆದರೆ ನಾಗಬನಗಳ ವಿಷಯದಲ್ಲಿ ಇದು ಸಂಪೂರ್ಣ ವ್ಯತಿರಿಕ್ತವಾಗಿದೆ. ವೈದೀಕರಣಕ್ಕೆ ಒಳಗಾಗಿ ಸವರ್ಣೀಯರ ಹಕ್ಕಿನ ಪ್ರಶ್ನೆಯಾಗಿ ಪರಿವರ್ತನೆಗೊಂಡಿರುವ ನಾಗಾರಾಧನೆಯಲ್ಲಿ ನಂಬಿದವರು ದೂರನಿಂತು ನುಡಿಪಾಲಿಸಬೇಕಾದ ಸ್ಥಿತಿ ನಿರ್ಮಾಣಗೊಂಡಿರುವುದಂತು ಸತ್ಯ.

ಕರಾವಳಿ ಪರಿಸರದ ವಿಶೇಷವೆಂದರೆ ನಂಬಿದವರು ತಮ್ಮ ದೈವದೊಂದಿಗೆ ಸಂವಾದಿಸಲು ಸಾಧ್ಯವಾಗುವ ದರ್ಶನ/ ದರ್ಶಿನ / ಉಂಟುಮಾಡಿಕೊಳ್ಳುವ ಪದ್ಧತಿ. ಸ್ಥಳೀಯವಾಗಿ ಈ ಉಂಟು ಮಾಡಿಕೊಳ್ಳುವ (ಸಂದರ್ಶನ) ಅವಕಾಶ ನಾಗನಿಗೆ ಸಂಬಂಧಿಸಿದಂತೆ ಸಾಕಷ್ಟು ಚಾಲ್ತಿಯಲ್ಲಿದೆ.ಹಾಗಾಗಿ ಇಲ್ಲಿ ನಾಗನೆಂದರೆ ಬರಿಯ ಕಲ್ಲೊ.ಬನವೋ ಮಾತ್ರವಲ್ಲ,ಅದು ಮಾನವರ ಮೂಲಕ ಸಂದರ್ಶನ ನೀಡುವ ದೇವರೂ ಹೌದು.ಉಳಿದ ಸಂದರ್ಭಗಳಲ್ಲಿ (ಭೂತಾರಾಧನೆಯಲ್ಲಿ) ದೈವಗಳ ದರ್ಶನ ಪಾತ್ರಿಗಳು ನಂಬುವ ಬ್ರಾಹ್ಮಣೇತರರ ನಡುವಿನವರಾದರೆ, ನಾಗನ ಪಾತ್ರಿಯಾಗುವ ಅವಕಾಶವಿರುವುದು ವೈದಿಕರಿಗೆ ಮಾತ್ರ. ಜಲವಾಚಕ ಮೂಲದ ಆರ್ಯೇತರ ನಾಗನಿಗೆ ಶುದ್ಧ ಸಸ್ಯಾಹಾರಿಗಳೆಂದು ಜಾಹೀರುಗೊಳಿಸಿ ಕೊಂಡಿರುವ ವೈದಿಕರೇ ಪಾತ್ರಿಗಳು ಆಗುತ್ತಿರುವುದು ಮತ್ತು ಈ ಪಾತ್ರಿಗಳು ಬಹಳ ದುಬಾರಿಯಾಗಿರುವುದು (ಕನಿಷ್ಠ ಒಬ್ಬೊಬ್ಬನ ದುಡಿಮೆ ಲೆಕ್ಕಪತ್ರ ಪರಿಶೋಧಕರ ದುಡಿಮೆಗಿಂತಲೂ ಹೆಚ್ಚು. ಆದರೆ ಆದಾಯ ತೆರಿಗೆ ವ್ಯಾಪ್ತಿಗೆ ಇಲ್ಲ ಅಷ್ಟೇ !) ಕೇವಲ ಕಾಕತಾಳೀಯವಲ್ಲ.

ಇವರು ದಿನವೊಂದರ ಕನಿಷ್ಠ ಶಿಕ್ಕೂ ಮಿಕ್ಕಿ ಬೇರೆ ಬೇರೆ ಬನಗಳಲ್ಲಿ ದರ್ಶನಕ್ಕೆ ನಿಲ್ಲುತ್ತಾರೆ. ಇವರಲ್ಲಿ ಕೆಲವರು ಬಯಲಾಟದ ಮೇಳಗಳಂತೆ ಹಿಮ್ಮೇಳ (ವಾದ್ಯದವರು), ಪೂಜಾರಿಗಳನ್ನು ಸೇರಿಸಿಕೊಂಡು ಅದ್ದೂರಿಯ (ಕ್ವಾಲೀಸ್) ವಾಹನಗಳಲ್ಲಿ ಸಂಚರಿಸಿ ನಂಬಿದ ಭಕ್ತರ ಬಯಕೆ ತೀರಿಸುವ ಸೇವೆಯಾಟದಂತೆ ದರ್ಶನದ ಅವತಾರ ತೋರುತ್ತಾರೆ. ಪ್ರತಿ ನಾಗಬನದಲ್ಲಿ ದರ್ಶನಕ್ಕೆ ನಿಲ್ಲುವ ಮೊದಲು ಶುದ್ಧೀಕರಣದ ಪ್ರಕ್ರಿಯೆಯಾಗಿ ಕಾಲಿಗೆ ನೀರು ಹುಯ್ದುಕೊಳ್ಳುತ್ತಾರೆ. ದರ್ಶನದ ತರುವಾಯ ಉಟ್ಟ ಪಟ್ಟೆಯನ್ನು ಬಿಚ್ಚದೆ ಕಾಸು ಪಡೆದು ಕಾರೇರಿ ಹೊರಟು ಮತ್ತೊಂದು ಕಡೆಯಲ್ಲಿ ಇದೇ ರೀತಿ ಪುನರಾವರ್ತಿಸುತ್ತಾರೆ. ಈ ರೀತಿಯ ಅವಕಾಶ ಭೂತಾರಾಧನೆಯ ದೈವದ ಪಾತ್ರಿಗಳ ಸಂದರ್ಭದಲ್ಲಿ ಇಲ್ಲ. ಅವುಗಳಲ್ಲಿ ಕೆಲವು ದೈವದ ಪಾತ್ರಿಗಳಂತೂ ತೀರಾ ಶೌಚ-ಶುದ್ಧದಲ್ಲಿರಬೇಕು ಮತ್ತು ಬಹುಅಂಶ ಈ ಪಾತ್ರಿಗಳು ಒಂದು ದಿನಕ್ಕೆ ಒಂದಕ್ಕಿಂತ ಹೆಚ್ಚು ಬಾರಿ ಒಂದೇದಿನದಲ್ಲಿ ಆಹ್ವಾನಕ್ಕೆ ನಿಲ್ಲುವಂತಿಲ್ಲ. ಆಹ್ವಾನ ಪೂರ್ವದಲ್ಲಿ ಶೌಚದಲ್ಲಿದ್ದು, ಸ್ನಾನ ಮಾಡಿ ಶುದ್ಧನಾಗಿರಬೇಕು. ಆಹ್ವಾನ ಮುಗಿಯುತ್ತಿದ್ದಂತೆಯೇ ಮಲಿನಾಗುವ ಆತ ಮತ್ತೊಂದು ದರ್ಶನಕ್ಕೆ ನಿಲ್ಲಬೇಕಾದರೆ ಮುಂದಿನ ದಿನದ ಶೌಚ/ಚೌತ/ ವ್ರತದ ತರುವಾಯ ಮಾತ್ರ ಸಾಧ್ಯ.

ಹಾಗಾಗೀ ಈ ತಳ ಸಮುದಾಯಗಳಲ್ಲಿ ಪಾತ್ರಿಯಾಗುವುದೆಂದರೆ ಗೌರವದ ಮಾತೂ ಅಲ್ಲ, ಆದಾಯದ ಕುರುಹು ಅಲ್ಲ. ಬದಲಾಗಿ ಅವನ ಸ್ವಚ್ಛಂದ ದುಡಿಮೆಗೊಂದು ದಿಗ್ಬಂಧನವೇ ಸರಿ (ಅನೇಕ ಪಾತ್ರಿಗಳು ತಲೆಯ ಮೇಲೆ ಹೊರೆಯಿಡುವಂತಿಲ್ಲ, ಕೆಲವು ವಸ್ತುಗಳನ್ನು ಮುಟ್ಟುವಂತಿಲ್ಲ, ಕೆಲವು ಆಹಾರಾಧಿಗಳನ್ನು ತಿನ್ನುವಂತಿಲ್ಲ ಎನ್ನುವ ನಿಷೇಧಗಳು ಚಾಲ್ತಿಯಲ್ಲಿವೆ. ಈ ರೀತಿ ದೈವಗಳಿಗೆ ಪಾತ್ರಿಯಾದವನನ್ನು ದೈವಕ್ಕೆ ತಲೆಬಿಟ್ಟವನು / ಕೊರಡು / ಕೊಯ್ದ್ ಎಂದು ಕರೆಯಲಾಗುತ್ತದೆ. ಈ ಕೊರಡು ನಿಜವಾದ ಅರ್ಥದಲ್ಲಿ ಕೊರಡೇ ಆಗಿರುತ್ತಾನೆ. ಏಕೆಂದರೆ ಆತ ನಿಲ್ಲುವ ಅನೇಕ ದರ್ಶನಗಳು ಬಿಟ್ಟಿ ಸೇವೆಗಳು. ಅವುಗಳಲ್ಲಿ ಅವನಿಗೆ ಸಿಗುವುದು ಒಂದು ತುಂಡು ಕಾಯಿ (ಕಾಯಿಕಡಿ), ವೀಳ್ಯಪಟ್ಟಿಯ ಮರ್ಯಾದೆ ಮಾತ್ರ

ಈಗೀಗ ವ್ಯವಹಾರ ಬಲ್ಲವರು ಒಂದಿಷ್ಟು ಕಾಸು ಪಡೆಯುತ್ತಾರಾದರೂ ಅದು ಲಾಭದಾಯಕವೆಂದೇನೂ ಅನಿಸುವಂತಿಲ್ಲ. ಆದರೆ ಈ ಮಾತು ನಾಗನ ಪಾತ್ರಿಗಳ ವಿಷಯದಲ್ಲಿ ಚಲಾವಣೆಯಿಲ್ಲದ ನಾಣ್ಯ. ಹೊಸಕಾಲಕ್ಕೆ ಅನುಗುಣವಾಗಿ ಹೊಸ ವರೆಸೆಗಳನ್ನು ಮೈಗೂಡಿಸಿಕೊಂಡಿರುವ ಈ ವರ್ಗ ಹಳೆಕಾಲದ ನಾಗಪಾತ್ರಿಗಳ ಶಿಷ್ಟಾಚಾರದಲ್ಲಿ ಹಿಂದೆ ಬಿದ್ದರೂ, ದುಡಿಮೆಯಲ್ಲಿ ನಾಗಾಲೋಟದಲ್ಲಿ ಓಡುತ್ತಿದೆ.

ನಾಗನನ್ನು ಆಳಿಸುವುದೇಕೆ ? ಹುಟ್ಟ್ ಕೇಳುವುದಕ್ಕೆ (ನಾಗನ್ ಆಳ್ಸುದ್ಯಾಕೆ ಹುಟ್ ಕೇಂಬ್ಕೆ) ಎಂಬ ಮಾತ ರೂಢಿಯಲ್ಲಿದೆ. ನಾಗ ದರ್ಶನವಾಯಿತೇಂದರೆ ಒಂದಲ್ಲ ಒಂದು ಹರಕೆ ಬಾಕಿಯೋ, ಪುರಾತನ ದೋಷದ ಸಮಾಚಾರವೋ ಭವಿಷ್ಯದ ಒಳಿತಿಗಾಗಿ ಹೊಸ ಹರಕೆಯ ಅನಿವಾರ್ಯತೆಯೋ ತಯಾರಾಗಿ ಹರಕೆಯ ತಿರುವಳಿಯ ಚಕ್ರದಲ್ಲಿ ಸಿಕ್ಕಿ ಬೀಳುವುದು ಶತ ಸಿದ್ಧ. ಹಾಗಾಗಿ ನಾಗನ ಜೊತೆಯಲ್ಲಿ ಭಕ್ತಾಧಿಗಳು ವಾಗ್ವಾದಕ್ಕೆ ಇಳಿಯದೆ ತಪ್ಪಿಸಿಕೊಳ್ಳುವ ಯತ್ನ ಮಾಡುವುದೇ ಹೆಚ್ಚು. ಒಮ್ಮೆ ಮಾತು ಬಿತ್ತು ಎಂದರೆ ಸತ್ಯದೇವತೆಯಾದ ನಾಗನ ಮಾತನ್ನು ಮೀರುವಂತಿಲ್ಲವಾಗಿ, ನಾಗನೆಂದರೆ ಜನಸಮುದಾಯದಲ್ಲಿ ಭಕ್ತಿಗಿಂತ ಭಯವೇ ಹೆಚ್ಚು.ಈ ಭಯವನ್ನು ಸರಿಯಾಗಿಯೇ ಬಳಸಿಕೊಳ್ಳುವ ಪುರೋಹಿತವರ್ಗ, ಜ್ಯೋತಿಷ್ಯದ ಕುರಿತು ಪ್ರತಿಕ್ರಿಯಿಸುತ್ತಾ ಪೆರಿಯಾರ್ ರಾಮಸ್ವಾಮಿಯವರು ಹೇಳುವ, 'ಈ ಜ್ಯೋತಿಷಿಗಳು, ಮಾಂತ್ರಿಕರು ಮತ್ತು ಪುರೋಹಿತರು ಜನರ ಕಠಿಣ ಪರಿಶ್ರಮದ ದುಡಿಮೆಯನ್ನು ಶೋಷಿಸುತ್ತಾರೆ. ಈ ಮೂರು ವರ್ಗಗಳ ಒಳಸಂಚುಗಾರರು ತಮ್ಮ ಕುಹಕವನ್ನು ಸುಲಭವಾಗಿ ತಿಳಿಯದಂತೆ ಮಾಡುತ್ತಾರೆ. ಈ ಮೂಲಕ ತಾವು ಕೇವಲ ದೇವರ ಪ್ರೀತ್ಯರ್ಥವಾ ಗಿಯೇ ಇದನ್ನೆಲ್ಲ ಮಾಡುತ್ತೇವಲ್ಲದೆ ಸಂಚುಗಾರರ ಹೊಟ್ಟೆ ತುಂಬಿಸಲಿಕ್ಕಲ್ಲ ಎಂಬುದನ್ನು ನಂಬಿಸಲು ಪ್ರಯತ್ನಿಸು ತ್ತಾರೆ' (ಜಿ.ಬಿ. ಮಯ್ಯ; ೨೦೦೨) ಎಂಬ ಮಾತನ್ನು ಅಕ್ಷರಶಃ ನಿಜಗೊಳಿಸಿ ಸುಲಿಗೆಯ ಚಕ್ರವನ್ನು ವಿಸ್ತರಿಸುತ್ತಿದ್ದಾರೆ.

ಕಾಕತಾಳೀಯವಾಗಿ ಭೂಸುಧಾರಣೆಯ ತರುವಾಯ ಕರಾವಳಿಯ ಕೃಷಿಯಾಶ್ರಿತ ಸಮುದಾಯಗಳಾದ ಬಂಟ, ಬಿಲ್ಲವ, ಮೋಗವೀರ ಮುಂತಾದ ಜಾತಿವರ್ಗದ ಹೊಸತಲೆಮಾರು ನೆಲದ ಜೊತೆಗಿನ ಸಂಬಂಧವನ್ನು ಕಳಚಿಕೊಂಡು ಹೊಸ ಬದುಕಿನ ಅನ್ವೇಷಣೆಯಲ್ಲಿ ಕಂಡುಕೊಂಡ ಹೋಟೆಲ್ ಉದ್ಯಮ, ಶಿಕ್ಷಣ ಮತ್ತು ಭೂಗತ ಚಟುವಟಿಕೆಗಳು ಮುಂದೆ ಮಾಡುವ ಬದುಕಿನ ಅಸ್ಥಿರತೆಯ ಸವಾಲುಗಳು ಹುಟ್ಟು ಹಾಕಿರುವ ಅಭದ್ರತೆಯ ಭಾವನೆ ದೈವ-ದೇವರುಗಳ ಮೇಲಿನ ವಿಶೇಷ ಅವಲಂಬನೆಗೆ ಕಾರಣವಾಗಿರುವುದು ಚಾರಿತ್ರಿಕ ಸತ್ಯ. ತಮ್ಮ ದುಡಿಮೆ ಮತ್ತು ಬದುಕಿಗಿರುವ ಅಭದ್ರತೆಯನ್ನು ಹೋಗಲಾಡಿಸಿಕೊಳ್ಳಲು ಕಂಡ-ಕಂಡ ದೇವರುಗಳಿಗೆ ಕೈನೀಡಿ ಹರಕೆ ಸಲ್ಲಿಸಿ ನೀರಾಳರಾಗುತ್ತಿರುವ ಇಂತಹ ವರ್ಗದ ಇರುವಿಕೆ ವಿಸ್ತರಿಸಿಕೊಳ್ಳುತ್ತಿರುವ ಈ ಸನ್ನಿವೇಶದಲ್ಲಿ ನಾಗ ಹಿಡಿಯುವುದು ಒಂದು ರೀತಿಯಲ್ಲಿ ದೆಸೆ ವಕ್ಕರಿಸಿದಂತೆ. ವಿಚಿತ್ರವೆಂಬಂತೆ ಆಧುನಿಕ ಸಂಗತಿಗಳಾದ ಮೊಬೈಲ್ ಮತ್ತು ವಾಹನ ಸೌಲಭ್ಯಗಳನ್ನು ಈ ದೈವಕಾಯಕದಲ್ಲಿ ಸಮರ್ಥವಾಗಿ ಬಳಸಿಕೊಳ್ಳುವ ಇವರುಗಳು ಆಧುನಿಕತೆಯಿಂದಾಗಿ ಮತ್ತಷ್ಟು ವ್ಯಾವಹಾರಿಕರೂ, ವೃತ್ತಿ ನಿರತರೂ ಆಗಿ ರೂಪುಗೊಳ್ಳುತ್ತಿದ್ದಾರೆ. ಬೇರೆ ಬೇರೆ ನಗರ ಪ್ರದೇಶಗಳಲ್ಲಿ ಹೋಟೆಲ್ ಮತ್ತಿತರ ಸುಲಭ ದಾರಿಯ ದುಡಿಮೆ ಕಂಡವರು ತಮ್ಮ ಆದಾಯ, ಆಯುಷ್ಯ ವೃದ್ಧಿಗಾಗಿ ನೀಡುವ ಬೆಲೆಬಾಳುವ ಆಭರಣಗಳು ಸಹಜವಾಗಿಯೇ ಈ ನಾಗಪಾತ್ರಿಗಳ ಸ್ವತ್ತಾಗಿ ರಾರಾಜಿಸುತ್ತಿರುತ್ತವೆ. ತಮ್ಮ ಅಚ್ಚುಕಟ್ಟಾದ ಪ್ರಮಾಣಭಾಷೆಯ ಶುದ್ಧ ಪ್ರಯೋಗಗಳನ್ನು ಪ್ರಯೋಗಿಸಿ ನಂಬುವ ಕೆಳ ಸಮುದಾಯದ ಭಕ್ತಾಧಿಗಳನ್ನು ಕಕ್ಕಾಬಿಕ್ಕಿ ಮಾಡುವ ಈ ಪಾತ್ರಿಗಳು ಹಾಗೂ ಅವರಿಗೆ ಹುಸಿ (ಹೂವು / ಹಿಂಗಾರ) ನೀಡುವ ಹಕ್ಕು ಪಡೆದಿರುವ ಬ್ರಹ್ಮ ಕುಟುಂಬ (ಪುರೋಹಿತ ವರ್ಗ) ನಾಗನನ್ನು ನಂಬುವ ಸಾಮಾನ್ಯ ಭಕ್ತಾಧಿಗಳ ಮೇಲೆ ಪ್ರಯೋಗಿಸುತ್ತಿರುವ ಹೊಸವರಸೆಗಳು ಈ ವರ್ತುಲದೊಳಗೆ ಬರುವ ತಮ್ಮ ಸಮುದಾಯದ ಕೆಲಮಂದಿಗೆ ಕನಿಷ್ಟ ಕೆಲ ಶತಮಾನಗಳವರೆಗಿನ ಉದ್ಯೋಗ ಖಾತ್ರಿಯ ಯೋಜನೆಯಾಗಿ ಸದ್ದಿಲ್ಲದೆ ತಯಾರಾಗುತ್ತಿದೆ.

> **ತಳ ಸಮುದಾಯಗಳಲ್ಲಿ ಪಾತ್ರಿಯಾಗುವುದೆಂದರೆ ಗೌರವದ ಮಾತೂ ಅಲ್ಲ, ಆದಾಯದ ಕುರುಹು ಅಲ್ಲ. ಬದಲಾಗಿ ಅವನ ಸ್ವಚ್ಛಂದ ದುಡಿಮೆಗೊಂದು ದಿಗ್ಬಂದನವೇ ಸರಿ. ಅನೇಕ ಪಾತ್ರಿಗಳು ತಲೆಯ ಮೇಲೆ ಹೊರೆಯಿಡುವಂತಿಲ್ಲ, ಕೆಲವು ವಸ್ತುಗಳನ್ನು ಮುಟ್ಟುವಂತಿಲ್ಲ, ಕೆಲವು ಆಹಾರಾಧಿಗಳನ್ನು ತಿನ್ನುವಂತಿಲ್ಲ ಎನ್ನುವ ನಿಷೇಧಗಳು ಚಾಲ್ತಿಯಲ್ಲಿವೆ. ಈ ರೀತಿ ದೈವಗಳಿಗೆ ಪಾತ್ರಿಯಾದವನನ್ನು ದೈವಕ್ಕೆ ತಲೆಬಿಟ್ಟವನು / ಕೊರಡು ಎಂದು ಕರೆಯಲಾಗುತ್ತದೆ. ಈ ಕೊರಡು ನಿಜವಾದ ಅರ್ಥದಲ್ಲಿ ಕೊರಡೇ ಆಗಿರುತ್ತಾನೆ. ಏಕೆಂದರೆ ಆತ ನಿಲ್ಲುವ ಅನೇಕ ದರ್ಶನಗಳು ಬಿಟ್ಟಿ ಸೇವೆಗಳು. ಅವುಗಳಲ್ಲಿ ಅವನಿಗೆ ಸಿಗುವುದು ಒಂದು ತುಂಡುಕಾಯಿ, ವೀಳ್ಯಪಟ್ಟಿಯ ಮರ್ಯಾದೆ ಮಾತ್ರ. ಈಗೀಗ ವ್ಯವಹಾರ ಬಲ್ಲವರು ಒಂದಿಷ್ಟು ಕಾಸು ಪಡೆಯುತ್ತಾರಾದರೂ ಅದು ಲಾಭದಾಯಕವೆಂದೇನೂ ಅನಿಸುವಂತಿಲ್ಲ. ಆದರೆ ಈ ಮಾತು ನಾಗನ ಪಾತ್ರಿಗಳ ವಿಷಯದಲ್ಲಿ ಚಲಾವಣೆಯಿಲ್ಲದ ನಾಣ್ಯ.**

ನಾವೆಲ್ಲ ಚಿಕ್ಕಂದಿನಿಂದ ನೋಡಿಕೊಂಡು ಬಂದ ಹಾಗೆ ನಮ್ಮ ಹಿರಿಯರು ಸರಳವಾಗಿ ನಾಗನನ್ನು ಆರಾಧಿಸಿಕೊಂಡು ಬಂದ ರೀತಿ ನಮ್ಮ ಕಣ್ಣು ಮುಂದಿದೆ. ಪಂಚಮಿಯ ದಿನ ಅಚ್ಚೇರು ಅಕ್ಕಿ, ಅರ್ಧ ಸೊಲಗೆ ಹಾಲು, ಒಂದು ತೆಂಗಿನಕಾಯಿ, ಎರಡು ಎಣ್ಣೆ ಬತ್ತಿಗಳನ್ನು ನೀಡಿ ಬ್ರಾಹ್ಮಣರಿಂದ ನಾಗನಿಗೆ ತಂಪು ಹಾಕು ತ್ತಿದ್ದರು. ವರ್ಷಕ್ಕೊಮ್ಮೆ ಒಂಟಿ ಅಥವಾ ಜೋಡುಗೊನೆ ಗಳನ್ನು ತನು ಹಾಕುತ್ತಿದ್ದರು. ಅಪರೂಪಕ್ಕೊಮ್ಮೆ ಅಲ್ಲೊಂದು ಇಲ್ಲೊಂದು ನಾಗಸಂದರ್ಶನಗಳು ವಿರಳವಾಗಿ ನಡೆಯುತ್ತಿದ್ದವು. ತೀರಾ ವಿರಳವಾಗಿ ವರ್ಷಕ್ಕೊಮ್ಮೆ ಎರಡು ವರ್ಷಗಳಿಗೊಮ್ಮೆ ತಾಲೂಕು ಇಲ್ಲವೇ ಜಿಲ್ಲೆಗೊಂದರಂತೆ ನಾಗಮಂಡಲಗಳು ನಡೆಯುತ್ತಿದ್ದ ನೆನಪು. ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ನಾಗಬನಗಳು ಬನಗಳಾಗಿವೇ ಇದ್ದವು. ಅಪರೂಪಕ್ಕೆ ಒಮ್ಮೆ ಆಹಾರ ಅರಸಿ ಮನೆಯಕಡೆ ಬರುವ ನಾಗರಹಾವು ಕೋಳಿಗೂಡಿಗೋ, ಮನೆಯ ಸಂಧಿನ ಬಿಲಗಳಿಗೋ ನುಗ್ಗಿ ಅಡಗಿಕೊಂಡರೆ, ತಾಯಂದಿರು ಕುಂಕುಮ ಸವರಿದ ಬಿಳಿಅಕ್ಕಿ ಚೆಲ್ಲಿ, 'ಮಕ್ಕಳ್ರಿ ತಿರ್ಗುಜಾಗೊ ನೀನಿಲ್ಲೆಲ್ಲಾ ಬಪ್ಪಾಗ.ಕಣ್ಣಿಗ್ ಕಾಣ್ಸ್ಕಂಡ್ ಬಂದ್ಹಾಂಗೆ ಹೋಗ್' ಎಂದು ಅಪ್ಪಣೆ ಕೊಡಿಸಿ ಕಾಯುತ್ತಾ ಕೂತು ಹೋದುದನ್ನು ಖಾತ್ರಿ ಮಾಡಿಸಿಕೊಳ್ಳುತ್ತಿದ್ದರು.

ಬಹಳ ಬಾರಿ ಮನೆಯ ಆಸುಪಾಸು ಹಾವು ಓಡಾಡಿದರೆ ಅದನ್ನು ನಾಗನ ಎಡೆ ಇರಬಹುದೆಂಬ ಭಾವನೆಯಿಂದ ನಾಗನ ರಿಯಾಯಿತಿಗಾಗಿ ನಾಯಿಸಂಪಿಗೆ ಗಿಡ ನಡುವ ರೂಢಿಯೂ ಇತ್ತು. ಈ ನಡುವೆ ಸರ್ಪನ ಮೃತದೇಹ ಸಿಕ್ಕಿದರೆ ವಿಪರೀತ ನಿಷ್ಠೆಯಿಂದ ಬ್ರಾಹ್ಮಣ ಮುಖೇನ ಶವ ಸಂಸ್ಕಾರ ನೆರವೇರಿಸಿ ಕೆಲವು ದಿನಗಳ ತರುವಾಯ ಆರ್ಥಿಕ ಸೌಲಭ್ಯವನ್ನು ನೋಡಿಕೊಂಡು "ಸಂಸ್ಕಾರ" ನಡೆಸುತ್ತಿದ್ದರು. ಈ ಸಂಸ್ಕಾರಗಳಲ್ಲಿ ದಾನ ಮತ್ತು ಬ್ರಾಹ್ಮಣ ಅನ್ನಸಂತರ್ಪಣೆ ಮುಖ್ಯವಾದ ಭಾಗಗಳು. ಸರಳವಾಗಿ ಕಡಿಮೆ ಖರ್ಚಿನಲ್ಲಿ ಮಾಡಬಹುದಾಗಿದ್ದರೂ ಅಂದೂ ಕೂಡ ಈ ವಿಧಿ ಸಾಕಷ್ಟು ಖರ್ಚು ಬೇಡುತ್ತಿತ್ತು. (ತಮಾಷೆಯ ಸಂಗತಿಯೆಂದರೆ ಈ ಶವ ಸಂಸ್ಕಾರ ಮತ್ತು ಸಂಸ್ಕಾರ ವಿಧಿಗಳು ಅನೇಕ ಬಾರಿ ಗುಮ್ಮ (ಗೂಬೆ)ನಿಂದ ತಲೆಕಳೆದುಕೊಂಡು ಬಿದ್ದ ಸೊಕ್ಕೊಳ್ಳಿ ಹಾವುಗಳಿಗೆ ಸಂದಾಯವಾದುದಿದೆ. ಗೂಬೆಯ ಬೇಟೆಯಲ್ಲಿ ತಲೆಕಳೆದುಕೊಂಡು ಬೀಳುವ ಈ ದಪ್ಪ ಗಾತ್ರದ ಒಳ್ಳೆ ಹಾವುಗಳು ತಲೆಯೊಂದನ್ನು ಬಿಟ್ಟು ಉಳಿದಂತೆ ಸರ್ಪವನ್ನೆ ಹೋಲುತ್ತವೆ ಆದ್ದರಿಂದ ಮನಚಾಂಚಲ್ಯದ ಲಾಭ ಅಂದು-ಇಂದೂ ಪುರೋಹಿತ ವರ್ಗಕ್ಕೆ ಸಿಗುತ್ತಲೇ ಇದೆ). ಈ ಸಂಸ್ಕಾರಗಳ ವಿಧಿ-ನಿಷೇಧಗಳ ಮೂಲಕ ಸೂಕ್ಷ್ಮವಾಗಿ ಶೂದ್ರ ಮತು ಶೂದ್ರಾತಿ ವರ್ಗಗಳ ಮನಸ್ಥಿತಿಯನ್ನು ಉಚ್ಚತೆಯ ವ್ಯಸನಕ್ಕೆ ಅಣಿಗೊಳಿಸಲಾಗುತ್ತಿದೆ. ನಿರ್ದಿಷ್ಟ ದಿನಗಳವರೆಗೆ ಗೌಲು (ಮಾಂಸಾಹಾರ) ನಿಷೇಧದ ಮೂಲಕ ಆರಾಧನೆಯ ಒಳಗೆ ಆಹಾರ ಕ್ರಮದಲ್ಲಿಯ ಪಲ್ಲಟವನ್ನು ಹೇರಿ ಶೂದ್ರಾಹಾರವನ್ನು ತುಚ್ಛಗೊಳಿಸಿಕೊಳ್ಳುವುದನ್ನು ಈಗಾಗಲೇ ಕಲಿಸಿಯಾಗಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಈ ಆರಾಧನಾ ರೂಪದ ವರಸೆಗಳು ಮತ್ತಷ್ಟು ವಿಸ್ತರಣೆಗೊಳ್ಳುತ್ತಿರುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆ. ಮುಖ್ಯವಾಗಿ ನಿಸರ್ಗ ಸ್ನೇಹಿಯಾದ, ಅನೇಕ ಜೀವ-ಸಸ್ಯ ವೈವಿಧ್ಯಗಳ ನೆಲೆಪೀಡಾಗಿ ಕೃಷಿಕ ಬದುಕಿನಲ್ಲಿಯ ನಿಸರ್ಗದೊಂದಿಗಿನ ಸಾವಯವ ಸಂಬಂಧದ ಭಾಗವಾಗಿರುವ ನಾಗಬನ ಗಳನ್ನೇ ಈ ಪಾತ್ರಿ-ಪುರೋಹಿತರ ಕೂಟ ಆಪೋಶನ ತೆಗೆದುಕೊಳ್ಳತೊಡಗಿದೆ. ಕುಂದಾಪುರದಂತಹ ತಾಲೂಕಿನಲ್ಲಿ ಕನಿಷ್ಠವೆನಿಲ್ಲವೆಂದರೂ ೪-೫ ಸಾವಿರಕ್ಕೂ ಮಿಕ್ಕಿ ಇಂತಹ ನಾಗಬನಗಳಿದ್ದು ಈಗಾಗಲೇ ಜೀರ್ಣೋದ್ಧಾರದ ಮಹಾಪ್ರಹಾರಕ್ಕೆ ಅನೇಕ ನಾಗಬನಗಳು ನೆಲಸಮವಾಗಿ ಹೋಗಿಯಾಗಿದೆ. ಈ ಬನಗಳ ಜಾಗವನ್ನು ಜೆಸಿಬಿ ಯಂತ್ರಗಳ ಮೂಲಕ ಮಟ್ಟಸವಾಗಿಸಿ, ಗೋಪುರಕಟ್ಟಿ, ಶಿಲಾಪ್ರತಿಷ್ಠ

ಮಾಡುವ ಆಜ್ಞೆಗಳು ನಾಗಪಾತ್ರಿಗಳ 'ನುಡಿ'ಗಳ ರೂಪದಲ್ಲಿ, ಪುರೋಹಿತರ ನಿಮಿತ್ತದ ರೂಪದಲ್ಲಿ ಬರತೊಡಗಿವೆ. ನನಗೆ ಗೊತ್ತಿರುವ ಹಾಗೆ ನನ್ನ ಹತ್ತಿರದ ಬಂಧುಗಳ ಮನೆಯೊಂದರಲ್ಲಿ ಅತ್ಯಂತ ಪುರಾತನವಾದ ಬಹುಗಾತ್ರಗಳ ಮರಗಳಿಂದ ಕೂಡಿದ ನಾಗಬನವನ್ನು ಖಾಲಿ ಮಾಡಿ ಜೇಸಿಬಿ ಯಂತ್ರದ ಮೂಲಕ ಸಮತಟ್ಟುಗೊಳಿಸಿ ನಾಗಗೋಪುರ, ಪ್ರತಿಷ್ಠೆ, ದರ್ಶನ, ಹೋಮಹವನ ಮಾಡಿದ ಒಟ್ಟು ಖರ್ಚು ೧,೨೦,೦೦೦ ಕ್ಕೂ ಅಧಿಕ. (ಈ ಖರ್ಚನ್ನು ಸಮಾನವಾಗಿ ಮೂರುಪಾಲುಮಾಡಿ ಕುಟುಂಬದ ಒಂದೊಂದು ಒಳಬುಡದವರು ತಲಾ ೪೦೦೦೦ದಂತೆ ನೀಡಿದರು)

ಇದರಲ್ಲಿ ಗೋಪುರ, ಕಲ್ಲು,ಮಣ್ಣು ಜೇಸಿಬಿ ಎಲ್ಲಾ ಸೇರಿ ಒಟ್ಟು ೫-೧೦ ಸಾವಿರದ ಒಳಗಡೆ ಖರ್ಚು ಮಿಕ್ಕಿದ ಲಕ್ಷಕ್ಕೂ ಮೀರಿದ ಹಣ ಮಂತ್ರ, ಮಾಯಾಕುಣಿತ ಹಾಗೂ ಅನ್ನ ಸಂತರ್ಪಣೆ ಎನ್ನುವ ಬಾಬ್ತುಗಳಿಗೆ. ಈ ಖರ್ಚಿನ ಬಾಬ್ತುಗಳು ಇಷ್ಟಕ್ಕೆ ನಿಲ್ಲುವುದಿಲ್ಲ. ಪ್ರತಿಷ್ಠೆಯ ದಿನಕ್ಕೆ ಸರಿಯಾಗಿ ಪ್ರತಿವರ್ಷ ಶುದ್ಧ ಕಲಶ, ಅನ್ನ ಸಂತರ್ಪಣೆ, ನಾಗ ಸಂದರ್ಶನ, ಇತ್ಯಾದಿಗಳು ನಡೆದು ಒಂದು ನಮೂನೆಯ ಖಾಯಂ ಆದಾಯರಹಿತ ಹೂಡಿಕೆಗೆ ತಲೆ ಕೊಡಲೇ ಬೇಕಾಗುತ್ತದೆ. ಇದರ ಜೊತೆಗೆ ಸನ್ನಿಧಾನವನ್ನು ಅಭಿವೃದ್ಧಿ ಪಡಿಸುವ ಮೂಲಕ ಭಕ್ತ ಕುಟುಂಬ ತನ್ನ ವೃದ್ಧಿಯನ್ನು ಕಾಣಬೇಕಾದರೆ ಇನ್ನಷ್ಟು ಆಕರ್ಷಕ ಸೇವಾ ಯೋಜನೆಗಳು ಆಜ್ಞೆಯ ರೂಪದಲ್ಲಿ ಹೊರಬೀಳುತ್ತವೆ. ಹೆಚ್ಚುವರಿ ಶಿಲಾಪ್ರತಿಷ್ಠೆ, ತುಲಾಭಾರ, ಆಶ್ಲೇಷಾಬಲಿ, ಸಂದರ್ಶನ ಇವೆಲ್ಲಕ್ಕಿಂತ ಮಿಕ್ಕಿ ದೊಡ್ಡಸೇವೆಯಾಗಿ ಮಂಡಲ ಸೇವೆ (ನಾಗಮಂಡಲ) ಅಥವಾ ಬಾಕಿಯ ಹುಟ್ಟಗಿತಿ ಮಾಡಿದರೆ ಒಳಿತೆಂಬ ಆಜ್ಞೆಗಳೂ ಹೊರಬೀಳುತ್ತಾ ಆಚರಣೆಯ ಸೇವಾಚಕ್ರದಲ್ಲಿ ಸಿಕ್ಕಿಕೊಳ್ಳುವಂತೆ ಮಾಡಲಾಗುತ್ತದೆ.ಗಮನಿಸಬೇಕಾದ ಸಂಗತಿಯೆಂದರೆ ನಾಗನನ್ನು ನಂಬುವವರು ನಾಗನ ಹೆಸರಿನಲ್ಲಿ ನೀಡುವುದೆಲ್ಲ ನಾಗಾರಾಧನೆಯ ಪೂಜಾಕೈಂಕರ್ಯದ ಜವಾಬ್ದಾರಿ ಹೊತ್ತ ವಿಪ್ರ ಕುಟುಂಬಕ್ಕೆ. ವೈದಿಕರಿಗೆ ತೃಪ್ತಿಯಾದರೆ ನಾಗನಿಗೂ ತೃಪ್ತಿ.ಯಾಕೆಂದರೆ ನಾಗಸಂದರ್ಶನದ ವೇಳೆ ಬರುವ ನುಡಿಗಳೇ ಹಾಗಿರು ತ್ತವೆ-'ಬ್ರಹ್ಮಕುಟುಂಬಕ್ಕೆ ತೃಪ್ತಿಪಡಿಸುವುದು,ಸಂತರ್ಪಣೆ ನಡೆಸುವುದು,ಬ್ರಹ್ಮದೋಷವಾಗದ ಹಾಗೆ ನೋಡಿಕೊಳ್ಳು ವುದು ಇತ್ಯಾದಿ'

ನಾನು ಕೇಳಿದ ಮಾಹಿತಿಯೊಂದರಂತೆ ನನ್ನ ಕುಟುಂಬದಲ್ಲಿ ಸುಮಾರು ೮೦-೯೦ ವರ್ಷಗಳ ಹಿಂದೆ ನಾಗಮಂಡಲವೊಂದು ನಡೆದಿತ್ತಂತೆ. ಈ ಸಂದರ್ಭದಲ್ಲಿ ಬ್ರಾಹ್ಮಣರು ಊಟ ಮಾಡುತ್ತಿದ್ದ ಚಪ್ಪರದೊಳಗೆ ನಿಷೇಧವಿದ್ದಾಗ್ಯೂ, ಅದ್ಯಾರೋ ಒಬ್ಬರು ಹೋದರೇನಾದೀತು ಎಂದು ಪ್ರಶ್ನಿಸಿ, ಬ್ರಾಹ್ಮಣರು ಊಟ ಮಾಡುತ್ತಿರುವಲ್ಲಿಗೆ ಪ್ರವೇಶ ಮಾಡಿಯೇಬಿಟ್ಟರಂತೆ. ಊಟ ಮಾಡುತ್ತಿದ್ದ ಸವರ್ಣೀಯರು ಇದನ್ನು ಅಪಮಾನ ಎಂದು ಭಾವಿಸಿ ಕಕ್ಕಾ-ಬಿಕ್ಕಿಯಾಗುತ್ತಿದ್ದಂತೆಯೇ ಹಿರಿಯರೊ ಬ್ಬರು, "ಬ್ರಾಹ್ಮಣರ ಜಾತಿ ಹೌದಾದರೆ ಎಲ್ಲರೂ ಊಟ ಬಿಟ್ಟು ಏಳಿ" ಎಂದದ್ದೇ ಎಲ್ಲರೂ ಊಟವನ್ನು ಅರ್ಧಕ್ಕೆ ನಿಲ್ಲಿಸಿ ಎದ್ದು ಬಿಟ್ಟದ್ದರಿಂದ ಬ್ರಾಹ್ಮಣ ಸಂತರ್ಪಣೆಗೆ ಕುಂದೂಂಟಾಗಿ ಮಂಡಲ ಸೇವೆ ಅಪೂರ್ಣವಾಯಿತೆಂತೆ (ಈ ಮಾಹಿತಿಯನ್ನು ಹೇಳಿದವರು ಶಂಕರನಾರಾಯಣ ಉಡುಪ ಬಲಾಡಿ). ಇದು ಜನಜನಿತವಾದ ಕಥೆಯೂ ಹೌದು. ಹಾಗಾಗಿ ನಮ್ಮ ಬನದಲ್ಲಿ ಅಪೂರ್ವಕೊಮ್ಮೆ ನಾಗಸಂದರ್ಶನ ನಡೆದಾಗಲೆಲ್ಲಾ 'ಕುಟುಂಬದ ಹರಕೆಯೊಂದು ಬಾಕಿಯಿದೆಯೆಂಬ ರಾಗ ನಿರಂತರವಾಗಿ ಬರುತ್ತಲೇ ಇದೆ.

ಇದರ ಜೊತೆಗೆ ಇತ್ತೀಚೆಗೆ ಹೊಸದೊಂದು ಆದೇಶ ಹೊರಬಿದ್ದಿದೆ. ಅದೇನೆಂದರೆ, ನಮ್ಮ ನಾಗಬನದ ಕಲ್ಲು ಮನೆಗೆ ಬೆನ್ನುಹಾಕಿ ದಕ್ಷಿಣ ದಿಕ್ಕಿಗಿದೆಯಂತೆ. ಅದೇ ಜಾಗದಲ್ಲಿ ನನ್ನ ಪೂರ್ವಿಕರು ಶತಮಾನಗಳನ್ನು ಕಳೆದಿದ್ದರೂ ಇಲ್ಲಿಯವರೆಗೆ ಪ್ರಸ್ತಾಪವಾಗದಿದ್ದ ಈ ದಿಕ್ಕಿನ ದೋಷ ಈಗ ಪ್ರಸ್ತಾಪವಾಗಿರುವುದಷ್ಟೇ ಅಲ್ಲ, ಗೋಪುರ ನಿರ್ಮಿಸಿ ಪ್ರತಿಷ್ಠೆ ಇತ್ಯಾದಿಗಳನ್ನು ಮಾಡಲು ಬೇಕಾಗುವ ಅಂದಾಜು ಖರ್ಚುಪಟ್ಟಿಯನ್ನು ಜೋಯಿಸರು ಹೇಳಿಯಾಗಿದೆ. ಲಕ್ಷಕ್ಕೂ ಮೀರಿ ಬೇಕಾಗುವ ಈ ವಿನಿಯೋಗಕ್ಕಾಗಿ ಬೆಳೆದು ನಿಂತ ಹಾಡಿ (ಕಾಡು)ಯ ಮರಗಳನ್ನು ಕಡಿದು, ದುಡ್ಡು ಒಟ್ಟು ಮಾಡುವ ಯೋಜನೆಗಳು ರೂಪುಗೊಳ್ಳುತ್ತಿದೆ. ಕುಟುಂಬದ ಹಿರಿ-ಕಿರಿಯ ತಲೆಯಲ್ಲಿ ತಾವು ಬೆಳಕು ಕಾಣಬೇಕಾದರೆ ನಾಗನ ಕಲ್ಲು ತಮ್ಮ ಮನೆಯ ಕಡೆ ತಿರುಗಬೇಕು ಎಂಬ ಭ್ರಮೆ ಹರಿಯುತ್ತಿದ್ದು, ನಾಗನ ಬನ ಬೆಳಾರ್ ಆಗುವ ಕಾಲ ಸಮೀಪಿಸುತ್ತಿದೆ.

ವಿಚಿತ್ರವೆಂದರೆ ತಳ ಸಮುದಾಯದ ಪರ್ಯಾಯ ಆರಾಧನಾ ಮಾದರಿಯಾದ ಭೂತ-ದೈವಗಳೂ ಈ ನಾಗ ಸಂಬಂಧಿ ಆಜ್ಞೆಗಳನ್ನು ಯಥಾವತ್ ಪಾಲಿಸುವಂತೆಯೇ ಕಡ್ಡಾಯ ಮಾಡುತ್ತವೆ. ಬಂಡವಾಳ ಹೂಡದೆ ಪೂಜಾ ಹಕ್ಕುಪಡೆದ ದ್ವಿದ ಸಮುದಾಯ ಪಾತ್ರಿಯಾಗಿ, ಪುರೋಹಿತನಾಗಿ, ಅಡುಗೆಯವನೂ ಸಂತರ್ಪಣೆಗೆ ಒಳಗಾಗುವವನೂ ಆಗಿ ಬಹುಪಾತ್ರದಲ್ಲಿ ಅಭಿನಯಿಸಿ, ಅನಿವಾರ್ಯವೆನಿಸಿರುವುದರಿಂದ ಬಹುಸಂಖ್ಯಾತ ತಳಸಮುದಾಯದ ಜುಟ್ಟು ವೈದಿಕರ ಭದ್ರಮುಷ್ಟಿಗೆ ವರ್ಗಾವಣೆಗೊಳ್ಳುವಲ್ಲಿ ಈ ಭಾಗದಲ್ಲಿ ನಾಗಾರಾಧನೆ ಪರಿಣಾಮಕಾರಿ ಕೆಲಸ ಮಾಡಿದೆಯಂದೇ ಹೇಳಬೇಕು.

> **ನಾಗನ ಜೊತೆಯಲ್ಲಿ ಭಕ್ತಾದಿಗಳು ವಾಗ್ವಾದಕ್ಕೆ ಇಳಿಯದೆ ತಪ್ಪಿಸಿಕೊಳ್ಳವ ಯತ್ನ ಮಾಡುವುದೇ ಹೆಚ್ಚು. ಒಮ್ಮೆ ಮಾತು ಬಿತ್ತು ಎಂದರೆ ಸತ್ಯದೇವತೆಯಾದ ನಾಗನ ಮಾತನ್ನು ಮೀರುವಂತಿಲ್ಲವಾಗಿ, ನಾಗನೆಂದರೆ ಜನಸಮುದಾಯದಲ್ಲಿ ಭಕ್ತಿಗಿಂತ ಭಯವೇ ಹೆಚ್ಚು.ಈ ಭಯವನ್ನು ಸರಿಯಾಗಿಯೇ ಬಳಸಿಕೊಳ್ಳುವ ಪುರೋಹಿತವರ್ಗ, ಜ್ಯೋತಿಷ್ಯದ ಕುರಿತು ಪ್ರತಿಕ್ರಿಯಿಸುತ್ತಾ ಪೆರಿಯಾರ್ ವರು ಹೇಳುವ, 'ಈ ಜ್ಯೋತಿಷಿಗಳು, ಮಾಂತ್ರಿಕರು ಮತ್ತು ಪುರೋಹಿತರು ಜನರ ಕಠಿಣ ಪರಿಶ್ರಮದ ದುಡಿಮೆ ಯನ್ನು ಶೋಷಿಸುತ್ತಾರೆ. ಈ ಮೂರು ಒಳಸಂಚುಗಾರರು ತಮ್ಮ ಕುಹಕವನ್ನು ತಿಳಿಯದಂತೆ ಮಾಡುತ್ತಾರೆ. ಈ ಮೂಲಕ ತಾವು ದೇವರ ಪ್ರೀತ್ಯರ್ಥವಾಗಿಯೇ ಇದನ್ನೆಲ್ಲ ಮಾಡುತ್ತೇವಲ್ಲದೆ ಸಂಚುಗಾರರ ಹೊಟ್ಟೆ ತುಂಬಿಸಲಿಕ್ಕಲ್ಲ ಎಂಬುದನ್ನು ನಂಬಿಸಲು ಪ್ರಯತ್ನಿಸುತ್ತಾರೆ' ಎಂಬ ಮಾತನ್ನು ಅಕ್ಷರಶಃ ನಿಜಗೊಳಿಸಿ ಸುಲಿಗೆಯ ಚಕ್ರವನ್ನು ವಿಸ್ತರಿಸುತ್ತಿದ್ದಾರೆ.**

ಮೇಲಿನ ವಿವರ ಮತ್ತು ಉದಾಹರಣೆ ಮೂಲಕ ನಾವು ಒಂದು ವಿಚಾರವನ್ನು ಸ್ಪಷ್ಟವಾಗಿ ಗ್ರಹಿಸಬಹುದು. ಇದು ನನ್ನೂರಿನ ಒಂದು ಬನದ ಸಂದರ್ಭ ಮಾತ್ರವಲ್ಲ. ಪ್ರತಿ ಊರಿನ ಪ್ರತಿ ಬನಗಳು ಈ ರೀತಿ ಜೀರ್ಣೋದ್ಧಾರದ ಕಕ್ಷೆಗೆ ಒಳಪಡುತ್ತಾ ಹೋಗಿ ಆತ್ಯಂತಿಕವಾಗಿ ಮಂಡಲ ಸೇವೆಯಂತಹ ಮಹಾಸೇವೆಯನ್ನು ಪಡೆಯುವಂತಾದರೆ ಒಂದೊಂದು ಬನವು ಏನಿಲ್ಲವೆಂದರೂ ೨೫-೩೦ ಲಕ್ಷದ ವಿನಿಯೋಗ ವನ್ನು ಬೇಡುತ್ತವೆ. ಈ ಹಣದ ಬಹುಪಾಲು ಸೇರುವುದು ಬಹುಪಾತ್ರಗಳಲ್ಲಿ ಆರಾಧನೆಯೊಳಗೆ ಹಾಸು-ಹೊಕ್ಕಾಗಿ ರುವ ವರ್ಗಕ್ಕೆ. ಈ ಖರ್ಚನ್ನು ಹೊಂದಿಸಬೇಕಾದ ಸಮುದಾಯಗಳು ತಮ್ಮ ಜೀವಿತದೂದ್ದಕ್ಕು ನೇರವೋ ವಕ್ರವೋ ಆದ ದಾರಿಯಲ್ಲಿ ದುಡಿಯುತ್ತಲೇ ಇರಬೇಕು. ಅದಕ್ಕೆ ಪರ್ಯಾಯವಾಗಿ ೫ ನಯಾಪೈಸೆ ಬಂಡವಾಳ ಹೂಡದೆ ಮತ್ತೊಂದು ವರ್ಗ ಆದಾಯದ ದಾರಿಕಂಡುಕೊಳ್ಳಬೇಕು. ಈ ಯೋಜನೆ ಮನುಸ್ಮೃತಿಯ ಕೆಳಗಿನ ಮಾತುಗಳಿಗೆ ತಕ್ಕಂತಿದೆ.

ವಿಸ್ರಬ್ದಂ ಬ್ರಾಹ್ಮಣಃ ಶೂದ್ರಾತ್ ದ್ರವ್ಯೋಪಾದಾನಂ ಆಚರೇತ್ ।

ನ ಹಿ ತಸ್ಯಾಸ್ತಿ ಕಿಂಚಿತ್ ಸ್ವಂ ಭರ್ತೃಹಾರ್ಯ ಧನೋ ಹಿ ಸಃ ॥ (೮-೪೧೭)

(ಬ್ರಾಹ್ಮಣನು ಸಂಶಯಪಡದೆ ಶೂದ್ರನ ಹಣವನ್ನು ಕಿತ್ತುಕೊಳ್ಳಬೇಕು.ಏಕೆಂದರೆ ಶೂದ್ರನಿಗೆ ಸ್ವಂತ ಸಂಪತ್ತೆಂಬುದೇ ಇಲ್ಲ; ಅವನ ಐಶ್ವರ್ಯವೆಲ್ಲವೂ ಬ್ರಾಹ್ಮಣನಿಗೆ ಸೇರತಕ್ಕದ್ದು)

ಶಕ್ತೇನಾಪಿ ಹಿ ಶೂದ್ರೇಣ ನ ಕಾರ್ಯೋ ಧನ ಸಂಚಯಃ । ಶೂದ್ರೋ ಹಿ ಧಮಾಸಾದ್ಯ ಬ್ರಾಹ್ಮಣಾನೇವ ಭಾಧತೇ ॥ (೧೦-೧೨೯)

(ಹಣ ಮಾಡುವ ಶಕ್ತಿಯಿದ್ದರೂ ಶೂದ್ರನು ಹಣ ಮಾಡಬಾರದು. ಏಕೆಂದರೆ ಶೂದ್ರನು ಹಣ ಮಾಡಿದರೆ ಅದು ಬ್ರಾಹ್ಮಣರಿಗೆ ಬಾಧೆಯನ್ನು ಉಂಟು ಮಾಡುತ್ತದೆ)- (ಡಾ. ಕೆ.ಎಸ್. ಭಗವಾನ್ ; ೨೦೦೫) ತಮ್ಮ ಧಾರ್ಮಿಕ ಅನುಸಂಧಾನದಲ್ಲಿ ತಾವೇ ಆದರ್ಶವಾಗಿಟ್ಟು ಕೊಳ್ಳುವ ಮನುಸ್ಮೃತಿ ಮಾತುಗಳನ್ನು ವರ್ತಮಾನಕಾಲ ದಲ್ಲಿ ಹೊಸ ತಂತ್ರಗಳ ಮೂಲಕ ಅಕ್ಷರಶಃ ಆಲಿಸಿ-ಪಾಲಿಸಿ ತಾವು ಸಾಧಿಸಿ ಉಳಿಸಿಕೊಳ್ಳ ಬೇಕಾದ ಹಿಡಿತವನ್ನು ಹೀಗೆ ಕಾಯ್ದಿಟ್ಟುಕೊಳ್ಳುತ್ತಿರುವ ರೀತಿ ಮತ್ತು ಸಮಾಜದ ಅವನತ ವರ್ಗ ಆ ಸಂಮೋಹನಕ್ಕೆ ಒಳಗಾಗಿರುವುದನ್ನು ಬಗೆಯನ್ನು ಕಂಡಾಗ ತಳ ಸಮುದಾಯದ ಪಾಲಿಗೆ ಭವಿಷ್ಯ ಆಶಾದಾಯಕವಾಗಿ ಲ್ಲವೆಂದೇ ಹೇಳಬೇಕು. ನಮ್ಮ ಬ್ರಾಂತುಗಳನ್ನು, ಭಯ-ನಂಬಿಕೆಗಳನ್ನು ನಗದೀಕರಿಸಿಕೊಳ್ಳುತ್ತಾ ನಾಗನ ಹೆಸರಿನಲ್ಲಿ ರೂಪಿತವಾಗುತ್ತಿರುವ ಈ ವಿಸ್ತೃತ ಮತ್ತು ವ್ಯವಸ್ಥಿತ ಸ್ವರೂಪದ ದೂರಾಲೋಚನೆಯ

(೪೫ನೇ ಪುಟಕ್ಕೆ)

ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಲಾಗದು

ಡಾ. ಎಸ್. ನಟರಾಜ್ ಬೂದಾಳು

ಲೋಕದ ನಿಜವಾದ ನೋಟವನ್ನು ಒದಗಿಸಿ ಕೊಡುವುದೇ ಒಬ್ಬ ಕಲಾವಿದನಿಗೆ ನಿಜವಾದ ಸವಾಲು. ಇಂದ್ರಿಯಗಳ ಮೂಲಕ 'ಕಾಣುವ' ಈ ಲೋಕವನ್ನು ಕಾಣಿಸಿಕೊಡುವ ಈ ಪ್ರಕ್ರಿಯೆಯಲ್ಲಿನ ಅನೇಕ ತೊಡಕುಗಳನ್ನು ಬುದ್ಧ ಮತ್ತು ನಂತರದ ಬೌದ್ಧ ತಾತ್ವಿಕರು ನಿವಾರಿಸಿಕೊಡುವ ಪ್ರಯತ್ನ ಮಾಡಿದ್ದಾರೆ. ಉದಾಹರಣೆಗೆ ನೋಟಕ್ಕೆ ಸಂಬಂಧಿಸಿದ ಹಾಗೆ, 'ನೋಡಬೇಕಾದ ವಸ್ತು', 'ನೋಡುವ ವ್ಯಕ್ತಿ' ಮತ್ತು 'ನೋಟ' ಈ ಮೂರರಲ್ಲಿ ಯಾವುದಕ್ಕೂ ಸ್ವತಂತ್ರ ಅಸ್ತಿತ್ವವಿಲ್ಲ ಎಂಬುದು ಅತಿ ಮುಖ್ಯವಾದುದು. ಇವೆಲ್ಲವೂ ಸಂಬಂಧದಲ್ಲಿ ಅಸ್ತಿತ್ವಕ್ಕೆ ಬಂದು 'ನೋಟವೆಂಬ' ಪ್ರಕ್ರಿಯೆ ಉಂಟಾಗುತ್ತದೆ. ಸಂಬಂಧ ಪೂರ್ವದಲ್ಲಿಯೇ ಯಾವುದಕ್ಕೂ ಅಸ್ತಿತ್ವವಿರುವುದಿಲ್ಲ. ಭಾರತೀಯ ಮೀಮಾಂಸೆಗೆ ಭಿನ್ನಮತ ಸುರುವಾಗುವುದು ಇಲ್ಲಿಯೇ. ಮೇಲಿನ ಮೂರು ಸಂಗತಿಗಳ ನಡುವೆ ಸಂಬಂಧ ಉಂಟಾಗುವ ಮುನ್ನವೇ ಅವುಗಳು ಅಥವಾ ಅವುಗಳಲ್ಲಿ ಯಾವುವಾದರೂ ಅಸ್ತಿತ್ವದಲ್ಲಿ ಇದ್ದವೇ?

ಲೋಕದ ನಿಜವಾದ ನೋಟವನ್ನು ಒದಗಿಸಿಕೊಡುವುದೇ ಒಬ್ಬ ಕಲಾವಿದನಿಗೆ ನಿಜವಾದ ಸವಾಲು. ಇಂದ್ರಿಯಗಳ ಮೂಲಕ 'ಕಾಣುವ' ಈ ಲೋಕವನ್ನು ಕಾಣಿಸಿಕೊಡುವ ಈ ಪ್ರಕ್ರಿಯೆಯಲ್ಲಿನ ಅನೇಕ ತೊಡಕುಗಳನ್ನು ಬುದ್ಧ ಮತ್ತು ನಂತರದ ಬೌದ್ಧ ತಾತ್ವಿಕರು ನಿವಾರಿಸಿಕೊಡುವ ಕ್ರಮಬದ್ಧವಾದ ಪ್ರಯತ್ನ ಮಾಡಿದ್ದಾರೆ. ಲೋಕದಲ್ಲಿ ಅನುಭವವೊಂದು ಉಂಟಾಗಲು ಮೂರು ಸಂಗತಿಗಳು ಅತ್ಯಗತ್ಯ. ಉದಾ ಹರಣೆಗೆ ನೋಟಕ್ಕೆ ಸಂಬಂಧಿಸಿದ ಹಾಗೆ, ಮೊದಲನೆಯದಾಗಿ 'ನೋಡಬೇಕಾದ ವಸ್ತು', ಎರಡನೆಯದಾಗಿ 'ನೋಡುವ ವ್ಯಕ್ತಿ' ಮತ್ತು ಮೂರನೆ ಯದಾಗಿ 'ನೋಟ' ಈ ಮೂರರಲ್ಲಿ ಯಾವುದಕ್ಕೂ ಸ್ವತಂತ್ರ ಅಸ್ತಿತ್ವವಿಲ್ಲ ಎಂಬುದು ಅತಿ ಮುಖ್ಯವಾದುದು. ಇವೆ ಲ್ಲವೂ ಸಂಬಂಧದಲ್ಲಿ ಅಸ್ತಿತ್ವಕ್ಕೆ ಬಂದು 'ನೋಟವೆಂಬ' ಪ್ರಕ್ರಿಯೆ ಉಂಟಾಗುತ್ತದೆ. ಸಂಬಂಧ ಪೂರ್ವದಲ್ಲಿಯೇ ಯಾವುದಕ್ಕೂ ಅಸ್ತಿತ್ವವಿರುವುದಿಲ್ಲ. ಭಾರತೀಯ ಮೀಮಾಂಸೆಗೆ ಭಿನ್ನಮತ ಸುರುವಾಗು ವುದು ಇಲ್ಲಿಯೇ. ಇಲ್ಲಿರುವ ಪ್ರಶ್ನೆ ಯಾವುದೆಂದರ: ಮೇಲಿನ ಮೂರು ಸಂಗತಿಗಳ ನಡುವೆ [illegible] ಉಂಟಾಗುವ ಮುನ್ನವೇ ಅವುಗಳು ಅಥವಾ ಅವುಗಳಲ್ಲಿ ಯಾವುವಾದರೂ ಅಸ್ತಿತ್ವದಲ್ಲಿ ಇದ್ದವೇ?

ಈ ಪ್ರಶ್ನೆ ಎದುರಿಗೆ ಬಂದಾಗ ಎಲ್ಲ ಚಿಂತನಾ ಪ್ರಸ್ಥಾನಗಳೂ ತುಂಬಾ ಎಚ್ಚರದಿಂದ ಮತ್ತು ಹಠದಿಂದ ತಮ್ಮ ನಿಲುವಿಗೆ ಅಂಟಿಕೊಳ್ಳುತ್ತವೆ. ಈ ಮೂರರಲ್ಲಿ (ಗ್ರಹಿಸಬೇಕಾದ ವಸ್ತು, ಗ್ರಹಿಸುವ ವ್ಯಕ್ತಿ ಮತ್ತು ಗ್ರಹಿಕೆ) ಯಾವುದೊಂದನ್ನಾದರೂ ಮೊದಲೇ ಇತ್ತೆಂದು ಪ್ರತಿಷ್ಠಾಪಿಸಲು ಹಾತೊರೆಯುತ್ತವೆ. ಅದು ಸಾಧ್ಯವಾಗದೆ ಹೋದರೆ ಭಾರತೀಯ ಸಂದರ್ಭದಲ್ಲಿ, ಶಾಶ್ವತ ಆತ್ಮದ ಕಲ್ಪನೆಯನ್ನು ಎದುರಿಗೆ ಇಡಲು ಬಯಸುತ್ತವೆ. ಇಲ್ಲಿ ಹೇಗಾದರೂ ಮಾಡಿ ಯಾವುದಾದರೊಂದನ್ನು ಶಾಶ್ವತ ಗೊಳಿಸುವ ಹಠವಿದೆ. ಬೌದ್ಧ ಮಾಧ್ಯಮಿಕರೂ ಮೊದಲು ಅವರನ್ನೇ ಎದುರುಗೊಳ್ಳುತ್ತಾರೆ. ಭಾರತೀಯ ವೈದಿಕ ಪ್ರಸ್ಥಾನಗಳ ನಿಲುವೇನೆಂದು ಮೊದಲು ಗಮನಿ ಸೋಣ.

ಪೂರ್ವಪಕ್ಷದ ನಿಲುವು:

ಭಾರತೀಯವೆಂದು ಕರೆದುಕೊಳ್ಳುತ್ತಿರುವ ಚಿಂತನಾ ಪ್ರಸ್ಥಾನಗಳ ಸ್ಥೂಲ ನಿಲುವನ್ನು ಹೀಗೆ ಸಂಗ್ರಹಿಸಬಹುದು: (ಈ ಕೆಳಗಿನ ಎರಡು ಕಾರಿಕೆಗಳನ್ನು ನಾಗಾರ್ಜುನನ ಮೂಲಮಾಧ್ಯಮಕಕಾರಿಕಾದಿಂದ ಉದ್ಧರಿಸಲಾಗಿದೆ. ಮೂರನೆಯದು ಕಾಳಿದಾಸನ ಮಾಲವಿಕಾಗ್ನಿಮಿತ್ರ ನಾಟಕದ ನಾಂದಿಗೀತೆ)

೧. ದರ್ಶನ ಶ್ರವಣ ವೇದನಾದಿಗಳು ಯಾರಿಗೆ ಉಂಟೋಅವರು ಅವೆಲ್ಲವುಗಳಿಗಿಂತ ಮೊದಲೇ ಅಸ್ತಿತ್ವದಲ್ಲಿರುತ್ತಾರೆ ಎಂದು ವೇದಾಂತಿಗಳು ಹೇಳುತ್ತಾರೆ. (ಕಾರಿಕೆ ೧ ಅಧ್ಯಾಯ ೯)

೨. ಜ್ಞಾತೃವೇ ಇಲ್ಲದೆ ದರ್ಶನ ಇತ್ಯಾದಿ ಜ್ಞಾನಗಳು ಹೇಗಿರಲು ಸಾಧ್ಯ?

ಆದುದರಿಂದ ಇವುಗಳಿಗೆ ಮುನ್ನ ಆತನಿರಲೇಬೇಕು. (ಕಾರಿಕೆ ೨ ಅಧ್ಯಾಯ ೯)

೩. ನನೆಯಿರ ತೋಂ ತೋಂ ತನಾನಾ
ಧೀಂ ತಕ್ಕಿಟ ಧೀಂ ತೋಂ ತನಾನಾ...
ಮೂಲೋಕದೇಕೈಕ ಪಾಲಿಕನಾ
ಪಾಲಕನಾ ಮುತಾಲಿಕನಾ
ಸರ್ವಬಿಟ್ಟ ಕಾಪಾಲಿಕನಾ
ಆ ಅವನಾ ಅಂಥವನಾ ಶಿವನಾ....
ಎಂದೋ ಹೊಳೆವವನಾ
ಕಣ್ಣನೆ ಕಳೆವವನಾ
ತಿಳಿವು ತಿಳಿವುದು ತಿಳಿವವನು
ಎಂಬೀ ತ್ರೈಭಿನ್ನವ ತೊಳೆವವನಾ
ಉಳಿದೂ ಕಳೆವವನಾ
ಕಳೆದೂ ಉಳಿವವನಾ

ಆ ಅಂಥವನಾ ಪ್ರಾರ್ಥನಾ ಇದು ಶಿವನಾ...(ಕಾಳಿದಾಸನ ಮಾಲವಿಕಾಗ್ನಿಮಿತ್ರ ನಾಟಕದ ನಾಂದಿಗೀತೆ)

ಇದು ಪ್ರತಿಪಕ್ಷದ ಮೊದಲ ತಕರಾರು. ಯಾವುದೇ ಪ್ರಕ್ರಿ[illegible] ಅಂದರೆ ಗ್ರಹಿಸಬೇಕಾ ಗಿರುವ ಸಂಗತಿ, ಗ್ರಹಿಸುವ ವ್ಯಕ್ತಿ ಮತ್ತು ಗ್ರಹಿಕೆ – ಈ ಮೂರು ಸಂಗತಿಗಳು ಅಥವಾ ಇವುಗಳಲ್ಲಿ ಯಾವುದಾದರೂ ಒಂದನ್ನು ಶಾಶ್ವತವಾಗಿ ಪ್ರತಿಷ್ಠಾಪಿಸುವ ಪ್ರಯತ್ನವನ್ನು ಅವರು ಮಾಡುತ್ತಾರೆ. ಇಲ್ಲಿನ ತಕರಾರಿನ ಸ್ವರೂಪವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿ ಕೊಳ್ಳಬಹುದು.

೧) ಈ ಮೂರೂ ಸಂಗತಿಗಳು (ಗ್ರಹಿಸಬೇಕಾದದ್ದು, ಗ್ರಹಿಸುವ ವ್ಯಕ್ತಿ, ಮತ್ತು ಗ್ರಹಿಕೆ) ಈ ಕ್ರಿಯೆಗೆ ಮುನ್ನ, ಕ್ರಿಯೆ ನಡೆಯುವಾಗ ಮತ್ತು ಕ್ರಿಯೆಯ ನಂತರ ಯಾವಾಗಲಾದರೂ 'ಸ್ವತಂತ್ರ'ವಾಗಿ ಅಸ್ತಿತ್ವದಲ್ಲಿ ಇದ್ದವೇ?

೨) ಈ ಪ್ರಕ್ರಿಯೆಯಲ್ಲಿ ಪಾಲ್ಗೊಂಡರೂ, ತಾನು ಮಾತ್ರ ಬದಲಾಗದೆ, ಇದನ್ನು ನಿಯಂತ್ರಿಸುವ ಇನ್ನಾವುದಾದರೂ ಸ್ವತಂತ್ರವಾದುದು ಉಂಟೇ?



ಲೋಕದಲ್ಲಿ ಇಂದ್ರಿಯಗಳ ಮೂಲಕ ನಮಗೆ ಉಂಟಾಗುವ ನೋಟ, ಸ್ಪರ್ಶ, ವಾಸನೆ ಇತ್ಯಾದಿ ಅನುಭವಗಳನ್ನು ಹೀಗೆ ಮೂರು ಅಂಶಗಳನ್ನಾಗಿ (ತಿಳಿವು, ತಿಳಿವುದು ಮತ್ತು ತಿಳಿವವನು) ವಿಭಜಿಸಿಕೊಂಡು ನೋಡುವುದು ಒಂದು ಕ್ರಮ. ವೇದಾಂತಿಗಳ ಮತ್ತು ಧ್ವನಿವಾದಿಗಳ ಮೇಲಿನ ನಿಲುವನ್ನು, ಅದರ ಯುಕ್ತಾಯುಕ್ತತೆಯನ್ನು ಬೌದ್ಧ ಮಾಧ್ಯಮಿಕ ನಾಗಾರ್ಜುನ ಪರೀಕ್ಷಿಸುತ್ತಾನೆ. ಈ ವಿಚಾರ ತುಂಬ ಸರಳವೆನ್ನುವ ಧಾಟಿಯಲ್ಲಿ ಪ್ರತಿಪಕ್ಷಗಳು ನಿರ್ವಹಿಸುತ್ತವೆ. ಗ್ರಹಿಕೆ ಇದೆಯಾದ್ದರಿಂದ ಗ್ರಹಿಸುವವನು ಇರಲೇಬೇಕು. ಹಾಗಾಗಿ ಗ್ರಹಿಕೆಗಿಂತ ಮುನ್ನ ಆತನಿರಬೇಕು. ನೋಡುವವನೇ ಇಲ್ಲದೆ ನೋಟವೆಂಬುದು ಜರುಗಲು ಸಾಧ್ಯವೆ? ಅವನು ಮೊದಲೇ ಇದ್ದುದರಿಂದಲೇ ನೋಟವೆಂಬುದು ಜರುಗುತ್ತದೆ – ಇದು ಪೂರ್ವಪಕ್ಷದ

ವಾದ. ಅಂತಿಮವಾಗಿ ಯಾವುದಾದರೂ ಒಂದನ್ನು ಶಾಶ್ವತವಾಗಿ ಪ್ರತಿಷ್ಠಾಪಿಸುವ ಉದ್ದೇಶ ಇಲ್ಲಿ ಸ್ಪಷ್ಟವಾಗಿದೆ. ನಾವು ಕೂಡ ನಿತ್ಯದ ಲೋಕವ್ಯವಹಾರವನ್ನು ಹೀಗೆಯೇ ನಡೆಸುತ್ತೇವೆ. ಅಂದರೆ ಇವೆಲ್ಲ ಶಾಶ್ವತವಾಗಿ ಇವೆ ಎಂಬಂತೆ ವ್ಯವಹರಿಸಿ ಅದೇ ನಮಗೆ ರೂಢಿಯಾಗಿದೆ. ಇನ್ನು ಮೂರನೆಯ ಉದ್ಧರಣೆ ಕಾಶ್ಮೀರ ಧ್ವನಿವಾದಿಗಳ ನಿಲುವು. ಗ್ರಹಿಕೆಯೆಂಬ ಪ್ರಕ್ರಿಯೆಯಲ್ಲಿನ ಮೂರು ಅಂಶಗಳನ್ನು ಅವರೂ ಗುರುತಿಸುತ್ತಾರೆ.ಆದರೆ ಈ ಮೂರನ್ನೂ ನಿರ್ವಹಿಸುತ್ತಿದೆ ಎನ್ನಲಾಗುವ ಮತ್ತೊಂದನ್ನು ಮಾನ್ಯ ಮಾಡುತ್ತಾರೆ. ಆತ್ಮದ ಬದಲಿಗೆ ಬೇರೊಂದು ಹೆಸರನ್ನು ಇಡುತ್ತಾರಷ್ಟೆ. ಮೊದಲನೆಯ ನಿಲುವಿಗೆ ನಾಗಾರ್ಜುನನ ಪ್ರತಿಕ್ರಿಯೆಯನ್ನು ಗಮನಿಸೋಣ:

ದರ್ಶನ, ಶ್ರವಣ ವೇದನಾದಿಗಳಿಗೆ ಮುನ್ನವೇ ಇದ್ದು ಗ್ರಹಿಸುವವನ ಅಸ್ತಿತ್ವವನ್ನು ಗ್ರಹಿಸುವುದಾದರೂ ಹೇಗೆ?(ಕಾರಿಕೆ ೨ ಅಧ್ಯಾಯ ೯)

ಇದು ನಾಗಾರ್ಜುನನ ಮೊದಲ ಆಕ್ಷೇಪ. ಗ್ರಹಿಕೆಗಿಂತ ಮುನ್ನವೇ ಗ್ರಹಿಸುವವನ ಅಸ್ತಿತ್ವವನ್ನು ಒಪ್ಪಿಕೊಳ್ಳುವುದೆಂದರೆ ಅವನ ಉದ್ಯೋಗವಾದ ಗ್ರಹಿಕೆಯಿಂದಲೇ ಅವನನ್ನು ದೂರಮಾಡಿದಂತಾಗುತ್ತದೆ. ಯಾವ ಕ್ರಿಯೆಯಿಂದ ಅವನು ಗ್ರಹಿಸುವವನು ಆಗಿದ್ದಾನೋ ಆ ಕ್ರಿಯೆಯೇ ಇರದಿದ್ದ ಮೇಲೆ ಅವನು ಅದಾಗುವುದೆಂತು? ಜೊತೆಗೆ, ದರ್ಶನ ಇತ್ಯಾದಿ ಗ್ರಹಿಕೆಗಳು ಇಲ್ಲದೆಯೂ

ಗ್ರಹಿಸುವವನು ಇರಬಲ್ಲನೆಂದು ನಿರ್ಧರಿಸುವುದಾದರೆನಿಸ್ಸಂದೇಹವಾಗಿ ಆತನಿಲ್ಲದೆಯೂ ದರ್ಶನಾದಿಗಳು ಇರಬಲ್ಲವು. (ಕಾರಿಕೆ ೪ ಅಧ್ಯಾಯ ೯)

ಗ್ರಹಿಸುವವನು ಉಂಟಾಗಲು ಗ್ರಹಿಸುವ ವಸ್ತು ಇರಲೇಬೇಕಿಲ್ಲ ಎನ್ನುವುದಾದರೆ ಗ್ರಹಿಸಬೇಕಾದ ವಸ್ತು ಉಂಟಾಗಲೂ ಗ್ರಹಿಸುವವನ ಹಂಗಿರುವುದಿಲ್ಲ. ಇದು ಅಸಂಗತ. ಪರಸ್ಪರಾವಲಂಬನೆಯೊಂದಿಗೆ ಮಾತ್ರ ಅವುಗಳಿಗೆ ಅಸ್ತಿತ್ವ ಸಾಧ್ಯವೇ ಹೊರತು ಗ್ರಹಿಸುವವನಾಗಲೀ, ಗ್ರಹಿಸುವ ವಸ್ತುವಾಗಲೀ ಸ್ವತಂತ್ರವಾಗಿ ಅಸ್ತಿತ್ವಕ್ಕೆ ಬರಲಾರವು. ಲಕ್ಷಣಗಳ ಹೊರತಾಗಿ ವಸ್ತುವೂ, ವಸ್ತುವಿನ ಹೊರತಾಗಿ ಲಕ್ಷಣಗಳು ಇರಲಾರವು. ಸ್ವತಂತ್ರ ಅಸ್ತಿತ್ವವನ್ನು ಅವು ಸಾಧಿಸಿಕೊಳ್ಳಬಲ್ಲವಾದರೆ ಉಂಟಾಗುವ ಅರಾಜಕತೆಗೆ ಯಾವುದೇ ಸುಸಂಬದ್ಧ ಸಮಜಾಯಿಷಿ ಇರುವುದಿಲ್ಲ. ಇಲ್ಲಿ ಉಳಿಯುವ ಇನ್ನೊಂದು ಸಂಶಯವೆಂದರೆ ಗ್ರಹಿಸುವವನೊಬ್ಬ ಯಾವುದಾದರೂ ಒಂದು ಸಂವೇದನೆಯ ಸಂಬಂಧದಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ನಂತರ ಇನ್ನೊಂದು ಸಂವೇದನೆಯ ಸಂಪರ್ಕಕ್ಕೆ ಬಂದರೆ, ಅಂದರೆ ನೋಡುತ್ತಿರುವವನು ಅದರ ಜೊತೆಗೆ ಕೇಳಲು ತೊಡಗಿದರೆ, ಎರಡನೆಯ ಸಂವೇದನೆಯ ಮುನ್ನವೇ ಅಸ್ತಿತ್ವದಲ್ಲಿ ಇದ್ದ ಹಾಗಲ್ಲವೆ? ಎಂಬುದು ಇಲ್ಲಿಯ ಸಂದೇಹ. ಅದನ್ನೂ ನಾಗಾರ್ಜುನ ಪರಿಹರಿಸುತ್ತಾನೆ.

ನೋಡುಗನೊಬ್ಬ ಅದೇ ವೇಳೆಯಲ್ಲಿ ಶ್ರಾವಕ ಸಂವೇದಿಯೂ ಆಗಿದ್ದಲ್ಲಿಪ್ರತಿಯೊಂದು ಅನುಭವಕ್ಕೆ ಮುನ್ನ ಒಬ್ಬೊಬ್ಬನಿರಬೇಕಾಗುತ್ತದೆ. ಅದು ಯುಕ್ತವಾದುದದಲ್ಲ.(ಕಾರಿಕೆ ೮ ಅಧ್ಯಾಯ ೯)

ನಾಗಾರ್ಜುನನ ಅಭಿಮತದಲ್ಲಿ; ನೋಡುಗ, ಕೇಳುಗರು ಒಂದೇ ಆಗಿರುತ್ತಾರೆ ಎಂಬ ಮಾತಿರಲಿ, ಒಬ್ಬನೇ ನೋಡುಗ ಒಂದೇ ವಸ್ತುವನ್ನು ಅನೇಕ ಸಲ ನೋಡಿದಾಗಲೂ ಆ ಎಲ್ಲ ಅನುಭವಗಳೂ ಒಂದೇ ಆಗಿರಲು ಸಾಧ್ಯವಿಲ್ಲ. ನಿರಂತರ ಬದಲಾವಣೆಯೇ ಲಕ್ಷಣವಾ ಗಿರುವಲ್ಲಿ

ಲೇಖನ ಸರಣಿಯನ್ನು ಕುರಿತು ಹಂಚಿಕೊಳ್ಳಬೇಕಾದ ಮಾತೊಂದಿದೆ. ಇದು ಪೂರ್ಣ ಪ್ರಮಾಣದ ಮೀಮಾಂಸಾ ಪ್ರಸ್ಥಾನವನ್ನು ಮಂಡಿಸುವ ಪ್ರಯತ್ನವಲ್ಲ. ಅದು ನನ್ನ ಅಳವಿಗೆ ಮೀರಿದ ಸಂಗತಿಯೆಂಬ ಅರಿವಿನೊಂದಿಗೇ ಈ ಆತುರದ ಪ್ರಯತ್ನ ಮಾಡುತ್ತಿದ್ದೇನೆ. ಈ ಪ್ರಸ್ಥಾನದ ಕೆಲವು ಪರಿಕಲ್ಪನೆಗಳನ್ನಾದರೂ ಪರಿಚಯಿಸಲು ಸಾಧ್ಯವಾಗುವುದೆಂಬ ವಿಶ್ವಾಸದ ಹಿನ್ನೆಲೆಯ ಬರವಣಿಗೆ ಇದು. ಇನ್ನೂ ಸರಳವಾಗಿ ನಿರೂಪಿಸಲು ಸಾಧ್ಯ ಎನ್ನುವ ಅಭಿಪ್ರಾಯವೂ ಬಂದಿದೆ. ಅದು ಸರಿ ಕೂಡ.

ಬೌದ್ಧ ಮಹಾಯಾನ ಪಂಥದ ಸಂಸ್ಥಾಪಕ ಗುರುವೆಂದೇ ಗೌರವಿಸಲ್ಪಡುವ ನಾಗಾರ್ಜುನ ಬಳಸಿದ್ದು ಅತ್ಯಂತ ಕ್ಲಿಷ್ಟವಾದ ಡೈಲೆಕ್ಟಿಕಲ್ ತರ್ಕಮಾರ್ಗ. ಅವನಿಗೆ ಇದು ಅನಿವಾರ್ಯ ಆಯ್ಕೆಯಾಗಿತ್ತು. ಏಕೆಂದರೆ ಬೌದ್ಧೇತರ ದರ್ಶನಗಳು ತರ್ಕದ ಹತಾರವನ್ನು ಬಳಸಿ ಸಮೂಹವನ್ನು ಯಶಸ್ವಿಯಾಗಿ ದಿಕ್ಕು ತಪ್ಪಿಸಿದ್ದವು. ಆ ಪ್ರತಿ ಪಕ್ಷಗಳ ವಾದವನ್ನು ಹತ ಮಾಡಲು ಅದಕ್ಕಿಂತ ಹರಿತವಾದ ತರ್ಕವನ್ನು ಅವನು ಬಳಸಲೇಬೇಕಿತ್ತು. ಹಾಗೆಯೇ ಬುದ್ಧಗುರು ತಿಳಿಸಿಕೊಟ್ಟಿರುವ ಶೂನ್ಯತೆಯನ್ನು ತರ್ಕ ಮುಕ್ತಗೊಳಿಸಬೇಕಿತ್ತು. ತರ್ಕವನ್ನು ಬಳಸಿಯೂ ಅದರ ಹಂಗಿನಿಂದ ಬಿಡಿಸಿ ತನ್ನ ತಾತ್ವಿಕತೆಯನ್ನು ಮಂಡಿಸಬೇಕಿತ್ತು. ಅಲ್ಲಮಪ್ರಭು ಕೂಡ ಬಯಲನ್ನು ನುಡಿಯಲಾರದ ಭಾಷೆಯನ್ನು ಮುರಿದುಕಟ್ಟಿ ತಾನು ಬಯಸಿದ್ದನ್ನು ನುಡಿಯುವಂತೆ ಮಾಡುತ್ತಾನೆ. ಹಾಗೆಂದು ಭಾಷೆಯ ಗೋಜಲಿನಲ್ಲಿ ಅಲ್ಲಮ ಸಿಲುಕಲಾರ. ಹಾಗೆಯೇ ನಾಗಾರ್ಜುನ ತರ್ಕದಲ್ಲಿ ಬಂಧಿಯಾಗಲೊಲ್ಲ. ಅವನೆದುರಿಗೆ ಪ್ರತಿಪಕ್ಷಗಳ ದಂಡೇ ಇದೆ. ಹಾಗಾಗಿ ನಾಗಾರ್ಜುನನ ತರ್ಕ ತುಂಬಾ ಹರಿತವಾಗಿದೆ. ಈ ಹರಿತವಾದ ತರ್ಕವನ್ನು ನಿರ್ವಹಿಸುವುದು ಆಯಾಸದ ಕೆಲಸ. ಗಮನಿಸಬೇಕಾದ ಸಂಗತಿಯೆಂದರೆ ನಾಗಾರ್ಜುನ ಪ್ರತಿವಾದಿಗಳ ಮಿಥ್ಯಾದೃಷ್ಟಿಯನ್ನು ಹತ ಮಾಡಲು ತರ್ಕದ ಬಳಕೆ ಮಾಡುತ್ತಾನೆಯೇ ಹೊರತು ತಾನು ಮಂಡಿಸುತ್ತಿರುವ ಬೌದ್ಧ ಧರ್ಮದ ಕೇಂದ್ರ ತಾತ್ವಿಕತೆಯಾದ ಮಧ್ಯಮ ಮಾರ್ಗವನ್ನು ಸಿದ್ಧಪಡಿಸಲು ಅಲ್ಲ. ಇನ್ನು ಅವನು ಮುಂದಿಡುತ್ತಿರುವುದು ಬುದ್ಧ ಗುರು ತಿಳಿಸಿಕೊಟ್ಟ ಬೌದ್ಧ ಧರ್ಮದ ಕೇಂದ್ರ ತಾತ್ವಿಕತೆಯಾದ ಮಧ್ಯಮ ಮಾರ್ಗ. ನಮ್ಮ ಸಾಮಾನ್ಯ ಯೋಚನಾ ಕ್ರಮ ಇದೆ-ಇಲ್ಲಗಳ ಮೂಲಕ ಲೋಕವನ್ನು ಗ್ರಹಿಸಿ ಜಾಡಿಗೆ ಬಿದ್ದಿದೆ. ಅದಕ್ಕೆ ಹೊರತಾದುದನ್ನು ಗ್ರಹಿಸಲು ಹತ ಮಾಡುತ್ತದೆ. ನಾವು ರೂಢಿಸಿಕೊಂಡಿರುವ ಭಾಷೆಯೂ ಅಷ್ಟೆ. ಇದೆ-ಇಲ್ಲಗಳ ಮೂಲಕವೇ ಲೋಕವನ್ನು ಹಿಡಿದುಕೊಡಲು ಪ್ರಯತ್ನಿಸುತ್ತದೆ. ಸಂಬಂಧಗಳಿಂದಾಗುತ್ತಿರುವ ಲೋಕವನ್ನು ನುಡಿಸಲು ಅದನ್ನು ಸಿದ್ಧ ಮಾಡಬೇಕು. ಸಂಬಂಧಗಳನ್ನೂ ಶಾಶ್ವತಗೊಳಿಸದಂತೆ ನೋಡಿಕೊಳ್ಳುತ್ತಿರಬೇಕು. ಬೌದ್ಧ ತಾತ್ವಿಕರು ಈ ನಿರಚನೆಯನ್ನು ಎಚ್ಚರದಿಂದ ನಿರ್ವಹಿಸುತ್ತಾರೆ. ಅಲ್ಲಮ ಭಾಷೆಯನ್ನೂ, ಸಂಬಂಧಗಳನ್ನೂ ಕಲಕುತ್ತಲೇ ಇರುತ್ತಾನೆ. ಈ ಟ್ರಾನ್ಸೆಂಡೆಂಟಲಿಸ್ಟ್ ದೃಷ್ಟಿಕೋನವನ್ನು ಅನ್ವಯಿಸಿಕೊಂಡಾಗ ಮಾತ್ರ ಬುದ್ಧ, ನಾಗಾರ್ಜುನ ಮತ್ತು ಅಲ್ಲಮರ ಯಾನದಲ್ಲಿ ಪಾಲ್ಗೊಳ್ಳಬಹುದು ಎಂಬುದು ನನ್ನ ವಿಶ್ವಾಸ. ಆಧುನಿಕ ಸಂದರ್ಭದ ಭಾಷಾವಿಜ್ಞಾನದಲ್ಲಿ ಈ ಮನೋಭಾವದ ಗಂಭೀರ ಪ್ರಯತ್ನಗಳು ನಡೆಯುತ್ತಿವೆ. ಆಧುನಿಕ ಭೌತವಿಜ್ಞಾನವು ಕೂಡ ಲೋಕಸಾಮಗ್ರಿ ಎಂಬುದೇನು ಎಂಬ ಪ್ರಶ್ನೆಗೆ ಇನ್ನೇನು ಕೊನೆಯ ಉತ್ತರ ಹೇಳಲು ತವಕಿಸುತ್ತಿದೆ. ಹೆಡ್ರಾನ್‌ಗಳ ನಡುವಿನ ಸಂಘರ್ಷಕ್ಕೆ ಎಲ್ಲವೂ ಸಿದ್ಧವಾಗಿದೆ. ನಾಗಾರ್ಜುನನ ತಾತ್ವಿಕತೆಯ ಜೊತೆಯಲ್ಲಿಟ್ಟು ನೋಡಬೇಕಾದ ಸಂಗತಿಗಳು ಇವುಗಳೇ ಹೊರತು ಭಾರತೀಯ ಆತ್ಮವಾದವೂ ಅಲ್ಲ, ಈಶ್ವರ ಪ್ರತ್ಯಭಿಜ್ಞೆಯೂ ಅಲ್ಲ. ಬುದ್ಧ, ನಾಗಾರ್ಜುನ ಮತ್ತು ಅಲ್ಲಮರ ಈ ಹುಡುಕಾಟಗಳ ಹಿಂದಿನ ಉದ್ದೇಶ ಸಾಮಾನ್ಯ ಲೋಕ ಜೀವಿಗಳ ಸಂಕಟ ನಿವಾರಣೆ ಎಂಬುದು ಎಲ್ಲಕ್ಕಿಂತ ಮುಖ್ಯವಾದುದು.

ನಾಗಾರ್ಜುನನ ತಾತ್ವಿಕತೆಯ ಅನುಸಂಧಾನ ಇದೀಗ ವಿಶ್ವ ಮಟ್ಟದ ಆಕರ್ಷಕ ಬೌದ್ಧಿಕ ಉದ್ಯೋಗ. ಅವನು ಕನ್ನಡದ ನೆಲದವನು. ಇಲ್ಲಿನ ನೀರು, ನೆಲ, ಅನ್ನ, ಶ್ರಮ, ಮತ್ತು ಹೂ-ಹಣ್ಣುಗಳು ಆ ಮಹಾಪ್ರತಿಭೆಯನ್ನು ರೂಪಿಸಿ ವಿಶ್ವಕ್ಕೆ ನೀಡಿವೆ. ಅದೇ ನೆಲದ ಅಲ್ಲಮ ಈ ಮಾತನ್ನು ದೃಢಪಡಿಸಿದ್ದಾನೆ. ಮಹಾನದಿ ಪಾತ್ರವನ್ನು ಬೇಡುವ ತಾತ್ವಿಕತೆ ಇದು. ನನ್ನಂತಹ ಕಿರುಗಾಲುವೆ ಇದಕ್ಕೆ ಈಡಲ್ಲ. ಆದುದರಿಂದ ನನ್ನ ಮಿತಿಗಳನ್ನು ಸಹನೆಯಿಂದ ಕಾಣಬೇಕೆಂದು ಕೋರುತ್ತೇನೆ.

-ಡಾ. ಎಸ್. ನಟರಾಜ ಬೂದಾಳು

ಯಾವುದೇ ಎರಡು ಭಿನ್ನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅಂಶಗಳಲ್ಲಿ ಏಕತ್ವವನ್ನು ಗ್ರಹಿಸಲಾಗದು. ಸರಳವಾದ ಉದಾಹರಣೆಯೊಂದನ್ನು ಮುಂದಿಡುವುದಾದರೆ, ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ಹದಿನೈದರ ಹರೆಯದಲ್ಲಿ ಓದಿದ ವ್ಯಕ್ತಿ ಅದೇ ಕಾದಂಬರಿಯನ್ನು ನಲವತ್ತರ ಪ್ರಾಯದಲ್ಲಿ ಮತ್ತೆ ಓದಿದರೆ ಉಂಟಾಗುವ ಪರಿಣಾಮಗಳು ನಿಶ್ಚಿತವಾಗಿ ಒಂದೇ ಆಗಿರಲು ಸಾಧ್ಯವಿಲ್ಲ, ಹಾಗೆಯೇ ಪೂರ್ತಿ ಬೇರೆ ಬೇರೆ ಆಗಿರಲೂ ಸಾಧ್ಯವಿಲ್ಲ. ಈ ಪ್ರವಾಹದಲ್ಲಿ ಪರಸ್ಪರ ಸಂಬಂಧದಲ್ಲಿ ಪರಿಣಾಮಗಳು ಉಂಟಾಗುತ್ತವೆ.

ವೇದಾಂತಿಗಳು ಇಲ್ಲಿನ ಸಂದರ್ಭವನ್ನು ಬಳಸಿಕೊಂಡು ಸಾಮಾನ್ಯರನ್ನು ಗೊಂದಲಕ್ಕೀಡುಮಾಡುವ ಪ್ರಶ್ನೆಗಳನ್ನೆತ್ತುತ್ತಾರೆ. ಉದಾಹರಣೆಗೆ ಕತ್ತಲಕೋಣೆಯ ಲ್ಲಿರುವ ಮಡಕೆ, ನೋಡುಗ ಅದನ್ನು ನೋಡುವುದಕ್ಕೆ ಮೊದಲೇ ಇತ್ತಲ್ಲವೆ? ಬೆಳಕಿಲ್ಲದಿದ್ದರೂ, ಕಣ್ಣು ಅದನ್ನು ನೋಡದೇ ಹೋದರೂ ಎದುರಿಗಿರುವ ಮಡಕೆಯನ್ನು ಇಲ್ಲವೆನ್ನಲಾದೀತೆ? ಎಂದು ಪ್ರಶ್ನಿಸುತ್ತಾರೆ. ಇಂತಹ ಪ್ರಶ್ನೆಗಳು ತುಂಬಾ ಅಸೂಕ್ಷ್ಮಸ್ತರದ ಗ್ರಹಿಕೆಗಳಾಗಿದ್ದು, ವಿಷಯಾಂತರಗೊಳಿಸಿ ಗೊಂದಲ ಸೃಷ್ಟಿಸಬಲ್ಲವೇ ಹೊರತು ಒಂದು ಗಂಭೀರವಾದ ವಿವಾದವನ್ನು ಹುಟ್ಟುಹಾಕಲಾರವು. ಎದುರಿಗಿರುವ ಮಡಕೆ, ನೋಟವೆಂಬ ಪ್ರಕ್ರಿಯೆಯ ಭಾಗವಾಗಿ ಉಳಿದೆಲ್ಲ ಅಂಶಗಳೊಡನೆ ಸಂಬಂಧ ಸಾಧಿಸದೇ ಹೋದರೆ ಅದಕ್ಕೆ 'ಕಾಣಬೇಕಾದ ದೃಶ್ಯ' ಎಂಬ ಸ್ಥಾನವೇ ದೊರಕುವುದಿಲ್ಲ ಹಾಗೂ ಅಂತಹ ಮಡಕೆಯ ಅಸ್ತಿತ್ವ-ನಾಸ್ತಿತ್ವಗಳು ಪ್ರಸ್ತುತ ಚರ್ಚೆಯ ಸಂಗತಿಯಲ್ಲ ಎಂಬ ಸಂಗತಿಯನ್ನೂ ಮತ್ತು ಅಲ್ಲಿ ನೋಟವೆಂಬ ಪ್ರಕ್ರಿಯೆಯೇ ಜರುಗಿಲ್ಲವೆಂಬುದನ್ನು ಮರೆಮಾಚುತ್ತಾರೆ. ಸಾಮಾನ್ಯರನ್ನು ದಿಕ್ಕುತಪ್ಪಿಸುವಲ್ಲಿ ಅವರು ಯಶಸ್ವಿಯಾಗುತ್ತಾರೆ. ಬೆಂಕಿ ಇದೆ ಸುಡುವುದು ಅದರ ಧರ್ಮ, ಸುಡುತ್ತದೆ, ಮೊಳಕೆ ಇದೆ, ಮೊಳೆಯುವುದು ಅದರ ಧರ್ಮ ಮೊಳೆಯುತ್ತದೆ. ಅದರಲ್ಲಿ ಪ್ರಶ್ನಿಸಬೇಕಾದ್ದೇನಿದೆ? ಎಂದು ಕೇಳಿ ದಿಕ್ಕು ತಪ್ಪಿಸುತ್ತಾರೆ. ಬೆಂಕಿಯು ಇಂಧನದ ಸಂಪರ್ಕದಲ್ಲಿ ಮಾತ್ರ ಅಸ್ತಿತ್ವಕ್ಕೆ ಬರಬಲ್ಲುದೆಂಬುದನ್ನು ಮತ್ತು ಮೊಳಕೆಯು ಅದು ಮೊಳೆಯಲು ಅಗತ್ಯವಾದ ನೀರು, ಶಾಖ ಇತ್ಯಾದಿ ಪರಿಸ್ಥಿತಿಯೊಡನೆ ಮಾತ್ರ ಉಂಟಾಗಬಲ್ಲ ಪ್ರಕ್ರಿಯೆ ಎಂಬ ಸಂಗತಿಯನ್ನು ಮರೆಮಾಚುತ್ತಾರೆ. ಆದರೆ ಜ್ಞಾತೃ ಮತ್ತು ಜ್ಞೇಯದ ನಡುವಿನ ಸಂಬಂಧವನ್ನು ಗ್ರಹಿಕೆಗೆ ತಂದುಕೊಡುವ 'ಕ್ರಿಯೆ'ಯನ್ನು ನಾಗಾರ್ಜುನ ವಿಶ್ಲೇಷಿಸಿರುವ ಕ್ರಮ ಭಿನ್ನವಾದುದು. ಅವನು ನೋಡುವ, ಕೇಳುವ, ರುಚಿನೋಡುವ, ಸ್ಪರ್ಶಿಸುವ ಮತ್ತು ಇವುಗಳನ್ನು ಮನನ ಮಾಡಿಕೊಳ್ಳುವ - ಈ ಆರು ಕ್ರಿಯೆಗಳನ್ನು ಲೋಕ ಸಂಬಂಧವನ್ನು ಏರ್ಪಡಿಸುವ ಜ್ಞಾನಕ್ರಿಯೆಗಳನ್ನಾಗಿ ಗುರುತಿಸಿಕೊಳ್ಳುತ್ತಾನೆ. ಮನಸ್ಸನ್ನು ಅವನು 'ವಿಜ್ಞಾನ'ವೆಂದು ಸೂಚಿಸುತ್ತಾನೆ. ಇದು ಇಂದ್ರಿಯಗಳಿಂದ ಬಂದ ಸಂವೇದನೆಗಳನ್ನು ವಿಶ್ಲೇಷಿಸುವ ಅಂಗವೆಂದೂ, ಇಡೀ ಮಾನವ ವ್ಯಕ್ತಿತ್ವವನ್ನು ನಿಯಂತ್ರಿಸುವ 'ಚಿತ್ತ'ವಲ್ಲವೆಂದೂ ಗುರುತಿಸಲಾಗಿದೆ. ನಾಗಾರ್ಜುನ ಈ ಕ್ರಿಯೆಯನ್ನು ಸಂವೇದನಾ ಅಂಗಗಳಲ್ಲಿ ಒಂದಾದ ಕಣ್ಣು ಮತ್ತದರ ಉದ್ಯೋಗವಾದ 'ನೋಟ'ವನ್ನು ಪರೀಕ್ಷೆಗೆ ಒಳಪಡಿಸಿ ವಿವರಿಸುತ್ತಾನೆ. ಅದನ್ನು ಉಳಿದ ಇಂದ್ರಿಯಗಳ ವೃತ್ತಿಪರೀಕ್ಷೆಗೆ ಮಾಪನವನ್ನಾಗಿಸಿಕೊಳ್ಳುತ್ತಾನೆ. ಆರು ಇಂದ್ರಿಯಗಳು ಮತ್ತವುಗಳ ಕಾರ್ಯ - ಇವುಗಳನ್ನು ಒಂದೊಂದು ಜೊತೆಯನ್ನಾಗಿ

ನಾಗಾರ್ಜುನನ ಅಭಿಮತದಲ್ಲಿ; ನೋಡುಗ, ಕೇಳುಗರು ಒಂದೇ ಆಗಿರುತ್ತಾರೆ ಎಂಬ ಮಾತಿರಲಿ, ಒಬ್ಬನೇ ನೋಡುಗ ಒಂದೇ ವಸ್ತುವನ್ನು ಅನೇಕ ಸಲ ನೋಡಿದಾಗಲೂ ಆ ಎಲ್ಲ ಅನುಭವಗಳೂ ಒಂದೇ ಆಗಿರಲು ಸಾಧ್ಯವಿಲ್ಲ. ನಿರಂತರ ಬದಲಾವಣೆಯೇ ಲಕ್ಷಣವಾಗಿರುವಲ್ಲಿ ಯಾವುದೇ ಎರಡು ಭಿನ್ನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಅಂಶಗಳಲ್ಲಿ ಏಕತ್ವವನ್ನು ಗ್ರಹಿಸಲಾಗದು. ಸರಳವಾದ ಉದಾಹರಣೆಯೊಂದನ್ನು ಮುಂದಿಡುವುದಾದರೆ, ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯನ್ನು ಹದಿನೈದರ ಹರೆಯದಲ್ಲಿ ಓದಿದ ವ್ಯಕ್ತಿ ಅದೇ ಕಾದಂಬರಿಯನ್ನು ನಲವತ್ತರ ಪ್ರಾಯದಲ್ಲಿ ಮತ್ತೆ ಓದಿದರೆ ಉಂಟಾಗುವ ಪರಿಣಾಮಗಳು ನಿಶ್ಚಿತವಾಗಿ ಒಂದೇ ಆಗಿರಲು ಸಾಧ್ಯವಿಲ್ಲ, ಹಾಗೆಯೇ ಪೂರ್ತಿ ಬೇರೆ ಬೇರೆ ಆಗಿರಲೂ ಸಾಧ್ಯವಿಲ್ಲ. ಪರಸ್ಪರ ಸಂಬಂಧದಲ್ಲಿ ಪರಿಣಾಮಗಳು ಉಂಟಾಗುತ್ತವೆ.

ಮಾಡಿಕೊಂಡು ಪರೀಕ್ಷಿಸಲಾಗಿದೆ.

ನೋಟವು ತನ್ನನ್ನು ತಾನು ನೋಡಿಕೊಳ್ಳದು
ತನ್ನನ್ನು ತಾನು ಕಾಣದ್ದು ಬೇರೊಂದನ್ನು ಕಾಣಿಸೀತೆ? (ಕಾರಿಕೆ ೨ ಅಧ್ಯಾಯ ೩)

ನೋಡುವ ಕ್ರಿಯೆ ಜರುಗಲು ಎರಡು ಸಂಗತಿಗಳು ಅನಿವಾರ್ಯ, ಒಂದು ನೋಡುವ ಕಣ್ಣು ಇನ್ನೊಂದು ನೋಡಬೇಕಾದ ದೃಶ್ಯ. ನೋಟವೆಂಬ ಪ್ರಕ್ರಿಯೆ ಅಸ್ತಿತ್ವಕ್ಕೆ ಬರಲು ಎದುರಿಗೆ ಬೆಳಕು ಮತ್ತು ವಸ್ತು ಪ್ರಪಂಚದ ಏನಾದರೂ ಇರಲೇಬೇಕು. ನೋಡಬಲ್ಲ ಕಣ್ಣು ಇದ್ದರೂ ಏನೂ ಇಲ್ಲದ ಅಂಧಕಾರ ಪ್ರಪಂಚದಲ್ಲಿ ನೋಟವೆಂಬ ಕ್ರಿಯೆ ಜರುಗುವುದಿಲ್ಲ. ಅಂದರೆ ನೋಡುವ ಕ್ರಿಯೆ ಸ್ವತಂತ್ರವಲ್ಲ. ನೋಟವೆಂಬ ಪ್ರಕ್ರಿಯೆಯೂ ಸ್ವತಂತ್ರವಾಗಿ ಅಸ್ತಿತ್ವಕ್ಕೆ ಬಾರದು.

ಈ ಇಡೀ ಪ್ರಕ್ರಿಯೆಯನ್ನು ಇನ್ನೊಂದು ಮಗ್ಗುಲಿನಿಂದ ನೋಡುವ ಪ್ರಯತ್ನವನ್ನು ನಾಗಾರ್ಜುನ ಮಾಡುತ್ತಾನೆ. ಅಗ್ನಿ ತನ್ನನ್ನು ದಹಿಸಿಕೊಳ್ಳದೆ ಪರವನ್ನು ದಹಿಸುವ ಹಾಗೆ ಕಣ್ಣು ತನ್ನನ್ನು ಕಾಣದಿದ್ದರೂ ಎದುರನ್ನು ಕಾಣಬಲ್ಲುದು ಎಂಬುದು ಸ್ವಭಾವವಾದಿಗಳ ನಿಲುವು. ಅಗ್ನಿಗೆ ಸ್ವತಂತ್ರವಾದ ಅಸ್ತಿತ್ವವಿದೆ ಎಂಬ ಖಚಿತ ನಂಬಿಕೆಯೊಡನೆ ಅವರು ವಾದಿಸುತ್ತಿದ್ದಾರೆ. ಅಗ್ನಿ ಇದೆ, ಸುಡುವುದು ಅದರ ಸ್ವಭಾವ, ಸುಡುತ್ತದೆ. ಮೊಳಕೆ ಇದೆ, ಮೊಳೆಯುವುದು ಅದರ ಸ್ವಭಾವ ಮೊಳೆಯುತ್ತದೆ, ಅದರಲ್ಲಿ ಪ್ರಶ್ನಿಸಬೇಕಾದ್ದೇನಿದೆ? ಇದು ಅವರ ಧಾಟಿ. ನಾಗಾರ್ಜುನ ಇಂತಹ ಸೂಕ್ಷ್ಮ ತಾರ್ಕಿಕ ಪ್ರಶ್ನೆ ಎದುರಾದಾಗ ಸಂಭ್ರಮಿಸುತ್ತಾನೆ. ತನ್ನ ತರ್ಕದ ಹತಾರುಗಳನ್ನು ಮಸೆದುಕೊಳ್ಳುತ್ತಾನೆ. ಅದಕ್ಕಾಗಿ ತನ್ನ ಮೂಲಮಾಧ್ಯಮಕಕಾರಿಕಾದಲ್ಲಿ ಅನೇಕ ಅಧ್ಯಾಯಗಳನ್ನು ಮೀಸಲಿರಿಸಿದ್ದಾನೆ. ಮೇಲಿನ ಪ್ರತಿಪಕ್ಷದ ಉದ್ಧರಣೆಗಳಲ್ಲಿ ಮೂರನೆಯದು ಕಾಶ್ಮೀರದ ಧ್ವನಿವಾದಿಗಳದ್ದು. ಅವರು ಪ್ರಕ್ರಿಯೆಯನ್ನು ಮಾನ್ಯ ಮಾಡುತ್ತಾರೆ. ಆದರೆ ಪ್ರಕ್ರಿಯೆಯನ್ನು ರೂಪಿಸಿ ನಿರ್ವಹಿಸುವ 'ಅನ್ಯ'ವೊಂದನ್ನು ಒಪ್ಪುತ್ತಾರೆ. ಮತ್ತೊಂದು ಲೋಕವನ್ನು ರೂಪಿಸಿ ನಡೆಸುತ್ತದೆ ಎಂದು ಅದು ನಂಬುತ್ತದೆ. ನಿತ್ಯ ಬದಲಾವಣೆಯು ಗೋಚರವಾಗುತ್ತಿದ್ದರೂ ವಸ್ತುಗಳಲ್ಲಿ ಶಾಶ್ವತವಾದ 'ಅಂತಃಸತ್ವ'ವೊಂದನ್ನು ಸಾಮಾನ್ಯ ಮಾನವಮತಿ ಹುಡುಕುತ್ತಿರುತ್ತದೆ. ಇದರ ಹಿಂದೆ ಸಾಮಾನ್ಯ ಲೋಕಕಾರಣವೊಂದನ್ನು ಹುಡುಕುವ ಪ್ರಯತ್ನವಿರುತ್ತದೆ. ಇಂತಹ ಹುಡುಕಾಟಗಳು ಬೇರೆ ಬೇರೆ ಉತ್ತರಗಳನ್ನು ಕಂಡುಕೊಳ್ಳುತ್ತವೆ. ದ್ವೈತ, ಅದ್ವೈತ ಇತ್ಯಾದಿಗಳಲ್ಲಿ ಅವು ವಿರಮಿಸುತ್ತವೆ. ಇಂತಹ ದೃಷ್ಟಿವಾದಗಳು ನಂತರ ಪಾಂಥಿಕ ಶಠತ್ವವನ್ನು ಬೆಳೆಸಿಕೊಳ್ಳುತ್ತವೆ. ಇಂತಹ ಎಲ್ಲ ದೃಷ್ಟಿವಾದಗಳಿಂದ ಬೌದ್ಧಧರ್ಮವು ದೂರ ನಿಲ್ಲುತ್ತದೆ. ಲೋಕಸೃಷ್ಟಿಯ ಪ್ರಥಮ ಕಾರಣದ ಬಗೆಗೆ ಪ್ರಶ್ನಿಸಿದಾಗ ಬುದ್ಧಗುರು ಮೌನ ವಹಿಸಿದ. ಜೀವ ಜಗತ್ತಿನ ಬಗೆಗೆ 'ಆತ್ಮ' ಇತ್ಯಾದಿ ಸ್ವಕಾರಣವನ್ನು ನಿರಾಕರಿಸಿದ. ವಸ್ತು ಪ್ರಪಂಚದ ಸತ್ಯವನ್ನು ಅರಿಯಲು ಅನೇಕದಲ್ಲಿ ಏಕವನ್ನು ಗುರುತಿಸುವುದನ್ನಾಗಲೀ, ಅನೇಕಕ್ಕೆ ಮುನ್ನ ಏಕವನ್ನು ಕಂಡುಕೊಳ್ಳುವುದನ್ನಾಗಲೀ, ಭಿನ್ನತೆಯಲ್ಲಿ ಐಕ್ಯತೆಯನ್ನು ಹುಡುಕುವುದನ್ನಾಗಲೀ ಜಂಗಮದಲ್ಲಿ ಸ್ಥಾವರವೊಂದನ್ನು ಗುರುತಿಸುವುದನ್ನಾಗಲೀ ಅವನು ಒಪ್ಪಲಿಲ್ಲ. ಬೌದ್ಧಧರ್ಮ ಯಾವುದೇ ವಿಶೇಷ ಆರೋಪಗಳಿಲ್ಲದ, ಅದು ಹೇಗಿದೆಯೋ ಹಾಗೆಯೆ ಸ್ವೀಕರಿಸುವುದನ್ನೇ ಅಥವಾ ಅದು ಇರುವಂತೆಯೇ ಭಾವಿಸಿಕೊಳ್ಳುವುದನ್ನು ಸರಿಯೆನ್ನುತ್ತದೆ. ಅಸ್ತಿತ್ವವಿಲ್ಲದಿರುವುದೇ ಅದರ ನಿಜ ಗುಣವಾಗಿದೆ. ಅಂದರೆ ಸ್ವತಂತ್ರ ಅಸ್ತಿತ್ವವಿಲ್ಲದಿರುವುದೇ ತಥತೆಯ ಲಕ್ಷಣವಾಗಿದೆ.

ಎದುರಿಗಿನ ವಸ್ತುಲೋಕ ನಮ್ಮ ಅನುಭವಕ್ಕೆ ಬರುವ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಸಂಗತಿಗಳು ನಾಲ್ಕು: ಅ)ವಸ್ತುರೂಪ ಆ) ಸ್ಪರ್ಶ ಇ) ಸಂವೇದನೆ (ಈ) ಬೋಧೆ. ಬೌದ್ಧ ಧರ್ಮವು ಇವುಗಳ ಒಟ್ಟುಗೂಡುವಿಕೆ ಯಿಂದಾಗುವ ಸಂಯೋಜನೆಗಳನ್ನು ವಸ್ತುಗಳೆಂದು ಗ್ರಹಿ ಸದೆ 'ಪ್ರಕ್ರಿಯೆ' ಎಂದು ವಿವರಿಸುತ್ತದೆ. ಇಲ್ಲಿ ಕೆಲವು ವಿವರ ಣೆಗಳ ಅಗತ್ಯವಿದೆ. ಲೋಕದ ಎಲ್ಲ ಅನುಭವಗಳೂ ನಮಗೆ ಇಂದ್ರಿಯಗಳ ಮೂಲಕವೇ ದೊರಕಬೇಕು. ಅನು ಭವವೊಂದು ಉಂಟಾಗಲು ಈ ನಾಲ್ಕೂ ಸಂಗತಿಗಳು ಮೇಳೈಸಬೇಕು. ಯಾವುದೇ ಒಂದಂಶ ನಾಪತ್ತೆಯಾದರೂ ಅನುಭವ ಉಂಟಾಗುವುದಿಲ್ಲ. ಉದಾಹರಣೆಗೆ ಎದುರಿಗೆ ವಸ್ತುರೂಪವೊಂದು ಇದ್ದರೂ ನಮ್ಮ ಯಾವುದಾದರೂ ಇಂದ್ರಿಯ ಸಂಪರ್ಕಕ್ಕೆ ಅದು ಬಂದರೆ ಮಾತ್ರ ನಮ್ಮ ಅನುಭವಕ್ಕೆ ಬರುತ್ತದೆ. ಕಣ್ಣಿಗೊ, ಕಿವಿಗೋ, ನಾಲಗೆಗೋ, ಚರ್ಮಕ್ಕೋ ಅದು ತಾಗಬೇಕು, ಅದರ ಸಂವೇದನೆ ಉಂಟಾಗಬೇಕು. ಸಂವೇದನೆಯನ್ನು ಮೆದುಳು ವಿಶ್ಲೇಷಿಸಿ ಅದೇನೆಂದು ಸೂಚಿಸಬೇಕು. ಈ ಪ್ರಕ್ರಿಯೆಯನ್ನು ಕುರಿತು ಬೇರೆ ಬೇರೆ ಬೌದ್ಧ ಪಂಥಗಳು ಬೇರೆ ಬೇರೆ ವಿವರಣೆಗಳನ್ನು ನೀಡಿವೆ. ಅವುಗಳನ್ನು ವಿವರವಾಗಿ ನೋಡಬೇಕಾದ

ಅಗತ್ಯವಿದೆ. ಇದು ಅನೇಕ ಮಹಾನ್ ದಾರ್ಶನಿಕರು ನೂರಾರು ವರ್ಷಗಳ ಕಾಲ ನಡೆಸಿದ ತಾತ್ವಿಕ ಸಂಘರ್ಷ. ಇದರ ವಿವರಣೆಗೆ ತೊಡಗುವ ಮುನ್ನ ಕಲಾವಿದ ಕೆ.ಟಿ. ಶಿವಪ್ರಸಾದ್‌ರವರ ಕಲಾಕೃತಿಯೊಂದನ್ನು ಕುರಿತ ಚರ್ಚೆ ನಮ್ಮ ಕೆಲಸವನ್ನು ಸ್ವಲ್ಪ ಮಟ್ಟಿಗೆ ಹಗುರಗೊಳಿಸಬಹುದು.

ಪಕ್ಕದ ಚಿತ್ರದಲ್ಲಿ ಮೇಲ್ನೋಟಕ್ಕೆ ತೋಚುವ ಕೆಲವು ಅಂಶಗಳನ್ನು ಪಟ್ಟಿ ಮಾಡಬಹುದು:

೧. ಈ ಚಿತ್ರದಲ್ಲಿ ಮೂರು ಆಯಾಮಗಳನ್ನು (ಉದ್ದ,ಅಗಲ,ದಪ್ಪ) ಒಳಗೊಂಡ ಭಾಗಗಳೂ ಇವೆ, ಎರಡು ಆಯಾಮಗಳನ್ನು (ಉದ್ದ,ಅಗಲ) ಒಳಗೊಂಡ ಭಾಗಗಳೂ ಇವೆ.

೨. ಮೂರು ಆಯಾಮಗಳೊಡನೆ ಚಿತ್ರಿತವಾಗಿರುವ ಭಾಗದೊಳಕ್ಕೆ ಎರಡು ಆಯಾಮಗಳೊಡನೆ ಚಿತ್ರಿತವಾಗಿರುವ ಭಾಗಗಳು ನುಸುಳಲಾರದೆ ಹಾಗೇ ಅಲಾಯಿದ 'ಹೊರಗೇ' ನಿಂತಿವೆ.

೩. ಮೂರು ಆಯಾಮಗಳೊಡನೆ ಚಿತ್ರಿತವಾಗಿದೆ ಎಂದುಕೊಳ್ಳುವ ಭಾಗ ಕೂಡ ನಿಜವಾಗಿ ಎರಡೇ ಆಯಾಮಗಳ ಚಿತ್ರಣವೇ ಆಗಿದೆ. ದಪ್ಪ ಎನ್ನುವ ಮೂರ ನೆಯ ಆಯಾಮ ಕಾಲ್ಪನಿಕವಾದುದಾಗಿದೆ.

೪. ವಾಸ್ತವದ ಚಿತ್ರಣವೆಂದರೆ ಎರಡು ಆಯಾಮಗಳದ್ದೇ ಹೊರತು ಮೂರು ಆಯಾಮಗಳದ್ದಲ್ಲ. ಆದರೆ ಮೂರು ಆಯಾಮಗಳ ಚಿತ್ರಣವನ್ನು ನಾವು 'ವಾಸ್ತವ' ಚಿತ್ರಣವೆಂದುಕೊಳ್ಳುತ್ತೇವೆ.

೫. ಈ ಕಲಾಕೃತಿಯ ವಸ್ತುವಿಶೇಷವನ್ನು ಗಮನಿಸಿದರೆ ಇಲ್ಲಿ 'ಕಾಲಕ್ಕೆ ಬದ್ಧವಾದ' ವಸ್ತುಗಳೊಂದಿಗೆ 'ಕಾಲಾತೀತ' ವಸ್ತುಗಳು ಸಾಹಚರ್ಯಕ್ಕೆ ಹಂಬಲಿಸುತ್ತಿವೆ. ಎರಡು ಭಿನ್ನ ಕಾಲಗಳೊಂದಿಗೆ, ಕಾಲಾತೀತತೆಯನ್ನು ಎದುರುಬದುರಾಗಿಸಿ ಪೂರ್ಣಭಿನ್ನವಾದ ಪರಿಣಾಮವೊಂದನ್ನು ಕಲಾವಿದ ತಂದಿದ್ದಾನೆ.

ಮತ್ತೂ ಮುಂದುವರಿದು ಗಮನಿಸಿದರೆ ಈ ಕಲಾಕೃತಿ ಗಂಭೀರವಾದ ತಾತ್ವಿಕತೆಯೊಂದರ ಅನುಸಂಧಾನದಲ್ಲಿ ತೊಡಗಿದೆ. ಕಾಲ ಮತ್ತು ದೇಶಗಳು ಕೇವಲ ಮನೋಕಲ್ಪಿತಗಳೆಂಬುದನ್ನು ಇದು ಸೂಚಿಸುತ್ತಿದೆ. ಹಾಗೆ ನೋಡಿದರೆ ನಮ್ಮ ಕಣ್ಣಲ್ಲಿ ಮೂಡುವ ಎಲ್ಲ ದೃಶ್ಯಗಳೂ ಎರಡು ಆಯಾಮಗಳ ಚಿತ್ರಗಳೇ ಆಗಿವೆ. ಕಣ್ಣಿನ ರೆಟಿನಾ ಪರದೆಯ ಮೇಲೆ ಕೇವಲ ಉದ್ದ ಅಗಲಗಳ ಚಿತ್ರಗಳು ತಲೆಕೆಳಗಾಗಿ ಬೀಳುತ್ತವೆಯಷ್ಟೆ. ಹೀಗೆ ತಲೆಕೆಳಗಾದ ಎರಡೇ ಆಯಾಮಗಳ ಚಿತ್ರಗಳನ್ನು ಮತ್ತೆ ತಲೆಕೆಳಗಾಗಿಸಿ, ಮೂರು ಆಯಾಮಗಳ ಚಿತ್ರಗಳನ್ನಾಗಿ ಪರಿವರ್ತಿಸುವ ಪ್ರೋಗ್ರಾಂ ಒಂದು ನಮ್ಮ ಮೆದುಳಿನ ದೃಷ್ಟಿಗೆ ಸಂಬಂಧಿಸಿದ ಭಾಗದಲ್ಲಿದೆ. ಅಂತಿಮವಾಗಿ ಅದು ನೀಡುವ ಚಿತ್ರವನ್ನು ನಾವು ಅನುಭವಿಸುತ್ತೇವೆ. ಇಲ್ಲಿಯ ಪ್ರಮುಖ ಪ್ರಶ್ನೆ ಏನೆಂದರೆ ನಾವು ಕಾಣುವ ಈ ಮೂರನೆಯ ಆಯಾಮ (ದಪ್ಪ ಅಥವಾ ದೂರ) ನಮ್ಮ ಮೆದುಳಿನ ಪ್ರೋಗ್ರಾಂ ನೀಡಿದ್ದೇ ವಿನಾ ಹೊರಗೆ ನಿಜವಾಗಿ ಅದೇ ಇದೆಯೇ? ಸುಮಾರು ಅರ್ಧ ಕಿಲೋಮೀಟರು ಎತ್ತರದ ಆಕಾಶದಲ್ಲಿ ಹಾರುತ್ತಿರುವ ಹದ್ದು ನೆಲದ ಮೇಲಿನ ಬೇಲಿಯೊಂದರಲ್ಲಿ ಮಿಸುಗಾಡುತ್ತಿರುವ ಇಲಿಯ ಬಾಲವನ್ನು ನಿಚ್ಚಳವಾಗಿ ಎದುರಿಗಿರುವಂತೆ ಕಾಣಬಲ್ಲದು. ಅದಕ್ಕೆ ಅರ್ಧ ಕಿಲೋಮೀಟರು ದೂರದಲ್ಲಿರುವ ಇಲಿಯ ಬಾಲ 'ಕಣ್ಣೆ ದುರಿಗೆ' ಇದೆ. ನಾವು ಕಾಣುವ ವಸ್ತುವಿನ ಬಣ್ಣವೂ ಅಷ್ಟೆ. ಮರವೊಂದು ನಮ್ಮ ಕಣ್ಣಿಗೆ ಹಸಿರಾಗಿ ಕಂಡರೆ ಹಸಿರನ್ನು

ಗುರುತಿಸಲಾಗದ ಪ್ರಾಣಿಯ ಕಣ್ಣಿಗೆ ಅದು ಗೋಚರವಾಗುವ ಬಣ್ಣವೇ ಬೇರೆ. ಹಾಗಾದರೆ ಮನಸ್ಸಿನಾಚೆಯ ವಸ್ತುವಿಗೆ ಅದರದ್ದೇ ಆದ ಸ್ವತಂತ್ರ ರೀತಿಯ ಅಸ್ತಿತ್ವ ಇರುತ್ತದೆಯೆ? ಇದೊಂದು ಮಿಲಿಯನ್ ಡಾಲರ್ ಪ್ರಶ್ನೆ. ಈ ಪ್ರಶ್ನೆಯನ್ನು ಎದುರಿಗೆ ಇಟ್ಟುಕೊಂಡು ತುಂಬಾ ದೀರ್ಘ ಕಾಲದ ತಾತ್ವಿಕ ವಾಗ್ವಾದವನ್ನು ನಡೆಸಲಾಗಿದೆ. **ಹೀನಯಾನ ಮತ್ತು ಮಹಾಯಾನಗಳನ್ನು ಬೇರ್ಪಡಿಸುವ ಸಂಗತಿಯೂ ನಿಜವಾಗಿ ಇದೇ ಆಗಿದೆ. ಅಷ್ಟೇ ಅಲ್ಲ, ಕಲೆಯ ಉದ್ದೇಶ ಅಂತಿಮವಾಗಿ ಆನಂದವೋ, ದುಃಖದ ಅನುಸಂಧಾನವೋ ಎಂಬುದು ಕೂಡ ಇಲ್ಲಿ ಪಡೆಯುವ ಉತ್ತರವನ್ನು ಅವಲಂಬಿಸಿದೆ.**

ಹೀನಯಾನದ ಪ್ರಸ್ಥಾನಗಳವರು ಸರ್ವಾಸ್ತಿವಾದಿಗಳು, ಅಂದರೆ ಲೋಕಸಮಸ್ತವೂ 'ಇದೆ' ಎನ್ನುವವರು. ಮನಸ್ಸಿನೊಳಗೆ ಮೂಡಿದ ಮತ್ತು ಅದಕ್ಕೆ ಕಾರಣವಾದ ಹೊರಗಿನ ಎರಡೂ 'ಸತ್ತೆ'ಗಳು ನಿಜವೆಂದು ನಂಬುತ್ತಾರೆ. ಕಂಡದ್ದು, ಅದರಿಂದ ಮನಸ್ಸಿನಲ್ಲಿ ಮೂಡಿದ್ದು ಎರಡೂ ಒಂದೆ. ಅಂದರೆ ಪರಿಕಲ್ಪನಾತ್ಮಕ ಸತ್ತೆ ಮತ್ತು ವಾಸ್ತವ ಸತ್ತೆ ಎರಡೂ ಬೇರೆ ಬೇರೆ ಅಲ್ಲ. ಇದೆಯೆಂದು ತೋಚಿದ್ದೆಲ್ಲವೂ ದ್ರವ್ಯವೇ (ವಿದ್ಯಮಾನಂ ದ್ರವ್ಯಂ). ನಮ್ಮೆದುರಿನ 'ಕುಡಿಕೆ'ಯ ಬಣ್ಣ, ಆಕಾರ, ಗಟ್ಟಿತನ ಇವೆಲ್ಲ ಸಮಾನ ಸ್ವತಂತ್ರ ಅಸ್ತಿತ್ವವುಳ್ಳ ಸಂಗತಿಗಳೇ ಆಗಿವೆ. ಆದರೆ ಕುಡಿಕೆಯೆಂಬ ಮತ್ತೊಂದು ಸ್ವತಂತ್ರ ವಸ್ತುವೇನೂ ಇಲ್ಲ ಅಷ್ಟೆ. ಕುಡಿಕೆಯೆಂಬುದು ನಾವು ಅದರಲ್ಲಿ ಕಂಡುಕೊಳ್ಳುವ ಕಲ್ಪನೆ ಅಷ್ಟೆ. ಈ ನಿಲುವನ್ನು ಸಂಪೂರ್ಣವಾಗಿ ತಿರಸ್ಕರಿಸಿದ ಮಹಾಯಾನವು ಬುದ್ಧನ ಉಪ

(೪೫ನೇ ಪುಟಕ್ಕೆ)

ಈಗ ಸರ್ವ ಶಿಕ್ಷಣ ಅಭಿಯಾನ ಬಂದಿದೆ. ದುರಂತದ ಸಂಗತಿಯೆಂದರೆ ಸರ್ವಶಿಕ್ಷಣ ಅಭಿಯಾನವನ್ನು ನಾವು ವ್ಯವಸ್ಥಿತವಾಗಿ 'ಕಾಂಟ್ರಾಕ್ಟ್‌ಗಿರಿ-ಕಾಮಗಾರಿ' ಮಟ್ಟಕ್ಕೆ ಇಳಿಸಿಬಿಟ್ಟಿದ್ದೇವೆ. ಎಸ್.ಡಿ.ಎಮ್.ಸಿ ಅಂಬೋದು ಎಂಎಲ್‌ಎಗಳಿಗೆ ರಾಜಕೀಯ ಪುಢಾರಿಕೆ ಬೆಳೆಸುವ ತರಬೇತಿ ವೇದಿಕೆಯಾಗಿಬಿಟ್ಟಿದೆ. ಶಿಕ್ಷಕರ ತರಬೇತಿ ಸಂಸ್ಥೆಗಳು ಕಾರ್ಖಾನೆಗಳಲ್ಲಿ ಸರಕನ್ನು ಉತ್ಪಾದಿಸುವಂತೆ ಶಿಕ್ಷಕರನ್ನು ಉತ್ಪಾದಿಸುತ್ತಿವೆ. ಈ ದಿಶೆಯಲ್ಲಿ ಸರ್ಕಾರವು ತನ್ನ ಜವಾಬುದಾರಿಯನ್ನು ಕೈಬಿಟ್ಟಿದೆ. ಬಡವರ, ವಂಚಿತರ, ಅಂಚಿನಲ್ಲಿರುವವರ ಅನುಕೂಲಕ್ಕಾಗಿ ಪ್ರಗತಿಪರರ ಹೋರಾಟದ ಫಲವಾಗಿ ಮತ್ತು ನ್ಯಾಯಾಲಯಗಳ ಒತ್ತಡದಿಂದಾಗಿ ಹಾಗೂ ಮಧ್ಯಪ್ರವೇಶದಿಂದಾಗಿ ಆರಂಭಗೊಂಡ ಅನೇಕ ಕಾರ್ಯಕ್ರಮಗಳನ್ನು ಖಾಸಗಿ ಸಂಸ್ಥೆಗಳು, ಮಠ-ಮಾನ್ಯಗಳು, ಕಾರ್ಪೋರೇಟ್ ತಿಮಿಂಗಿಲಗಳು ಲಪಟಾಯಿಸುತ್ತಿವೆ. ಇದಕ್ಕೆ 'ಅಕ್ಷರ ದಾಸೋಹ'ವೇ ಸಾಕ್ಷಿ!.

ನಾವು, ನಮ್ಮ ಜನತಂತ್ರ, ಅಭಿವೃದ್ಧಿ ಮತ್ತು ಶಿಕ್ಷಣ



- ೪ -

ಡಾ. ಟಿ.ಆರ್. ಚಂದ್ರಶೇಖರ್

ಪ್ರಾಥಮಿಕ ಶಿಕ್ಷಣ(ಪ್ರಾ.ಶಿ.)ದ ಹೆಸರೇ ಸೂಚಿಸುವಂತೆ ಅದು 'ಪ್ರಾಥಮಿಕ'ವಾದುದಾಗಿದೆ. ಅಂತಹ ಪ್ರಾಥಮಿಕವೆನ್ನಬಹುದಾದ ಸಂಗತಿಯನ್ನು ಜನರಿಗೆ ಒದಗಿಸುವುದು ನಮಗೆ ಸಾಧ್ಯವಾಗದಿರುವುದು ನಮ್ಮ ಆಡಳಿತ ವ್ಯವಸ್ಥೆಯ ಬಗೆಗಿನ, ಜನತಂತ್ರದ ಬಗೆಗಿನ ಅತ್ಯಂತ ಸೌಮ್ಯ ಟೀಕೆಯಾಗಿದೆ. ನಮ್ಮ ಸಂದರ್ಭದಲ್ಲಿ ಅದು ಪ್ರಾಥಮಿಕವಾಗಿದ್ದಂತೆ ಕಾಣುವುದಿಲ್ಲ. ಅನೇಕ ಅಧ್ಯಯನಗಳು ದೃಢಪಡಿಸಿರುವಂತೆ ಸ್ವಾತಂತ್ರ್ಯ ನಂತರದ ನಮ್ಮ ಬಹು ಮುಖ್ಯವಾದ ಸಾಮಾಜಿಕ ವೈಫಲ್ಯವೆಂದರೆ ಅದು ಪ್ರಾಥಮಿಕ ಶಿಕ್ಷಣವಾಗಿದೆ(ಜೀನ್‌ಡ್ರೀಜ್, ಅಮರ್ತ್ಯಸೆನ್ ೨೦೦೨).ಸಾಕ್ಷರತೆ ಮತ್ತು ಪ್ರಾ.ಶಿ. ಕುರಿತಂತೆ ಅದೆಷ್ಟು ಕಾಲ ಮಿತಿಗಳನ್ನು ನಾವು ಹಾಕಿಕೊಂಡಿದ್ದೆವು ಎಂಬುದು ನಮಗೆ ಮರೆತೇ ಹೋಗುವಷ್ಟರ ಮಟ್ಟಿಗೆ ಅಲ್ಲಿ ಕಾಲವಿಳಂಬವಾಗಿದೆ. ಸಂವಿಧಾನದ ಕಾಲಮಿತಿ, ಮಸೂದೆಗಳ ಕಾಲಮಿತಿ, ಕಾರ್ಯಕ್ರಮಗಳ ಕಾಲಮಿತಿಗಳೆಲ್ಲವೂ ಮೀರಿಹೋಗುತ್ತಿವೆ. ಸಾಕ್ಷರತಾ ಆಂದೋಲನವಾಯಿತು,ಶಿಕ್ಷಣದ ಸಾರ್ವತ್ರೀಕರಣವಾಯಿತು, ಡಿಪಿಈಪಿಯಾಯಿತು. ಈಗ ಸರ್ವ ಶಿಕ್ಷಣ ಅಭಿಯಾನ ಬಂದಿದೆ. ಅತ್ಯಂತ ದುರಂತದ ಸಂಗತಿಯೆಂದರೆ ಸರ್ವ ಶಿಕ್ಷಣ ಅಭಿಯಾನವನ್ನು ನಾವು ಅತ್ಯಂತ ಯಶಸ್ವಿಯಾಗಿ ಮತ್ತು ವ್ಯವಸ್ಥಿತವಾಗಿ 'ಕಾಂಟ್ರಾಕ್ಟ್‌ಗಿರಿ-ಕಾಮಗಾರಿ' ಮಟ್ಟಕ್ಕೆ ಇಳಿಸಿಬಿಟ್ಟದ್ದೇವೆ. ಎಸ್‌ಡಿಎಮ್‌ಸಿ ಅಂಬೋದು ಎಂಎಲ್‌ಎಗಳಿಗೆ ರಾಜಕೀಯ ಪುಢಾರಿಕೆ ಬೆಳೆಸುವ ತರಬೇತಿ ವೇದಿಕೆಯಾಗಿ ಬಿಟ್ಟಿದೆ. ಸಮುದಾಯದ ಸಹಭಾಗಿತ್ವವೆಂಬುದು ಶಾಲಾ ಪ್ರಪಂಚದೊಳಗೆ ಪಟ್ಟಭದ್ರ ಹಿತಾಸಕ್ತಿಗಳ ಪ್ರವೇಶಕ್ಕೆ ಹೆಬ್ಬಾಗಿಲಾಗಿಬಿಟ್ಟಿದೆ. ಸಾಕ್ಷರತೆ ಮತ್ತು ಪ್ರಾಥಮಿಕ ಶಿಕ್ಷಣಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಅಸಮಾನತೆಯ ಬಗ್ಗೆ ಏನನ್ನು ಹೇಳದಿರುವುದೆ ವಾಸಿ ಎನ್ನುವಂತೆ ಪರಿಸ್ಥಿತಿ ಇದೆ. ಶಿಕ್ಷಕರ ತರಬೇತಿ ಸಂಸ್ಥೆಗಳು ಕಾರ್ಖಾನೆಗಳಲ್ಲಿ ಸರಕನ್ನು ಉತ್ಪಾದಿಸುವಂತೆ ಶಿಕ್ಷಕರನ್ನು ಉತ್ಪಾದಿಸುತ್ತಿವೆ.ಈ ದಿಶೆಯಲ್ಲಿ ಸರ್ಕಾರವು ತನ್ನ ಜವಾಬುದಾರಿಯನ್ನು ಸಂಪೂರ್ಣವಾಗಿ ಕೈಬಿಟ್ಟಿದೆ.

ಬಡವರ, ವಂಚಿತರ, ಅಂಚಿನಲ್ಲಿರುವವರ ಅನುಕೂಲಕ್ಕಾಗಿ ಪ್ರಗತಿಪರ ಶಕ್ತಿಗಳ ಹೋರಾಟದ ಫಲವಾಗಿ ಮತ್ತು ನ್ಯಾಯಾಲಯಗಳ ಒತ್ತಡದಿಂದಾಗಿ ಹಾಗೂ ಮಧ್ಯಪ್ರವೇಶದಿಂದಾಗಿ ಆರಂಭಗೊಂಡ ಅನೇಕ ಕಾರ್ಯಕ್ರಮಗಳನ್ನುಖಾಸಗಿ ಸಂಸ್ಥೆಗಳು, ಮಠ-ಮಾನ್ಯಗಳು, ಕಾರ್ಪೊರೇಟ್ ತಿಮಿಂಗಲಗಳು ಲಪಟಾಯಿಸುತ್ತಿವೆ. ಇದಕ್ಕೆ 'ಅಕ್ಷರ ದಾಸೋಹ'ವೆ ಸಾಕ್ಷಿ!. ಪ್ರಾಥಮಿಕ ಶಿಕ್ಷಣವೆನ್ನುವುದನ್ನು ಜನರ ಹಕ್ಕನ್ನಾಗಿ ಮಾಡಲು ಒಂದು ಕಡೆ ಪ್ರಯತ್ನ ನಡೆಯುತ್ತಿದ್ದರೆ ಇನ್ನೊಂದು ಕಡೆ ಅದನ್ನು ಉಳ್ಳವರ ದಾನ,ದತ್ತಿ, ಉಂಬಳಿಯನ್ನಾಗಿ 'ಹಂಗಿನ' ಸಂಗತಿಯನ್ನಾಗಿ ಮಾಡುವ ಹುನ್ನಾರ ನಡೆದಿದೆ. ಅಕ್ಷರ ದಾಸೋಹವು ಮಕ್ಕಳ ಹಕ್ಕು. ಆದರೆ ಅದನ್ನು ಇಸ್ಕಾನ್‌ನವರು ಹಂಗಿನ, ಭಿಕ್ಷೆಯ ಮಾಡುತ್ತಿದ್ದಾರೆ. ಈ ಬಗೆಯ ಸಂಸ್ಥೆಗಳು ಮಕ್ಕಳನ್ನು ದೇಶದ ಪ್ರಜೆಗಳನ್ನಾಗಿ-ಅಭಿವೃದ್ಧಿಯ ಹಕ್ಕುದಾರರನ್ನಾಗಿ ನೋಡುವುದಕ್ಕೆ ಪ್ರತಿಯಾಗಿ ಅವರನ್ನು ಬಿಕಾರಿಗಳಂತೆ, ರೋಗಿಗಳಂತೆ, ಫಲಾನುಭವಿಗಳಾಗಿ ನೋಡುತ್ತಿವೆ. ಅವರಿಗಾಗಿ ಇಸ್ಕಾನ್‌ನವರು ವಿದೇಶಗಳಲ್ಲಿ ಭಾರತೀಯ ಪ್ರಜೆಗಳ ಹೆಸರಿನಲ್ಲಿ ಭಿಕ್ಷೆ ಬೇಡಿ ಹಣ ಸಂಗ್ರಹಿಸುತ್ತಿದ್ದಾರೆ.ಇದು 'ಹಂಗಿನ ಅಭಿವೃದ್ಧಿ'ಯಾಗುತ್ತದೆ ವಿನಾ 'ಹಕ್ಕಿನ ಅಭಿವೃದ್ಧಿ'ಯಾಗುವುದಿಲ್ಲ.

ಶಾಲೆಗೆ ಮಕ್ಕಳು ಬಾರದಿದ್ದರೆ, ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಬಿಟ್ಟರೆ, ಬಾಲಕಿಯರ ದಾಖಲಾತಿ ಕಡಿಮೆಯಿದ್ದರೆ- ಹೀಗೆ ಪ್ರತಿಯೊಂದಕ್ಕೂ ಮಕ್ಕಳ-ಪಾಲಕರ 'ಬಡತನ'ವನ್ನು ಕಾರಣ ಮಾಡಿ ಅಧಿಕಾರಿಗಳು, ಜನ ಪ್ರತಿನಿಧಿಗಳು ತಮ್ಮ ಕೈತೊಳೆದುಕೊಳ್ಳುತ್ತಿದ್ದಾರೆ. ಇವೆಲ್ಲ ಯಾರಿಗೂ ತಿಳಿಯದ ಸಂಗತಿಗಳೇನಲ್ಲ. ಇದು ತಿಳಿದೂ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ಅದಕ್ಕೆ ಏನನ್ನುವುದು?ಸಮಸ್ಯೆ ಗೊತ್ತಿದೆ. ಮಕ್ಕಳ ಶಿಕ್ಷಣದ ಜವಾಬುದಾರಿಯನ್ನು ಬಡಕುಟುಂಬಗಳ ಪಾಲಕರಿಗೆ ಬಿಟ್ಟರೆ ಅದು ಬಗೆಹರಿಯುವುದಿಲ್ಲವೆಂಬುದು ಸ್ಪಟಿಕದಷ್ಟು ಸ್ಪಷ್ಟವಾಗಿರುವಾಗ ಅದರ ಬಗ್ಗೆ ಸಮಾಜ ಮತ್ತು ಸರ್ಕಾರ ಹೆಗಲು ಕೊಡದಿದ್ದರೆ-ಜವಾಬುದಾರಿ ಹೊರದಿದ್ದರೆ ಮತ್ತಾರು ಆ ಕೆಲಸ ಮಾಡಬೇಕು? ಒಟ್ಟಾರೆ ಪ್ರಾಥಮಿಕವೆನ್ನಬಹುದಾದ ಒಂದು ಸಂಗತಿಯನ್ನು ನಮಗೆ ಗಂಭೀರವಾಗಿ ನಿರ್ವಹಿಸುವುದು ಸಾಧ್ಯವಾಗಿಲ್ಲ. ಇದು ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತಕ್ಕೆ ಶೋಭೆ ತರುವಂತಹ ಸಂಗತಿಯಲ್ಲ. ಪ್ರಸ್ತುತ ಪ್ರಬಂಧದಲ್ಲಿ ನಮ್ಮ ರಾಜ್ಯದಲ್ಲಿರುವ ಪ್ರಾಥಮಿಕ ಶಿಕ್ಷಣದ ಸ್ಥಿತಿ ಗತಿ ಕುರಿತಂತೆ, ಅದರ ಪ್ರಾದೇಶಿಕ ನೆಲೆಗಳ ಬಗ್ಗೆ, ಮತ್ತು ಅಭಿವೃದ್ಧಿಯ ವಿಕೃತಿಗಳ ಬಗ್ಗೆ ಕೆಲವು ಸಂಗತಿಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

ವಸ್ತುಸ್ಥಿತಿ- ಒಂದು ಕಿರು ನೋಟ

ಸಾಕ್ಷರತೆಯಲ್ಲಿ ನಮ್ಮದು ಹೇಳಿಕೊಳ್ಳುವಂತಹ ಸಾಧನೆಯೇನಲ್ಲ. ರಾಷ್ಟ್ರೀಯ ಮಟ್ಟದಲ್ಲಿರುವ ಪ್ರಮಾಣಕ್ಕಿಂತ ಅದು ನಮ್ಮಲ್ಲಿ ಅಧಿಕವಾಗಿದೆ ಎಂಬುದೊಂದೇ ಸಮಾಧಾನ. ಆದರೆ ಸಾಕ್ಷರತೆಯಲ್ಲಿ ಲಿಂಗ ಅಸಮಾನತೆ ಅಧಿಕವಾಗಿದೆ. ಅದಕ್ಕೆ ಸಂಬಂಧಿಸಿದಂತೆ ತೀವ್ರವಾದ ಸಾಮಾಜಿಕ ಅಂತರಗಳೂ ಇವೆ. ಪರಿಶಿಷ್ಟ (ಪ.ಜಾ+ಪ.ಪಂ)ಗ್ರಾಮೀಣ ಮಹಿಳೆಯರ ಸಾಕ್ಷರತಾ ಪ್ರಮಾಣ ರಾಜ್ಯದಲ್ಲಿ ಶೇ. ೩೪.೮೫ ರಷ್ಟಿದೆ (೨೦೦೧). ಆದರೆ ಗ್ರಾಮೀಣ ಪರಿಶಿಷ್ಟೇತರ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೫೭.೬೯. ಇಲ್ಲಿ ಗ್ರಾಮೀಣ ಪರಿಶಿಷ್ಟೇತರ ಮಹಿಳೆಯರಿಗೂ ಮತ್ತು ಗ್ರಾಮೀಣ ಪರಿಶಿಷ್ಟ ಮಹಿಳೆಯರಿಗೂ ನಡುವೆ ಸಾಕ್ಷರತೆಯಲ್ಲಿ

ಯಾದಗೀರ್ ತಾಲ್ಲೂಕಿನ ಗ್ರಾಮೀಣ ಮಹಿಳೆ ಯರ ಸಾಕ್ಷರತಾ ಪ್ರಮಾಣ ಕೇವಲ ಶೇ.೧೮.೭೪.(೨೦೦೧). ಅಲ್ಲಿನ ಗ್ರಾಮೀಣ ಪರಿಶಿಷ್ಟ ಜಾತಿ ಮಹಿಳೆಯರ ಸಾಕ್ಷರತಾ ಪ್ರಮಾಣ ಕೇವಲ ಶೇ. ೧೩.೯೪.ಈ ವಸ್ತುಸ್ಥಿತಿ ಯಾರಿಗೂ ಗೌರವ ತರುವ ಸಂಗತಿಯೇನಲ್ಲ. ಸಾಕ್ಷರತಾ ಪ್ರಮಾಣವೇ ಹೀಗಿದ್ದ ಮೇಲೆ ರಾಜ್ಯದ ಹಿಂದುಳಿದ ಜಿಲ್ಲೆ–ತಾಲ್ಲೂಕುಗಳಲ್ಲಿನ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ ಬಗ್ಗೆ ನಾವು ಏನನ್ನು ಹೇಳ ದಿರುವುದೆ ಒಳ್ಳೆಯದು:

ಪ್ರಾದೇಶಿಕ ಅಸಮಾನತೆಯ ಸ್ವರೂಪ

ರಾಜ್ಯದ ಅತ್ಯಂತ ಹಿಂದುಳಿದ ಗುಲಬರ್ಗಾ (ಶೈಕ್ಷಣಿಕವಾಗಿ ಇದು ಎರಡು ಜಿಲ್ಲೆಗಳನ್ನು, ಅಂದರೆ ಗುಲಬರ್ಗಾ ಮತ್ತು ಯಾದಗೀರ್ ಜಿಲ್ಲೆಗಳನ್ನು (ಹತ್ತು ತಾಲ್ಲೂಕುಗಳು)ಒಳಗೊಂಡಿದೆ) ಜಿಲ್ಲೆಯಲ್ಲಿ ೨೦೦೪–೦೫ ರಲ್ಲಿ ಏಳನೆಯ ತರಗತಿಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ ೪೯೧೭೫. ಆದರೆ ಅವರಲ್ಲಿ ಮರು ವರ್ಷ ಅಂದರೆ ೨೦೦೫–೦೬ರಲ್ಲಿ ಎಂಟನೆಯ ತರಗತಿ ಸೇರಿದ ಮಕ್ಕಳ ಸಂಖ್ಯೆ ಕೇವಲ ೩೨೭೯೫. ಅಂದರೆ ಈ ಪರಿವರ್ತನೆಯ ಸಂದರ್ಭದಲ್ಲಿ ಶಾಲಾ ವಾಹಿನಿಯಿಂದ ಹೊರಬಿದ್ದ ಮಕ್ಕಳ ಸಂಖ್ಯೆ ೧೬೩೮೦. ಅಂದರೆ ಈ ಹಂತದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣ ಶೇ.೩೩.೩೧. ಇದೇ ರೀತಿ ೨೦೦೫–೦೬ ರಲ್ಲಿ ಏಳನೆಯ ತರಗತಿ ಸೇರಿದ ಮಕ್ಕಳ ಸಂಖ್ಯೆ ೫೯೩೩೫. ಮುಂದಿನ ವರ್ಷ ಅಂದರೆ ೨೦೦೬–೦೭ರಲ್ಲಿ ಅವರಲ್ಲಿ ಎಂಟನೆಯ ತರಗತಿ ಸೇರಿದ ಮಕ್ಕಳ ಸಂಖ್ಯೆ ಕೇವಲ ೩೪೬೯೧. ಇಲ್ಲಿ ಶಾಲಾವಾಹಿನಿಯಿಂದ ಹೊರಬಿದ್ದ ಮಕ್ಕಳ ಸಂಖ್ಯೆ [illegible]೭೦೪ ಮತ್ತು ಅದರ ಪ್ರಮಾಣ ಶೇ.೪೧.೬೩. ಈ ಬಗೆಯ ಶಾಲಾವಾಹಿನಿಯಿಂದ ಹೊರ ಬೀಳುವ ಮಕ್ಕಳ ಪ್ರಮಾಣ ದಕ್ಷಿಣ ಕರ್ನಾಟಕ ಪ್ರದೇ ಶದ(ದ.ಕ.ಪ್ರ.) ಜಿಲ್ಲೆಗಳಲ್ಲಿ ಅತ್ಯಂತ ಕಡಿಮೆ. ಉದಾಹರ ಣೆಗೆ ೨೦೦೫–೦೬ ರಿಂದ ೨೦೦೬–೦೭ರಲ್ಲಿ ಏಳನೆಯ ಮತ್ತು ಎಂಟನೆಯ ತರಗತಿಗಳಿಗೆ ಸಂಬಂಧಿಸಿದಂತೆ ಉಂಟಾದ ಒಟ್ಟು ರಾಜ್ಯದಲ್ಲಿನ ಶಾಲಾವಾಹಿನಿಯಿಂದ ಹೊರಬಿದ್ದ ಮಕ್ಕಳ ಸಂಖ್ಯೆ ೧.೦೧ಲಕ್ಷ. ಇದರಲ್ಲಿ ದ.ಕ.ಪ್ರದ ಪ್ರಮಾಣ ಶೇ.೧೪.೪೧. ಅಂದರೆ ಇಡೀ ರಾಜ್ಯದಲ್ಲಿ ಶಾಲಾವಾಹಿನಿಯಿಂದ ಹೊರಬಿದ್ದ ೧.೦೧ ಲಕ್ಷ ಮಕ್ಕಳಲ್ಲಿ ಉತ್ತರ ಕರ್ನಾಟಕದ ಪ್ರದೇಶ (ಉ.ಕ. ಪ್ರ)ದ ಮಕ್ಕಳ ಸಂಖ್ಯೆ ೮೬೧೨೦(ಶೇ.೮೫.೫೬).ನಮ್ಮ ಸರ್ವ ಶಿಕ್ಷಣ ಅಭಿಯಾನದ ಪ್ರಭೃತಿಗಳು ರಾಜ್ಯದಲ್ಲಿ ಶಾಲೆ ಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣ ಶೇ.೧೦ ರಿಂದ ಶೇ.೧೫ರ ನಡುವೆಯೆಂದು ಹೇಳುತ್ತಿದ್ದಾರೆ.ಕೇವಲ ಒಂದು ಜಿಲ್ಲೆಯಲ್ಲಿಯೇ ೭ ರಿಂದ ೮ನೆಯ ತರಗತಿ ನಡುವೆ ಉಂಟಾಗುತ್ತಿರುವ ಹಾನಿ ಸರಿಸುಮಾರು ಶೇ.೩೫ ರಿಂದ ೪೦ರಷ್ಟಿದೆ.

ಇತ್ತೀಚಿಗೆ ಸರ್ಕಾರವು ತನ್ನ ಸಚಿವ ಸಂಪುಟ ಸಭೆಯನ್ನು ಗುಲಬರ್ಗಾದಲ್ಲಿ ನಡೆಸಿತು.ಅದೊಂದು ಶ್ಲಾಘನೀಯ ಕೆಲಸವಾಗಿದೆ. ಸಾಂಕೇತಿಕವಾಗಿ ಅದನ್ನು ಸ್ವಾಗತಿಸಬಹುದು. ಆದರೆ ಸಾಂಕೇತಿಕತೆಯಿಂದ ರಾಜ್ಯದ ಹಿಂದು[illegible] ಪ್ರದೇಶಗಳಿಗೆ ಯಾವುದೇ ಪ್ರಯೋಜನವಿಲ್ಲ. ಅಲ್ಲಿ ಬೇಕಾಗಿರುವುದು ವಿಮಾನ ನಿಲ್ದಾಣವಲ್ಲ. ನಿಜಾಮರಿಂದಾಗಿ ಗುಲಬರ್ಗಾ ಪ್ರದೇಶ ಹಿಂದುಳಿದಿದೆಯೆಂಬ ಹೊಸ ಸಂಶೋಧನೆಯ ಉಪದೇಶದಿಂದ ಇಂದು ಆಗಬೇಕಾದುದೇನಿಲ್ಲ. ಹೊಸದರಲ್ಲಿ ಎತ್ತಿ ಎತ್ತಿ ಒಗೆದರು

> **ಶಾಲೆಗೆ ಮಕ್ಕಳು ಬಾರದಿದ್ದರೆ, ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಬಿಟ್ಟರೆ, ಬಾಲಕಿಯರ ದಾಖಲಾತಿ ಕಡಿಮೆಯಿದ್ದರೆ–ಹೀಗೆ ಪ್ರತಿಯೊಂದಕ್ಕೂ ಮಕ್ಕಳ–ಪಾಲಕರ 'ಬಡತನ'ವನ್ನು ಕಾರಣ ಮಾಡಿ ಅಧಿಕಾರಿಗಳು, ಜನ ಪ್ರತಿನಿಧಿಗಳು ತಮ್ಮ ಕೈತೊಳೆದುಕೊಳ್ಳುತ್ತಿದ್ದಾರೆ. ಮಕ್ಕಳ ಶಿಕ್ಷಣದ ಜವಾಬುದಾರಿಯನ್ನು ಬಡ ಕುಟುಂಬಗಳ ಪಾಲಕರಿಗೆ ಬಿಟ್ಟರೆ ಅದು ಬಗೆಹರಿಯುವುದಿಲ್ಲವೆಂಬುದು ಸ್ಪಟಿಕದಷ್ಟು ಸ್ಪಷ್ಟವಾಗಿರುವಾಗ ಅದರ ಬಗ್ಗೆ ಸಮಾಜ ಮತ್ತು ಸರ್ಕಾರ ಹೆಗಲು ಕೊಡದಿದ್ದರೆ–ಜವಾಬುದಾರಿ ಹೊರದಿದ್ದರೆ ಮತ್ತಾರು ಆ ಕೆಲಸ ಮಾಡಬೇಕು? ಒಟ್ಟಾರೆ ಪ್ರಾಥಮಿಕವೆನ್ನಬಹುದಾದ ಒಂದು ಸಂಗತಿಯನ್ನು ನಮಗೆ ಗಂಭೀರವಾಗಿ ನಿರ್ವಹಿಸುವುದು ಸಾಧ್ಯವಾಗಿಲ್ಲ. ಇದು ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತಕ್ಕೆ ಶೋಭೆ ತರುವಂತಹ ಸಂಗತಿಯಲ್ಲ.**

ಎಂಬ ಗಾದೆಯೊಂದಿದೆ! ಹಾಗೆ ಕೆಲವರು ಹೊಸದಾದ ಮತ್ತು ಅಮಿತವಾದ ಉತ್ಸಾಹದಿಂದ ಅಧಿಕಾರಸ್ಥರನ್ನು,ಪ್ರಭುಗಳನ್ನು ಮೆಚ್ಚಿಸುವ ಸಲುವಾಗಿ ಅವರಿಗೆ ಹಿತವಾಗುವ,ಓಲೈಸುವ ರೀತಿಯಲ್ಲಿ ಮಾತನಾಡುತ್ತಿರುತ್ತಾರೆ. ಗುಲಬರ್ಗಾದಲ್ಲಿ ನಡೆದ ಸಚಿವ ಸಂಪುಟ ಸಭೆಗೆ ಸಂಬಂಧಿಸಿದಂತೆ ಸರ್ಕಾರದ ಪ್ರತಿನಿಧಿಗಳು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದರೆ ಅವರಲ್ಲಿ ಯಾರೊಬ್ಬರೂ ಗುಲಬರ್ಗಾ ವಿಭಾಗದ ಜಿಲ್ಲೆಗಳಲ್ಲಿನ ಅತ್ಯಂತ ಕೆಳಮಟ್ಟದ ಸಾಕ್ಷರತೆ ಬಗ್ಗೆಯಾಗಲಿ ಅಥವಾ ಅಲ್ಲಿನ ದಯನೀಯ ಸ್ಥಿತಿಯಲ್ಲಿರುವ ಪ್ರಾ.ಶಿ.ದ ಬಗ್ಗೆಯಾಗಲಿ ಮಾತನಾಡಿಲ್ಲ. ರೈಲು ಮಾರ್ಗದ ಬಗ್ಗೆ ಮಾತನಾಡಲಾಗಿದೆ. ಸುವರ್ಣ ಗ್ರಾಮ ಯೋಜನೆ ಬಗ್ಗೆ ಆಶ್ವಾಸನೆ ನೀಡಲಾಗಿದೆ. (ಕಳೆದ ಎರಡು ವರ್ಷಗಳಲ್ಲಿ ನಾಡಿನ ವಿವಿಧ ಭಾಗಗಳಲ್ಲಿ ಜಾರಿಗೊಳಿಸಿದ ಸುವರ್ಣ ಗ್ರಾಮಗಳೆಲ್ಲವೂ(ಬೆಳ್ಳಿಯ ಅಥವಾ ಕಬ್ಬಿಣದ ಗ್ರಾಮಗಳಾಗಿ ಅವು ಈಗ ಮುಂದುವರಿಯುತ್ತಿರುವುದು ಬೇರೆಯದೇ ಸಂಗತಿ) ನೆಲ ಕಚ್ಚಿವೆಯೆಂಬುದು ಸರ್ಕಾರಕ್ಕೆ ಗೊತ್ತಿದ್ದರೂ ಅದನ್ನು ಮರೆಮಾಚಿ ಗುಲಬರ್ಗಾ ವಿಭಾಗದಲ್ಲಿ ಅದೇ ಸುವರ್ಣ ಗ್ರಾಮ ಯೋಜನೆಗಾಗಿ ರೂ.೨೦೦ ಕೋಟಿ ಹಣವನ್ನು ನೀಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿದೆ). ಸರ್ಕಾರವು ೨೦೦೭–೦೮ ರಲ್ಲಿ ರಾಜ್ಯದ ಹಿಂದುಳಿದ ೧೧೪ ತಾಲ್ಲೂಕುಗಳ ಅಭಿವೃದ್ಧಿಗಾಗಿ ಎಂಟು ವರ್ಷಗಳ ವಿಶೇಷ ಯೋಜನೆಯಡಿಯಲ್ಲಿ ಮೀಸಲಿಟ್ಟಿದ್ದ ರೂ.೧೫೭೧.೫೦ ಕೋಟಿಯಲ್ಲಿ ಖರ್ಚು ಮಾಡಿದ್ದು ಕೇವಲ ರೂ. ೯೭೬.೩೨ ಕೋಟಿ ಮಾತ್ರ. ಇಲ್ಲಿ ಪ್ರಶ್ನೆಯಿರುವುದು ಹಣಕಾಸಿನದ್ದಲ್ಲ. 'ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಅನುಷ್ಠಾನ ಮತ್ತು ಉಸ್ತುವಾರಿ'ಗಾಗಿ ಸರ್ಕಾರ ಹೊಸದಾಗಿ ರಚಿಸಿರುವ ವಿಶೇಷ ಸಮಿತಿಯ ಅಧ್ಯಕ್ಷರಾದ ಶ್ರೀ ಸುಶೀಲ ನಮೋಶಿ ಅವರು೨೦೦೭–೦೮ರಲ್ಲಿ ಸರ್ಕಾರ ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯ ಶಿಫಾರಸ್ಸಿನಂತೆ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಗಾಗಿ ರೂ.೧೫೭೧.೫೦ಕೋಟಿ ಹೆಚ್ಚುವರಿಯಾಗಿ ಒದಗಿಸಿತ್ತು ಎಂಬ ಮಾತನ್ನು ಹೇಳುತ್ತಿದ್ದಾರೆ.ಆದರೆ ಸರ್ಕಾರವೆ ಒಪ್ಪಿಕೊಂಡಿರುವಂತೆ ಅದು ಹೆಚ್ಚುವರಿ ಅನುದಾನವಲ್ಲ. ಅದು ೨೦೦೭–೦೮ ರ ಒಟ್ಟು ರಾಜ್ಯ ಯೋಜನಾ ಗಾತ್ರವಾದ ರೂ.೧೭೧೮೩ ಕೋಟಿಯ ಅಂತರ್ಗತ ಭಾಗವಾಗಿದೆ. ಈ ವರ್ಷ ಅದಕ್ಕಾಗಿ ನಿಗದಿ ಪಡಿಸಿರುವ ರೂ.೨೫೪೭ ಕೋಟಿಯೂ ಹೆಚ್ಚುವರಿಯಾದುದಲ್ಲ. ಇದೂ ಕೂಡ ೨೦೦೮–೦೯ನೆಯ ಸಾಲಿನ ರಾಜ್ಯ ಯೋಜನಾ ವೆಚ್ಚವಾದ ರೂ.೨೩೯೫೨.೮೪ಕೋಟಿಯ ಅವಿಭಾಜ್ಯ ಅಂಗವಾಗಿದೆ. ಅದು ನಿಜವಾಗಲೂ ಹೆಚ್ಚುವರಿಯಾಗಿದ್ದಿದ್ದರೆ ಅದನ್ನು ಆಯವ್ಯಯದಲ್ಲಿ, ರಾಜ್ಯ ಯೋಜನಾ ವೆಚ್ಚದಲ್ಲೊಂದು ಬಾಬತ್ತಾಗಿ ತೋರಿಸಬೇಕಾಗಿತ್ತು. ಅದಕ್ಕೆ ಪ್ರತ್ಯೇಕವಾಗಿ, ಅಂದರೆ, ಹೆಚ್ಚುವರಿಯಾಗಿ ಅನುದಾನವನ್ನು ಒದಗಿಸಿಲ್ಲ. ಡಾ.ಡಿ.ಎಮ್.ನಂಜುಂಡಪ್ಪ ಸಮಿತಿ ವರದಿಯನ್ನು ಕೇವಲ ನೆಪಮಾಡಿಕೊಂಡು ಮಾತನಾಡಲಾಗುತ್ತಿದೆ. ವಾಸ್ತವವಾಗಿ ರಾಜ್ಯದ ವಾರ್ಷಿಕ ಯೋಜನಾ ವೆಚ್ಚದಲ್ಲಿಯೇ ಎಂಟು ವರ್ಷಗಳ ವಿಶೇಷ ಯೋಜನೆಯ ಮೊತ್ತವು ಸೇರಿದೆ. ಆದರೆ ಅದನ್ನೇ ಹೆಚ್ಚುವರಿಯೆಂದು ಹೇಳಲಾಗುತ್ತಿದೆ.

ಅಭಿವೃದ್ಧಿಯ ದೃಷ್ಟಿಯಿಂದ ಪ್ರಾಥಮಿಕವೆನ್ನ ಬಹುದಾದ ಪ್ರಾ.ಶಿ.ದ ಸ್ಥಿತಿಗತಿ ಬಗ್ಗೆ ಸರ್ಕಾರಕ್ಕಾಗಲಿ ಅಥವಾ ಜನಪ್ರತಿನಿಧಿಗಳಿಗಾಗಲಿ ಕಾಳಜಿಯಿಲ್ಲ. ಯಾಕೆ ಈ ಮಾತನ್ನು ಇಷ್ಟೊಂದು ಒತ್ತಾಯಪೂರ್ವಕವಾಗಿ ಒತ್ತಿ ಹೇಳುತ್ತಿದ್ದೇನೆಂದರೆ ನಮ್ಮ ರಾಜ್ಯದಲ್ಲಿ ೧ ರಿಂದ ೧೦ನೆಯ ತರಗತಿಯವರೆಗೆ ಕಲಿಯುತ್ತಿರುವ ಮಕ್ಕಳ ಸಂಖ್ಯೆ ಸರಿ ಸುಮಾರು ೧೦೦ಲಕ್ಷ ಮೀರುತ್ತದೆ. ಅಂದರೆ ಅವರ ಪ್ರಮಾಣ ಒಟ್ಟು ಜನಸಂಖ್ಯೆಯ ಶೇ.೧೮ ರಷ್ಟಾಗುತ್ತದೆ.ಇದು ಸಣ್ಣ ಪ್ರಮಾಣವಲ್ಲ. ಪ್ರತಿ ಜಿಲ್ಲೆಯಲ್ಲಿ ಅದರ ಮೇಲೆ ನಾವು ತೊಡಗಿಸುತ್ತಿರುವ ಹಣ ವಾರ್ಷಿಕ ಸರಿ ಸುಮಾರು ಇನ್ನೂರು ಕೋಟಿಗೂ ಮೀರುತ್ತದೆ. ಇಂತಹ ಸಂಗತಿ ಬಗ್ಗೆ ನಾವು ತಳೆದಿರುವ ದಿವ್ಯ ನಿರ್ಲಕ್ಷ್ಯಕ್ಕೆ ಯಾವುದೇ ಕ್ಷಮಾಪಣೆ ಇರಲಾರದು.

ರಥ ಯಾತ್ರೆ / ಅಕ್ಷರ ಯಾತ್ರೆ

ದೇವಾಲಯಗಳನ್ನು ಮಠಗಳಿಗೆ ವಹಿಸಿಕೊಡುವುದರ ಬಗ್ಗೆ, ಒರಿಸ್ಸಾ ರಾಜ್ಯದಲ್ಲಿ ಕೋಮುವಾದಿಗಳಿಂದ ಚರ್ಚ್‌ಗಳ ಮೇಲೆ ಮತ್ತು ಕ್ರಿಶ್ಚಿಯನ್ ಮತಾವಲಂಬಿಗಳ ಮೇಲೆ ನಡೆದ ವಿನಾಕಾರಣ ಹಲ್ಲೆ, ದೊಂಬಿ,ಸುಲಿಗೆ,ಹತ್ಯೆ ಮುಂತಾದವುಗಳನ್ನು ಪ್ರತಿಭಟಿಸಿ ನಮ್ಮ ರಾಜ್ಯದ ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳು ನಡೆಸಿದ ಒಂದು ದಿನದ ಮುಷ್ಕರವನ್ನು ಟೀಕಿಸುವುದರ ಬಗ್ಗೆ, ಹೈದರಾಬಾದ್ ಕರ್ನಾಟಕ ಪ್ರದೇಶದ ಹಿಂದುಳಿದಿರುವಿಕೆಗೆ ನಿಜಾಮರ ಆಳ್ವಿಕೆ ಕಾರಣವೆಂದು ಹೇಳುವುದರಲ್ಲಿ ಈ ಸರ್ಕಾರಕ್ಕೆ ಬಹಳ ಆಸಕ್ತಿಯಿರುವಂತೆ ಕಾಣುತ್ತದೆ. ಈ ಇಲಾಖೆಯ ಮಂತ್ರಿ ಒಮ್ಮೆಯಾದರೂ, ನೆಪಕ್ಕಾದರೂ ಅನಕ್ಷರತೆ ನಿವಾರಣೆ ಬಗ್ಗೆ, ಪ್ರಾ.ಶಿ.ದ ದುಸ್ಥಿತಿ ಬಗ್ಗೆ ಮಾತನಾಡಿಲ್ಲ. ಅವರಿಗೆ ಮಾರ್ಗದರ್ಶಿಗಳಾಗಿರುವವರು

ದೇಶದ ಬಗ್ಗೆ ಯಾವಾಗಲೂ ಹರಿಹಾಯುತ್ತಿರುತ್ತಾರೆ. ಆದರೆ ನಮ್ಮ ನಾಡಿನ ಬಡವರ,ವಂಚಿತರ, ಅಂಚಿನಲ್ಲಿರುವವರ, ಅನಕ್ಷರಸ್ಥರ, ಮಹಿಳೆಯರ ಬಗ್ಗೆ ಯಾವತ್ತೂ ಅವರು ಚಕಾರವೆತ್ತುವುದಿಲ್ಲ.ಏಕೆಂದರೆ ಅವರ ಉದ್ದೇಶ ಪಟ್ಟಭ ದ್ರ,ಪುರೋಹಿತಶಾಹಿಯ ಮತ್ತು ಉಳ್ಳವರ ಹಿತ ಕಾಪಾಡುವುದೆ ವಿನಾ ಪರಿಶಿಷ್ಟರ, ಹಿಂದುಳಿದವರ ಮತ್ತು ಮಹಿಳೆಯರ ಬದುಕನ್ನು ಸಮೃದ್ಧಗೊಳಿಸುವುದಲ್ಲ. ಒಂದು ವೇಳೆ ಅವರಿಗೆ ಜನರ ಬಗ್ಗೆ ಕಾಳಜಿ ಇದ್ದಿದ್ದರೆ ರಾಜ್ಯದಲ್ಲಿ\ದೇಶದಲ್ಲಿ ಅವರು ಅನಕ್ಷರತೆಯ ನಿವಾರಣೆ ಬಗ್ಗೆ ಒಂದಾದರೂ ರಥ ಯಾತ್ರೆ ನಡೆಸುತ್ತಿದ್ದರು. ಈ ರಥ ಯಾತ್ರೆಗಳ ಅದ್ವಿತೀಯ ನಾಯಕರಾಗಿರುವ, ಮುಂದಿನ ಪ್ರಧಾನಿಯೆಂದು ಕರೆಸಿಕೊಳ್ಳುತ್ತಿರುವ ಶ್ರೀಲಾಲ್‌ಕೃಷ್ಣ ಅಡ್ವಾನಿ ಅವರು ಅಕ್ಷರ ಯಾತ್ರೆ ಬಗ್ಗೆ ಯೋಚಿಸುವುದು ಸಾಧ್ಯವಿಲ್ಲ.

ಏಕೆಂದರೆ ಅವರಿಗೆ ಕೇವಲ ಅಕ್ಷರಸ್ಥರ ಜಗತ್ತು ಮಾತ್ರ ಕಾಣುತ್ತದೆ. ಅವರ ಪ್ರಕಾರ ಅಕ್ಷರಸ್ಥರ ಹಿತವೇ ಇಡೀ ದೇಶದ ಹಿತ. ಅದು ಸಹಜ. ಏಕೆಂದರೆ ಅವರು ಪ್ರತಿನಿಧಿಸುವ ಜಗತ್ತಿನಲ್ಲಿ ಅನಕ್ಷರಸ್ಥರಿಲ್ಲವಲ್ಲ!. ಪ್ರಾ.ಶಿ.ಕ್ಕೆ ಸಂಬಂಧಿಸಿದಂತೆ ಶಾಲೆಗಳ ಕಟ್ಟಡ, ಶಾಲಾ ಮೈದಾನದಲ್ಲಿರುವ ವಾತಾವರಣ, ಶಾಲೆಯ ಒಳಗೆ ಇರುವ ಪರಿಸರ ಇವುಗಳು ಅತ್ಯಂತ ಚಿಂತಾಜನಕವಾಗಿರುವುದು ಯಾರಿಗೆ ತಿಳಿದಿಲ್ಲ? ಆದರೆ ಎಲ್ಲರೂ ಕಣ್ಣು ಮುಚ್ಚಿಕೊಂಡು ಅದನ್ನು ನಿರ್ಲಕ್ಷಿಸುತ್ತ ಬರುತ್ತಿದ್ದಾರೆ. ಸರ್ಕಾರಿ ಪ್ರಾ.ಶಾಲೆಗಳನ್ನು ನೋಡಿದರೆ ಅವುಗಳನ್ನು ಪ್ರವೇಶಿಸಬೇಕೆಂದು ಯಾರಿಗೂ ಮನಸ್ಸು ಬರುವುದಿಲ್ಲ. ಒಂದು ಕಾಲಕ್ಕೆ ಶಾಲೆಗಳ ಕಟ್ಟಡಗಳಿಗೆ ಒಂದು ವಿನ್ಯಾಸವಿರುತ್ತಿತ್ತು. ಅವುಗಳನ್ನು ಅತ್ಯಂತ ವಿಶಾಲವಾಗಿ ಮತ್ತು ಬೃಹತ್ ಬಾಗಿಲು ಮತ್ತು ಕಿಟಕಿಗಳನ್ನಿಟ್ಟು ಕಟ್ಟಲಾಗುತ್ತಿತ್ತು. ಸ್ವಾತಂತ್ರ್ಯಪೂರ್ವ ಕಾಲಘಟ್ಟದಲ್ಲಿ ಕಟ್ಟಿದ ಶಾಲಾ ಕಟ್ಟಡಗಳು ನಾಡಿನ ತುಂಬಾ ಇನ್ನು ಗಟ್ಟಿಯಾಗಿ ಸೇವೆ ನೀಡುತ್ತಿವೆ. ಒಂದು ಕಾಲಕ್ಕೆ ಸಾಮಾನ್ಯವಾಗಿ ಇಡೀ ಊರಿಗೆ ಉನ್ನತವಾದ ಕಟ್ಟಡ ಅದಾಗಿರುತ್ತಿತ್ತು. ಪ್ರತಿಯೊಂದು ಹಳ್ಳಿಯಲ್ಲೂ ಶಾಲಾ ಸಂಸ್ಕೃತಿಯೆಂಬುದಿರುತ್ತಿತ್ತು. ಈಗ ಅಂತಹ ಸ್ಥಿತಿಯಿಲ್ಲ. ಇಂದು ಇಡೀ ಊರಿನಲ್ಲಿ ಅತ್ಯಂತ ಅಸಹ್ಯವಾದ ಕಟ್ಟಡ\ಜಾಗ ಯಾವುದಾದರೂ ಇದ್ದರೆ ಅದು ಶಾಲಾ ಕಟ್ಟಡವೆನ್ನುವಂತಾಗಿದೆ.ಇದಕ್ಕೆ ಅಪವಾದಗಳಿರಬಹುದು. ಈಗ ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಕಟ್ಟುತ್ತಿರುವ ಶಾಲಾ ಕಟ್ಟಡಗಳಿಗೆ ಒಂದು ವಿನ್ಯಾಸವಿಲ್ಲ, ಒಂದು ಮಾದರಿಯಿಲ್ಲ. ಒಂದು ಯೋಜನೆಯಿಲ್ಲ. ಅದರಲ್ಲಿ ಕಲಾಭಿರುಚಿಯಿಲ್ಲ. ಹರಕಲು-ಮುರುಕಲು ರೂಪದಲ್ಲಿ, ಕಟ್ಟುವಾಗಲೇ ಶಿಥಿಲವಾಗಿರುವಂತೆ ಅವುಗಳನ್ನು ಕಟ್ಟಲಾಗುತ್ತಿದೆ. ಬಡವರ,ಪರಿಶಿಷ್ಟರ, ಹಿಂದುಳಿದವರ ಶಾಲೆಗಳು ಹೇಗಿದ್ದರೂ ನಡೆಯುತ್ತದೆಯೆಂಬ ಧೋರಣೆ ಇಲ್ಲಿ ಎದ್ದು ಕಾಣುತ್ತದೆ. ಊರಿನ ಒಂದು ಭಾಗದಲ್ಲಿ ಶಾಲೆಯ ಎರಡು ರೂಮುಗಳಿದ್ದರೆ ಮತ್ತೊಂದು ಭಾಗದಲ್ಲಿ ಇನ್ನೆರಡು ರೂಮುಗಳನ್ನು ಕಟ್ಟಲಾಗುತ್ತಿದೆ. ಕಟ್ಟಿದ ಕೆಲವೇ ತಿಂಗಳಲ್ಲಿ ಅವು ಉಪಯೋಗಕ್ಕೆ ಬಾರದಂತಾಗುತ್ತಿವೆ. ಈ ಕಟ್ಟಡ ನಿರ್ಮಾಣದ ಬಗ್ಗೆ ಒಂದು ಕಟ್ಟುನಿಟ್ಟಾದ ನಿಯಮ ರೂಪಿಸುವುದು ನಮ್ಮ ಅಧಿಕಾರಿಗಳಿಗಾಗಲಿ ಅಥವಾ ಸರ್ಕಾರಕ್ಕಾಗಲಿ-ಜನಪ್ರತಿನಿಧಿಗಳಿಗಾಗಲಿ ಅಥವಾ ಅದಕ್ಕೆ ಸಂಬಂಧಿಸಿದ ಎಂಜಿನಿಯರುಗಳಿಗಾಗಲಿ ಸಾಧ್ಯವಾಗದಿರುವುದು ಉದ್ದೇಶಪೂರ್ವಕವೋ ಅಥವಾ ಅಗತ್ಯವಿಲ್ಲವೆಂದು ತಿಳಿಯಲಾಗಿದೆಯೊ ಅಥವಾ ಔದಾಸೀನ್ಯವೋ ಅರ್ಥವಾಗುತ್ತಿಲ್ಲ; ನೆಲದ ಮಟ್ಟಕ್ಕೆ ಬುನಾದಿ ಹಾಕಲಾಗುತ್ತಿದೆ. ಈಗಲೋ-ಆಗಲೊ ಮುರಿದು ಬೀಳುವಂತಹ ಕಿಟಕಿ-ಬಾಗಿಲುಗಳನ್ನು ಅಲ್ಲಿ ನಿಲ್ಲಿಸಲಾಗುತ್ತದೆ. ಅವುಗಳನ್ನು ಪ್ರವೇಶಿಸಿದರೆ ಒಂದು ಬಗೆಯಲ್ಲಿ 'ಗುಹೆ'ಗಳನ್ನು ಹೊಕ್ಕಂತೆ ಭಾಸವಾಗುತ್ತದೆ. ಬಡವರು ಹೋಗುತ್ತಾರೆ ಎಂದ ಮಾತ್ರಕ್ಕೆ ಅವು ಹೀಗಿರಬೇಕೆ?

ಅಭಿವೃದ್ಧಿಯ ವಿಕೃತಿ

ಹಿಂದುಳಿದ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಯಾವುದರ ಬಗ್ಗೆ ಮಾತನಾಡಬೇಕು ಎಂಬುದರ ಔಚಿತ್ಯವನ್ನು ಮರೆತು ನಮ್ಮ ಮಂತ್ರಿಗಳು ಗುಲಬರ್ಗಾದಲ್ಲಿ ಸಚಿವ ಸಂಪುಟ ಸಭೆ ಸಂದರ್ಭದಲ್ಲಿ ಮಾತನಾಡಿದ್ದಾರೆ. ಈ ಎಲ್ಲ ಟೀಕೆ-ಟಿಪ್ಪಣಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅಲ್ಲಿ ಯಾರೂ ಅನಕ್ಷರತೆ ಬಗ್ಗೆ ಚಕಾರವೆತ್ತದಿರುವುದು ತಿಳಿದುಬರುತ್ತದೆ. ಹಿಂದುಳಿದ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಹಣದ ಕೊರತೆಯಿಲ್ಲ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಬಡವರಿಗೆ ಉದ್ಯೋಗ ನೀಡಲು ಕೇಂದ್ರ ಸರ್ಕಾರ ಎಷ್ಟು ಹಣವನ್ನಾದರೂ ನೀಡುತ್ತದೆ. ಉದಾಹರಣೆಗೆ ಬಳ್ಳಾರಿ ಜಿಲ್ಲೆಯ ೨೦೦೮-೦೯ರ ಯೋಜನೆಯ ಗಾತ್ರ ರೂ.೧೩೫ ಕೋಟಿಯಾದರೆ ಅದರ ೨೦೦೮-೦೯ರ ಸಾಲಿನ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಗಾತ್ರ ರೂ. ೨೬೫ ಕೋಟಿ. ಆದರೆ ಇಲ್ಲಿನ ಸಮಸ್ಯೆಯೆಂದರೆ ಜನರ, ಅಂದರೆ,ಬಡವರ, ಪರಿಶಿ ಷ್ಟರ ಮತ್ತು ಹಿಂದುಳಿದವರ ಹಾಗೂ ಮಹಿಳೆಯರ ನೆಲೆಯಿಂದ ಅಭಿವೃದ್ಧಿಯನ್ನು ಪರಿಭಾವಿಸಿಕೊಳ್ಳುವುದರಲ್ಲಿದೆ. ಇದು ನಮಗೆ ಸಾಧ್ಯವಾಗುತ್ತಿಲ್ಲ. ಉದಾಹರಣೆಗೆ ನಾವು ಕಳೆದ ನಾಲ್ಕಾರು ವಾರಗಳಿಂದ ಬಳ್ಳಾರಿ ಜಿಲ್ಲೆಯ ಹನ್ನೊಂದನೆಯ ಯೋಜನೆಗೆ ಸಂಬಂಧಿಸಿದಂತೆ ಜಿಲ್ಲಾ ಪಂಚಾಯಿತಿಯಲ್ಲಿ ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿ ಗಳಿಗೆ ಮುನ್ನೋಟ ನಿರ್ಧರಿಸುವ ವಿಧಾನದ ಬಗ್ಗೆ ಕಾರ್ಯಾಗಾರಗಳನ್ನು ಮಾಡುತ್ತಿದ್ದೇವೆ.

ಇಲ್ಲಿ ಪ್ರತಿಯೊಂದು ಇಲಾಖೆಯವರನ್ನು ತಮ್ಮ ಇಲಾಖೆ ಬಗ್ಗೆ ಅಭಿವೃದ್ಧಿ ಸೂಚಿಗಳನ್ನು ಗುರುತಿಸಿಕೊಂಡು ಅವುಗಳಿಗೆ ಸಂಬಂಧಿಸಿದಂತೆ ೨೦೧೨ರ ಗುರಿಯ 'ಮುನ್ನೋಟ'ವನ್ನು ನಿಗದಿಪಡಿಸಿಕೊಡುವಂತೆ ಕೇಳುತ್ತಿದ್ದೇವೆ. ಆದರೆ ಅಧಿಕಾರಿಗಳಿಗೆ ಕಾಮಗಾರಿ ಬಿಟ್ಟು ಜನರನ್ನು ಒಳಗೊಳ್ಳುವಂತೆ ಯೋಜನೆ ರೂಪಿಸುವ ಮತ್ತು ಮುನ್ನೋಟ ನಿಗದಿಪಡಿಸುವ ಕಾರ್ಯ ಸಾಧ್ಯವಾಗುತ್ತಿಲ್ಲ. ಅಧಿಕಾರಿಗಳು ಸಿದ್ಧ ಮಾಡಿಕೊಂಡು ಬಂದ ಯೋಜನೆಗಳನ್ನು ಹಿಂತಿರುಗಿಸಿ ಜನರನ್ನು ಒಳಗೊಳ್ಳುವಂತೆ ಯೋಜನೆ ಸಿದ್ಧಮಾಡಿಕೊಂಡು ಬನ್ನಿರೆಂದು ಎಷ್ಟು ಬಾರಿ ಹೇಳಿದರೂ ಅವರಿಗೆ ಕಾಮಗಾರಿ ಬಿಟ್ಟು ಯೋಚನೆ ಮಾಡುವುದು-ಯೊಜನೆ ರೂಪಿಸುವುದು ಸಾಧ್ಯವಿಲ್ಲವಾಗಿದೆ. ಶಿಕ್ಷಣ ಇಲಾಖೆಯವರು ಎರಡು-ಮೂರು ಬಾರಿ ಯೋಜನೆ ರೂಪಿಸಿಕೊಟ್ಟಾಗಲೂ ಅದರಲ್ಲಿ ಸಾಕ್ಷರತೆ ಬಗ್ಗೆಯಾಗಲಿ,ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಬಗ್ಗೆಯಾಗಲಿ ಅಥವಾ ಹತ್ತನೆಯ ತರಗತಿ ಫಲಿತಾಂಶದ ಬಗ್ಗೆಯಾಗಲಿ,ಹಾಜರಾತಿ ಬಗ್ಗೆಯಾಗಲಿ,ಬಾಲಕಿಯರ ದಾಖಲಾತಿಯನ್ನು ಉತ್ತಮಪಡಿಸುವುದರ ಕುರಿತಾಗಲಿ ಕಾರ್ಯಕ್ರಮವೊಂದನ್ನು ಜಿಲ್ಲೆಗೆ ಸಂಬಂಧಿಸಿದಂತೆ ರೂಪಿಸಿಕೊಡುವುದು ಇಡೀ ಇಲಾಖೆಗೆ ಸಾಧ್ಯವಾಗುತ್ತಿಲ್ಲ. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಿಸಿದಂತೆ ನಾವು ಜಿಲ್ಲೆಯಲ್ಲಿ ಬಡವರಿಗೆ, ಪರಿಶಿಷ್ಟರಿಗೆ,ಹಿಂದುಳಿದವರಿಗೆ ಸಂಬಂಧಿಸಿದಂತೆ ಉದ್ಯೋಗ-ಕಾಮಗಾರಿಗಳನ್ನು ರೂಪಿಸುವುದು ಹೇಗೆ ಎಂಬ ಕಾರ್ಯಾಗಾರ ನಡೆಸುತ್ತಿರಬೇಕಾದರೆ ಜನಪ್ರತಿನಿಧಿಗಳು ಕೇಳುತ್ತಿದ್ದ ಪ್ರಶ್ನೆಯೆಂದರೆ 'ಅವರಿಗೆ ಎಷ್ಟು ಮಾಡಿದರೂ ಅಷ್ಟೇ ಸಾರ್! ಆಗಲಿಲ್ಲ-ಹೋಗಲಿಲ್ಲ! ಬರಲಿಲ್ಲ-ಬಾರಿಸಲಿಲ್ಲ! ಅದನ್ನು ಬಿಟ್ಟು ಅಭಿವೃದ್ಧಿ ಬಗ್ಗೆ (ಅಂದರೆ ಕಾಮಗಾರಿಗಳ ಬಗ್ಗೆ, ರಸ್ತೆಗಳ ಬಗ್ಗೆ, ಕಟ್ಟಡಗಳ ಬಗ್ಗೆ) ಮಾತನಾಡಿ, ಸ್ವಾಮಿ'ಎಂಬುದಾಗಿತ್ತು. ಹಣ, ಅನುದಾನ,ಕಾಮಗಾರಿಗಳು, ಕಟ್ಟಡಗಳು, ರಸ್ತೆ ನಿರ್ಮಾಣ ಮುಂತಾದವುಗಳನ್ನು ಬಿಟ್ಟು ಅಭಿವೃದ್ಧಿಯನ್ನು ನಮಗೆ ಪರಿಭಾವಿಸಿಕೊಳ್ಳುವುದು ಸಾಧ್ಯವಿಲ್ಲದ ಸ್ಥಿತಿ ಮುಟ್ಟಿಬಿಟ್ಟಿದ್ದೇವೆ. ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆಯಾಗಲಿ,ಮಹಿಳೆಯರ ಪೌಷ್ಟಿಕತೆ ಮಟ್ಟದ ಬಗ್ಗೆಯಾಗಲಿ, ಮಕ್ಕಳ ಆರೈಕೆ ಕುರಿತಾಗಲಿ,ಶಾಲೆಗಳಲ್ಲಿ ಮಕ್ಕಳಿಗೆ ವಿಶೇಷವಾಗಿ ಇಂಗ್ಲೀಷ್ ಕಲಿಸುವುದರ ಬಗ್ಗೆಯಾಗಲಿ ಯೋಜನೆ ರೂಪಿಸಬೇಕೆಂಬುದು ನಮ್ಮ ಅಧಿಕಾರಿಗಳಿಗೆ ಹೊಳೆಯುವುದಿಲ್ಲ.ಏಕೆಂದರೆ ಅದರಲ್ಲಿ 'ಕಾಮಗಾರಿ-ಕಾಂಟ್ರಾಕ್ಟ್‌ಗಿರಿ' ಸಾಧ್ಯವಿಲ್ಲವಲ್ಲ! ಕಾಂಟ್ರಾಕ್ಟ್‌ಗಿರಿ-ಕಾಮಗಾರಿಗಳಿಲ್ಲದಿದ್ದರೆ ಜನಪ್ರತಿನಿಧಿಗಳು ಯೋಜನೆಗಳನ್ನು ಒಪ್ಪುವುದಿಲ್ಲ. ಜನರು ಅಕ್ಷರಸ್ಥರಾದರೆ ಜನಪ್ರತಿನಿಧಿಗಳಿಗೆ ಮರೆಯಲು ಸಾಧ್ಯವಾಗುವುದಿಲ್ಲ. ಕೇಂದ್ರೀಯ ವಿಶ್ವವಿದ್ಯಾಲಯವು ಗುಲಬರ್ಗಾದಲ್ಲಿ ಆರಂಭವಾಗುತ್ತಿರುವುದು ಸಂತೋಷದ ಸಂಗತಿ. ಆದರೆ ಈ ಪ್ರದೇಶದಲ್ಲಿ ಸಾಕ್ಷರತೆಯೇ ಅತ್ಯಂತ ಕೆಳಮಟ್ಟದಲ್ಲಿದೆ. ಪ್ರಾ.ಶಿ.ದ ಸ್ಥಿತಿಗತಿ ಅತ್ಯಂತ ದುರ್ಬಲವಾಗಿದೆ. ಹಿಂದುಳಿದ ಪ್ರದೇಶವೆಂದರೆ ನಿಜವಾಗಲೂ ಅಲ್ಲಿನ ಜನರು ಹಿಂದುಳಿದಿದ್ದಾರೆಂದು ಅರ್ಥ. ಪ್ರಾದೇಶಿಕ ಅಸಮಾನತೆಯೆಂದರೆ ಹಿಂದುಳಿದ ಪ್ರದೇಶದಲ್ಲಿನ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣೆಹಾಕುವುದೆಂದು ಅರ್ಥವಲ್ಲ. ಸಚಿವ ಸಂಪುಟ ಸಭೆಯಲ್ಲಿ ಗುಲಬರ್ಗಾ ವಿಭಾಗದಲ್ಲಿನ ಜನರ ಬಗ್ಗೆ ಯಾರೂ ಮಾತನಾಡಲಿಲ್ಲ. ಇಡೀ ರಾಜ್ಯದಲ್ಲಿ ಒಟ್ಟು ದುಡಿಮೆಗಾರರಲ್ಲಿ ದಿನಗೂಲಿಗಳ ಪ್ರಮಾಣ ಶೇ.೨೬ರಷ್ಟಿದ್ದರೆ ಗುಲಬರ್ಗಾ ವಿಭಾಗದಲ್ಲಿ ಅವರ ಪ್ರಮಾಣ ಶೇ.೪೦ಕ್ಕಿಂತ ಅಧಿಕವಿದೆ. ಅಮರ್ತ್ಯಸೇನ್ ಬದುಕನ್ನು ಉತ್ತಮಪಡಿಸಿಕೊಳ್ಳಲು ವಿಕಲ್ಪಗಳಿಲ್ಲದಿರುವ ಸ್ಥಿತಿಯನ್ನು ಬಡತನವೆಂದು ನಿರ್ವಚಿಸುತ್ತಾನೆ. ಗುಲಬರ್ಗಾ ವಿಭಾಗದ ಸರಿಸುಮಾರು ೨೦ ಲಕ್ಷ ದಿನಗೂಲಿ ದುಡಿಮೆಗಾರರ ಸಂದರ್ಭದಲ್ಲಿ 'ವಿಕಲ್ಪ'ಗಳಿಲ್ಲದ ಸ್ಥಿತಿಯಿದೆ. ದುಡಿದರೆ ಕೂಳು ಇಲ್ಲದಿದ್ದರೆ ಉಪವಾಸ ಎನ್ನುವ ಸ್ಥಿತಿ ದಿನಗೂಲಿ

ರಾಜ್ಯದ ಅತ್ಯಂತ ಹಿಂದುಳಿದ ಗುಲ ಬರ್ಗಾ ಜಿಲ್ಲೆಯಲ್ಲಿ ೨೦೦೪-೦೫ರಲ್ಲಿ ಏಳನೆಯ ತರಗತಿಯಲ್ಲಿ ದಾಖಲಾದ ಮಕ್ಕಳ ಸಂಖ್ಯೆ ೪೯೧೭೫. ಆದರೆ ಅವ ರಲ್ಲಿ ಮರು ವರ್ಷ ಅಂದರೆ ೨೦೫-೦೬ ರಲ್ಲಿ ಎಂಟನೆಯ ತರಗತಿ ಸೇರಿದ ಮಕ್ಕಳ ಸಂಖ್ಯೆ ಕೇವಲ ೩೨೭೯೫. ಅಂದರೆ ಈ ಪರಿವರ್ತನೆಯ ಸಂದರ್ಭದಲ್ಲಿ ಶಾಲಾ ವಾಹಿನಿಯಿಂದ ಹೊರಬಿದ್ದ ಮಕ್ಕಳ ಸಂಖ್ಯೆ ೧೬೩೮೦.

ಗಳದ್ದಾಗಿದೆ. ಈ ವರ್ಗದ ಹಿತಾಸಕ್ತಿಗಳ ಬಗ್ಗೆ ಯಾರು ಮಾತನಾಡಬೇಕು? ಪ್ರಾದೇಶಿಕ ಅಸಮಾನತೆಯೆಂಬುದು ಜನರಿಗೆ ಸಂಬಂಧಿಸಿದ ಸಮಸ್ಯೆಯಾಗಿದೆ. ಆದರೆ ಇಂದು ಅದು ವಾಸ್ತವದಲ್ಲಿ ಹಿಂದುಳಿದ ಪ್ರದೇಶದ ಪಟ್ಟಭದ್ರ ಹಿತಾಸಕ್ತಿಗಳ ಬಂಡವಾಳವಾಗಿ ಬಿಟ್ಟಿದೆ.

ಜನರ ಯೋಜನೆಗಳನ್ನು ಲಪಟಾಯಿಸುವ ಮಂದಿ!

ಜನರ ಹೋರಾಟದ ಫಲವಾಗಿ, ಪ್ರಗತಿ ಪರ ಸಂಘಟನೆಗಳ ಪರಿಶ್ರಮದಿಂದಾಗಿ ಮತ್ತು ನ್ಯಾಯಾಲಯಗಳ ಮಧ್ಯ ಪ್ರವೇಶದಿಂದಾಗಿ ಶಾಲೆಗಳಲ್ಲಿ ಮಧ್ಯಾಹ್ನದ ಊಟದ ಕಾರ್ಯಕ್ರಮ 'ಅಕ್ಷರ ದಾಸೋಹ' ರಾಜ್ಯದಲ್ಲಿ ಜಾರಿಗೆ ಬಂದಿದೆ. ರಾಯಚೂರು, ಗುಲಬರ್ಗಾ, ಕೊಪ್ಪಳ,ವಿಜಾಪುರ ಮುಂತಾದ ಹಿಂದುಳಿದ ಜಿಲ್ಲೆಗಳ ಅನೇಕ ಮೂಲೆಕಟ್ಟಿನ ಹಳ್ಳಿಗಳಲ್ಲಿನ ಶಾಲೆಗಳಲ್ಲಿ ಎಂಟು-ಹತ್ತು ವರ್ಷದ ಹುಡುಗಿಯರು ಎರಡು-ಮೂರು ವರ್ಷದ ಕೂಸುಗಳನ್ನು ಶಾಲೆಗೆ ಕರೆದುಕೊಂಡು ಬರುವುದು ಸಾಮಾನ್ಯವಾಗಿದೆ. ಅಂತಹ ಮಕ್ಕಳನ್ನು ಕರೆದುಕೊಂಡು ಬರಬಾರದೆಂದು ಶಿಕ್ಷಕರು ಹೇಳುವಂತಿಲ್ಲ. ಏಕೆಂದರೆ ಮರುದಿನ ಆ ಹುಡುಗಿಯರು ಶಾಲೆಗೆ ಬರುವುದು ತಪ್ಪಿಬಿಡುತ್ತದೆ. ಅಕ್ಷರ ದಾಸೋಹದ ಪ್ರಭಾವ ಹಿಂದುಳಿದ ಜಿಲ್ಲೆಗಳಲ್ಲಿ ಅಷ್ಟಿದೆ! ಇಂತಹ ಯೋಜನೆಯೊಂದು ಆರಂಭವಾಗಿ ನಾಲ್ಕ ಜನ ಪರಿಶಿಷ್ಟರಿಗೆ ಅಡುಗೆ ಮಾಡುವ ಕೆಲಸ ಸಿಕ್ಕ ತೊಡಗಿದ ಮೇಲೆ ಮಠಮಾನ್ಯಗಳ ವರಿಷ್ಟರು, ಕಾರ್ಪೊರೇಟ್ ಕ್ಯಾಪ್ಟನ್‌ಗಳು, ಹೈಟೆಕ್ ಗುರುಗಳು ಅದನ್ನು ಹೈಜಾಕ್ ಮಾಡುವ ಕೆಲಸವನ್ನು ಸರ್ಕಾರದ ನೆರವಿನಲ್ಲಿ ಮಾಡತೊಡಗಿದ್ದಾರೆ. ನಿಜಕ್ಕೂ ಈ ಜನರಿಗೆ ಜನಸೇವೆ ಬಗ್ಗೆ ಕಳಕಳಿಯಿದ್ದರೆ ಸರ್ಕಾರವು ಮಧ್ಯಾಹ್ನದ ಊಟ ನೀಡಿದರೆ ತಾವು ರಾತ್ರಿ ಊಟ ನೀಡಬಹುದಿತ್ತು. ಶಾಲೆಗಳಲ್ಲಿ ಮಕ್ಕಳಿಗೆ ಇಂಗ್ಲೀಶ್ ಹೇಳಿಕೊಡುವ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬಹುದಾಗಿತ್ತು. ಪೂರಕ ಬೋಧನೆಯ ಕಾರ್ಯ ಮಾಡಬಹುದಾಗಿತ್ತು. ಶಾಲೆಗಳಿಗೆ ವಿಜ್ಞಾನ ಪ್ರಯೋಗಾಲಯಗಳನ್ನು ಕೊಡಿಸಬಹುದಿತ್ತು. ಅದನ್ನು ಬಿಟ್ಟು ಸರ್ಕಾರದ ಕಾರ್ಯಕ್ರಮವನ್ನು ಹೈಜಾಕ್ ಮಾಡಿ ಕಾರ್ಪೊರೇಟ್ ಕಂಪನಿಗಳು ತಮ್ಮ ಬೌದ್ಧಿಕ ದಿವಾಳಿತನವನ್ನು ಪ್ರದರ್ಶಿಸುತ್ತಿವೆ. ಬಡವರಿಗೆ ನೆರವು ನೀಡಲು ಜನರು ಹೋರಾಟ ಮಾಡಿ ಪಡೆದುಕೊಂಡ ಮತ್ತು ಸರ್ಕಾರವು ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳನ್ನು ಅಪಹರಿಸುವುದು 'ಜನಸೇವೆ'ಗೆ ತಮ್ಮನ್ನು ತಾವು ಮುಡುಪಾಗಿಟ್ಟುಕೊಂಡವರಿಗೆ ಗೌರವ ತರುವುದಿಲ್ಲ. ವೈಯುಕ್ತಿಕ ನೆಲೆಯಲ್ಲಿ ಹಾಗೂ ಸಾಮೂಹಿಕ ನೆಲೆಯಲ್ಲಿ ದಾನ,ದತ್ತಿ, ಉಂಬಳಿ ಮುಂತಾದ ಸಂಗತಿಗಳು ಜನತಂತ್ರಕ್ಕೆ ಪೂರ್ಣ ವಿರೋಧವಾಗಿವೆ. ಏಕೆಂದರೆ ಅವು ಜನರ ಬದುಕನ್ನು 'ಹಂಗಿನ' ಸಂಗತಿಯನ್ನಾಗಿ ಮಾತ್ರ ಮಾಡಬಲ್ಲವು.ವಸ್ತ್ರ ದಾನ,ಉಚಿತ ಕುಡಿಯುವ ನೀರಿನ ಸರಬರಾಜು, ಪಠ್ಯ ಪುಸ್ತಕಗಳ ದಾನ, ಅನ್ನ ಸಂತರ್ಪಣೆ,ಹಬ್ಬ-ಹರಿದಿನಗಳಲ್ಲಿ ಹಣ ಹಂಚುವುದು ಮುಂತಾದವು ಜನರಿಗೆ 'ಹಂಗಿನ' ಬದುಕನ್ನು ನೀಡಬಲ್ಲವೆ ವಿನಾ ಹಕ್ಕಿನ, ಘನತೆಯ,ಸ್ವಾತಂತ್ರ್ಯದ ಬದುಕನ್ನು ನೀಡಲು ಸಾಧ್ಯವಿಲ್ಲ. ದಾನ,ದತ್ತಿ, ಉಂಬಳಿಗಳು ಜನತಂತ್ರಕ್ಕೆ ಅಪಮಾನ. ಶಾಸಕತ್ವವು ಜನತಂತ್ರವನ್ನು ಬಲಪಡಿಸುವದಕ್ಕಿದೆಯೇ ವಿನಾ ಜನರಲ್ಲಿ ದಾಸ್ಯವನ್ನು ಬಿತ್ತಲು ಅಲ್ಲ. ಸಾಕ್ಷರತೆ, ಪ್ರಾ.ಶಿ.ಕನಿಷ್ಠ ಕೂಲಿ.ಉದ್ಯೋಗ ಭದ್ರತೆ,ಲಿಂಗ ಸಮಾನತೆ,ಆಹಾರ ಭದ್ರತೆ ಮುಂತಾದವು ಜನರ ಹಕ್ಕುಗಳಾಗಿವೆ. ಈ ಸಂಗತಿಗಳನ್ನು ಜನರು ತಮ್ಮ ಹಕ್ಕುಗಳನ್ನಾಗಿ ಒತ್ತಾಯಿಸುವಂತಿರಬೇಕು. ಅಧನ್ನು ಬಿಟ್ಟು ಸ್ವಂತ ಹಣದಿಂದ ಅವುಗಳನ್ನು ಕೊಡುತ್ತೇವೆಂಬ ಶ್ರೀಮಂತ ಜನಪ್ರತಿನಿಧಿಗಳ ಕ್ರಮವು ಊಳಿಗಮಾನ್ಯ ಸಂಸ್ಕೃತಿಯಾಗುತ್ತದೆ ವಿನಾ ಜನತಾಂತ್ರಿಕ ಸಂಸ್ಕೃತಿಯಾಗುವುದಿಲ್ಲ.

ಜನಸೇವೆಯನ್ನು ನಿಜವಾಗಿ ಮಾಡಬೇಕೆನ್ನುವವರು ಅದಕ್ಕಾಗಿ ಬೇಕಾದರೆ ಸಂಸ್ಥೆಗಳನ್ನು ಸ್ಥಾಪಿಸಲಿ. ನೊಬೆಲ್ ಪ್ರಶಸ್ತಿಯು ಕೂಡ ದತ್ತಿ ನಿಧಿಯಿಂದ ಸ್ಥಾಪನೆಯಾಗಿದೆ. ಆದರೆ ಅದು ಹಂಗಿನ ಸಂಗತಿಯಾಗಿಲ್ಲ. ಅದು ಈಗ ವೈಯುಕ್ತಿಕ ಆಸ್ತಿಯೂ ಆಗಿಲ್ಲ. ಅದನ್ನು ನಿರ್ವಹಿಸಲು ಪ್ರತ್ಯೇಕ ಸ್ಥಾಯಿ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಅದು ಬಿಟ್ಟು ಪಾಳೆಯಗಾರರಂತೆ, ಜಮೀನುದಾರಿ ತುಂಡರಸರಂತೆ ಜನರಿಗೆ ಉಚಿತ ಸಂತರ್ಪಣೆ ನೀಡುವುದು, ಉಚಿತ ವಿವಾಹ ಏರ್ಪಡಿಸುವುದು, ಜಾತ್ರೆ-ಪರಿಶೆಗಳಲ್ಲಿ ಹಣ ಹಂಚುವುದು,ಸೀರೆ-ಕುಪ್ಪಸಗಳನ್ನು ಹಬ್ಬ-ಹರಿ ದಿನಗಳಲ್ಲಿ ವಿತರಿಸುವುದು ಮುಂತಾದವು ಜನ ವಿರೋಧಿ ತಂತ್ರಗಳಾಗುತ್ತವೆ. ಶಾಸಕತ್ವಕ್ಕೆ ಮಾತ್ರ ಜನತಂತ್ರ ಬೇಕು.ಆದರೆ ಜನರು ಮಾತ್ರ ತಮ್ಮ ಮುಂದೆ ಕೈಚಾಚಿ ಬೇಡುತ್ತಿರಬೇಕೆಂದು ಬಯಸುವುದು ಅಮಾನವೀಯ, ಅವೈಚಾರಿಕ ಮತ್ತು ಜನತಂತ್ರ ವಿರೋಧಿ ಕ್ರಮ. ಉಳ್ಳವರು 'ದಾತ'ರಾಗಲು ಬಯಸುವುದು ಸರಿ. ಆದರೆ ಉಳಿದವರನ್ನು 'ದಾಸ'ರನ್ನಾಗಿ ಮಾಡುವ ತಂತ್ರವಿದೆ ಯಲ್ಲಾ, ಅದು ಸಲ್ಲ.

ದಲಿತೀಕರಣದ ಪ್ರಕ್ರಿಯೆ

ಸಾಕ್ಷರತೆ ಮತ್ತು ಪ್ರಾ.ಶಿ. ಕ್ಷೇತ್ರದಲ್ಲಿ ದಲಿತರ ಸಾಧನೆ ರಾಜ್ಯದಲ್ಲಿ ಅಸಾಧಾರಣವಾದುದಾಗಿದೆ. ಅದು ಕೇವಲ ಸದ್ಯ ಪರಿಮಾಣದ್ದಾಗಿರಬಹುದು. ನಮ್ಮ ರಾಜ್ಯದಲ್ಲಿ ಒಟ್ಟು ಜನಸಂಖ್ಯೆಯಲ್ಲಿ ದಲಿತರ (ಪ.ಜಾ+ ಪ.ಪಂ.)ಪ್ರಮಾಣ ಶೇ.೨೩ರಷ್ಟಿದೆ(೧೨೧.೩೮ಲಕ್ಷ-೨೦೦೧). ಆದರೆ ೧ ರಿಂದ ೧೦ನೆಯ ತರಗತಿಗಳಲ್ಲಿನ ದಾಖಲಾತಿಯಲ್ಲಿ ದಲಿತ ಮಕ್ಕಳ ಪ್ರಮಾಣವು ಶೇ.೨೬.೨೯ ರಷ್ಟಿದೆ. ರಾಜ್ಯದಲ್ಲಿ ೨೦೦೫-೦೬ರಲ್ಲಿ ಒಟ್ಟು ಪ್ರಾ.ಶಾ.ಗಳಲ್ಲಿ ಕಲಿಯುತ್ತದ್ದ ಮಕ್ಕಳ ಸಂಖ್ಯೆ ೯೯.೩೫ ಲಕ್ಷ. ಇವರಲ್ಲಿ ದಲಿತ ಮಕ್ಕಳ ಸಂಖ್ಯೆ ೨೬.೧೨ ಲಕ್ಷ. ಇವರಲ್ಲಿ ಹತ್ತನೆಯ ತರಗತಿಯಲ್ಲಿದ್ದ ದಲಿತ ಮಕ್ಕಳ ಸಂಖ್ಯೆ ೧.೩೭ ಲಕ್ಷ. ದಲಿತರು ಒಟ್ಟು ಜನಸಂಖ್ಯೆಯಲ್ಲಿ ಪಡೆದ ಪ್ರಮಾಣಕ್ಕಿಂತ ಶಾಲೆಯಲ್ಲಿನ ದಾಖಲಾತಿಯಲ್ಲಿ ಹೆಚ್ಚು ಪ್ರಾತಿನಿಧ್ಯ ಪಡೆದಿದ್ದರೆ ಅದಕ್ಕೆ ವಯಸ್ಸು ಮೀರಿದ ದಲಿತ ಮಕ್ಕಳು ಆ ತರಗತಿಯಲ್ಲಿರಬಹುದಾದ ಸಂಗತಿಯು ಕಾರಣವಾಗಿರಬಹುದು. ಅಂದರೆ ಪ್ರಾ.ಶಿ.ವು ಕರ್ನಾಟಕದಲ್ಲಿ ದಲಿತೀಕರಣಕ್ಕೆ ಒಳಗಾಗಿರುವುದು ವಾಸ್ತವಿಕ. ಸರ್ಕಾರವು ನೀಡುತ್ತಿರುವ ಅನೇಕ ಬಗೆಯ ಸವಲತ್ತುಗಳೂ ಇದಕ್ಕೆ ಕಾರಣವಾಗಿರಬಹುದು. ದಲಿತರಲ್ಲಿ ಉಂಟಾಗಿರುವ ಜಾಗೃತಿಯೂ ಇಲ್ಲಿ ಕೆಲಸ ಮಾಡಿರಬಹುದು. ಇಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಮತ್ತೊಂದು ಸಂಗತಿಯನ್ನು ಪರಿಗಣಿಸುವ ಅಗತ್ಯವಿದೆ. ಅದೇನೆಂದರೆ, ಪ್ರಾ.ಶಿ.ದಲ್ಲಿನ ೧ ರಿಂದ ೭ ನೆಯ ತರಗತಿವರೆಗಿನ ದಾಖಲಾತಿಯಲ್ಲಿ ದಲಿತರ ಪ್ರಮಾಣ ಶೇ.೨೭.೩೬ ರಷ್ಟಿದ್ದರೆ ೮ ರಿಂದ ೧೦ ನೆಯ ತರಗತಿಯಲ್ಲಿ ಅವರ ಪ್ರಮಾಣ ಕೇವಲ ಶೇ.೨೨.೧೦. ಹತ್ತನೆಯ ತರಗತಿಯಲ್ಲಿನ ಒಟ್ಟು ದಾಖಲಾತಿಯಾದ ಮಕ್ಕಳ ಸಂಖ್ಯೆ ೬.೧೬ ಲಕ್ಷ. ಅವರಲ್ಲಿ ದಲಿತ ಮಕ್ಕಳ ಪ್ರಮಾಣ ಶೇ.೨೨.೦೮. ಅಂದರೆ ಕೆಳ ಹಂತದಲ್ಲಿ ಅವರ ಪ್ರಮಾಣ ಅಧಿಕವಾಗಿದೆ. ಆದರೆ ಅವರು ಉನ್ನತ ಹಂತಗಳಿಗೆ ಸಾಗಿದಂತೆ ಅವರ ಪ್ರಮಾಣವು ಕಡಿಮೆಯಾಗುತ್ತದೆ.ಇದು ಯೋಚಿಸಬೇಕಾದ ಸಂಗತಿಯಾಗಿದೆ. ಇದನ್ನು ದಲಿತೀಕರಣದ ಅವರೋಹಣ ಪ್ರಕ್ರಿಯೆಯೆಂದು ಕರೆಯಬಹುದು.

ಶಾಲೆಗೆ ಮಕ್ಕಳನ್ನು ಕಳುಹಿಸುವುದೆಂದರೆ!

ಮಕ್ಕಳನ್ನು ಶಾಲೆಗೆ ಕಳುಹಿಸುವುದೆಂದರೆ ಕೇವಲ ಅವರನ್ನು ಶಾಲೆಗೆ ಕಳುಹಿಸುವುದು ಮಾತ್ರವಲ್ಲ.ಅದು ಅನೇಕ ಸಂಗತಿಗಳನ್ನು ಒಳಗೊಂಡ ಸಂಕೀರ್ಣ-ಸಂಯುಕ್ತ ಕ್ರಿಯೆಯಾಗಿದೆ. ಪಾಲಕರಿಂದ ಇದು ಸಮಯ,ಸಂಪನ್ಮೂಲ ಮತ್ತು ಸಂಯಮವನ್ನು ನಿರೀಕ್ಷಿಸುತ್ತದೆ. ಬಡಕುಟುಂಬಗಳ ಪಾಲಕರಲ್ಲಿ ಇವು ಮೂರು ಕೊರತೆಯಿಂದಿವೆ.ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ನಾವು ನಡೆಸಿದ ಅಧ್ಯಯನದಿಂದ ತಿಳಿದು ಬಂದಿರುವ ಸಂಗತಿಯೆಂದರೆ ಯಾವ ಪಾಲಕರು ತಮ್ಮ ಮಕ್ಕಳ ಕಲಿಕೆ ಬಗ್ಗೆ ಆಸಕ್ತಿ ವಹಿಸುತ್ತಾರೋ ಮತ್ತು ಶಾಲೆಗೆ ಬಂದು ಮಕ್ಕಳ ಪ್ರಗತಿ ಬಗ್ಗೆ, ಅವರ ಓದು-ಬರಹ ಕುರಿತಂತೆ ಶಿಕ್ಷಕರನ್ನು ವಿಚಾರಿಸುತ್ತಿರುತ್ತಾರೋ ಮನೆಗಳಲ್ಲಿ ಮಕ್ಕಳ ಅಭ್ಯಾಸದ ಬಗ್ಗೆ ಗಮನ ಹರಿಸುತ್ತಿರುತ್ತಾರೊ ಅಂತಹ ಪಾಲಕರ ಮಕ್ಕಳು ಸಾಮಾನ್ಯವಾಗಿ ಶಾಲೆಯನ್ನು ಮಧ್ಯದಲ್ಲಿ ಬಿಡುವುದಿಲ್ಲ.ಆದರೆ ಬದುಕಿನಲ್ಲಿ ಕೂಲಿ ಮಾಡುವುದನ್ನು ಬಿಟ್ಟು ಮತ್ತಾವುದೇ ವಿಕಲ್ಪಗಳೇ ಇಲ್ಲದಿರುವ ಬಡ ಕುಟುಂಬಗಳಲ್ಲಿ ಪಾಲಕರು ಮಕ್ಕಳ ಶಿಕ್ಷಣ,ಅವರ ಓದು, ಬರಹ, ಗಣಿತ, ಇಂಗ್ಲೀಶ್ ಬಗ್ಗೆ ಗಮನಹರಿಸುವುದು ಮತ್ತು ಅವರ ಆರೈಕೆ ಹಾಗೂ ಪೋಷಣೆ ಬಗ್ಗೆ ಸ್ಪಂದಿಸುವುದು ಸಾಧ್ಯವಾಗುವುದಿಲ್ಲ. ಇದಕ್ಕೆ ಪಾಲಕರು ಸಮಯ ನೀಡಬೇಕು,ಸಂಪನ್ಮೂಲ ಮೀಸಲಿಡಬೇಕು ಹಾಗೂ ಅತ್ಯಂತ ತಾಳ್ಮೆಯಿಂದ ನಡೆದುಕೊಳ್ಳಬೇಕು.ಆದರೆ ಬಡ ಕುಟುಂಬಗಳ ಪಾಲಕರಿಂದ ಇದು ಸಾಧ್ಯವಿಲ್ಲ. ಇಂತಹ ಕುಟುಂಬಗಳ ಮಕ್ಕಳಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಡುವ ಪ್ರವೃತ್ತಿ ಅಧಿಕವಾಗಿರುತ್ತದೆ. ಈ ಸಂಗತಿ ಬಗ್ಗೆ ಹಿಂದುಳಿದ ಪ್ರದೇಶಗಳ ಜನಪ್ರತಿನಿಧಿಗಳು ಯೋಚಿಸಬೇಕು.

ಕಾಮಗಾರಿಗಳೇ ಅಭಿವೃದ್ಧಿಯಲ್ಲ. ಜನರಿಗೆ ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಲು 'ಅವ ಕಾಶ'ಗಳನ್ನು ಒಂದು ಕಡೆ ವಿಸ್ತೃತಗೊಳಿಸುತ್ತಿರಬೇಕು. ಮತ್ತೊಂದು ಕಡೆ ವಿಸ್ತೃತಗೊಂಡ ಅವಕಾಶಗಳನ್ನು 'ಧಾರಣೆ' ಮಾಡಿಕೊಳ್ಳಲು ಅಗತ್ಯವಾದ ಸಾಮರ್ಥ್ಯ ಮತ್ತು ಸ್ವಾತಂತ್ರ್ಯವನ್ನು ಬಡ ಕುಟುಂಬಗಳ ಪಾಲಕರಿಗೆ ಒದಗಿಸುತ್ತಿರಬೇಕು. ಇವೆರಡೂ ಏಕಕಾಲದಲ್ಲಿ ನಡೆಯಬೇಕು. ಇದನ್ನೇ ಅಮರ್ತ್ಯಸೇನ್ ಅಭಿವೃದ್ಧಿಯೆಂದು ಕರೆದಿದ್ದಾನೆ. ರಾಜ್ಯದ ಹಿಂದುಳಿದ ಏಳು ಜಿಲ್ಲೆಗಳಲ್ಲಿರುವ ಮುಖ್ಯ ಸಮಸ್ಯೆಯೆಂದರೆ ಜನರ 'ಧಾರಣಾ /ಸಾಮರ್ಥ್ಯ'ದ ಕೊರತೆಯಾಗಿದೆ. ಇದನ್ನು ಸರಿಪಡಿಸುವುದರ ಬಗ್ಗೆ ಪರಿಹಾರ ಕ್ರಮಗಳನ್ನು ಕಂಡು ಹಿಡಿಯಬೇಕಾಗಿದೆ. ಹಣ,ರಸ್ತೆ ನಿರ್ಮಾಣ, ಕಾಂಟ್ರಾಕ್ಟ್‌ಗಿರಿ-ಕಾಮಗಾರಿಗಳನ್ನು ವ್ಯಸನದಂತೆ ಹಚ್ಚಿಕೊಳ್ಳುವುದರಿಂದ ಪ್ರಯೋಜನವಿಲ್ಲ. ಅಭಿವೃದ್ಧಿಯ ಸಾಧನಗಳ ಬಗ್ಗೆ ಗಮನ ಕೇಂದ್ರೀಕರಿಸುವುದರಿಂದ ಹಿಂದುಳಿದ ಪ್ರದೇಶಗಳ ಜನರ ಬದುಕು ಹಸನಾಗುವುದಿಲ್ಲ.ಅಭಿವೃದ್ಧಿಯ 'ಸಾಧ್ಯ'ತೆ ಬಗ್ಗೆ ಹೆಚ್ಚು ಗಮನ ನೀಡುವ ಅಗತ್ಯವಿದೆ.

[illegible] ಪ್ರಯೋಜನವಾಗಬೇಕು. ಆದರೆ ನಮ್ಮ ಜನಪ್ರತಿನಿಧಿಗಳಿಗೆ ಹಾಗೂ ಶಿಕ್ಷಣ ಪ್ರಾಥಮಿಕವಾಗಿಲ್ಲವಾಗಿದೆ. [illegible] ಚುನಾವಣೆಗಳಲ್ಲಿ ಅವರು ಕೊಡುಗೆಗಳ ಬಗ್ಗೆ ಮಾತನಾಡುತ್ತಾರೆ. ಶಾಲೆಯ ಸುತ್ತ ಗೋಡೆ ನಿರ್ಮಾಣದ ಬಗ್ಗೆ ಕಾಳಜಿ ವಹಿಸುತ್ತಾರೆ. ಕಾಂಟ್ರಾಕ್ಟ್ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಾರೆ. ಆದರೆ ಶಾಲೆಯಲ್ಲಿ ಹತ್ತನೆಯ ತರಗತಿಯ ಫಲಿತಾಂಶವನ್ನು ಹೇಗೆ ಉತ್ತಮ ಪಡಿಸಬೇಕು ಎಂಬುದರ ಬಗ್ಗೆ, ಮಧ್ಯದಲ್ಲಿ ಮಕ್ಕಳು ಶಾಲೆಯನ್ನು ಬಿಡುವ ಪ್ರವೃತ್ತಿಯನ್ನು ತಡೆಯುವುದರ ಬಗ್ಗೆ, ವಲಸೆ ಹೋಗುವ ಕುಟುಂಬಗಳಿಗೆ ಅವರವರ ಊರುಗಳಲ್ಲೇ ಉದ್ಯೋಗ ನೀಡಿ ವಲಸೆಯನ್ನು ತಪ್ಪಿಸುವುದರ ಬಗ್ಗೆ,ಹೆಣ್ಣು ಮಕ್ಕಳ ವಿವಾಹ ೧೮ ವರ್ಷಗಳ ನಂತರವೆ ನಡೆಯುವಂತೆ ಮಾಡುವುದರ ಬಗ್ಗೆ ಕಾಳಜಿ ವಹಿಸುವುದಿಲ್ಲ.ಈ ಕ್ರಮಗಳನ್ನು ಕೈಗೊಳ್ಳಲು ಹೆಚ್ಚಿನ ಅನುದಾನ ಬೇಕಾಗಿಲ್ಲ. ಈ ದಿಶೆಯಲ್ಲಿ ಜನರನ್ನು ಒಳಗೊಳ್ಳುವ ಅಭಿವೃದ್ಧಿ ಪ್ರಣಾಳಿಕೆ ಕುರಿತಂತೆ ಜನಪ್ರತಿ ನಿಧಿಗಳು ಚಿಂತಿಸಬೇಕು. ಬಡವರನ್ನು,ಬಡತನವನ್ನು ಹೀಗಳೆಯುವುದು ಸುಲಭ. ಆದರೆ ಬಡವರು ಅನುಭವಿಸುತ್ತಿರುವ ಮಾನಸಿಕ ಸ್ಥಿತಿ, ಮನುಷ್ಯ ಸಂಬಂಧಗಳು, ಮನೆಯಲ್ಲಿನ ಪರಿಸ್ಥಿತಿ,ಸಾಮಾಜಿಕ ಸ್ಥಾನಮಾನ,ಸಂಪನ್ಮೂಲಗಳ ಲಭ್ಯತೆ, ಅವಕಾಶಗಳ ಸ್ವರೂಪ, ಸಂಬಂಧಗಳ ಜಾಲ ಮುಂತಾದವುಗಳನ್ನು ಪರಿಗಣಿಸಬೇಕಾಗುತ್ತದೆ.

ನಮ್ಮ ಜನತಂತ್ರವು ಗಟ್ಟಿಯಾಗಿ ಮತ್ತು ಭದ್ರವಾಗಿ ನೆಲೆಯೂರಬೇಕಾದರೆ, ಅದರ ವ್ಯಾಪ್ತಿಯು ವಿಸ್ತೃತವಾಗಬೇಕಾದರೆ, ಅದು ಜನರನ್ನು,ಅಂದರೆ, ಪರಿಶಿಷ್ಟರನ್ನು, ಮಹಿಳೆಯರನ್ನು, ಹಿಂದುಳಿದವರನ್ನು, ವಂಚಿತರನ್ನು ಒಳಗೊಳ್ಳುವಂತಾಗಬೇಕಾದರೆ; ಅದು ಅವರ ಬದುಕಿಗೆ ಅರ್ಥಪೂರ್ಣವಾಗಬೇಕಾದರೆ ಶಿಕ್ಷಣವನ್ನು ಬಲಪಡಿಸಬೇಕು. ಜನತಂತ್ರದ ಜೀವನಾಡಿಯೆಂದರೆ ಅಕ್ಷರ ಮತ್ತು ಶಿಕ್ಷಣ. ಅಕ್ಷರ ಸಂಸ್ಕೃತಿಯೆಂಬುದು ಕೇವಲ ಅಭಿವೃದ್ಧಿಯ 'ಸಾಧನ' ಮಾತ್ರವಲ್ಲ. ಅದು ನಿಜವಾದ ಅರ್ಥದಲ್ಲಿ ಅಭಿವೃದ್ಧಿಯ 'ಸಾಧ್ಯ'ವಾಗಿದೆ. ಅದೇ ಅಭಿವೃದ್ಧಿಯ ಅಂತಿಮ ಗಂತವ್ಯವಾಗಿದೆ. ಅಕ್ಷರವೇ ಅಭಿವೃದ್ಧಿ, ರಸ್ತೆಗಳು, ಕಾಮಗಾರಿಗಳು, ಕಾಂಟ್ರಾಕ್ಟಗಿರಿಗಳೇ ಅಭಿವೃದ್ಧಿಯಲ್ಲ. ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ಕಳೆದ ೧೫ ವರ್ಷಗಳ ಅವಧಿಯಲ್ಲಿ ಮಾಡಿದ್ದು 'ಕಾಮಗಾರಿ-ಕಾಂಟ್ರಾಕ್ಟ್‌ಗಿರಿ'ಗಳಿಂದ ಕೂಡಿದ ಅಭಿವೃದ್ಧಿಯಾಗಿದೆ.ಅದರಿಂದ ಜನರ ಬದುಕು ಸಮೃದ್ಧವಾಗಲಿಲ್ಲ. ಈಗ ಡಾ.ಡಿ.ಎಮ್.ನಂಜುಂಡಪ್ಪ ವರದಿಯ ಅನುಷ್ಠಾನ ನಿರ್ವಹಣೆಗಾಗಿ ಸರ್ಕಾರವು ನೇಮಿಸಿರುವ ಸಮಿತಿಯ ಕಾರ್ಯಕ್ಷಮತೆಯು ಹಿಂದಿನ ಮಂಡಳಿಗಿಂತ ಭಿನ್ನವಾಗಿರುತ್ತದೆಯೆಂಬುದಕ್ಕೆ ಯಾವ ಆಧಾರಗಳೂ ಇಲ್ಲ. ಅದು ಅರ್ಥಪೂರ್ಣವಾಗಿ ಹಿಂದುಳಿದ ತಾಲ್ಲೂಕುಗಳ ಮತ್ತು ಜಿಲ್ಲೆಗಳ ಜನರ ಅಭಿವೃದ್ಧಿಯ ಬಗ್ಗೆ ಕಾಳಜಿಹೊಂದಿದ್ದರೆ ಅದು 'ಕಾಮಗಾರಿ-ಕಾಂಟ್ರಾಕ್ಟ್‌ಗಿರಿ'ಗಳಿಂದ ಕೂಡಿದ ಅಭಿವೃದ್ಧಿಯನ್ನು ಪ್ರಜ್ಞಾಪೂರ್ವಕವಾಗಿ ಕೈಬಿಟ್ಟು ಜನರನ್ನು ಒಳಗೊಳ್ಳುವಂತಹ ಅಭಿವೃದ್ಧಿ ಬಗ್ಗೆ ಚಿಂತಿಸಬೇಕು. ಹಿಂದುಳಿದ ತಾಲ್ಲೂಕುಗಳಲ್ಲಿನ ಶಿಕ್ಷಣಕ್ಕೆ, ಅದರಲ್ಲೂ ಪ್ರಾಥಮಿಕ ಶಿಕ್ಷಣಕ್ಕೆ ಹೇಗೆ ಕಾಯಕಲ್ಪ ಮಾಡಬೇಕು ಎಂಬುದರ ಬಗ್ಗೆ ಯೋಚಿಸಬೇಕು ಮತ್ತು ಯೋಜನೆ ರೂಪಿಸಬೇಕು.(ಲೇಖಕರನ್ನು trckuh@yahoo.com ನಲ್ಲಿ ಸಂಪರ್ಕಿಸಬಹುದು) □



ಸೃಜನಾತ್ಮಕ ಹಾಗೂ ವೈಚಾರಿಕ ಸಾಹಿತ್ಯ ಕೃತಿಗಳನ್ನು ವಿಮರ್ಶೆಗಾಗಿ

ಸಂವಾದ

ಆಹ್ವಾನಿಸುತ್ತದೆ.

ಪ್ರಕಾಶಕರು / ಲೇಖಕರು ಪ್ರಕಟಿತ ಕೃತಿಯ ೨ ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಲಾಗಿದೆ.

ವಿಳಾಸ:
ಸಂಪಾದಕರು 'ಸಂವಾದ' ಮಾಸಪತ್ರಿಕೆ,
ಸ್ಫೂರ್ತಿಧಾಮ, ಅಂಜನಾಗರ,
ವಿಶ್ವನೀಡಂ ಅಂಚೆ, ಬೆಂಗಳೂರು-೫೬೦ ೦೯೧
ದೂರವಾಣಿ : ೭೨೮ ೭೯೪೭/೯೪೪೮೦೯೪೮೬೧

ಪದವನರ್ಪಿಸಬಹುದಲ್ಲದೆ ಪದಾರ್ಥವನರ್ಪಿಸಲಾಗದು

(೩೯ನೇ ಪುಟದಿಂದ)

ದೇಶಕ್ಕೆ ಹೊಸ ವ್ಯಾಖ್ಯಾನಗಳನ್ನು ನೀಡಿತು. ಮನಸ್ಸಿನಾಚೆಯ ವಸ್ತು ಮತ್ತು ಮನಸ್ಸಿನಲ್ಲಿ ಮೂಡುವ ಪರಿಕಲ್ಪನೆ ಪೂರ್ಣ ಭಿನ್ನವೆಂದು ಭಾವಿಸಿದರೂ ಅತಾರ್ಕಿಕವಾಗುತ್ತದೆ. ಒಂದೇ ಎಂದು ಭಾವಿಸಿದರೂ ಅತಾರ್ಕಿಕವಾಗುತ್ತದೆ. ಮನುಷ್ಯರು ಹಸಿರೆಂದು ಭಾವಿಸುವ ಮರವು ಬೇರೆ ಬೇರೆ ಪ್ರಾಣಿಗಳಿಗೆ ಬೇರೆ ಬೇರೆ ಬಣ್ಣಗಳಲ್ಲಿ ಕಾಣುತ್ತದೆ. ಇವೆಲ್ಲವುಗಳ ಹೊರತಾಗಿ ಮರಕ್ಕೆ ತನ್ನದೆ ಆದ ಬಣ್ಣದ ಅಸ್ತಿತ್ವವನ್ನು ಹಠ ಹಿಡಿದು ಆರೋಪಿಸುವ ಅಗತ್ಯ ಇದೆಯೆ? ಮತ್ತೆ ಶಾಶ್ವತವೊಂದನ್ನು ಹುಡುಕಲು ಹೊರಟಂತಾಗುವುದಿಲ್ಲವೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ವ್ಯಕ್ತಿನಿಷ್ಠ-ವಸ್ತುನಿಷ್ಠ, ತಾನು-ಇದಿರು, ಅಂತರಂಗ-ಬಹಿರಂಗ ಈ ಸಾಪೇಕ್ಷ ಪರಿಕಲ್ಪನೆಗಳನ್ನು ಸರಿಯಾಗಿ ವ್ಯಾಖ್ಯಾನಿಸಿಕೊಳ್ಳಬೇಕಾದ ಅಗತ್ಯವಿದೆ. ಹೀಗೆ ಉತ್ತರ ಹುಡುಕ ಹೊರಟ ಮಹಾಯಾನದಲ್ಲಿ ಮೊದಲಿಗೆ ವಿಜ್ಞಾನವಾದಿಗಳು ಕಾಣುತ್ತಾರೆ. ಈ ಬೌದ್ಧ ಪಂಥವನ್ನು ಯೋಗಾಚಾರ, ಚಿತ್ತಮಾತ್ರ ಸತ್ಯ ಎಂಬ ಹೆಸರುಗಳಿಂದಲೂ ಗುರುತಿಸುತ್ತಾರೆ. ಯಾವ ಚಿತ್ತದ ಮೂಲಕ ಜಗತ್ತಿನ ಎಲ್ಲ ಪದಾರ್ಥಗಳೂ ಗೋಚರವಾಗುತ್ತವೋ ಮತ್ತು ಯಾವುದರ ಜ್ಞಾನದ ಆಧಾರದ ಮೇಲೆ ನಾವು ಬಾಹ್ಯಾರ್ಥವನ್ನು ಅಸತ್ಯವೆಂದು ಭಾವಿಸುತ್ತೇವೆಯೋ ಆ ಚಿತ್ತ ಮಾತ್ರ ಸತ್ಯವೆಂಬುದು ಇವರ ನಿಲುವು. ಇದಲ್ಲದೆ ಮಹಾಯಾನಿಗಳ ಪ್ರಕಾರ ವಸ್ತುಗಳು ಪ್ರತಿಕ್ಷಣವೂ ಪರಿವರ್ತನ ಗೊಳ್ಳುತ್ತವೆ. ನೋಡುತ್ತಿರುವ ವ್ಯಕ್ತಿಯೂ ಸದಾ ಬದಲಾಗುತ್ತಲೇ ಇರುತ್ತಾನೆ ಎದುರಿಗಿರುವ ವಸ್ತುವೂ ಸದಾ ಬದಲಾಗುತ್ತಲೇ ಇರುವುದರಿಂದ ಈ ಎರಡೂ ಸಂಗಮಿಸುವ ಬಿಂದುವೊಂದು ಸಾಧ್ಯವೇ ಇಲ್ಲ. ಜ್ಞಾನ ಮತ್ತು ಜ್ಞೇಯ ವಸ್ತುಗಳು ಏಕಕಾಲಿಕವಾಗಲಾರವು. ಕಾರ್ಯಕಾರಣಗಳೆರಡೂ ಒಂದೇ ವೇಳೆಯಲ್ಲಿ ಸ್ಥಿರವಾಗಿರಲಾರವು. ಆದ್ದರಿಂದ ಇವುಗಳಲ್ಲಿ ಯಾವುದಾದರೂ ಒಂದನ್ನು ಸಾರ್ವಕಾಲಿಕವೆಂದು ಒಪ್ಪಬೇಕು. ಚಿತ್ತಮಾತ್ರ ಸತ್ಯ .ಎಲ್ಲ ಬಾಹ್ಯ ಪದಾರ್ಥಗಳು ಅಸತ್ಯವೆಂದು ಭಾವಿಸಿದರೆ ಈ ತೊಡಕೆಲ್ಲ ದೂರವಾಗುತ್ತದೆ - ಇದು ಯೋಗಾಚಾರ ಪಂಥದ ನಿಲುವು. ಆದರೆ ಈ ನಿಲುವು ಗಂಭೀರವಾದ ಆಕ್ಷೇಪಗಳನ್ನು ಎದುರಿಸ ಬೇಕಾಯಿತು.

ವ್ಯಕ್ತಿನಿಷ್ಠವಾಗಿ ನಮ್ಮೊಳಗೆ ಮೂಡುವ ಪರಿಕಲ್ಪನೆಗಳು, ಭಾವನೆಗಳು ಮತ್ತು ಇಚ್ಛೆಗಳಿಗೆ ಬಾಹ್ಯಾರ್ಥಗಳು ಕಾರಣಗಳಾದರೂ ಚಿತ್ತದಲ್ಲಿ ಉಂಟಾದುವುಗಳೆಲ್ಲ ಸ್ವಸಂವೇದನೆಯಿಂದ ಉಂಟಾದುವುಗಳು. ಹಾಗೆಯೇ ಬಾಹ್ಯ ಸಂಗತಿಗಳಿಗೆ ಕಾರ್ಯಸಾಮರ್ಥ್ಯವಿದೆ; ಆಂತರಿಕ ಪರಿಕಲ್ಪನೆಗಳು ಕೇವಲ ಕಲ್ಪಿತಗಳು. ಹೊರಗಿನ ಬೆಂಕಿ ಸುಡಬಲ್ಲದು; ಬೇಯಿಸಬಲ್ಲದು. ಆದರ ಮನೋಕಲ್ಪಿತಕ್ಕೆ ಆ ಗುಣವಿಲ್ಲ. ಮೇಲಾಗಿ ಚಿತ್ತವೇ ಸರ್ವವೂ ಆಗುವುದಾದರೆ, ಅದು ಸ್ವತಂತ್ರವಾಗಿ ವಸ್ತುಜ್ಞಾನವನ್ನು ಸೃಜಿಸಬಲ್ಲುದಾದರೆ ಅದು ತನ್ನ ಇಚ್ಛಾನುಸಾರ ಯಾವಾಗ ಬೇಕಾದರೆ ಯಾವ ಪದಾರ್ಥವನ್ನಾದರೂ ಏಕೆ ಉಂಟುಮಾಡುವುದಿಲ್ಲ? ಈ ಎಲ್ಲ ತೊಡಕುಗಳನ್ನು ನಿವಾರಿಸಿ ವಸ್ತು ಪ್ರಪಂಚವನ್ನು ಬುದ್ಧನ ವಿವರಣೆಗೆ ಅನುಸಾರ ಸರಿಯಾಗಿ ವಿವರಿಸಿಕೊಟ್ಟವರು ಮಾಧ್ಯಮಿಕರು. □

ಕರಗುತ್ತಿರುವ ನಾಗಬನಗಳು ಮತ್ತು ಚಿಗುರುತ್ತಿರುವ ವೈದಿಕ ಉದ್ಯಮ

(೩೫ನೇ ಪುಟದಿಂದ)

ಕ್ರಮಬದ್ಧ ಯೋಜನೆಗಳು ಶತಮಾನಗಳ ಕಾಲದವರೆಗೆ ಧಾರ್ಮಿಕ ಉದ್ದೇಶಕ್ಕಾಗಿ ಸಾವಿರಾರು ಕೋಟಿ ರೂಪಾಯಿ ಬಂಡವಾಳದ ಒಳಹರಿವನ್ನು ಕಾರ್ಯರೂಪಕ್ಕೆ ಇಳಿಸುವಂತೆ ಕಾಣುತ್ತವೆ.

ಇದರ ಅರಿವಿರದೆ ಪುನರುತ್ಥಾನದ ಹುಚ್ಚು ಹಿಡಿಸಿಕೊಂಡಿರುವ ಆರಾಧಕವರ್ಗ ಇದರ ಈಡೇರಿಕೆಗಾಗಿ ಸಾಲದಿಂದ ಹಿಡಿದು ಏನೆಲ್ಲಾ ದಾರಿಗಳಿವೆಯೋ ಅದೆಲ್ಲಕ್ಕೂ ಮೊರೆ ಹೋಗುತ್ತಿದೆ. ಅತೀ ಹೆಚ್ಚು ಖರ್ಚು ಮಾಡುವ, ಅತೀ ಆಡಂಬರದ ಮೆರವಣಿಗೆ ಮಾಡುವ ಡಾಂಭಿಕರಿಗೆ ನೀಡಲಾಗುತ್ತಿರುವ ಧಾರ್ಮಿಕ ಸ್ವರೂಪದ ಸಾಂಸ್ಥಿಕ ಮಾನ್ಯತೆಯಿಂದಾಗಿ ಕಳ್ಳ ಹಣ ಹಾಗೂ ವಾಮ ಮಾರ್ಗಗಳಿಗೆ ಧರ್ಮರಕ್ಷಣೆಯ ಪಟ್ಟ ಧಕ್ಕುತ್ತಿದೆ. ಈ ಪಟ್ಟವನ್ನು ಧಕ್ಕಿಸಿಕೊಂಡವರು ಆಚರಣೆಗಳ ವಕಾಲತ್ತು ವಹಿಸಿ, ಕಾವಲು ಕಾದು ಪ್ರಚಾರವನ್ನೂ ಕೊಡುತ್ತಿದ್ದಾರೆ. ಇವರ ಧ್ವನಿಗಳಿಗೆ ಮಾಧ್ಯಮಗಳೂ ಜೊತೆಗೂಡಿ, ಮಠಮಾನ್ಯಗಳ ಪಟ್ಟಾಭಿಷಿಕ್ತರೂ ಸೇರಿ ಬಾಹ್ಯಾಡಂಬರದ ಬೊಬ್ಬೆಯಲ್ಲಿ ಆಚರಣೆಯ ಹಿಂದಿನ ಪುರಾತನ ಕಾಳಜಿಗಳು, ಸಂಸ್ಕೃತಿಯ ನೆನಪುಗಳು ನಾಶವಾಗುತ್ತಿದೆ. ಆತ ನೆಲದ ಜೊತೆಗಿನ ಗಾಢವಾದ ಸಂಬಂಧವೇ ಆಗಿರುವ ಸಂಸ್ಕೃತಿ ಈ ನಮೂನೆಯ ಆಕ್ರಮಣಗಳಿಂದ ಅನಾಥವಾಗುತ್ತಿರುವ ಹೊತ್ತಿನಲ್ಲಿಯೇ ಸಾರ್ವತ್ರಿಕವೆಂದು ಸಾರಲಾಗುವ ಬಹುತ್ವ ನಾಶಕ ಏಕಸಂಸ್ಕೃತಿಯ ಕುರುಹುಗಳು ಒಂದೊಂದಾಗಿ ಸೇರುತ್ತಾ ಮೂಲನಿವಾಸಿಗಳ ಬಹುಸಂಸ್ಕೃತಿಯ ಕುರುಹುಗಳನ್ನು ಒಕ್ಕಲೆಬ್ಬಿಸುತ್ತಿವೆ. ಹಾಗಾಗೀ ಶುದ್ಧಾಂಗ ಪ್ರಕೃತಿಯ ಅನನ್ಯ ಆರಾಧನಾ ಸಂಕೇತವೊಂದು ತನ್ನನ್ನು ಕಲ್ಪಿಸಿ ಬೆಳೆಸಿದ ತಳಸಮುದಾಯದ ದುಡಿಮೆಯ ಬಹುಭಾಗವನ್ನು ಹರಕೆಯ ಹೆಸರಿನಲ್ಲಿ ಕಸಿಯುವ ಮತ್ತು ಅವರ ಮೇಲೆ ಹಿಡಿತ ಸಾಧಿಸುವ ಸಾಧನವಾಗುತ್ತಿದೆ. ಹಾಗೆಯೇ ಕಲಿಕೆಯಲ್ಲಿ ಶ್ರಮಪಡದ, ದುಡಿಮೆಯ ಪರ್ಯಾಯ ದಾರಿಗಳಿಗೆ ಯೋಗ್ಯರಲ್ಲದ, ಪುರೋಹಿತವರ್ಗದ, ಸಾಮಾನ್ಯ ವರ್ಗಕ್ಕೆ ದೀರ್ಘಕಾಲದವರೆಗಿನ ಬಂಡವಾಳರಹಿತ ಜೀವನಭದ್ರತೆಯನ್ನು ಒದಗಿಸುವ ಸಾಧನವೂ ಆಗುತ್ತಿದೆ.

ಪ್ರಕೃತಿಯ ದೃಷ್ಟಿಯಿಂದ ಅವಲೋಕಿಸಿದರೆ ಸೂಕ್ಷ್ಮದೇಹಿಯದ ನಾಗನಿಗೆ ಸಹಜವಾಗಿ ಬೇಕಾಗುವ ತಂಪನ್ನು ನಾಶಮಾಡಿ ಕಟ್ಟಲಾಗುತ್ತಿರುವ ನಾಗಗೋಪುರಗಳಿಗೆ ದಿಟದ ನಾಗ ಖಂಡಿತಾ ಬರಲಾರದು. ಅಲ್ಲಿರುವ ಔಷಧೀಯ ಸಸ್ಯಗಳ ನಾಶದಿಂದ ಸಹಜ ಸಸ್ಯಾವರಣವೂ, ಜನಪದರ ಮೂಲಿಕಾಜ್ಞಾನವೂ ನಾಶಗೊಳ್ಳುತ್ತಾ ಸಾಗುತ್ತದೆ. "ಪರಾಗಸ್ಪರ್ಶ ಕ್ರಿಯೆಗೆ ನೆರವಾಗುವ ಅಸಂಖ್ಯಾತ ಕೀಟಗಳು, ಜೇನುನೊಣಗಳು, ಕಣಜದ ಹುಳುಗಳು, ಕಪ್ಪೆ, ಉಡ, ಆಮೆ, ಓತಿಕ್ಯಾತ, ಹಾವು ಮುಂತಾದ ಉರಗಗಳು, ಅಳಿಲು, ಕೆಂಜಳಿಲು, ಬಾವಲಿ ಮುಂತಾದ ಸಸ್ತನಿಗಳು ಅನಾಥವಾಗುತ್ತಿವೆ. ಹಾಗೆಯೇ ನಾವು ಆರಾಧನೆಯಲ್ಲಿ ಬಳಸುವ, ಔಷಧಿಯಲ್ಲಿ ಬಳಸುವ ನೂರಾರು ಸಸ್ಯಗಳು ಇಲ್ಲವಾಗುತ್ತಿವೆ". (ನರೇಂದ್ರ ರೈ ದೇರ್ಲ ; ೨೦೦೮) ಮಣ್ಣನ್ನೆ ಪ್ರಸಾದವಾಗಿ ನೀಡುತ್ತಿದ್ದ ನಾಗಾರಾಧನೆ ಆ ನೆಲದ ಸಂಸ್ಕೃತಿಗೆ ಎಳ್ಳು-ನೀರು ಬಿಡುವ ದಾರಿಯಲ್ಲಿ ಸಾಗುತ್ತಿದೆ. ದೊಡ್ಡ ಆರಾಧನಾ ಕ್ರಾರ್ಯಕ್ರಮದಲ್ಲಿ ಹಾಕುವ ಬ್ಯಾನರ್‌ಗಳು, ಓಂಕಾರ ಸಹಿತದ ಕೇಸರಿ ಪಾಲಿಥೀನ್ ತೋರಣಗಳು, ಫ್ಲೆಕ್ಸ್‌ಗಳು, ಸುಡುಮದ್ದುಗಳು, ಊಟದ ವೇಳೆ ಬಳಕೆಯಾಗುವ ಪ್ಲಾಸ್ಟಿಕ್ ಹಾಸು ಮತ್ತು ಲೋಟಗಳು ಧಾರಳಾವಾಗಿ ಮಣ್ಣಿಗೆ ಸೇರುತ್ತಿವೆ ಮತ್ತು ಅಲ್ಲಿನ ಸಾವಯವ ಚಟುವಟಿಕೆಯನ್ನು ಸಂಪೂರ್ಣವಾಗಿ ನಾಶಮಾಡುತ್ತಿವೆ.ಪ್ರಸಾದದ ಪ್ಲಾಸ್ಟಿಕ್ ಚೀಲಗಳೂ ಸೇರಿ ಭಕ್ತಿಯ ಹೆಸರಿನಲ್ಲಿ ನೆಲ ಮತ್ತು ಹಸಿರಿಗೆ ವಿರುದ್ಧವಾದುದನ್ನು ಮಾಡುತ್ತಿದ್ದೇವೆ.

> **ಸಮಸ್ಯೆಯನ್ನು ಕೇವಲ ದೇವರಕಾಡಿನ ರಕ್ಷಣೆ ಎಂಬ ಸರಕಾರೇತರ ಸಂಘಟನೆಗಳ ಅಲಂಕಾರಿಕ ಪದಗುಚ್ಛದಲ್ಲಿ ಇಡದೇ, ಸಾಮಾನ್ಯರ ಬದುಕು, ದುಡಿಮೆ ಹಾಗೂ ಫಲದ ಮೇಲೆ ನಿರಂತರವಾಗಿ ನಡೆಸಲು ಉದ್ದೇಶಿಸಿರುವ ಸಂಚೆಂದೇ ಅರ್ಥೈಸಿಕೊಳ್ಳಬೇಕು.**

ಆದರೆ ಇದು ಪ್ರಕೃತಿಯ ಮೇಲಿನ ದಾಳಿಯೆನ್ನುವ ಅರ್ಥದಲ್ಲಿ ಕೇವಲ ಪರಿಸರದ ಸಮಸ್ಯೆಯಲ್ಲ.ಪರಿಸರದ ಹುಯ್ಯಲೆಬ್ಬಿಸುವುದಾದರೆ ಪುರೋಹಿತಶಾಹಿ ಅದನ್ನು ಪ್ರತಿರೋಧಿಸದೆ ರಂಗೋಲಿಯ ಕೆಳಗಡೆ ತೂರುವಂತೆ ಮರದ ಬುಡದಲ್ಲಿ ಗೋಪುರ ಕಟ್ಟಿಸದೆಯೇ, ಉಳಿದಂತೆ ಮಾಡಬಹುದಾದ ಎಲ್ಲಾ ನಿಸರ್ಗಾತಿಕ್ರಮಣ ಮತ್ತು ಆರ್ಥಿಕ ಸಂಚುಗಳನ್ನು ಅದು ಕಾರ್ಯರೂಪಕ್ಕೆ ತರುತ್ತದೆ.ಹಾಗಾಗಿ ಈ ಆಚರಣೆಯ ಮೂಲಕ ಕಾಲೂರುತ್ತಿರುವ ಭಗವಾಧ್ವಜಗಳು,ಓಂಕಾರಯುಕ್ತ ಪಾಲಿಥೀನ್ ತೋರಣಗಳು,ವಿರಾಜಮಾನವಾಗುತ್ತಿರುವ ಮಠಾಧೀಶರುಗಳು,ಕೇಸರಿಯ ಹೊಳಪುಗಳು ದಹಿಸುತ್ತಿರುವ ತಳಸಮುದಾಯದ ಜನರ ಸಾಂಸ್ಕೃತಿಕ ಚಿಹ್ನೆ ಹಾಗೂ ಅನ್ಯನತೆಗಳು ಮತ್ತು ಸಾಧಿಸುತ್ತಿರುವ ಆಕ್ರಮಣಕಾರಿ ತಣ್ಣನೆಯ ಹಿಡಿತ ನಮ್ಮನ್ನು ಹೆಚ್ಚು ಚಿಂತೆಗೀಡು ಮಾಡಬೇಕು. ಅಷ್ಟೇ ಮುಖ್ಯವಾಗಿ ಮನುಸ್ಮೃತಿಯ ಮಾತುಗಳನ್ನು ಬಳಕೆ ಮಾಡದೆ, ಕಾರ್ಯತಂತ್ರದಲ್ಲಿ ಅದನ್ನು ಸಾಧಿಸುವ ಮಾರ್ಗವಾಗಿ ಆರಾಧನೆಯ ಮೂಲಕ ಕಾರ್ಯಗತವಾಗಿರುವ ಆರ್ಥಿಕ ಲೂಟಿ ಧಾರ್ಮಿಕ ದಾಸ್ಯಗಳೇ ನಮ್ಮ ಜನರನ್ನು ಹೆಚ್ಚು ಚಿಂತೆಗೀಡು ಮಾಡಬೇಕು.

ಹಸಿದವರಿಗೆ ಅನ್ನ ಹಾಕುವಂತಿರಬೇಕಾದ 'ಅನ್ನಸಂತರ್ಪಣೆ'ಗಳು ಹೊಟ್ಟೆ ತುಂಬಿದವರಿಗೇ ಸೇರುವಂತೆ ಮಾಡುವ ಸಂದರ್ಶನದ 'ನುಡಿ'ಗಳ ಹಿಂದಿನ ತರ್ಕಗಳು ನಮಗೆ ಅರ್ಥವಾಗಬೇಕು. ನಮ್ಮ ಜನ ನಾಗಬನಕ್ಕೆ ಪರ್ಯಾಯವಾಗಿ ಪರಿಸರಾಸಕ್ತಿಯಿಂದ ಬನಗಳಂತಹ ಸಸ್ಯಾವರಣವನ್ನು ಬೆಳೆದಾರು. ಆದರೆ ಧಾರ್ಮಿಕತೆಯ ಹೆಸರಿನಲ್ಲಿ ಇಳಿಯುತ್ತಿರುವ ಆರ್ಥಿಕ ಪ್ರಪಾತದಿಂದ ಅಷ್ಟೊಂದು ಬೇಗ ಮೇಲೆದ್ದು ಬರಲಾಗದು. ಅದು ರೂಪಿಸುತ್ತಿರುವ ಮಾನಸಿಕ ದಾಸ್ಯದಿಂದ ಹೊರಗೆ ಬರುವುದು ಅಷ್ಟು ಸುಲಭವಲ್ಲ.

ಒರಿಸ್ಸಾದ ಮೂಲನಿವಾಸಿಗಳ ಸಮಸ್ಯೆಯನ್ನು ಪರಿಶೀಲಿಸುತ್ತಾ ದಿನೇಶ್ ಅಮೀನ್ ಮಟ್ಟು ಹೇಳುವ, 'ಕಾಡಿನ ಒಡೆಯರಾಗಿದ್ದ ಮೂಲನಿವಾಸಿಗಳಿಂದ ಆ ರಾಜ್ಯದ ಆಳರಸರು ಮತ್ತು ಪುರೋಹಿತ ವರ್ಗ ಬಹುಹಿಂದೆಯೇ ಎಲ್ಲವನ್ನೂ ಕಿತ್ತುಕೊಂಡು ತಮ್ಮ ಸೇವಕರನ್ನಾಗಿ ಮಾಡಿಕೊಂಡಿದೆ. ಕೊನೆಗೆ ಅವರು ನಂಬಿಕೊಂಡ ದೇವರನ್ನೂ ಬಿಡಲಿಲ್ಲ. ಜಗನ್ನಾಥ ಮೂಲತಃ ಆದಿವಾಸಿಗಳ ದೇವತೆ ಆದರೆ ದೀನಬಂಧು ವಾಗಿದ್ದ ಜಗನ್ನಾಥ 'ಬಡಾ ಠಾಕೂರ್' ಆಗಿ ಶೋಷಕರ ಕೈಯಲ್ಲಿನ ಆಯುಧವಾದಾಗ ಬಂಡೆದ್ದ ಆದಿವಾಸಿಗಳು ಪ್ರವೇಶ ನಿಷಿದ್ಧವಾಗಿದ್ದ ಪುರಿದೇವಾಲಯಕ್ಕೆ ನುಗ್ಗಿ ಅಲ್ಲಿನ ಜಗನ್ನಾಥನ ಮೂರ್ತಿಯನ್ನು ಸುಡಲು ಪ್ರಯತ್ನಿಸಿ, ಪ್ರಾಣ ಕಳೆದುಕೊಂಡರು' (ಪ್ರಜಾವಾಣಿ ಸೆ.೦೮-೨೦೦೮) ಎಂಬ ಮಾತುಗಳು ನಮಗೆ ಇಲ್ಲಿ ಮತ್ತೆ ಮತ್ತೆ ನೆನಪಾಗುತ್ತಿ ರಬೇಕು.

ಹಾಗಾಗೀ ಸಮಸ್ಯೆಯನ್ನು ಕೇವಲ ದೇವರಕಾಡಿನ ರಕ್ಷಣೆ ಎಂಬ ಸರಕಾರೇತರ ಸಂಘಟನೆಗಳ ಅಲಂಕಾರಿಕ ಪದಗುಚ್ಛದಲ್ಲಿ ಇಡದೇ, ಸಾಮಾನ್ಯರ ಬದುಕು, ದುಡಿಮೆ ಹಾಗೂ ಫಲದ ಮೇಲೆ ನಿರಂತರವಾಗಿ ನಡೆಸಲು ಉದ್ದೇಶಿಸಿರುವ ಸಂಚೆಂದೇ ಅರ್ಥೈಸಿಕೊಳ್ಳಬೇಕು. ಈ ಪರಿಜ್ಞಾನದಲ್ಲಿ ನಮ್ಮ ಬನಗಳು ಉಳಿಯುತ್ತವೆ ಮಾತ್ರವಲ್ಲ ಬನದ ಹರಕೆಯ ಹೆಸರಿನಲ್ಲಿ ಮಾಡುತ್ತಿರುವ ಸಹಕಾರಿ ಸಂಘಗಳಲ್ಲಿಯ ಸಾಲ ಹಾಗೂ ಸಾರ್ವಜನಿಕ ಜೀವನದಲ್ಲಿಯ ಅನ್ಯಾಯದ ದುಡಿಮೆಯ ದಾರಿಗಳು ಕಡಿಮೆ ಯಾಗುತ್ತದೆ.

ಮತಾಂತರದ ಗುಲ್ಲು ಕರ್ನಾಟಕದ ಕರಾವಳಿಯಲ್ಲಿ ಮಾರ್ದನಿಸಿ ರಾಜ್ಯಾದ್ಯಂತ ಸುದ್ಧಿಮಾಡುತ್ತಿರುವ ಈ ಹೊತ್ತಿನಲ್ಲಿಯೇ ನಾವುಗಳು ಕೇಳಿಕೊಳ್ಳಬೇಕಾದ ಪ್ರಶ್ನೆಯೆಂದರೆ ಮತಾಂತರಗೊಳಿಸಿರುವ ಮಣ್ಣಿನಮಕ್ಕಳ ಸಹಜ ದೇವರುಗಳು ಅವರಿಗೆ ಮರಳಿ ಸಿಗುವುದುಂಟೆ ಎಂಬುದನ್ನು. ನಮ್ಮ ದೇವರುಗಳಿಗೆ ನಾವೇ ಅಪರಿಚಿತರಾಗಿ ಕೊನೆಗೆ ನಮ್ಮ ಹಿರಿಯರು ಕಟ್ಟಿದ ಕೃಷಿ ಬದುಕಿನ ಭಾಗವಾದ ಅಂತರ್‌ಜಲಪೂರಕ ನಾಗಬನಗಳು ಕನಿಷ್ಠ ನಾಪತ್ತೆಯಾಗುವ ಮೊದಲು ಈಗಿರುವ ಮಾದರಿಯಲ್ಲಾದರೂ ಹೊಸತಂತ್ರಗಾರಿಕೆಯ ಪ್ರವೇಶವನ್ನು ತಡೆಯಲೇ ಬೇಕಾಗಿದೆ. ಆಳುವ ವರ್ಗದ ಹಿತಾಸಕ್ತಿಗನುಗುಣವಾಗಿ ರೂಪಿತವಾಗಿರುವ 'ಕಾಮನ್‌ಸೆನ್ಸ್ ಅಥವಾ ಸಾಮುದಾಯಿಕ ಸಾಮಾನ್ಯಪ್ರಜ್ಞೆ'ಯ ಪುನರ್‌ವ್ಯಾಖ್ಯಾನವಾಗಬೇಕು. ಹಾಗೆಯೇ ಸಾಂಸ್ಕೃತಿಕ ಸ್ತರದಲ್ಲಿ ನೆಲೆಗೊಂಡು ತಳಸಮುದಾಯದ ನಾಯಕನಾಗಿ ರೂಪಿತವಾಗಿರುವ ಶಕ್ತಿಯ ದೂರೀಕರಣವಾಗಬೇಕು. ನಾಗನನ್ನು ನಿರಾಕರಿಸದೇ, ನಾಗ ಚಿಹ್ನೆಯನ್ನು ವ್ಯಾವಹಾರಿಕ ಸಂಗತಿಯಾಗಿಸಿರುವ ಸಂಚು ನಮ್ಮ ವಿವೇಚನೆಗೆ ಹೊಳೆಯಬೇಕಾಗಿದೆ. ನಾಗನನ್ನು ನಂಬುತ್ತ ನಾಗನ ಹೆಸರಿನ ಲೂಟಿಕೋರತನವನ್ನು ಒರೆಗೆ ಹಚ್ಚದಿದ್ದಲ್ಲಿ ನಮ್ಮ ಮುಂದಿನ ತಲೆಮಾರು ಬಹಳ ಸಂಕಟಪಡಬೇಕಾದೀತು . □

ಮಾನವನ ಇತಿಹಾಸದುದ್ದಕ್ಕೂ ಭೂಮಾಲೀಕರು ಭೋಗ ಜೀವನ ನಡೆಸುತ್ತಿದ್ದುದು ನಿಜ. ಭೂಮಿಯ ಜೊತೆಗೆ ಜೀತದಾಳುಗಳು ಮತ್ತು ಅವರ ಭೂಮಿಯ ಒಡೆತನವನ್ನು ಕೂಡ ಹೊಂದಿದ್ದರು. ಜಗತ್ತಿನಾದ್ಯಂತ ಭೂಮಾಲೀಕರು ಕೈಗಾರಿಕಾ ಚಟುವಟಿಕೆಗಳಿಗೆ ಭೂಮಿ ಪರಭಾರೆ ಮಾಡುವುದನ್ನು ವಿರೋಧಿಸುತ್ತಾ ಬಂದಿದ್ದಾರೆ. ಭೂಮಿಯನ್ನು ಹೊಂದಿಲ್ಲದ ಸಾವಿರಾರು ಜನರಿಗೆ ಭೂಮಿಯೇ ಎಲ್ಲ ಅನ್ಯಾಯ, ಅಸಮಾನತೆಗಳ ಮೂಲ. ಜಗತ್ತಿನ ಯಾವುದೇ ಭಾಗದಲ್ಲಿ ಭೂಮಿಯ ಒಡೆತನ ಹೊಂದಿಲ್ಲದವರು, ಕೈಗಾರಿಕಾ ಚಟುವಟಿಕೆಗಳಿಗಾಗಿ ಭೂಮಿ ಸ್ವಾಧೀನ ಪಡಿಸಿಕೊಳ್ಳುವುದನ್ನು ವಿರೋಧಿಸುವುದಿಲ್ಲ. ಭಾರತದಲ್ಲೇನಾದರೂ ಭೂಮಿಯ ಮಾಲೀಕತ್ವ ಹೊಂದಿಲ್ಲದವರು ಭೂ-ಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆಯೇ? ಮಮತಾ ಬ್ಯಾನರ್ಜಿ, ಮೇಧಾ ಪಾಟ್ಕರ್‌ರಂತಹವರಿಗೆ ಈ ಪ್ರಶ್ನೆಯನ್ನು ಕೇಳಬೇಕಿದೆ.

ಭೂ-ಸಂಕಷ್ಟಗಳು

ದಲಿತ್ ಡೈರಿ

ಚಂದ್ರಭಾನ್ ಪ್ರಸಾದ್

ಹುಟ್ಟು, ಬೆಳವಣಿಗೆ ಮತ್ತು ಸಾಧನೆಗೆ ಎಲ್ಲ ಜೀವಿಗಳಿಗೂ ಭೂಮಿ ಅವಶ್ಯಕ. ಆದರೆ, ಮನುಷ್ಯ ಮಾತ್ರ ಭೂಮಿಯೊಂದಿಗೆ ಹಸ್ತಕ್ಷೇಪ ನಡೆಸುತ್ತಾನೆ. ನೀರು ಮತ್ತು ಗಾಳಿ ವಾತಾವರಣವನ್ನು ಸ್ವಾಭಾವಿಕವಾಗಿ ಬದಲಾಯಿಸುತ್ತದೆ. ಭೂಕಂಪನಗಳು ಮತ್ತು ಜ್ವಾಲಾಮುಖಿಗಳು ಕೂಡ ಇದೇ ಕೆಲಸವನ್ನು ಮಾಡುತ್ತವೆ. ಭೂಮಿಯ ಮೇಲ್ಪದರ ಕೇವಲ ಅದರ ಮುಖವಿದ್ದಂತೆ, ಅದರ ಲಕ್ಷಣವಲ್ಲ.

ಮನುಷ್ಯ ಭೂಮಿಯ ಮೇಲ್ಪದರದ ಜೊತೆಗೆ ಮೂರು ರೀತಿಯ ಸಂಬಂಧ ಹೊಂದಿದ್ದಾನೆ:

ಭೂಮಿಯ ಜೊತೆಗೆ ಯಾವುದೇ ರೀತಿಯ ಹಸ್ತಕ್ಷೇಪ ನಡೆಸದ ಅಲೆಮಾರಿ ಸಮುದಾಯಗಳು ಹೊಂದಿರುವ ಸಂಬಂಧ, ಭೂಮಿಯ ಮೇಲ್ಪದರವನ್ನು ಬಳಸಿಕೊಳ್ಳುವ ಕೃಷಿ ಸಂಬಂಧ, ಭೂಮಿಯೊಂದಿಗೆ ಅತಿ ಹೆಚ್ಚಿನ ಹಸ್ತಕ್ಷೇಪ ನಡೆಸುವ ಕೈಗಾರಿಕಾ ಚಟುವಟಿಕೆಗಳು ಹೊಂದಿರುವ ಸಂಬಂಧ

ಮನುಷ್ಯ ಈ ಮೇಲೆ ಹೇಳಿದ ಮೊದಲ ಜೀವನ ಶೈಲಿಯಿಂದ ಹೊರಬಂದಿದ್ದಾನೆ. ಜಗತ್ತಿನ ಹಲವು ಭಾಗಗಳಲ್ಲಿ ಕೃಷಿ ಚಟುವಟಿಕೆಗಳನ್ನು ಕೂಡ ಬಿಟ್ಟಿದ್ದಾನೆ. ಆದರೆ ಮೂರನೆಯ ಚಟುವಟಿಕೆಯನ್ನು ಇನ್ನೂ ಬಿಟ್ಟಿಲ್ಲ. ಕೃಷಿ ಕೂಡ ಈಗ ಕೈಗಾರಿಕಾ ಸ್ವರೂಪ ಪಡೆದುಕೊಂಡಿದೆ.

ಕೃಷಿ ಮತ್ತು ಕೈಗಾರಿಕೆ ಈ ಎರಡನ್ನೂ ಒಳಗೊಂಡ ಮತ್ತೊಂದು ಮಾದರಿಯ ಸಾಧ್ಯತೆಯನ್ನು ಇತ್ತೀಚಿನ ದಿನಗಳಲ್ಲಿ ಮೂಂಚೂಣಿಗೆ ತರುವ ಪ್ರಯತ್ನ ಮಾಡಲಾಗುತ್ತಿದೆ. ಈ ಮಾದರಿಯಲ್ಲಿ ಮನುಷ್ಯ ಸ್ವಲ್ಪಮಟ್ಟಿಗೆ ಕೃಷಿಕನೂ ಮತ್ತು ಕೈಗಾರಿಕೋದ್ಯಮಿಯೂ ಆಗಿರುತ್ತಾನೆ. ಕೆಲವರು ಇದನ್ನು ಹೊಸತು ಮತ್ತು ಹಳೆಯದು, ಒಳಿತು ಮತ್ತು ಕೆಡುಕುಗಳ ನಡುವಿನ ಘರ್ಷಣೆಯನ್ನೊಳಗೊಂಡ 'ಪರಿವರ್ತನೆಯ ಪ್ರಕ್ರಿಯೆ' ಎಂದು ಗುರುತಿಸುತ್ತಾರೆ. ಈ ಘರ್ಷಣೆಯಲ್ಲಿ ಅಂತಿಮವಾಗಿ ಒಳಿತಿಗೆ ಜಯ. ಜಡತೆ ಮತ್ತು ಪರಿವರ್ತನೆಯ ನಡುವಿನ ಘರ್ಷಣೆಯಲ್ಲಿ ಪರಿವರ್ತನೆಗೆ ಜಯ.

ಈ ಮೇಲೆ ಹೇಳಿದ ಮೂರು ಜೀವನ ವಿಧಾನಗಳು ಮೂರು ವಿಭಿನ್ನವಾದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ್ದವು- ಇದರಲ್ಲಿ ಅತ್ಯಂತ ಭೀಕರವಾದುದು ಕ್ರಿ. ಶ. ೫ನೇ ಶತಮಾನದಿಂದ ೧೫ನೇ ಶತಮಾನದವರೆಗಿನ ಮಧ್ಯಯುಗ. ಆಧುನಿಕ ಯುಗಕ್ಕೆ ತೀರ ಹತ್ತಿರವಾಗಿರುವುದರಿಂದ ೧೯ನೇ ಶತಮಾನದ ನಂತರ ಮಧ್ಯ ಯುಗವನ್ನು ಕುರಿತು ಐತಿಹಾಸಿಕ ರಚನೆಗಳನ್ನು ನಾವು ಕಾಣಬಹುದು. ಉದಾಹರಣೆಗೆ ಯುರೋಪಿನಲ್ಲಿ ಜಮೀನ್ದಾರರು, ಸಾಮಂತರು ಮತ್ತು ರಾಜರಿಗೆ ನಿಷ್ಠರಾಗಿದ್ದ ಕೃಷಿ ಜೀತದಾಳುಗಳನ್ನು ಹೊಂದಿರುವ ಜೀತಪದ್ಧತಿ ಅಸ್ತಿತ್ವದಲ್ಲಿತ್ತು. ಆಗ ಯುರೋಪ್ ಕೃಷಿಕೇಂದ್ರಿತವಾಗಿತ್ತು. ಈ ವ್ಯವಸ್ಥೆಯಲ್ಲಿ ಕೆಲವರು ಮಾತ್ರ ಸ್ವರ್ಗದಲ್ಲಿದ್ದರೆ, ಭೂಮಿಯ ಒಡೆತನವಿಲ್ಲದ ಬಹುಸಂಖ್ಯಾತರು ನರಕ ಸದೃಶ ಜೀವನ ನಡೆಸುತ್ತಿದ್ದರು. ಆದರೆ ಯುರೋಪ್ ಕೈಗಾರಿಕೀಕರಣಗೊಳ್ಳುತ್ತಾ ಹೋದಂತೆ, ಜಮೀನ್ದಾರರ ಬಿಗಿಹಿಡಿತದಿಂದ ಜೀತದಾಳುಗಳಿಗೆ ಮುಕ್ತಿ ದೊರೆಯಿತು. ಕಾರ್ಖಾನೆಗಳ ಸ್ಥಾಪನೆ, ರೈಲು ವ್ಯವಸ್ಥೆ, ರಸ್ತೆ ನಿರ್ಮಾಣ ಮತ್ತು ನಗರಗಳ ನಿರ್ಮಾಣಕ್ಕೆ ಭೂಮಿ ಬಳಕೆಯಾಗುತ್ತಾ ಬಂತು. ಕೃಷಿ ಕೂಡ ಕೈಗಾರಿಕಾ ಸ್ವರೂಪ ಪಡೆದುಕೊಂಡಿತು.

೧೮ರಿಂದ ೧೯ನೇ ಶತಮಾನದವರೆಗೆ ಯುರೋಪ್ ಎದುರಿಸಿದ ಪರಿಸ್ಥಿತಿಯನ್ನು ಈಗ ಭಾರತ ಎದುರಿಸುತ್ತಿದೆ. ಭಾರತದಾದ್ಯಂತ ಭೂಮಿಯ ಒಡೆತನ ಹೊಂದಿರುವವರು ಒಂದಲ್ಲೊಂದು ಕಾರಣವನ್ನೊಡ್ಡುತ್ತಾ ಜಮೀನುಗಳನ್ನು ಬಿಟ್ಟುಕೊಡಲು ಒಪ್ಪುತ್ತಿಲ್ಲ.

ಮಾನವನ ಇತಿಹಾಸದುದ್ದಕ್ಕೂ ಭೂಮಾಲೀಕತ್ವ ಹೊಂದಿದ್ದವರು ಭೋಗ ಜೀವನ ನಡೆಸುತ್ತಿದ್ದುದು ನಿಜ. ಭೂಮಿಯ ಜೊತೆಗೆ ಜೀತದಾಳುಗಳು ಮತ್ತು ಅವರ ಭೂಮಿಯ ಒಡೆತನವನ್ನು ಕೂಡ ಹೊಂದಿದ್ದರು. ಜಗತ್ತಿನಾದ್ಯಂತ ಭೂಮಾಲೀಕರು ಕೈಗಾರಿಕಾ ಚಟುವಟಿಕೆಗಳಿಗೆ ಭೂಮಿ ಪರಭಾರೆ ಮಾಡುವುದನ್ನು ವಿರೋಧಿಸುತ್ತಾ ಬಂದಿದ್ದಾರೆ. 'ಜೊತೆಗೆ ಉಳ್ಳವರು ಮತ್ತು ಬಡವರ ನಡುವೆ ತಾರತಮ್ಯವನ್ನೊಳಗೊಂಡ ಶ್ರಮ ವಿಭಜನೆಯಿರುವ ಸಾಮಾಜಿಕ ವ್ಯವಸ್ಥೆಯ ಪರವಾಗಿ ವಾದಿಸುತ್ತಾರೆ. ಭೂಮಿಯನ್ನು ಹೊಂದಿಲ್ಲದ ಸಾವಿರಾರು ಜನರಿಗೆ ಭೂಮಿಯೇ ಎಲ್ಲ ಅನ್ಯಾಯ, ಅಸಮಾನತೆಗಳ ಮೂಲ. ಭೂಮಿಯಿಲ್ಲದವರು ಹಸಿವು ಮತ್ತು ಅವಮಾನಗಳನ್ನು ಅನುಭವಿಸುತ್ತಾ ಬಂದಿದ್ದಾರೆ. ಜಗತ್ತಿನ ಯಾವುದೇ ಭಾಗದಲ್ಲಿ ಭೂಮಿಯ ಒಡೆತನ ಹೊಂದಿಲ್ಲದವರು, ಕೈಗಾರಿಕಾ ಚಟುವಟಿಕೆಗಳಿಗಾಗಿ ಭೂಮಿ ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸುವುದಿಲ್ಲ.

ಭಾರತದಲ್ಲೇನಾದರೂ ಭೂಮಿಯ ಮಾಲೀಕತ್ವ ಹೊಂದಿಲ್ಲದವರು ಭೂ-ಸ್ವಾಧೀನಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆಯೇ? ಮಮತಾ ಬ್ಯಾನರ್ಜಿ, ಮೇಧಾ ಪಾಟ್ಕರ್‌ನಂತಹವರಿಗೆ ಈ ಪ್ರಶ್ನೆಯನ್ನು ಕೇಳಬೇಕಿದೆ.

ಇತ್ತೀಚೆಗೆ ತೆಲುಗು ಸಿನಿಮಾ ನಟ ಚಿರಂಜೀವಿ ಪ್ರಜಾರಾಜ್ಯ ಪಕ್ಷವನ್ನು ಆರಂಭಿಸಿರುವುದು ಎಲ್ಲರಿಗೂ ಗೊತ್ತಿದೆ. ಆದರೆ ವಾಸ್ತವವಾಗಿ ಆತ ಆರಂಭಿಸಿರುವುದು, ಭೂಮಾಲೀಕತ್ವ ಹೊಂದಿಲ್ಲದ ಕೃಷಿ ಕಾರ್ಮಿಕರನ್ನು (ಪ್ರಜಾ) ಶೋಷಣೆ ಮಾಡುವ ಜಮೀನ್ದಾರರ 'ರಾಜ ರಾಜ್ಯಂ' ಪಕ್ಷವನ್ನು. ಪಕ್ಷ ಆರಂಭವಾದ ದಿನವೇ ಚಿರಂಜೀವಿ ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್)ಗಳ ವಿರುದ್ಧ ಸಮರ ಸಾರಿದ್ದಾರೆ. ಭಾರತದ ಯಾವುದೇ ಮೂಲೆಯಲ್ಲಿ ವಿಶೇಷ ಆರ್ಥಿಕ ವಲಯಗಳು ಭೂಮಿಯನ್ನೇ ಹೊಂದಿಲ್ಲದವರಿಂದ ಭೂಮಿಯನ್ನು ಕಸಿದುಕೊಳ್ಳುವುದು ಸಾಧ್ಯವಿದೆಯೇ? ಸಿಂಗೂರ್ ಕೂಡ ಇದಕ್ಕೆ ನಿದರ್ಶನವೇ. ನ್ಯಾನೋ ಕಾರಿನ ಯೋಜನೆಗಾಗಿ ಭೂಮಿಯನ್ನು ಹೊಂದಿಲ್ಲದವರು ಯಾರಾದರೂ ಭೂಮಿ ಕಳೆದುಕೊಂಡಿದ್ದಾರೆಯೇ?

ಭೂಮಾಲೀಕತ್ವವನ್ನು ಹೊಂದಿಲ್ಲದ ಎಲ್ಲ ಶೋಷಿತ ಸಮುದಾಯಗಳು, ವಿಶೇಷವಾಗಿ ದಲಿತರು ಇದೇ ಭೂಮಿಯ ಕಾರಣದಿಂದಾಗಿ ಅನ್ಯಾಯ, ಅವಮಾನಗಳನ್ನು ಎದುರಿಸುತ್ತಾ ಬಂದಿದ್ದಾರೆ. ಮುಖ್ಯವಾಗಿ ಕೃಷಿಗೆ ಮಾತ್ರ ಬಳಕೆಯಾಗುವ ಭೂಮಿಯಿರುವ ಪ್ರದೇಶದಲ್ಲಿ ಅದಕ್ಕೆ ಹೊಂದಿಕೊಂಡ ಸಾಮಾಜಿಕ ವ್ಯವಸ್ಥೆ ಅಸ್ತಿತ್ವದಲ್ಲಿರುತ್ತದೆ. ಈ ವ್ಯವಸ್ಥೆಯಲ್ಲಿ ಭೂಮಾಲಿಕತ್ವ ಹೊಂದಿಲ್ಲದ ಪ್ರಜೆಗಳು,

ಅನುವಾದ :
ಸತ್ಯಪ್ರಕಾಶ್ ಎಂ.ಆರ್

ಭೂಮಾಲೀಕ ಅಂದರೆ ರಾಜನ ಅಡಿಯಾಳಾಗಿರುತ್ತಾನೆ.

ಜಮೀನ್ದಾರರ ರಾಜ್ಯಭಾರವನ್ನು ಕೊನೆಗಾಣಿಸಿ ಕೃಷಿ ಕಾರ್ಮಿಕರಿಗೆ ಮುಕ್ತಿ ಒದಗಿಸಬೇಕಾದರೆ, ಕೈಗಾರಿಕಾ ಚಟುವಟಿಕೆಗಳಿಗೆ ಭೂಮಿ ಒದಗಿಸುವುದನ್ನು ಬೆಂಬಲಿಸಬೇಕಿದೆ. ಭಾರತದಲ್ಲಿ ಈಗ ಒಳಿತು– ಕೆಡುಕುಗಳ ಸಮರ ನಡೆಯುತ್ತಿದೆ. ನ್ಯಾನೋ ಯೋಜನೆಯ ಸೋಲು, ಒಳಿತಿನ ಸೋಲು.

ಪ್ಲೇಗ್ ಮಾರಿಯ ಕೂಗು

ಜೀತಪದ್ಧತಿ ಯುರೋಪಿನ ಇತಿಹಾಸದ ಕಳಂಕ ಗಳಲ್ಲಿ ಒಂದು. ಕ್ರಿ. ಶ. ೧೦೦೦–೧೩೦೦ರವರೆಗಿನ ಮಧ್ಯಯುಗದಲ್ಲಿ ಬಹುಸಂಖ್ಯೆಯಲ್ಲಿ ಕೃಷಿ ಕಾರ್ಮಿಕರು ಜೀತದಾಳುಗಳಾಗಿ ಪರಿವರ್ತಿತಗೊಂಡರು. ತಾಂತ್ರಿಕವಾಗಿ ಜಮೀನಿನಲ್ಲಿ ಉಳುವವರು ಕೃಷಿ ಕಾರ್ಮಿಕರೇ ಆಗಿದ್ದರೂ, ಜೀತದಾಳುಗಳಾಗಿ ದುಡಿಯುತ್ತಿದ್ದರು. ಭೂಮಿಯ ಒಡೆತನ ಬದಲಾದಂತೆ, ಜೀತದಾಳುಗಳು ಹೊಸ ಮಾಲೀಕನ ಕೈಕೆಳಗೆ ದುಡಿಯಬೇಕಿತ್ತು.

ಜೀತದಾಳುಗಳ ಪಾಲಿಗೆ ಈ ಭೂಮಾಲೀಕನೇ ಚಕ್ರವರ್ತಿಯಾಗಿದ್ದನು. ಚಕ್ರವರ್ತಿಯ ಅವಶ್ಯಕತೆಗಳಿಗನುಗುಣವಾಗಿ ಅವರ ಜೀವನ ನಡೆಯುತ್ತಿತ್ತು.

ಸುಮಾರು ೧೭೮೯ರ ಹೊತ್ತಿಗೆ (೧೭೫೭ರಲ್ಲಿ ರಾಬರ್ಟ್ ಕ್ಲೈವ್ ಪ್ಲಾಸಿ ಕದನವನ್ನು ಗೆಲ್ಲುವ ೨೮ ವರ್ಷಗಳಿಗೂ ಮುಂಚೆ) ಯುರೋಪಿನ ಬಹುತೇಕ ದೇಶಗಳು ೧೯೫೦ರ ಭಾರತದಂತೆ ಇದ್ದವು. ಯುರೋಪ್ ಹೆಚ್ಚು ಕಮ್ಮಿ ಗ್ರಾಮೀಣ ಪ್ರದೇಶವಾಗಿತ್ತು. ಬಹುತೇಕ ಜನರು ಕೃಷಿ, ಪಶುಸಂಗೋಪನೆ ಮತ್ತಿತರ ಸಂಬಂಧಿತ ಕೆಲಸಗಳಲ್ಲಿ ತೊಡಗಿದ್ದರು. ಆ ಸಂದರ್ಭದಲ್ಲಿ ಭೂಮಿಯ ಹೆಚ್ಚಿನ ಭಾಗವನ್ನು ಕೃಷಿ ಚಟುವಟಿಕೆಗಳಿಗೆ ಬಳಸಲಾಗುತ್ತಿತ್ತು. ಭೂಮಿಯ ಉಳುಮೆಗೆ ಎತ್ತುಗಳನ್ನು ಬಳಸಲಾಗುತ್ತಿತ್ತು. ಗೋಧಿಯನ್ನು ಕೈಗಳ ಮೂಲಕ ಬಿತ್ತಲಾಗುತ್ತಿತ್ತು. ಕೃಷಿ ಚಟುವಟಿಕೆ ಬಹುತೇಕ ತಂತ್ರಜ್ಞಾನದ ಸಹಾಯವಿಲ್ಲದೆ ನಡೆಯುತ್ತಿತ್ತು. ೧೮೫೦ರ ಹೊತ್ತಿಗೆ ಟ್ರ್ಯಾಕ್ಟರ್ ಬಂದ ನಂತರ ಯಂತ್ರೋಪಕರಣಗಳು ಕೃಷಿ ಚಟುವಟಿಕೆಗಳಿಗೆ ಬಳಕೆಯಾಗುವುದಕ್ಕೆ ಶುರುವಾದವು.

ಆಧುನಿಕ ಕೃಷಿ ಸಲಕರಣೆಗಳು ಬರುವವರೆಗೆ ಯುರೋಪಿನಲ್ಲಿ ಕೂಡ ಕೃಷಿ ಕಾರ್ಯಗಳಿಗೆ ಮನುಷ್ಯನ ಶ್ರಮದ ಅವಶ್ಯಕತೆ ಇತ್ತು. ಆದರೆ ಆ ಸಂದರ್ಭದಲ್ಲಿ ಕೂಡ ರಾಜರು, ರಾಜವಂಶಸ್ಥರು, ಭೂಮಾಲೀಕರು ಮತ್ತು ವ್ಯಾಪಾರಿಗಳು ಇದ್ದುದರಿಂದ ಕೃಷಿಗೆ ಕೂಲಿ ಕಾರ್ಮಿಕರ ನೆರವು ಅತ್ಯವಶ್ಯಕವಾಗಿತ್ತು. ಭಾರತದಲ್ಲಿ ದಲಿತರು ಮಾಡಿದ ಕೆಲಸವನ್ನು ಯುರೋಪಿನ ಜೀತದಾಳುಗಳು ಮಾಡುತ್ತಿದ್ದರು. ಜೀತದಾಳುಗಳು ತಮ್ಮ ಆತ್ಮಗೌರವವನ್ನು ಭೂಮಾಲೀಕರ ಅಡಿಗೆ ಅರ್ಪಿಸಿ ಪುನೀತರಾಗಬೇಕಿತ್ತು. ಓರ್ವ ಜೀತದಾಳಿನ ಮಗಳು ಇತರ ವರ್ಗದ ಗಂಡನ್ನು ಮದುವೆಯಾಗುವಂತಿರಲಿಲ್ಲ. ಜೀತದಾಳುಗಳು ತೆರಿಗೆ ಪಾವತಿಸದ ಹೊರತು ಇತರ ಉದ್ಯೋಗ ಮಾಡುವಂತಿರಲಿಲ್ಲ. ತಂದೆ ಸತ್ತರೆ, ಮಗ ಅವನ ಸ್ಥಾನದಲ್ಲಿ ಕೆಲಸ ಮಾಡಬೇಕಿತ್ತು. ಮಹಿಳೆಯರ ಪರಿಸ್ಥಿತಿಯಂತೂ ಇನ್ನೂ ಕೆಟ್ಟದಾಗಿತ್ತು.

ಜೀತದಾಳುಗಳ ಪ್ರತಿರೋಧದ ಹಲವಾರು ನಿದರ್ಶನಗಳನ್ನು ಯುರೋಪಿನ ಇತಿಹಾಸದುದ್ದಕ್ಕೂ ನಾವು ಕಾಣಬಹುದು. ಆಧುನಿಕ ಪೂರ್ವ ಯುರೋಪಿನ ಇತಿಹಾಸದಲ್ಲಿ ಹಲವಾರು ಕಾರ್ಮಿಕರ ಚಳವಳಿಗಳು ನಡೆದಿದ್ದರೂ ಜೀತಪದ್ಧತಿಯನ್ನು ಕೊನೆಗಾಣಿಸಲು ಸಾಧ್ಯವಾಗಲಿಲ್ಲ.

ಆದರೂ ಜೀತಪದ್ಧತಿ ಕೊನೆಯಾಯಿತು. ಜೀತ ಪದ್ಧತಿಯನ್ನು ನಿಲ್ಲಿಸಿದ್ದು ಮನುಷ್ಯ, ಸಿದ್ಧಾಂತ, ಸರ್ಕಾರ ಅಥವಾ ದೇವರು, ಯಾವುದೂ ಅಲ್ಲ. ಪ್ರಕೃತಿಯೇ ಇದಕ್ಕೊಂದು ದಾರಿ ಮಾಡಿಕೊಟ್ಟಿತು.

ಮಾನವ ಜನಾಂಗ ಎದುರಿಸಿದ ಭಯಂಕರ ಪ್ರಕೃತಿ ವಿಕೋಪಗಳಲ್ಲಿ, ೧೪ನೆಯ ಶತಮಾನದಲ್ಲಿ ಉದ್ಭವಿಸಿದ ಪ್ಲೇಗ್ ರೋಗ ಕೂಡ ಒಂದು. ಪ್ಲೇಗ್‌ನಿಂದಾಗಿ ವಿಶ್ವದಾದ್ಯಂತ ಸುಮಾರು ೭೦ ದಶಲಕ್ಷ ಮಂದಿ ಸಾವನ್ನಪ್ಪಿದರು. ಇದರಲ್ಲಿ ಸುಮಾರು ೫೦ ದಶಲಕ್ಷ ಮಂದಿ ಯುರೋಪಿಯನ್ನರು. ಯುರೋಪಿನ ಮೂರನೇಯ ಒಂದರಷ್ಟು ಜನ ಪ್ಲೇಗ್ ಮಾರಿಗೆ ಬಲಿಯಾದರೆಂದು ಹೇಳಲಾಗಿದೆ. ಪ್ಲೇಗ್ ರೋಗ ತಗುಲಿದವನ ಚರ್ಮ ಕಪ್ಪು ಬಣ್ಣಕ್ಕೆ ತಿರುಗುವುದರಿಂದ ಅದನ್ನು "ಬ್ಲ್ಯಾಕ್ ಡೆತ್" ಎಂದು ಕರೆಯಲಾಗುತ್ತಿತ್ತು. ೧೭೦೦ರವರೆಗೆ ಪ್ಲೇಗ್ ಮಾರಿ ಯುರೋಪಿನಲ್ಲಿ ಮತ್ತೆ ಕಡಿಮೆಯೆಂದರೂ ನೂರು ಸಲ ಮರುಕಳಿಸಿದೆ. ಪ್ಲೇಗ್ ಮಾರಿಗೆ ಬಲಿಯಾದ ಬಹುತೇಕ ನತದೃಷ್ಟರು ಕೃಷಿ ಕಾರ್ಮಿಕರು.

ಆದರೆ ಪ್ಲೇಗ್ ರೋಗ ಹೆಚ್ಚಿನ ಅವಧಿಯವರೆಗೆ ಅಸ್ತಿತ್ವದಲ್ಲಿದ್ದ ಪರಿಣಾಮವಾಗಿ ಯುರೋಪಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕೂಡ ಬದಲಾವಣೆ ಕಂಡುಬಂತು. "ಬ್ಲ್ಯಾಕ್ ಡೆತ್"ನ ಪರಿಣಾಮವಾಗಿ ಯುರೋಪಿನಾದ್ಯಂತ ಕಾರ್ಮಿಕರ ಕೊರತೆ ಉಂಟಾಯಿತು. ಹೀಗಾಗಿ ಮಾರುಕಟ್ಟೆ ಆಯಾಮ ಅಸ್ತಿತ್ವಕ್ಕೆ ಬಂತು. ಪೂರೈಕೆ ಕಡಿಮೆಯಿದ್ದ ವಸ್ತುಗಳಿಗೆ ಅಧಿಕ ಬೇಡಿಕೆ ಉಂಟಾಯಿತು. ಜೀತದಾಳುಗಳು ಇದೇ ಸಂದರ್ಭದಲ್ಲಿ ಹೆಚ್ಚಿನ ಕೂಲಿಗಾಗಿ ಬೇಡಿಕೆಯಿಟ್ಟರು. ಹೆಚ್ಚಿನ ಕೂಲಿ ನಿರಾಕರಿಸಿದಾಗ ಭೂಮಾಲೀಕರ ಅಣತಿಯಂತೆ ಕೆಲಸ ಮಾಡಲಿಲ್ಲ. ಇದಾದ ನಂತರ ೧೩೫೧ರಲ್ಲಿ ಬ್ರಿಟನ್ನಿನ ಪಾರ್ಲಿಮೆಂಟ್, ಕಾರ್ಮಿಕರನ್ನು ಕುರಿತ ಕಾಯ್ದೆಯೊಂದನ್ನು ಜಾರಿಗೆ ತಂದಿತು. ಹೆಚ್ಚು ವೇತನ ಬೇಡುವುದನ್ನು ನಿಷೇಧಿಸಿದ ಕಾಯ್ದೆ, ಪ್ಲೇಗ್–ಪೂರ್ವ ವೇತನವನ್ನು ನಿಗದಿಗೊಳಿಸಿತು. ಅಸ್ತಿತ್ವದಲ್ಲಿದ್ದ ಕಾರ್ಮಿಕರು ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ಸಾಲದಾದಾಗ ಜೀತಪದ್ಧತಿ ಕೊನೆಯಾಗಲೇಬೇಕಾಯಿತು.

> **ಆಧುನಿಕ ಸಲಕರಣೆಗಳು ಬರುವವರೆಗೆ ಯುರೋಪಿನಲ್ಲಿ ಕೂಡ ಕೃಷಿ ಕಾರ್ಯಗಳಿಗೆ ಮನುಷ್ಯನ ಶ್ರಮದ ಅವಶ್ಯ ಕತೆ ಇತ್ತು. ಆ ಸಂದರ್ಭದಲ್ಲಿ ರಾಜರು, ರಾಜವಂಶಸ್ಥರು, ಭೂಮಾಲೀಕರು ಮತ್ತು ವ್ಯಾಪಾರಿಗಳು ಇದ್ದುದರಿಂದ ಕೃಷಿಗೆ ಕೂಲಿ ಕಾರ್ಮಿಕರ ನೆರವು ಅತ್ಯವಶ್ಯಕವಾಗಿತ್ತು. ಭಾರತದಲ್ಲಿ ದಲಿತರು ಮಾಡಿದ ಕೆಲಸವನ್ನು ಯುರೋಪಿನ ಜೀತದಾಳುಗಳು ಮಾಡುತ್ತಿದ್ದರು. ಓರ್ವ ಜೀತದಾಳಿನ ಮಗಳು ಇತರ ವರ್ಗದ ಗಂಡನ್ನು ಮದುವೆಯಾಗುವಂತಿರಲಿಲ್ಲ. ಮಹಿಳೆಯರ ಪರಿಸ್ಥಿತಿ ಇನ್ನೂ ಕೆಟ್ಟದಾಗಿತ್ತು.**

ಜೀತಪದ್ಧತಿಯ ನಾಶ, ಯುರೋಪಿನ ಮಹಾಕ್ರಾಂತಿಗಳಲ್ಲೊಂದು. ಭಾರತದ ಮಹಾಕ್ರಾಂತಿ ಕೂಡ ಇಲ್ಲಿನ ಜೀತಪದ್ಧತಿಯ ನಾಶವೇ ಆಗಿದೆ. ಆದರೆ ಭಾರತದ 'ಜಮೀನ್ದಾರಿ ವ್ಯವಸ್ಥೆ'ಯ ಬೆನ್ನು ಮೂಳೆ ಮುರಿಯುವುದು ಹೇಗೆ ಎಂಬುದು ಈಗ ನಮ್ಮ ಮುಂದಿರುವ ಪ್ರಶ್ನೆ? ಜೀತಪದ್ಧತಿಯ ನಾಶಕ್ಕೆ ಇದಾಗಲೇ ಅಸ್ತಿತ್ವದಲ್ಲಿರುವ ಸರ್ಕಾರ, ಸಾಮಾಜಿಕ ಮತ್ತು ರಾಜಕೀಯ ಚಳವಳಿಗಳಿಂದ ಹೊರತಾದ ಹೊಸ ಪರಿಕರ ಬೇಕಾಗಿದೆ.

ಮಾರುಕಟ್ಟೆಯ ಶಕ್ತಿಗಳು ಮುಂಚೂಣಿಗೆ ಬರಲು ಈಗ ಸಕಾಲ ಅಲ್ಲವೇ? ಗ್ರಾಮೀಣ ಪ್ರದೇಶದಲ್ಲಿ ಅಸ್ತಿತ್ವದಲ್ಲಿರುವ ಜೀತಪದ್ಧತಿಯ ನಿರ್ಮೂಲನೆಗೆ ಕೈಗಾರಿಕಾ ಪ್ರಕ್ರಿಯೆ ಸೂಕ್ತವಲ್ಲವೇ? ಇದಕ್ಕೆ ಇಲ್ಲಿ ಕೂಡ "ಬ್ಲ್ಯಾಕ್ ಡೆತ್"ನ ಅವಶ್ಯಕತೆಯಿದೆ ಎಂದೆನಿಸುವುದಿಲ್ಲವೇ? ಕೈಗಾರಿಕೀಕರಣ ಭಾರತದಾದ್ಯಂತ ನಡೆದರೆ ಗ್ರಾಮೀಣ ಪ್ರದೇಶಗಳಲ್ಲಿರುವ ಯುವಕರು ಹಳ್ಳಿಗಳನ್ನು ಬಿಟ್ಟು ಹೊರಗೆ ಬರಬಹುದು. ಓರ್ವ ದಲಿತ, ಸರ್ಕಾರ ಅಥವಾ ಖಾಸಗಿ ಕಾರ್ಖಾನೆಗಳಲ್ಲಿ ಕೆಲಸ ಗಿಟ್ಟಿಸಿದರೆ ಆತನ ಕುಟುಂಬ ಕೃಷಿ ಚಟುವಟಿಕೆಗಳಿಂದ ಮುಕ್ತಿ ಪಡೆಯಬಹುದು.

ಆದರೆ ಕೈಗಾರಿಕೆಗಳ ಸ್ಥಾಪನೆಗೆ ಭೂಮಿ ಬೇಕು. ಭಾರತಾದ್ಯಂತ ಕೈಗಾರಿಕೋದ್ಯಮಿಗಳು ಬೃಹತ್ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದಿದ್ದರೂ, ಭೂಮಿ ಲಭ್ಯವಾಗುತ್ತಿಲ್ಲ. ಭೂಮಾಲೀಕರಿಂದ ಭೂಮಿಯನ್ನು ಕಸಿದುಕೊಳ್ಳುವ ಮೂಲಕ ಸರ್ಕಾರ ಕ್ರಾಂತಿಕಾರಿ ಕ್ರಮ ಕೈಗೊಳ್ಳಲು ಇದು ಸಕಾಲ ಅಲ್ಲವೇ?

ಮಹಾರಾಷ್ಟ್ರ ರಾಜ್ಯದಲ್ಲಿ ೧೩.೫ ಲಕ್ಷ ಕೋಟಿ ರೂ.ಗಳ ಬಂಡವಾಳ ಹೂಡಿ ೬೦ ಲಕ್ಷ ಹೊಸ ಹುದ್ದೆಗಳನ್ನು ಸೃಷ್ಟಿಸುವ ಉದ್ದೇಶದೊಂದಿಗೆ ೧೩೧ ಎಸ್‌ಇಜೆಡ್‌ಗಳನ್ನು ಕಾರ್ಯಗತಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಆದರೆ ಅಂತಹ ಪ್ರಯತ್ನಗಳು ಇತ್ಯರ್ಥಗೊಳ್ಳದ ಭೂವಿವಾದಗಳ ಕಾರಣಕ್ಕಾಗಿ ಹಿನ್ನಡೆ ಅನುಭವಿಸುತ್ತಿವೆ. ರಿಲಯನ್ಸ್ ಕಂಪನಿಯು ದೇಶದಲ್ಲಿಯೇ ಬೃಹತ್ ವಿಶೇಷ ಆರ್ಥಿಕ ವಲಯವನ್ನು ನೆಲೆಗೊಳಿಸುವ ಮಹತ್ವಾಕಾಂಕ್ಷೆಯನ್ನು ಸಾಕಾರಗೊಳಿಸಿಕೊಳ್ಳಲು ಹತ್ತು ಸಾವಿರ ಹೆಕ್ಟೇರ್‌ಗಳಷ್ಟು ಭೂಮಿಯನ್ನು ನಿರೀಕ್ಷಿಸುತ್ತಿದೆ. ಇದೊಂದೇ ಯೋಜನೆ ೨೦ ಲಕ್ಷ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತದೆ. ೨೨ ಗ್ರಾಮಗಳ ವ್ಯಾಪ್ತಿಯ ಮೂರು ಸಾವಿರ ಹೆಕ್ಟೇರ್‌ಗಳಷ್ಟು ಜಮೀನನ್ನು ಈ ಯೋಜನೆಗೆ ಬಳಸಿಕೊಳ್ಳಲು ರೈತರ ಅಸಹಕಾರವೇ ಬಹುದೊಡ್ಡ ತಲೆನೋವಾಗಿ ಪರಿಣಮಿಸಿದೆ. ಅಲ್ಲಿ ನೆಲೆಸಿರುವ ರೈತರು ಈ ಯೋಜನೆಗಾಗಿ ಅಷ್ಟೂ

[illegible] ಮಾನ [illegible] ಪಡೆಯಲು [illegible].

[illegible] ಮಹಾರಾಷ್ಟ್ರ ಸರ್ಕಾರ [illegible] ಪ್ರಕ್ರಿಯೆಗೆ ಸಂಬಂಧಿಸಿದಂತೆ ಅವರ ಅಭಿಪ್ರಾಯವನ್ನು ಪಡೆಯಲು ಜನಾಭಿಪ್ರಾಯದ ಮೊರೆ ಹೋಯಿತು.

'ಪ್ರತಿ ಹೆಕ್ಟೇರ್‌ಗೆ ರಿಲಯನ್ಸ್ ಕೋಟಿ ಕೊಟ್ಟರೂ ವಿಶೇಷ ಆರ್ಥಿಕ ವಲಯಕ್ಕಾಗಿ ನಮ್ಮ ಭೂಮಿಯನ್ನು ಬಿಟ್ಟುಕೊಡುವುದಿಲ್ಲ" ಎಂದು ಸರ್ಕಾರದ ಪ್ರಸ್ತಾವವನ್ನು ಸಾರಾಸಗಟಾಗಿ ತಿರಸ್ಕರಿಸಿ, ಅದರ ವಿರುದ್ಧ ಮತ ಹಾಕಿದಾತ ಸದಾಶಿವ ಮಹಾತ್ರೆ, ಈ ವಿಚಿತ್ರ ಆಸಾಮಿಗೆ ಒಂದು ಕೋಟಿಯ ಬೆಲೆ ಗೊತ್ತಿದೆಯೇ? ಬ್ಯಾಂಕಿನಲ್ಲಿ ಕೋಟಿ ಮೊತ್ತದ ಹಣವನ್ನು ಹೂಡಿದರೆ, ಪ್ರತಿ ವರ್ಷ ಹತ್ತು ಲಕ್ಷ ರೂ.ಗಳಷ್ಟು ಬಡ್ಡಿಯ ಹಣ ಆತನ ಕೈಸೇರುತ್ತದೆ. ಆತ ಅದನ್ನು ವರ್ಷದಾದ್ಯಂತ 'ಚಮನ್' ಮಾಡಿ ಜೀವನದ ಸಕಲ ಸುಖಗಳನ್ನೂ ಅನುಭವಿಸಬಹುದು. ಆದರೆ, ಸದಾಶಿವ ಮಹಾತ್ರೆಯಂತಹ ತಿಳಿಗೇಡಿ ರೈತರು ಹೀನಾಯ ಬದುಕಿನಲ್ಲಿಯೇ ಜೀವಮಾನವಿಡೀ ನಲುಗಲು ಇಷ್ಟಪಡುತ್ತಾರೆ. ಅಂತಹ ಹೀನಾಯ ಬದುಕಿನ ದುಃಸ್ಥಿತಿಗಳನ್ನು ಎದುರಿಸಲಾಗದೇ ಉಚಿತ ವಿದ್ಯುತ್, ವಿನಾಯಿತಿ ದರದ ರಸಗೊಬ್ಬರ, ಬೀಜ ಮತ್ತು ಕ್ರಿಮಿನಾಶಕಗಳಿಗಾಗಿ ಸರ್ಕಾರದ ಮುಂದೆ ಅಂಗಲಾಚುತ್ತಾರೆ. ಇನ್ನೂ ವಿಚಿತ್ರವೆಂದರೆ, ಸದ್ಯದ ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ದರದಲ್ಲಿ ತಮ್ಮ ಕೃಷಿ ಉತ್ಪನ್ನಗಳನ್ನು ಖರೀದಿಸುವಂತೆ ಸರ್ಕಾರವನ್ನು ಪೀಡಿಸುತ್ತಾರೆ. ಇದೊಂದು ಥರದ ವಿನಾಯಿತಿ ಬೇಡಿಕೆ. ಬೆಳೆದ ಬೆಳೆ ನಷ್ಟಗೊಂಡರೆ ಆತ್ಮಹತ್ಯೆ ಮಾಡಿಕೊಳ್ಳಲಾರಂಭಿಸುತ್ತಾರೆ. ಹಾಗೆ ಆತ್ಮಹತ್ಯೆ ಮಾಡಿಕೊಂಡ ತಮ್ಮ ಮೂರ್ಖತನಕ್ಕೆ ಸರ್ಕಾರವನ್ನು ಹೊಣೆ ಹೊತ್ತುಕೊಳ್ಳುವಂತಾಗಿಸುತ್ತಾರೆ. ಕೆಲವು ಬೆಳೆಗಳ ಬೆಲೆ ಏರಿಕೆಯಾದಾಗ ಅಂಥ ಬೆಳೆಗಳನ್ನೇ ನೆಚ್ಚಿಕೊಂಡು ಅವನ್ನೇ ಬೆಳೆಯಲು ಎಲ್ಲ ರೈತರು ಮುಂದಾದಾಗ ಕೃಷಿ ಉತ್ಪನ್ನಗಳ ಬೆಲೆ ದಿಢೀರನೇ ಇಳಿಯುತ್ತದಾದ್ದರಿಂದ ಸ್ವಯಂಕೃತಾಪರಾಧಕ್ಕೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಆತ್ಮಹತ್ಯೆಯ ಮಾರ್ಗ ಅನುಸರಿಸುವ ಇಂಥವರ ವರ್ತನೆಯನ್ನು ಮೂರ್ಖತನದ ಪರಮಾವಧಿ ಎನ್ನದೇ ಮತ್ತೇನೆನ್ನಬೇಕು.

ಈ ತಿಳಿಗೇಡಿ ರೈತರು ನಷ್ಟ ಅನುಭವಿಸುತ್ತಾರೆ. ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಮತ್ತೆ ಮತ್ತೆ ಸರ್ಕಾರದ ಮೇಲೆ ಗೂಬೆ ಕೂರಿಸುತ್ತಾರೆ. ಸದಾಶಿವ ಮಹಾತ್ರೆಯಂತಹ ರೈತರೇ ಭಾರತದಂತಹ ದೇಶದ ಹಣೆಬರಹವನ್ನು ನಿರ್ಧರಿಸುವಂತಾದರೆ, ಈ ದೇಶ 'ಎತ್ತಿನಗಾಡಿಯ ಯುಗ'ಕ್ಕೆ ಮರಳಬೇಕಾಗುತ್ತದೆ. ಗಾಂಧಿತತ್ವದಡಿ ಭಾರತವನ್ನು ರೂಪಿಸುವ ಹಂಬಲಗಳಿಗೆ ಎಲ್ಲ ನಗರಗಳು, ಅಲ್ಲಿ ವಿಜೃಂಭಿಸುವ ಯಂತ್ರಗಳು ಮತ್ತು ಅದನ್ನೇ ನೆಚ್ಚಿಕೊಂಡ ಬದುಕು ಕಳೆಗುಂದುತ್ತವೆ. ವಿಶ್ವದಾದ್ಯಂತ ಹಿಂದುಳಿದಿರುವಿಕೆ ಮತ್ತು ಹೀನಾಯ ಸ್ಥಿತಿಗತಿಗಳಿಗೆ ರೈತರೇ ಪ್ರಮುಖ ಕಾರಣ. ರೈತರೇ ಆಧಾರಸ್ತಂಭವಾಗಿರುವ ಸಮಾಜ

> **ಪ್ರತಿ ಹೆಕ್ಟೇರ್‌ಗೆ ರಿಲಯನ್ಸ್ ಕೋಟಿ ಕೊಟ್ಟರೂ ವಿಶೇಷ ಆರ್ಥಿಕ ವಲಯಕ್ಕಾಗಿ ನಮ್ಮ ಭೂಮಿಯನ್ನು ಬಿಟ್ಟುಕೊಡುವುದಿಲ್ಲ ಎಂದು ಸರ್ಕಾರದ ಪ್ರಸ್ತಾವವನ್ನು ಸಾರಾಸಗಟಾಗಿ ತಿರಸ್ಕರಿಸಿದಾತ ಸದಾಶಿವ ಮಹಾತ್ರೆ, ಈ ಆಸಾಮಿಗೆ ಒಂದು ಕೋಟಿಯ ಬೆಲೆ ಗೊತ್ತಿದೆಯೇ? ಬ್ಯಾಂಕಿನಲ್ಲಿ ಕೋಟಿ ಮೊತ್ತದ ಹಣವನ್ನು ಹೂಡಿದರೆ, ಪ್ರತಿ ವರ್ಷ ಹತ್ತು ಲಕ್ಷ ರೂ.ಗಳಷ್ಟು ಬಡ್ಡಿಯ ಹಣ ಆತನ ಕೈಸೇರುತ್ತದೆ. ಆತ ಅದನ್ನು ವರ್ಷದಾದ್ಯಂತ ಜೀವನದ ಸಕಲ ಸುಖಗಳನ್ನೂ ಅನುಭವಿಸಬಹುದು. ಆದರೆ, ರೈತರು ಹೀನಾಯ ಬದುಕಿನಲ್ಲಿಯೇ ಜೀವಮಾನವಿಡೀ ನಲುಗಲು ಇಷ್ಟಪಡುತ್ತಾರೆ.**

ಯಾವತ್ತೂ ಅಸಮಾನತೆಯ ನೆಲೆವೀಡಾಗಿಯೇ ಕೊಳೆಯುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಪ್ಪಿಕೊಂಡ ಸಮಾಜಕ್ಕೆ ರೈತರು ಒಗ್ಗಿಕೊಳ್ಳುವುದಿಲ್ಲವಾದ್ದರಿಂದ ಅವರು ಅಲ್ಲಿ ಬದುಕಲು ನಾಲಾಯಕ್ಕು.

ಇತ್ತೀಚೆಗಿನ ಬಿಹಾರದ ಪ್ರವಾಹ ಪರಿಸ್ಥಿತಿಗಳು ಕತ್ತಲಿನ ಬದುಕನ್ನೇ ನೆಚ್ಚಿಕೊಂಡು ಬದುಕುವ ರೈತರ ಮನೋಭಾವ ಮತ್ತು ಅವರ ದುಃಸ್ಥಿತಿಗೆ ಕನ್ನಡಿ ಹಿಡಿಯುತ್ತವೆ. ಅಲ್ಲಿಯ ಗ್ರಾಮವೊಂದು ಜಲಾವೃತವಾದಾಗ ಗ್ರಾಮಸ್ಥರು ಭಾವಣಿಗಳು ಮತ್ತು ಎತ್ತರದ ಪ್ರದೇಶಗಳನ್ನು ಹುಡುಕಿಕೊಂಡು ಹೋದಾಗ ವೈಮಾನಿಕ ಸಮೀಕ್ಷೆಯ ಮೂಲಕ ಅವರನ್ನು ಗುರುತಿಸಬೇಕಾದ ಪರಿಸ್ಥಿತಿ ಎದುರಾಯಿತು. ನಂತರ ರಕ್ಷಣಾ ಪಡೆಗಳು ಅವರ ರಕ್ಷಣೆಗೆ ಧಾವಿಸಿದರು. ಆದರೆ, ರಕ್ಷಣಾ ಪ್ರಕ್ರಿಯೆಗೆ ಅಸಹಕಾರ ತೋರಿದ ಗ್ರಾಮಸ್ಥರು ತಮ್ಮ ಜಾನುವಾರುಗಳನ್ನು ಮೊದಲು ರಕ್ಷಿಸಿ ಎಂದು ಬೊಬ್ಬೆ ಹಾಕಿದರು. ಹೀಗಾಗಿ ರಕ್ಷಣಾ ಪಡೆಗಳು ಹಿಂದಿರುಗಬೇಕಾಯಿತು. ಇಂತಹ ಸಾವಿರಾರು ಘಟನೆಗಳಲ್ಲಿ ಪ್ರವಾಹಪೀಡಿತರು ಜಾನುವಾರುಗಳ ಕಾರಣಕ್ಕಾಗಿಯೇ ರಕ್ಷಣಾ ಸಾಮಗ್ರಿಗಳನ್ನು ತಾವಿರುವ ನೆಲೆಗೇ ತಲುಪಿಸಬೇಕು ಎಂಬ ಬೇಡಿಕೆಯನ್ನು ಮುಂದಿರಿಸುತ್ತಾರೆ. ಪ್ರವಾಹದ ಪ್ರಮಾಣ ಹೆಚ್ಚಲಿಕ್ಕಿಲ್ಲ ಎಂಬ ಹುಚ್ಚು ಭರವಸೆಯೊಂದಿಗೆ ತಾವಿರುವ ನೆಲೆಯನ್ನು ಯಕಃಶ್ಚಿತ್ ಜಾನುವಾರುಗಳ ಕಾರಣಕ್ಕೆ ಬಿಟ್ಟು ಬರಲೊಪ್ಪದ ಸಾವಿರಾರು ಜನರು ಕೋಸಿ ಪ್ರವಾಹದಲ್ಲಿ ಕೊಚ್ಚಿ ಹೋದರು. ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿರುವ ಜನರು ಜಾನುವಾರುಗಳಿಲ್ಲದೇ ಬದುಕಲು ಸಾಧ್ಯವೇ ಇಲ್ಲ ಎಂದು ನಿರ್ಧರಿಸಿಕೊಂಡು ಕೂಪಮಂಡೂಕ ಸ್ಥಿತಿಯಲ್ಲಿಯೇ ಇದ್ದಾರೆ. ತಮ್ಮ ಸ್ವಯಂಕೃತಾಪರಾಧಕ್ಕಾಗಿ ತಾವಿರುವ ರಾಜ್ಯ, ದೇಶವನ್ನು ಆರೋಪಿಸುತ್ತಾರೆ. ಈ ಕಾರಣಕ್ಕಾಗಿಯೇ ರೈತರೇ ಜೀವಾಳ [illegible] ಕೊಂಡ ಸಮಾಜ [illegible] ಸಾಧ್ಯವೇ ಇಲ್ಲ. ಮುಂದುವರಿಯಲಾಗದೇ ಹಿಂದುಳಿದಿರುವುದು ಅಂಥವರನ್ನೊಳಗೊಂಡ ಸಮಾಜದ ಐಚ್ಛಿಕ ಮತ್ತು ಅನಿವಾರ್ಯ ಕರ್ಮ! ಆದರೆ, ತಾವೇ ಒಪ್ಪಿಕೊಂಡ ಅಂಥ 'ಹಿಂದುಳಿಯುವಿಕೆ'ಗೆ ಕೈಗಾರೀಕರಣವನ್ನು ಹೊಣೆಯಾಗಿಸುತ್ತಾರೆ.

ಹಿಂದೆ ಎಲ್ಲ ಸಮಾಜಗಳೂ ಗ್ರಾಮೀಣ ಸ್ವರೂಪವನ್ನು ಹೊಂದಿದ್ದವು. ಗ್ರಾಮೀಣ ಕೃಷಿ ಬದುಕಿನಿಂದ ಆಧುನಿಕತೆಗೆ ತನ್ನನ್ನು ತೆರೆದುಕೊಂಡ ಅಮೆರಿಕ ಸಮಾಜದೊಳಗಿನ ಬದಲಾವಣೆಯ ವಿವಿಧ ಹಂತಗಳನ್ನು ಗುರುತಿಸಬಹುದು;

* ೧೭೯೦: ೯೦%ರಷ್ಟು ಅಮೆರಿಕನ್ನರು ಕೃಷಿಯನ್ನೇ ಅವಲಂಬಿಸಿದ್ದರು
* ೧೮೪೦: ೫೦ ವರ್ಷಗಳ ನಂತರ ಅಂಥವರ ಪ್ರಮಾಣ ೬೯%ಗೆ ಇಳಿಯಿತು
* ೧೮೯೦: ನೂರು ವರ್ಷಗಳ ನಂತರ ಆ ಪ್ರಮಾಣ ೪೩%ಗೆ ಇಳಿಯಿತು
* ೧೯೪೦: ಒಂದೂವರೆ ಶತಮಾನದ ನಂತರ ಕೃಷಿಯಿಂದ ಬದುಕು ಕಟ್ಟಿಕೊಳ್ಳುವವರು ೧೮%ರಷ್ಟು ಮಾತ್ರ ಉಳಿದರು
* ೧೯೯೦: ಎರಡು ಶತಮಾನಗಳ ನಂತರದ ಹೊತ್ತಿಗೆ ಕೇವಲ ೨.೬%ರಷ್ಟು ಅಮೆರಿಕನ್ನರು ಮಾತ್ರ ಕೃಷಿಯನ್ನು ನೆಚ್ಚಿಕೊಂಡು ಬದುಕುತ್ತಿದ್ದಾರೆ.

ಹೀಗೆ ಅಮೆರಿಕ ಆಧುನಿಕ ಕೈಗಾರಿಕೀಕೃತ ದೇಶವಾಗಿ ಮಾರ್ಪಾಡುಗೊಂಡಿತು. ಆದರೆ, ಭಾರತಕ್ಕೇನಾಗಿದೆ ದಾಡಿ? ಇಲ್ಲಿ ಏನಾಗುತ್ತಿದೆ ಎಂದರೆ, ಮಹಾರಾಷ್ಟ್ರ ರಾಜ್ಯದ ರಾಯಗಢ ಜಿಲ್ಲೆಯ ೬,೧೯೯ ರೈತರು ಆ ಬಗೆಯ ಬದಲಾವಣೆಯ ಪ್ರಕ್ರಿಯೆಯನ್ನೇ ನಿಯಂತ್ರಿಸುವಷ್ಟು ಬಲಾಢ್ಯರಾಗಿದ್ದಾರೆ. ಉದ್ಯೋಗ ಪಡೆದು ನಗರ ಜೀವನದ ಸೌಖ್ಯ ಅನುಭವಿಸುವ ಮತ್ತು ಜಾನುವಾರುಗಳಿಂದ ದೂರ ಉಳಿದು ನಗರ ಜೀವನದ ಸಕಲ ಸುಖ-ಸೌಭಾಗ್ಯಗಳನ್ನು ಸಂಭ್ರಮಿಸಲು ತವಕಿಸುತ್ತಿರುವ ೬೦ ಲಕ್ಷ ಉದ್ಯೋಗಾಕಾಂಕ್ಷಿ ಭಾರತೀಯರ ಕನಸು ಯಕಃಶ್ಚಿತ್ ೬೧೯೯ ರೈತರ ಕಾರಣಕ್ಕಾಗಿ ಮಣ್ಣುಗೂಡಿದೆ.

ಈ ಬಗೆಯ ಯಕಃಶ್ಚಿತ್ ರೈತರ ಹಿಡಿತಕ್ಕೊಳಗಾದ ರಾಯಗಢ ಜಿಲ್ಲೆಯ ಸ್ಥಿತಿಯನ್ನು ನೋಡಿದರೆ ನನಗನ್ನಿಸುವುದಿಷ್ಟೇ; ರೈಲ್ವೆ ಯೋಜನೆಗಳ ಬದಲಿಗೆ ಎತ್ತಿನ ಗಾಡಿಯ ಸಾರಿಗೆ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಬೇಕಾದ ಅನಿವಾರ್ಯತೆ ಭಾರತದ ಮುಂದಿದೆ!

ಭಾರತ ಈಗ ಸಂಘರ್ಷ ಸ್ಥಿತಿಯಲ್ಲಿದೆ. ಕೃಷಿ ಜಮೀನ್ದಾರಿ (ಜೀತಪದ್ಧತಿ) ವ್ಯವಸ್ಥೆ ಮತ್ತು ಆಧುನಿಕ ಕೈಗಾರಿಕಾ ಸಮಾಜದ ನಡುವಿನ ಸಂಘರ್ಷವಿದು. ಟಾಟಾ ನ್ಯಾನೋ ಯೋಜನೆಯನ್ನು ಪಶ್ಚಿಮ ಬಂಗಾಳದಿಂದ ಬಲವಂತವಾಗಿ ಹೊರಹಾಕಲಾಗಿದೆ. ಸಿಂಗೂರಿನಲ್ಲಿರುವ ಬಹುತೇಕ ರೈತರು, ರೈತರಾಗಿಯೇ ಉಳಿಯಬೇಕೆಂದು ನಿರ್ಧರಿಸಿದಂತಿದೆ. ಪಾಪ, ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಜಿಗೆ ತನ್ನ ಪಕ್ಷದ ಬೆಂಬಲವೇ ಸಿಗಲಿಲ್ಲ. ನ್ಯಾನೋ ವಿರೋಧಿ ಪ್ರತಿಭಟನೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಕ್ರಾಂತಿಕಾರಿ ಸಂಪ್ರದಾಯವಾದಿ ಪ್ರಕಾಶ್ ಕಾರಟ್

ಎರಡು ಅತಿರೇಕಗಳ ನಡುವೆ

ಸಾರ್ವಜನಿಕ ವಲಯದಲ್ಲಿ ಅಸ್ತಿತ್ವದಲ್ಲಿರಲೇ ಇಲ್ಲ.

ಮಹಾರಾಷ್ಟ್ರ ಕೂಡ ಇದೇ ರೀತಿಯ ಪರಿಸ್ಥಿತಿ ಎದುರಿಸಿದೆ. ಅಲ್ಲಿನ ರಾಯಗಢ ಜಿಲ್ಲೆಯಲ್ಲಿ ನಗರದ ವಾತಾವರಣ ನಿರ್ಮಿಸಿ ಸುಮಾರು ೧೦,೦೦೦ ಹೆಕ್ಟೇರ್ ಪ್ರದೇಶದಲ್ಲಿ ದೇಶದಲ್ಲಿಯೇ ಅತಿ ದೊಡ್ಡದಾದ ವಿಶೇಷ ಆರ್ಥಿಕ ವಲಯವನ್ನು ಸ್ಥಾಪಿಸಿ ಸುಮಾರು ಎರಡು ದಶಲಕ್ಷ ಜನರಿಗೆ ಉದ್ಯೋಗ ಕಲ್ಪಿಸುವ ಉದ್ದೇಶವನ್ನು ಮುಖೇಶ್ ಅಂಬಾನಿ ಅವರ ರಿಲಯನ್ಸ್ ಸಂಸ್ಥೆ ಹೊಂದಿತ್ತು. ಆದರೆ ಅಲ್ಲಿನ ಗ್ರಾಮಸ್ಥರು ಸುಮಾರು ೩,೦೦೦ ಹೆಕ್ಟೇರ್ ಭೂಮಿಯನ್ನು ಸ್ವಾಧೀನಕ್ಕೆ ಒಪ್ಪಿಸಲು ನಿರಾಕರಿಸಿದ ಪರಿಣಾಮವಾಗಿ ಅಲ್ಲಿನ ಯೋಜನೆ ಸ್ಥಗಿತಗೊಂಡಿದೆ. ಅಲ್ಲಿನ ಮುಖ್ಯಮಂತ್ರಿ ವಿಲಾಸ್‌ರಾವ್ ದೇಶ್‌ಮುಖ್ ಈ ವಿಚಾರದ ಬಗ್ಗೆ ಜನಾಭಿಪ್ರಾಯ ಕೈಗೊಳ್ಳಬೇಕೆಂಬ ಹಾಸ್ಯಾಸ್ಪದ ಮಾತುಗಳನ್ನಾಡಿದ್ದರು. ಒಂದು ವೇಳೆ ಎಸ್‌ಇಜೆಡ್ ಬಗ್ಗೆ ರೈತರ ಅಭಿಪ್ರಾಯ ಸಂಗ್ರಹಣೆಗೆ ಚುನಾವಣೆಯೇನಾದಾರೂ ನಡೆದಿದ್ದರೆ ಸುಮಾರು ೯೧%ರಷ್ಟು ಮಂದಿ ಎಸ್‌ಇಜೆಡ್ ವಿರುದ್ಧ ಮತ ಹಾಕುತ್ತಿದ್ದರು ಎಂದು ವರದಿಯಾಗಿದೆ.

ರಾಯಗಢದ ರೈತರು ಕೂಡ ರೈತರಾಗಿಯೇ ಜೀವನ ಕಳೆಯಬೇಕೆಂದಿದ್ದಾರೆ. ಇದು ಆಧುನಿಕತೆ ಮತ್ತು ಸಂಪ್ರದಾಯ, ಕೃಷಿ ಮತ್ತು ಕೈಗಾರಿಕೀಕರಣ, ಹಾಗೂ ಜಮೀನ್ದಾರಿ ಪದ್ಧತಿ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ನಡುವಿನ ಸಮರವಲ್ಲದೆ ಮತ್ತೇನೂ ಅಲ್ಲ.

ಭಾರತ ಕೃಷಿಕೇಂದ್ರಿತ ಜಮೀನ್ದಾರಿ ವ್ಯವಸ್ಥೆಯಾಗಿಯೇ ಉಳಿಯಬೇಕೆ ಅಥವಾ ಯುರೋಪ್, ಉತ್ತರ ಅಮೆರಿಕ ಮತ್ತು ಪೂರ್ವ ಏಷ್ಯಾದ ರಾಷ್ಟ್ರಗಳನ್ನು ಅನುಸರಿಸಬೇಕೇ? ಇನ್ನೂ ಮುಂದುವರೆದು ಹೇಳುವುದಾದರೆ, ಕೃಷಿ ಮತ್ತು ಜಮೀನ್ದಾರಿ ವ್ಯವಸ್ಥೆಯನ್ನು ಇಷ್ಟಪಡುವವರು ಯಾರು? ಎಸ್‌ಇಜೆಡ್ ಎಂದರೆ ಭಯಪಡುವವರು ಯಾರು? ದಲಿತರು ಅಥವಾ ಆದಿವಾಸಿಗಳೇ? ಅಥವಾ ಭೂಮಿ ಹೊಂದಿಲ್ಲದವರೇ? ಭಾರತದಾದ್ಯಂತ ಭೂಮಿ ಪರಭಾರೆ ತೊಡಕಿನಿಂದಾಗಿ ನೂರಾರು ಎಸ್‌ಇಜೆಡ್ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಈ ಎಲ್ಲ ಯೋಜನೆಗಳ ಬಗ್ಗೆ ಸರ್ಕಾರ ಜನಾಭಿಪ್ರಾಯ ನಡೆಸಿದರೆ, ರೈತರು ಎಸ್‌ಇಜೆಡ್‌ಗಳ ವಿರುದ್ಧ ಮತ ಚಲಾಯಿಸುವುದು ಖಚಿತ.

ದೇಶದ ಗ್ರಾಮೀಣ ಪ್ರದೇಶದಲ್ಲಿ ಕೆಲಸವನ್ನೇ ಮಾಡದ ಭೂಮಾಲೀಕರಿಗೆ ಕೃಷಿಕೇಂದ್ರಿತ ಜಮೀನ್ದಾರಿ ವ್ಯವಸ್ಥೆ ಸೂಕ್ತವಾಗುತ್ತದೆ. ಸ್ಥಳೀಯತೆ, ಕೃಷಿ, ಸಂಪ್ರದಾಯ ಮತ್ತು ಹಿಂದುಳಿದಿರುವಿಕೆಯನ್ನು ಆರಾಧಿಸುವ 'ಜಮೀನ್ದಾರಿ ರೈತರು' ಇಲ್ಲಿದ್ದಾರೆ. ಇಂಡಿಯಾ ದೇಶವನ್ನು 'ಭಾರತ'ದಿಂದ ಬಿಡುಗಡೆಗೊಳಿಸಲು ಜನರನ್ನು ಕೃಷಿ ಕೆಲಸಗಳಿಂದ ಕೃಷಿಯೇತರ ಕೆಲಸಗಳಿಗೆ ಕೊಂಡೊಯ್ಯಬೇಕಿದೆ. ಈ ನಿಟ್ಟಿನಲ್ಲಿ ಬೃಹತ್ ಕೈಗಾರಿಕೀಕರಣ ಅತ್ಯವಶ್ಯಕ. ಬೃಹತ್ ಕೈಗಾರಿಕೆಗೆ ಭೂಮಿ ಕೂಡ ಅತ್ಯವಶ್ಯಕ.

> **ಭಾರತ ಕೃಷಿಕೇಂದ್ರಿತ ಜಮೀನ್ದಾರಿ ವ್ಯವಸ್ಥೆಯಾಗಿಯೇ ಉಳಿಯಬೇಕೇ? ಯುರೋಪ್, ಉತ್ತರ ಅಮೆರಿಕ ಮತ್ತು ಪೂರ್ವ ಏಷ್ಯಾದ ರಾಷ್ಟ್ರಗಳನ್ನು ಅನುಸರಿಸಬೇಕೆ? ಕೃಷಿ ಮತ್ತು ಜಮೀನ್ದಾರಿ ವ್ಯವಸ್ಥೆಯನ್ನು ಇಷ್ಟಪಡುವವರು ಯಾರು? ಎಸ್‌ಇಜೆಡ್ ಎಂದರೆ ಭಯ ಪಡುವವರು ಯಾರು? ದಲಿತರು ಅಥವಾ ಆದಿವಾಸಿಗಳೇ? ಅಥವಾ ಭೂಮಿ ಹೊಂದಿಲ್ಲದವರೇ? ಭಾರತದಾದ್ಯಂತ ಭೂಮಿ ಪರಭಾರೆ ತೊಡಕಿನಿಂದಾಗಿ ಎಸ್‌ಇಜೆಡ್ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಈ ಯೋಜನೆಗಳ ಬಗ್ಗೆ ಸರ್ಕಾರ ಜನಾಬಿಪ್ರಾಯ ನಡೆಸಿದರೆ, ರೈತರು ಎಸ್‌ಇಜೆಡ್‌ಗಳ ವಿರುದ್ಧ ಮತ ಚಲಾಯಿಸುವುದು ಖಚಿತ.**

ಭಾರತದಲ್ಲಿ ಕನಿಷ್ಠ ಒಂದು ದಶಲಕ್ಷಕ್ಕೂ ಹೆಚ್ಚು ಎಸ್‌ಇಜೆಡ್‌ಗಳ ಸ್ಥಾಪನೆಗೆ ಭೂಮಿ ಬೇಕಿದೆ. ಕೈಗಾರಿಕೆಗೆ ಸಮಾನಾಂತರವಾಗಿ ಕೃಷಿ ಚಟುವಟಿಕೆಗಳು ಕೂಡ ನಡೆಯಬೇಕಿದೆ.

ಉದಾಹರಣೆಗೆ ಬಹುರಾಷ್ಟ್ರೀಯ ಸಂಸ್ಥೆಯೊಂದು ಕೈಗಾರಿಕೆಯ ಮಾದರಿಯಲ್ಲಿ ಸುಮಾರು ೧೦,೦೦೦ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಕೈಗೊಳ್ಳಲು ಮುಂದೆ ಬಂದರೆ ರೈತರು ಒಪ್ಪುತ್ತಾರೆಯೇ? ಇದಕ್ಕೆ ಉತ್ತರ ಇಲ್ಲ ಎಂದಾದರೆ, ಭಾರತ ಕೈಗಾರಿಕಾ ದೇಶವಾಗಿ ಪರಿವರ್ತಿತವಾಗಲು ಶತಮಾನಗಳು ಉರುಳಬೇಕು. ಅಲ್ಲಿಯವರೆಗೆ ಕೃಷಿ ಆಧಾರಿತ ಸಾಮಾಜಿಕ ವ್ಯವಸ್ಥೆಯ ಎಲ್ಲ ಕೆಡುಕುಗಳು ಮುಂದುವರೆಯುತ್ತವೆ. ಆದರೆ ಕೆಲವು ಮಂದಿ ಭಾರತೀಯರು ಕೈಗಾರಿಕೀಕರಣದ ಪರವಾಗಿರುವುದು ಮಾತ್ರ ಸಿಹಿ ಸುದ್ದಿ. ಒಂದೆಡೆ ಕೃಷಿ ಕಾರ್ಮಿಕ, ಜಮೀನ್ದಾರರ ಹಿಡಿತದಿಂದ ಹೊರಬರುವ ಆಸೆಯಲ್ಲಿದ್ದರೆ, ಮತ್ತೊಂದೆಡೆ ಬಂಡವಾಳಶಾಹಿ ಲಾಭ ಗಳಿಸುವ ಆಸೆಯಿರಿಸಿಕೊಂಡಿರುತ್ತಾನೆ. ಜಮೀನ್ದಾರರ ಕೈಕೆಳಗೆ ಜೀತ ಮಾಡುವುದಕ್ಕಿಂತ ನರಕ ಇನ್ನೊಂದಿಲ್ಲ.

ಆದರೆ, ಎಸ್‌ಇಜೆಡ್‌ಗಳನ್ನು ವಿರೋಧಿಸುತ್ತಿರುವವರನ್ನು ಎದುರಿಸುವುದು ಹೇಗೆ? ಯುರೋಪಿನಲ್ಲಿ ಕೂಡ ಇದೇ ರೀತಿಯ ಪರಿಸ್ಥಿತಿ ಎದುರಾದಾಗ ಅಲ್ಲಿನ ಸರ್ಕಾರಗಳು ಕಠಿಣ ಕ್ರಮ ಕೈಗೊಳ್ಳುವ ಮೂಲಕ ಧೈರ್ಯ ಪ್ರದರ್ಶಿಸಿದವು.

ಜೇಮ್ಸ್ ವ್ಯಾಟ್ಸ್ ಉಗಿ ಬಂಡಿಯನ್ನು ಕಂಡುಹಿಡಿಯುವುದರೊಂದಿಗೆ ಯುರೋಪಿನಲ್ಲಿ ಕೈಗಾರಿಕೀಕರಣದ ಉದಯವಾಯಿತು. ಕೈಮಗ್ಗದಿಂದ ಯಂತ್ರೋಪಕರಣಗಳ ಮೂಲಕ ಜವಳಿ ತಯಾರಿಕೆಯವರೆಗಿನ ಪಯಣ ಆರಂಭವಾಯಿತು. ಇಂಗ್ಲೆಂಡ್, ಜರ್ಮನಿ ಮತ್ತು ಫ್ರಾನ್ಸ್‌ಗಳಲ್ಲಿ ಆಧುನಿಕ ಯಂತ್ರೋಪಕರಣಗಳನ್ನು ಬಳಸುವ ಕಾರ್ಖಾನೆಗಳ ಮೇಲೆ ಕೈಮಗ್ಗದ ಕಾರ್ಮಿಕರು ದಾಳಿ ಮಾಡಲಾರಂಭಿಸಿದರು. ಯಂತ್ರೋಪಕರಣಗಳು ತಮ್ಮ ಉದ್ಯೋಗಕ್ಕೆ ಕಂಟಕ ತರುತ್ತವೆ ಎಂದು ಕಾರ್ಮಿಕರು ಭಾವಿಸಿದರು. ಕೈಗಾರಿಕಾ ವಿರೋಧಿ ಚಳವಳಿಯನ್ನು 'ಯುರೋಪಿನ ಯಂತ್ರೋಪಕರಣಗಳ ನಾಶ ಚಳವಳಿ' ಎಂದು ಕರೆಯಲಾಗುತ್ತದೆ.

ಇದರ ಪರಿಣಾಮವಾಗಿ ಇಂಗ್ಲೆಂಡ್‌ನಲ್ಲಿ ಸಾಮಾಜಿಕ ಸಂಕಷ್ಟ ಉದ್ಭವಿಸಿತು. ಆದರೆ ಸರ್ಕಾರ ಪರಿಸ್ಥಿತಿ ಬಿಗಡಾಯಿಸದಂತೆ ಕಠಿಣ ಕ್ರಮ ಕೈಗೊಂಡಿತು. ಯಂತ್ರೋಪಕರಣಗಳನ್ನು ನಾಶ ಮಾಡುವವರಿಗೆ ಗಲ್ಲು ಶಿಕ್ಷೆ ವಿಧಿಸುವ ಶಾಸನವನ್ನು ೧೮೧೨ರಲ್ಲಿ ಬ್ರಿಟನ್ನಿನ ಪಾರ್ಲಿಮೆಂಟ್‌ನಲ್ಲಿ ಅಂಗೀಕರಿಸಲಾಯಿತು. 'ಲುಡ್ಡೈಟ್ಸ್' ಎಂದು ಕೂಡ ಕರೆಯಲಾಗುವ ಯಂತ್ರನಾಶಕರನ್ನು ಹತ್ತಿಕ್ಕುವ ಸಲುವಾಗಿ ಬ್ರಿಟನ್ ಸರ್ಕಾರ ೧೨,೦೦೦ ಜನರ ಸೇನಾ ತುಕಡಿಯನ್ನು ಆರಂಭಿಸಿತು. ಒಂದು ಅಂದಾಜಿನ ಪ್ರಕಾರ, ೧೭೩೭ರಿಂದ ೧೮೪೮ರವರೆಗೆ ಸುಮಾರು ೧೧೮ ಮಂದಿ ಯಂತ್ರನಾಶಕರನ್ನು ಗಲ್ಲಿಗೆ ಹಾಕಲಾಗಿದ್ದು, ಸುಮಾರು ೭೩೦ ಮಂದಿ ಸೇನಾ ಕಾರ್ಯಾಚರಣೆಯ ವೇಳೆ ಸಾವನ್ನಪ್ಪಿದ್ದಾರೆ. ಇನ್ನೊಂದಷ್ಟು ಮಂದಿ ಆಸ್ಟ್ರೇಲಿಯಾಗೆ ಓಡಿದರು. ಇದರ ಪರಿಣಾಮವಾಗಿ ಯುರೋಪ್ ಸ್ವತಂತ್ರವಾಯಿತು. ಈಗ, ಬ್ರಿಟನ್ನಿನ ೧.೪%, ಫ್ರಾನ್ಸ್‌ನ ೪.೧% ಮತ್ತು ಜರ್ಮನಿಯ ೨.೮%ರಷ್ಟು ಮಂದಿ ಮಾತ್ರ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ೨೦೦ ವರ್ಷಗಳ ಹಿಂದೆ ಕೃಷಿ ಕೇಂದ್ರಿತವಾಗಿದ್ದ ಯುರೋಪ್ ಇಂದಿನ ಭಾರತವನ್ನು ಹೋಲುತ್ತದೆ.

ಭಾರತ ಕೂಡ ಯುರೋಪ್‌ನ ದಾರಿಯಲ್ಲಿ ಯಾಕೆ ನಡೆಯಬಾರದು? ಈ ನಿಟ್ಟಿನಲ್ಲಿ ಭಾರತ ಕೂಡ ಎಸ್‌ಇಜೆಡ್ ವಿರೋಧಿಗಳಿಗೆ ಗಲ್ಲು ಶಿಕ್ಷೆ ವಿಧಿಸುವ ಕಾಯ್ದೆಯನ್ನು ಯಾಕೆ ಜಾರಿಗೊಳಿಸಬಾರದು? ಸಾವಿರಾರು ಜಮೀನ್ದಾರರನ್ನು ನೇಣಿಗೆ ಹಾಕಿ, ಇನ್ನಷ್ಟು ಸಾವಿರ ಮಂದಿಯನ್ನು ರಾಜಸ್ಥಾನದ ಬಾರ್ಮರ್‌ಗೆ ಓಡಿಸಿ. ಎಸ್‌ಇಜೆಡ್ ವಿರೋಧಿಗಳನ್ನು ಶಿಕ್ಷಿಸದಿದ್ದರೆ, ಉತ್ತಮ ಜೀವನಕ್ಕೆ ಅರ್ಹವಾದ ಆಧುನಿಕ ಭಾರತದ ನಿರ್ಮಾಣ ಸಾಧ್ಯವೇ ಇಲ್ಲ. □

ಎಸ್‌ಇಜೆಡ್ ವಿರೋಧಿಗಳನ್ನು ನೇಣಿಗೆ ಹಾಕಿ

ಬುದ್ಧಾಯಣ

೩೯

'ಸಹೋದರರರೇ, ಪ್ರತಿಯೊಬ್ಬರ ಅಂತರಾಳದಲ್ಲಿ ಗುಪ್ತಗಾಮಿನಿಯಾಗಿ ನದಿಯೊಂದು ಸದಾ ಹರಿಯುತ್ತಲೇ ಇರುತ್ತದೆ. ಅದಕ್ಕೆ ಎರಡು ತೀರಗಳಿವೆ. ಒಂದು ತೀರದಲ್ಲಿ ಮಾರನಿದ್ದರೆ ಮತ್ತೊಂದು ತೀರದಲ್ಲಿ ನಾನಿರುತ್ತೇನೆ. ನಮ್ಮಿಬ್ಬರ ಮಧ್ಯ ಹರಿಯುವುದೇ ಕಾಲವೆಂಬ ರಭಸದ ಪ್ರವಾಹ. ನಿಮ್ಮನ್ನು ಪ್ರವಾಹದಲ್ಲಿ ಮುಳುಗಿಸಲು ಮಾರನು ಸದಾ ಹೊಂಚು ಹಾಕಿ ಕಾದಿರುವನು. ಅವನ ಹಿಡಿತಕ್ಕೆ ಸಿಕ್ಕಿದರೆ ನೀವುಗಳು ಬಹುಕಾಲ ದುಃಖ ಮತ್ತು ಕೇಡಿಗೆ ತುತ್ತಾಗುವಿರಿ. ಅವನ ಸರಹದ್ದನ್ನು ಮೀರಿ ಬಂದಾಗಲೇ ನಿಮಗೆ ನಾನು ದೊರೆಯುವುದು. ಆಗ ಮಾತ್ರ ನಿಮ್ಮಗಳ ಪಾಲಿಗೆ ಸಾವಿಲ್ಲದ ಹೆಬ್ಬಾಗಿಲು ತೆರೆದು ನಿಲ್ಲುತ್ತದೆ.'

ಸಿ.ಎಚ್. ರಾಜಶೇಖರ್

ಸಾವಿಲ್ಲದ ಹೆಬ್ಬಾಗಿಲು ತೆರೆದು ನಿಂತವನೇ ಬುದ್ಧ...!!

ಪ್ರತಿ ಸೋಲು ಆಯಾ ವ್ಯಕ್ತಿಯ ಪಾಲಿಗೆ ನಿರಂತರ ಸಾವೇ ಸರಿ. ಆದ್ದರಿಂದ ಯಾರು ಗೆಲ್ಲುವನ್ನು ಬಯಸುತ್ತಾರೋ ಅವರು ಸೋಲಿನ ಸಕಲ ಮಗ್ಗುಲುಗಳನ್ನು ಸಮರ್ಥವಾಗಿ ಗುರುತಿಸಿ ಕೊಳ್ಳಬೇಕೆ ಂಬುದೇ ಬುದ್ಧನ ತತ್ವಸಾರ. ಹೀಗೆ ಅಸಮರ್ಥತೆಯಿಂದ ಸಮರ್ಥದೆಡೆ ಸಾಗುವುದೇ ಹೋರಾಟ. ಆಗ ಮಾತ್ರ ನಮ್ಮ ಗುರಿ ತಲುಪಬಹುದು.

ಅದಕ್ಕಾಗಿ ನಾವುಗಳು ಮಾಡಬೇಕಾದ್ದು ಇಷ್ಟೇ: ನಾವು ಎಲ್ಲಿ ಸೋತೆವು? ಎಂಬುದನ್ನು ಸರಿಯಾಗಿ ಗುರುತಿಸಿಕೊಳ್ಳಬೇಕು. ಅವುಗಳ ಪಟ್ಟಿಯನ್ನು ಕ್ರಮವಾಗಿ ಮಾಡಿಕೊಳ್ಳಬೇಕು. ಬಳಿಕ ಯಾವ ಯಾವ ಕಾರಣಕ್ಕಾಗಿ? ಎಲ್ಲೆಲ್ಲಿ? ಏಕೆ ಸೋತೆವು? ಎಂಬ ಪ್ರಶ್ನೆಯನ್ನು ನಮ್ಮಗೆ ನಾವೇ ಹಾಕಿಕೊಳ್ಳಬೇಕಾಗುತ್ತದೆ. ಉತ್ತರವನ್ನು ನಾವೇ ಗುರುತಿಸಿಕೊಳ್ಳುತ್ತಾ ಪಟ್ಟಿ ಮಾಡಿಕೊಳ್ಳಬೇಕು. ಆ ಹುಡುಕಾಟದಲ್ಲಿ ಸತ್ಯ ದೊರೆಯುತ್ತದೆ. ಅದರ ತಳಪಾಯದಲ್ಲಿ ಗೆಲುವಿನ ಯೋಜನೆಯನ್ನು ಕರಾರುವಕ್ಕಾಗಿ ಸಿದ್ಧಪಡಿಸಿ ಮುನ್ನಡೆದರೆ ಗೆಲುವು ದೊರೆಯುತ್ತದೆ. ಅದೇ ಫಲಿತಾಂಶ ಅಥವಾ ನಾವು ಪಡೆದ ಸಮರ್ಥತೆ. ಇದನ್ನು ನಿರೂಪಿಸುವ ಈ ಕಥೆಯು ಹೀಗಿದೆ:

ಅಂದಿನ ದಿನಗಳಲ್ಲಿ ಗೌತಮ ಬುದ್ಧರು ಗಂಗಾನದಿಯ ತೀರದ ವಜ್ಜಿಗಳ 'ಉಕ್ಕಚೇಲ' ಎಂಬ ವಿಹಾರದಲ್ಲಿ ತಂಗಿದ್ದರು. ತನ್ನ ಭಿಕ್ಷುಗಳಲ್ಲಿನ ಅಸಮರ್ಥತೆ ಮತ್ತು ಸೋಲಿನ ಹಿಂದಿರುವ ಅಜ್ಞಾನವನ್ನು ತೊಲಗಿಸುವ ಕಾರಣ ಅವರನ್ನು ಉದ್ದೇಶಿಸಿ:

'ಸಹೋದರರರೇ, ಪ್ರತಿಯೊಬ್ಬರ ಅಂತರಾಳದಲ್ಲಿ ಗುಪ್ತಗಾಮಿನಿಯಾಗಿ ನದಿಯೊಂದು ಸದಾ ಹರಿಯುತ್ತಲೇ ಇರುತ್ತದೆ ಎಂಬುದನ್ನು ಮೊದಲು ಅರಿಯಿರಿ ಮತ್ತು ಗುರುತಿಸಿಕೊಳ್ಳಿರಿ. ಅದನ್ನು ಗಂಗಾನದಿ ಎಂದು ಬಗೆಯಿರಿ. ಅದಕ್ಕೆ ಎರಡು ತೀರಗಳಿವೆ. ಒಂದು ತೀರದಲ್ಲಿ ಮಾರನಿದ್ದರೆ ಮತ್ತೊಂದು ತೀರದಲ್ಲಿ ನಾನಿರುತ್ತೇನೆ. ನಮ್ಮಿಬ್ಬರ ಮಧ್ಯ ಹರಿಯುವುದೇ ಕಾಲವೆಂಬ ರಭಸದ ಪ್ರವಾಹ. ನಿಮ್ಮನ್ನು ಪ್ರವಾಹದಲ್ಲಿ ಮುಳುಗಿಸಲು ಮಾರನು ಸದಾ ಹೊಂಚು ಹಾಕಿ ಕಾದಿರುವನು. ಅವನ ಹಿಡಿತಕ್ಕೆ ಸಿಕ್ಕಿದರೆ ನೀವುಗಳು ಬಹುಕಾಲ ದುಃಖ ಮತ್ತು ಕೇಡಿಗೆ ತುತ್ತಾಗುವಿರಿ. ಅವನ ಸರಹದ್ದನ್ನು ಮೀರಿ ಬಂದಾಗಲೇ ನಿಮಗೆ ನಾನು ದೊರೆಯುವುದು. ಅದೇ ಗೆಲುವು. ಅದೇ ಸಮರ್ಥನೆ. ಆಗ ಮಾತ್ರ ನಿಮ್ಮಗಳ ಪಾಲಿಗೆ ಸಾವಿಲ್ಲದ ಹೆಬ್ಬಾಗಿಲು ತೆರೆದು ನಿಲ್ಲುತ್ತದೆ.'

'ಸಹೋದರರರೇ, ಕಾಲವೆಂಬ ಪ್ರವಾಹ ಕೂಡ ತನ್ನದೇ ಆದ ಋತುಗಳಿಗೆ ಬಂಧಿಯಾಗಿರುತ್ತದೆ ಎಂಬುವ ಪ್ರಕೃತಿಯ ನಿಯಮವನ್ನು ಮನಗಾಣಿರಿ. ಹಾಗೆಯೇ ನಾವುಗಳು 'ಅಸಮರ್ಥ'ರಾಗಿದ್ದರೆ ನಮ್ಮನು ಆಶ್ರಯಿಸಿದವರು ಮತ್ತು ಹಿಂಬಾಲಿಸುವವರು ದುಃಖ ಹಾಗೂ ದುರಂತಕ್ಕೆ ತುತ್ತಾಗುತ್ತಾರೆ ಎಂಬುದನ್ನು ತಿಳಿಯಿರಿ. ನಾವುಗಳು 'ಸಮರ್ಥ'ರಾಗಿದ್ದರೆ ನಮ್ಮನ್ನು ನಂಬಿದವರು, ಆಶ್ರಯಿಸಿದವರು ದುಃಖ ಮತ್ತು ದುರಂತದಿಂದ ಪಾರಾಗುತ್ತಾರೆ ಎಂಬುದನ್ನು ಮನಗಾಣಿರಿ. ಅದು ಹೇಗೆಂದರೆ: ಹಿಂದೊಮ್ಮೆ ಮಗಧ ರಾಜ್ಯದಲ್ಲಿ ಒಬ್ಬ ದನ ಕಾಯುವವನಿದ್ದ ಜನರು ಆತನನ್ನು ನಂಬಿ ತಮ್ಮ ರಾಸುಗಳನ್ನು ಅವನಿಗೆ ಒಪ್ಪಿಸಿದ್ದರು. ಆತನೇ ತಮ್ಮ ನೇತಾರ ಎಂದು ನಂಬಿದ್ದ ದನಗಳೂ ಕೂಡ ಆತನನ್ನು ಆಶ್ರಯಿಸಿದ್ದವು. ಆತನಿಗೆ ಕಾಲದ ಮತ್ತು ಋತುಮಾನದ ಪರಿಜ್ಞಾನವಿರಲಿಲ್ಲ. ಹಾಗಾಗಿ ಮಳೆಗಾಲದ ಕೊನೆ ತಿಂಗಳಿನ ಶರತ್ಕಾಲದ ಸಮಯದಲ್ಲಿ ಗಂಗಾನದಿಯು ತುಂಬಿ ಬೋರ್ಗರೆಯುತ್ತಾ ರಭಸವಾಗಿ ಹರಿಯುತ್ತಿತ್ತು. ಆ ಸಮಯದಲ್ಲಿ ತನ್ನ ರಾಸುಗಳನ್ನು ಆಚೆ ದಡ ತಲುಪಿಸಬೇಕೆಂಬ ಹಠದಿಂದ ಬಲವಂತವಾಗಿ ದನಗಳನ್ನು ಗಂಗಾನದಿಗೆ ಇಳಿಸಿದ. ಆ ಪ್ರವಾಹದ ಎದುರು ಈಜಿ ದಡ ಸೇರಲಾರದ ಆ ರಾಸುಗಳು ಪ್ರವಾಹದಲ್ಲಿ ಕೊಚ್ಚಿಹೋದವು.'

'ಸಹೋದರರರೇ, ಇದಕ್ಕೆ ಕಾರಣವೇನು? ಆತನ ಅಜ್ಞಾನ ಮತ್ತು ಅಸಮರ್ಥತೆಯೇ ಆಗಿದೆ!'

'ಸಹೋದರರರೇ, ಅದೇ ಮಗಧ ರಾಜ್ಯದಲ್ಲಿ ಮತ್ತೊಬ್ಬ ದನ ಕಾಯುವ ವೃತ್ತಿಯವನೊಬ್ಬನಿದ್ದ. ಆತನನ್ನು ನಂಬಿ ಗ್ರಾಮಸ್ಥರು ತಮ್ಮಗಳ ದನಕರುಗಳನ್ನು ಆತನಿಗೆ ಒಪ್ಪಿಸಿದರು. ಆತ ಕೂಡ ಅಪಾರ ರಾಸುಗಳನ್ನು ಹೊಂದಿದ್ದ. ಆತನನ್ನು ನಂಬಿ ಆಶ್ರಯಿಸಿದ ಆ ದನಗಳು ಈತನೇ ನಮ್ಮ ನೇತಾರ ಎಂದು ಆತನನ್ನು ಹಿಂಬಾಲಿಸುತ್ತಿದ್ದವು. ಆತ ಅದೇ ಗಂಗಾನದಿಯ, ಅದೇ ಮಳೆಗಾಲದ ಕೊನೆಯ ತಿಂಗಳಿನ ಶರತ್ಕಾಲದ ಸಮಯದಲ್ಲಿ ಗಂಗಾನದಿಯ ತೀರವನ್ನು ತಲುಪಿದ. ನೋಡಿದ ಪ್ರವಾಹವು ಉಕ್ಕಿ ಹರಿಯುತ್ತಿತ್ತು. ತನ್ನ ದನಗಳನ್ನು ಕೆಳಮುಖವಾಗಿ ಹೊಡೆದುಕೊಂಡು ಹೊರಟ. ಅಲ್ಲೊಂದು ಕಡೆ ಪ್ರವಾಹದ ರಭಸವು ಅಪಾಯಕಾರಿ ಮಟ್ಟವನ್ನು ಮೀರಿದೆ ಎಂಬುದನ್ನು ಗುರುತಿಸಿದ ಬಳಿಕ ಅವನು ಮೊದಲಿಗೆ ಹಸುಮಂದೆಯ ತಂದೆಯಂತೆ ಮತ್ತು ನಾಯಕರಂತಿರುವ ಹೋರಿಗಳನ್ನು ವಿಂಗಡಿಸಿ ಪ್ರವಾಹಕ್ಕೆ ಇಳಿಸಿ ಸುರಕ್ಷಿತವಾಗಿ ಆಚೆಯ ದಡ ತಲುಪಿಸಿದ. ನಂತರ ಬಲವಾದ ಹಸುಗಳನ್ನು, ತಿದ್ದಬೇಕಾದ ಹಸುಗಳನ್ನು, ಹೋರಿಕರುಗಳನ್ನು, ಹಸುಕರುಗಳನ್ನು ಮತ್ತು ಬಡಕಲಾದ, ವಯಸ್ಸಾದ ರಾಸುಗಳನ್ನು ಸರಿಯಾದ ಜಾಗದಲ್ಲಿ ಇಳಿಸಿ ಕ್ರಮವಾಗಿ ಹಾಗೂ ಸುರಕ್ಷಿತವಾಗಿ ಆಚೆಯ ದಡವನ್ನು ತಲುಪಿಸಿದ. ಕೊನೆಗೆ ಆಗ ತಾನೇ ಹುಟ್ಟಿದ ಎಳೆಕರುಗಳನ್ನು ಒಂದೆಡೆ ತರುಬಿಕೊಂಡು ಅವುಗಳ ತಾಯಂದಿರನ್ನು ಪ್ರವಾಹಕ್ಕೆ ಇಳಿಸಿದ. ಬಳಿಕ ಎಳೆಕರುಗಳನ್ನು ಪ್ರವಾಹಕ್ಕೆ ಇಳಿಸಲು ಅವುಗಳು ತಮ್ಮ ತಮ್ಮ ತಾಯಂದಿರನ್ನು ಹುಡುಕುತ್ತಾ 'ಅಂಬಾ....!' ಎಂದು ಗಿಳಿಡುತ್ತಾ ಚಂಗ ಚಂಗನೆ ನೆಗೆದು ತಾಯಂದಿರ ಹಿಂಗಾಲಿನ ನಡುವೆ ಆಶ್ರಯ ಪಡೆದು ಆಚೆ ದಡ ತಲುಪಿದವು. ಹೀಗೆ ಆಚೆಯ ದಡವನ್ನು ಸುರಕ್ಷಿತವಾಗಿ ತಲುಪಿಸಿದ. ಆತನೇ ಸಮರ್ಥ ನಾಯಕ!

'ಸಹೋದರರರೇ, ಇದಕ್ಕೆ ಕಾರಣವೇನು? ಆತನ ಜ್ಞಾನ, ಸೂಕ್ಷ್ಮತೆ, ಎಚ್ಚರಿಕೆ ಮತ್ತು ಸಮರ್ಥತೆಯೇ ಮೂಲ. ಅದೇ ಗೆಲುವು.'

'ಸಹೋದರರರೇ, ಆದುದರಿಂದ ಭಿಕ್ಷುಗಳಾದ ನೀವುಗಳು ನಿಮ್ಮ ಮನದ ಅಜ್ಞಾನ, ಗೊಂದಲ, ಸಂಶಯ ಮತ್ತು ಅಸಮರ್ಥತೆಯನ್ನು ನೀಗಿಕೊಂಡು ಸಮರ್ಥರಾಗಿರಿ. ಈ ಲೋಕ ಮತ್ತು ಪರಲೋಕದ ವಿಚಾರವಾಗಿ ಕುಶಲಿಗಳಾಗಿರಿ. ಮಾರನ ಸಂಬಂಧಿ ವಿಷಯದಲ್ಲಿ ಮತ್ತು ಸಂಬಂಧಿಯಲ್ಲದ ವಿಚಾರದಲ್ಲಿ ಕುಶಲಿಗಳಾಗಿರಿ. ಆಗ ಮಾತ್ರ ನೀವುಗಳು ಮೃತ್ಯು ಸಂಬಂಧಿ ಮತ್ತು ಸಂಬಂಧಿಯಲ್ಲದ ವಿಚಾರಗಳಲ್ಲಿ ಕುಶಲಿಗಳಾಗಲು ಸಾಧ್ಯ. ಇದೇ ಗೆಲುವು. ನೀವು ಪಡೆಯಬೇಕಾದ ಸಮರ್ಥತೆ. ಆಗ ನಿಮ್ಮನ್ನು ನಂಬಿದ, ನಿಮ್ಮಲ್ಲಿ ಶ್ರದ್ಧೆ ಇರಿಸಿದ, ನಿಮ್ಮನ್ನು ಆಶ್ರಯಿಸಿದ, ನೀವೇ ನಾಯಕರೆಂದು ನಿಮ್ಮನ್ನು ಹಿಂಬಾಲಿಸಿದ ಜನರು ಬಹುಕಾಲ ಸುಖ ಮತ್ತು ಹಿತವನ್ನು ಅನುಭವಿಸುತ್ತಾರೆ.'

'ಸಹೋದರರೇ, ಸಮರ್ಥನಾದ ದನಗಾಹಿಯು ಹೇಗೆ ಮೊದಲಿಗೆ ಹಸುಮಂದೆಯ ತಂದೆಯಂತಿರುವ ಹೋರಿಯನ್ನು ಸುರಕ್ಷಿತವಾಗಿ ನದಿ ದಾಟಿಸಿದನೋ ಹಾಗೆಯೇ ಯಾವ ಭಿಕ್ಷುವು ಅರಹಂತ ಪದವಿಯನ್ನು ಪಡೆದವನಾಗಿರುತ್ತಾನೋ ಅವನು ಆಸವಗಳನ್ನು ಕ್ಷಯಿಸಿದವನು. ಸಾರ್ಥಕ ಜೀವನ ನಡೆಸಿದವನು. ಮಾಡಬೇಕಾಗಿರುವುದನ್ನು ನಿರ್ವಹಿಸಿದವನು. ಹೊರೆಯನ್ನು ತೆಗೆದು ಹಾಕಿದವನು ಹಾಗೂ ಸಾಧಿಸಬೇಕಾದುದ್ದನ್ನು ಸಾಧಿಸಿದವನಾಗಿರುತ್ತಾನೆ. ಆ ಮೂಲಕ ತನ್ನ ಮರುಹುಟ್ಟಿನ ಬಂಧನದಿಂದ ಬಿಡುಗಡೆ ಹೊಂದಿದವನಾಗಿರುತ್ತಾನೆ. ಆತ ಸಮ್ಯುಕ್ ಪ್ರಜ್ಞೆಯಿಂದ ಕೂಡ ವಿಮುಕ್ತಿಯನ್ನು ಹೊಂದಿದವನಾಗಿರುತ್ತಾನೆ. ಅಂಥವರುಗಳು ಮಾರನ ರಭಸವನ್ನು ತಡೆದುಕೊಂಡು ಸುರಕ್ಷಿತವಾಗಿ ಆಚೆಯ ತೀರವನ್ನು ಸೇರಿದವರಾಗುತ್ತಾರೆ.



'ಸಹೋದರರೇ, ಎರಡನೆಯ ಸರತಿಯಲ್ಲಿ ಬಲವಾದ ಮತ್ತು ತಿದ್ದ ಬೇಕಾದ ದನಗಳನ್ನು ಗಂಗಾ ನದಿಯ ಪ್ರವಾಹಕ್ಕೆ ಇಳಿಸಿ, ಯಾರು ಸುರಕ್ಷಿತವಾಗಿ ಆಚೆ ದಡ ಸೇರಿಸಿದನೋ ಆತನೆ ಸಮರ್ಥ ದನಗಾಹಿ. ಭಿಕ್ಷುಗಳೇ, ಹಾಗೆಯೇ ಯಾರು ಅನಾಗಾಮಿ ಸ್ಥಿತಿಯನ್ನು ಸಾಧಿಸಿದವರಾಗಿರುತ್ತಾರೋ ಅವರುಗಳು ಈ ಲೋಕಕ್ಕೆ ಸಂಬಂಧಿಸಿದ ಐದು ಬಗೆಯ ಸಂಕೋಲೆಗಳನ್ನು ಮುರಿದು ಹಾಕಿದವನಾಗಿರುತ್ತಾನೆ. ಎಲ್ಲಿಯೂ ಕೆಳಕ್ಕೆ ಜಾರದವರಾಗಿರುತ್ತಾರೆ. ಅಲ್ಲಿಯೇ ನಿಬ್ಬಾನವನ್ನು ಸಾಧಿಸಿದವರಾಗಿರುತ್ತಾರೆ. ಅಂಥವರು ಮಾರನ ಸರಹದ್ದು ಮೀರಿ ಸುರಕ್ಷಿತವಾಗಿ ಆಚೆಯ ದಡ ತಲುಪಿದವರಾಗುತ್ತಾರೆ.'

'ಸಹೋದರರೇ, ಯಾವ ರೀತಿ ಮೂರನೆಯ ಹಂತದಲ್ಲಿ ಹೋರಿಕರುಗಳು ಮತ್ತು ಹಸುಕರುಗಳನ್ನು ಸುರಕ್ಷಿತವಾಗಿ ದಡ ಸೇರಿಸುತ್ತಾನೋ ಆತನೆ ಸಮರ್ಥ ದನಗಾಹಿ. ಭಿಕ್ಷುಗಳೇ, ಯಾರು ರಾಗ, ದ್ವೇಷ ಮತ್ತು ಮೋಹಗಳೆಂಬ ಮೂರು ಸಂಕೋಲೆಗಳಿಂದ ಬಿಡಿಸಿಕೊಳ್ಳುತ್ತಾರೋ ಅಂಥವರು 'ಸಕದಾಗಾಮಿ' ಪದವಿಯನ್ನು ಪಡೆಯುತ್ತಾರೆ. ಅವರದು ಇದೇ ಕೊನೆಯ ಹುಟ್ಟು. ಹೀಗೆ ಇವರು ಹುಟ್ಟಿನ ಧರ್ಮವನ್ನು ಅಂತ್ಯಗೊಳಿಸುವುದರಿಂದ ದುಃಖದಿಂದ ಪಾರಾದವರಾಗಿರುತ್ತಾರೆ. ಅಂಥವರು ಮಾರನ ಸರಹದ್ದು ಮೀರಿ ಸುರಕ್ಷಿತವಾಗಿ ದಡ ಸೇರಿದವರಾಗಿರುತ್ತಾರೆ.'

'ಸಹೋದರರೇ, ಯಾವ ರೀತಿಯಲ್ಲಿ ನಾಲ್ಕನೆಯ ಹಂತದಲ್ಲಿ ಬಡಕಲಾದ ಮತ್ತು ವಯಸ್ಸಾದ ಬಲಹೀನ ದನಗಳನ್ನು ಸುರಕ್ಷಿತವಾಗಿ ಯಾವ ದನಗಾಹಿಯು ದಡ ಸೇರಿಸುತ್ತಾನೋ ಆತನೇ ಸಮರ್ಥನು. ಭಿಕ್ಷುಗಳೇ, ಅದೇ ರೀತಿ ಯಾವ ಭಿಕ್ಷುಗಳು ಮೂರು ಬಗೆಯ ಸಂಕೋಲೆಗಳನ್ನು ಕಡಿದು ಹಾಕುತ್ತಾರೋ ಅವರು 'ಸೋತಾಪನ್ನ' ಸ್ಥಿತಿಗೆ ಅರ್ಹರಾಗುತ್ತಾರೆ. ಅವರು ನಿಬ್ಬಾನದ ಮಾರ್ಗದತ್ತ ಮುನ್ನಡೆಯುವರು. ಅವರುಗಳು ಅಪಾಯದತ್ತ ಸಾಗದೆ 'ಸಂಬೋಧಿಯ'ಕಡೆ ಸಾಗುತ್ತಾರೆ. ಅವರುಗಳು ಮಾರನ ಸರಹದ್ದು ಮೀರಿ ಆಚೆಯ ದಡವನ್ನು ಸುರಕ್ಷಿತವಾಗಿ ತಲುಪುತ್ತಾರೆ.'

'ಸಹೋದರರೇ, ಯಾವ ರೀತಿಯಲ್ಲಿ ಐದನೆಯ ಹಂತದಲ್ಲಿ ಆಗ ತಾನೆ ಹಡೆದ ಹಸುಗಳು ಮತ್ತು ಎಳೆಗರುಗಳನ್ನು ಸುರಕ್ಷಿತವಾಗಿ ಆಚೆ ದಡ ಸೇರಿಸುತ್ತಾನೋ ಆತನೇ ಸಮರ್ಥ ದನಗಾಹಿ. ಅದೇ ರೀತಿ ಯಾವ ಧರ್ಮಾನುಸಾರಿಗಳು ಧರ್ಮವನ್ನು ಶ್ರದ್ಧೆಯಿಂದ ಅನುಸರಿಸುತ್ತಾರೋ ಅವರು ಧರ್ಮಕ್ಕೆ ಒಡೆಯರಾಗುತ್ತಾರೆ. ಅಂಥವರು ಮಾರನ ಸರಹದ್ದು ಮೀರಿ ಆಚೆಯ ದಡವನ್ನು ಸೇರಿದವರಾಗಿರುತ್ತಾರೆ.'

'ಎಲೈ ಸಹೋದರರೇ, ನಿಮ್ಮಗಳ ಒಳಿತಿಗಾಗಿ ಲೋಕದ ಮೇಲಿನ ಕರುಣೆಗಾಗಿ ಈ ಲೋಕ ಮತ್ತು ಪರಲೋಕದ ದರ್ಶನವನ್ನು ನೀಡಿದ್ದೇನೆ. ಮಾರನ ಸರಹದ್ದು ಯಾವುದು? ಸಾವನ್ನು ಮೀರಿದ್ದು ಯಾವುದು? ಎಂಬುದನ್ನು ತಿಳಿಸಿದ್ದೇನೆ. ಮಾರನ ದಾಳಿಯನ್ನು ಎದುರಿಸಿ ನಾಶ ಮಾಡಿ ಕ್ಷೇಮ, ಕುಶಲ ಮತ್ತು ನಿಬ್ಬಾನವನ್ನು ಹೊಂದುವ ಮಾರ್ಗದತ್ತ ನಿಮ್ಮ ಕೈ ಹಿಡಿದು ಮುನ್ನಡೆಸಿದ್ದೇನೆ. ಯಾರು ಸಮರ್ಥವು, ಕ್ಷೇಮವು, ಕುಶಲವು ಆದ ಈ ಮಾರ್ಗದಲ್ಲಿ ಮುನ್ನಡೆಯುತ್ತಾರೋ ಅವರುಗಳ\ಪಾಲಿನ ಬಹುದಿನಗಳ ದುಃಖ ಮತ್ತು ಕೇಡು ನಿವಾರಣೆ ಆಗುತ್ತದೆ. ಬಹುಕಾಲ ಸುಖ ಹಾಗೂ ಶಾಂತಿ ನೆಲೆಸುತ್ತದೆ. ಅಂಥವರ ಪಾಲಿಗೆ ಸಾವಿಲ್ಲದ ಹೆಬ್ಬಾಗಿಲು ತೆರೆದು ನಿಲ್ಲುತ್ತದೆ.......!!' ಎಂದು ಬುದ್ಧನು ತನ್ನ ಕಥೆಯನ್ನು ಹೀಗೆ ಮುಗಿಸಿದ.

ಆಗ ಎದುರು ಕುಳಿತ ಆತನ ಭಿಕ್ಷುಗಳು ಎದ್ದು ನಿಂತ ತಮ್ಮ ಮಹಾಗುರುವಿಗೆ ತಲೆಬಾಗಿ ಸಾಮೂಹಿಕವಾಗಿ:

'ಹೌದು ಗುರುದೇವಾ, ನೀನು ನಿಜಕ್ಕೂ ಈ ಲೋಕ ಮತ್ತು ಪರಲೋಕದ ಬಗ್ಗೆ ಅರಿತವನೇ ಸರಿ....! ಮಾರನ ಸರಹದ್ದು ಮೀರಿದವನೇ ಸರಿ.....!! ಲೋಕದ ಪಾಲಿಗೆ ಸಾವಿಲ್ಲದ ಹೆಬ್ಬಾಗಿಲ ತೆರೆದು ನಿಂತವನೇ ಸರಿ....!!!' ಎಂದು ವಂದಿಸಿದರು.

(ಪಾಳಿಮೂಲ: ಚೂಳಗೋಪಾಲಕ ಸುತ್ತಂ ಮಜ್ಝಿಮ ನಿಕಾಯ. ಸಂಪುಟ-೩)

'SAMVADA' Kannada Monthly, Nov. 2008 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಕರ್ನಾಟಕ- ಉತ್ಕೃಷ್ಟ ಕಲೆ, ಸಾಹಿತ್ಯ, ಸಂಸ್ಕೃತಿ.......ಗಳ ಬೀಡು

ಸಾವಿರಾರು ವರ್ಷಗಳ ಶ್ರೇಷ್ಠ ಸಂಸ್ಕೃತಿ, ಶ್ರೀಮಂತ ಕಲೆ, ಅನುಪಮ ಸಾಹಿತ್ಯ ಭಂಡಾರ ಹೊಂದಿರುವ ಕರ್ನಾಟಕದ ವೈಭವವನ್ನು ದೇಶದ ಉದ್ದಗಲಕ್ಕೂ ಮೆರೆಸಿದ ಹಿರಿಮೆ ಕನ್ನಡಿಗರದು. ಸಾಮಾಜಿಕ ಸಮಾನತೆ, ಹೃದಯ ವೈಶ್ಯಾಲತೆಯ ಮೂಲ ಸೆಲೆಯಲ್ಲಿ ಮೂಡಿಬಂದ ಈ ನಾಡಿನ ವಚನ ಸಾಹಿತ್ಯ ಮತ್ತು ದಾಸ ಸಾಹಿತ್ಯಗಳು ಸದಾ ಪ್ರಸ್ತುತ. ಅವು ಮನುಕುಲಕ್ಕೆ ನೀಡಿದ ಅಭೂತಪೂರ್ವ ಕೊಡುಗೆಗಳು.

ದೇಶದ ಕಲೆ, ಸಾಹಿತ್ಯ, ಕ್ರೀಡೆ, ವಿಜ್ಞಾನ, ತಂತ್ರಜ್ಞಾನಗಳಂತಹ ಮಹತ್ತರ ರಂಗಗಳಲ್ಲಿ ಮಹೋನ್ನತ ಕಾಣಿಕೆ ನೀಡಿದ ಕರ್ನಾಟಕವನ್ನು ಮತ್ತಷ್ಟು ಸಮೃದ್ಧಗೊಳಿಸಬೇಕೆಂಬುದೇ ಸರ್ಕಾರದ ದೃಢ ಸಂಕಲ್ಪ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಒತ್ತು ನೀಡಿರುವ ಸರ್ಕಾರ ಉತ್ತರ ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಗೆ ಪ್ರಾಶಸ್ತ್ಯ ನೀಡಿ ಕಾರ್ಯಪ್ರವೃತ್ತವಾಗಿದೆ.

ಕರ್ನಾಟಕ ವಾರ್ತೆ
Karnataka Information